ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ

## 2016–17

## ಸಂಚಿಕೆ–11

ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

http://www.schooleducation.kar.nic.in

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಶೈಕ್ಷಣಿಕ ಅವಧಿ

| | |
|---|---|
| ದಿನಾಂಕ: 28–05–2016 ರಿಂದ 08–10–2016 | ಮೊದಲನೇ ಅವಧಿ |
| ದಿನಾಂಕ: 28–10–2016 ರಿಂದ 10–04–2017 | ಎರಡನೇ ಅವಧಿ |

ರಜಾ ಅವಧಿ

| | |
|---|---|
| ದಿನಾಂಕ: 09–10–2016 ರಿಂದ 27–10–2016 | ಮಧ್ಯಂತರ ರಜೆ |
| ದಿನಾಂಕ: 11–04–2017 ರಿಂದ 28–05–2017 | ಬೇಸಿಗೆ ರಜೆ |

ಸಮುದಾಯದತ್ತ ಶಾಲಾ ಕಾರ್ಯಕ್ರಮ

| ತಿಂಗಳು | ಪ್ರೌಢಶಾಲೆ | |
|---|---|---|
| ಅಕ್ಟೋಬರ್ 2016 | ಶನಿವಾರ | 8.10.2016 |
| ಏಪ್ರಿಲ್ 2017 | ಸೋಮವಾರ | 10.04.2017 |

2016–17ನೇ ಶೈಕ್ಷಣಿಕ ಸಾಲಿನ ರಜೆ ಹಾಗೂ ಬೋಧನಾ ದಿನಗಳು

| **ಕ್ರ.ಸಂ** | **ತಿಂಗಳು** | **ಶೈಕ್ಷಣಿಕ ವರ್ಷದ ಒಟ್ಟು ದಿನಗಳು** | **ಒಟ್ಟು ರಜೆಗಳು** | **ಲಭ್ಯವಿರುವ ಶಾಲಾ ದಿನಗಳು** |
|---|---|---|---|---|
| 1 | ಮೇ 2016 | 04 | 01 | 03 |
| 2 | ಜೂನ್ 2016 | 30 | 04 | 26 |
| 3 | ಜುಲೈ 2016 | 31 | 06 | 25 |
| 4 | ಆಗಸ್ಟ್ 2016 | 31 | 04 | 27 |
| 5 | ಸೆಪ್ಟೆಂಬರ್ 2016 | 30 | 07 | 23 |
| 6 | ಅಕ್ಟೋಬರ್ 2016 | 31 | 22 | 09 |
| 7 | ನವೆಂಬರ್ 2016 | 30 | 04 | 26 |
| 8 | ಡಿಸೆಂಬರ್ 2016 | 31 | 05 | 26 |
| 9 | ಜನವರಿ 2017 | 31 | 05 | 26 |
| 10 | ಫೆಬ್ರವರಿ 2017 | 28 | 05 | 23 |
| 11 | ಮಾರ್ಚ್ 2017 | 31 | 05 | 26 |
| 12 | ಏಪ್ರಿಲ್ 2017 | 10 | 02 | 08 |
| ಒಟ್ಟು | | 318 | 70 | 248 |
| ವಿವೇಚನಾ ರಜೆಗಳು | | | | – 4 |
| ಒಟ್ಟು ಬೋಧನಾ ದಿನಗಳು | | | | 244 |

<u>**ಸೂಚನೆ:–**</u> ರಾಷ್ಟ್ರೀಯ ಹಬ್ಬಗಳು ಹಾಗೂ ಪರೀಕ್ಷಾ ದಿನಗಳನ್ನು ಕೂಡಾ ಶಾಲಾ ದಿನಗಳೆಂದು ಪರಿಗಣಿಸಿದೆ.

# 2016–17ನೇ ಸಾಲಿನ ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ

## ರಚನಾ ಸಮಿತಿ

**ಪ್ರಧಾನ ಸಂಪಾದಕರು**

**ಶ್ರೀ ವಿ. ಪೊನ್ನುರಾಜ್ ಭಾ.ಆ.ಸೇ.**

ಆಯುಕ್ತರು ಸಾ.ಶಿ.ಇ ಬೆಂಗಳೂರು

**ಸಂಪಾದಕರು**

**ಶ್ರೀಮತಿ ಫಿಲೋಮಿನಾ ಲೋಬೊ**

ನಿರ್ದೇಶಕರು ಪ್ರೌಢಶಿಕ್ಷಣ ಸಾ.ಶಿ.ಇ ಬೆಂಗಳೂರು

**ಉಪ ಸಂಪಾದಕರು**

**ಶ್ರೀ ಬಿ.ಹೆಚ್. ಅಶ್ವತ್ ನಾರಾಯಣ ಗೌಡ,**

ಉಪನಿರ್ದೇಶಕರು (ಪ್ರೌಢಶಿಕ್ಷಣ), ಸಾ.ಶಿ.ಇ ಬೆಂಗಳೂರು

**ಸಂಪನ್ಮೂಲ ತಂಡ**

1. **ಶ್ರೀ ಪ್ರಕಾಶ್. ಪಿ.ಕೆ.**
   ಹಿರಿಯ ಕಾರ್ಯಕ್ರಮ ಅಧಿಕಾರಿಗಳು
   ರಾ. ಮಾ. ಶಿ. ಅ. ಬೆಂಗಳೂರು
2. **ಶ್ರೀ ಶ್ರೀನಿವಾಸ ಎಂ.**
   ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ನಾರಾಯಣಪುರ,
   ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3. **ಶ್ರೀ ರವಿ ಪ್ರಕಾಶ್. ವಿ.ಎನ್**
   ತಾಂತ್ರಿಕ ಸಹಾಯಕರು ಎಸ್.ಎಸ್.ಎ. ಬೆಂಗಳೂರು
4. **ಶ್ರೀ ಆರ್. ಪ್ರಹ್ಲಾದ್**
   ಶಿಕ್ಷಣ ಸಂಯೋಜಕರು,
   ಬಿ.ಇ.ಓ ಕಛೇರಿ, ದೊಡ್ಡಬಳ್ಳಾಪುರ (ತಾ)
   ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ನಿರ್ವಹಣೆ**

**ಅಧೀಕ್ಷಕರು ಮತ್ತು ಸಿಬ್ಬಂದಿ**

**ಪ್ರೌಢಶಾಲಾ ಸಿಬ್ಬಂದಿ ಶಾಖೆ–4**

**ಆಯುಕ್ತರ ಕಛೇರಿ, ಸಾ.ಶಿ.ಇ**

1. ಪುಸ್ತಕದ ಹೆಸರು ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ಸಂಚಿಕೆ– 11/2016–17
2. ಮುದ್ರಣ ವರ್ಷ 2016.
3. ಪ್ರತಿಗಳು 10,000/–.
4. ಮುದ್ರಣಕ್ಕೆ ಬಳಸಿದ ಹಾಳೆಗಳು : 70 ಜಿ.ಎಸ್.ಎಂ.ಮ್ಯಾಪ್ಲಿತೊ.
5. ಮುದ್ರಣ ಸ್ಥಳ:

**ಕಿಮ್ಮನೆ ರತ್ನಾಕರ**
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ರಾಜ್ಯ ಸಚಿವರು ಕರ್ನಾಟಕ ಸರ್ಕಾರ

**ಶುಭ ಸಂದೇಶ**

ಪ್ರೌಢಶಾಲೆಯ ಎಲ್ಲಾ ಮುಖ್ಯಶಿಕ್ಷಕರು ಮತ್ತು ಶಿಕ್ಷಕರಿಗೆ 2016–17ನೇ ಶೈಕ್ಷಣಿಕ ವರ್ಷಕ್ಕೆ ಹಾರ್ದಿಕ ಶುಭಾಶಯಗಳು. ಶಿಕ್ಷಕರು ಸಮಾಜ ಬದಲಾವಣೆಯ ಹರಿಕಾರರು. ಸಮಾಜದಲ್ಲಿ ಹಲವು ಬದಲಾವಣೆಗಳು ಶಾಲೆಯಲ್ಲೇ ಆರಂಭವಾಗಬೇಕು. ಸಂವಿಧಾನದ ಮುನ್ನುಡಿಯಲ್ಲಿ ಬರೆದಿರುವಂತೆ ಸಾರ್ವಭೌಮ, ಜಾತ್ಯಾತೀತ, ಪ್ರಜಾಸತ್ತಾತ್ಮಕ, ಸಮಾಜವಾದಿ ಗಣತಂತ್ರ ಸ್ಥಾಪನೆಗೆ ಶಾಲೆ ಬುನಾದಿಯಾಗಬೇಕು.

ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕೆ ಶಾಲೆಗೆ ಮಕ್ಕಳ ದಾಖಲಾತಿ, ನಿರಂತರ ಹಾಜರಾತಿ ಮತ್ತು ಗುಣಮಟ್ಟದ ಕಲಿಕೆ ಮೂಲಭೂತ ಅಂಶಗಳಾಗಿವೆ. ಈ ನಿಟ್ಟಿನಲ್ಲಿ ಶಾಲೆಗಳು ಎಸ್.ಡಿ.ಎಂ.ಸಿ., ಪೋಷಕರು, ಮತ್ತು ಸಮುದಾಯದ ಜೊತೆಗೂಡಿ ಕೆಲಸ ನಿರ್ವಹಿಸಬೇಕು. ಮಕ್ಕಳ ವೈಯಕ್ತಿಕ ಸಮಸ್ಯೆಗಳು ಮತ್ತು ಕಲಿಯುವ ಸಮಯ ಕಲಿಕೆಯ ಮೇಲೆ ಹೆಚ್ಚು ಪರಿಣಾಮ ಬೀರುವುದರಿಂದ ಆ ಬಗ್ಗೆ ಕಾಳಜಿ ವಹಿಸುವ ಅಗತ್ಯವಿದೆ. ಶಿಕ್ಷಕರು ಮಕ್ಕಳ ಕುಟುಂಬದ ಹಿನ್ನೆಲೆಯರಿತು ಸೂಕ್ತ ಮಾರ್ಗದರ್ಶನ ನೀಡಬೇಕು. ಜಾತಿ. ವರ್ಗ, ಲಿಂಗ ಯಾವುದೇ ತಾರತಮ್ಯವಿಲ್ಲದೆ ಎಲ್ಲ ಮಕ್ಕಳನ್ನೂ ಸಮಾನ ದೃಷ್ಟಿಯಿಂದ ನೋಡುವ ಭಾವ ನಮ್ಮಲ್ಲಿರಬೇಕು. ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಎಲ್ಲಾ ಪ್ರೋತ್ಸಾಹಕ ಯೋಜನೆಗಳನ್ನು ಸೂಕ್ತ ಸಮಯದಲ್ಲಿ ಜಾರಿಗೆ ತಂದು ಮಕ್ಕಳ ಕಲಿಕೆಗೆ ಸಹಕರಿಸಿ.

ಶಾಲಾ ಶಿಕ್ಷಕರು, ಮುಖ್ಯಶಿಕ್ಷಕರು ಎಸ್.ಡಿ.ಎಂ.ಸಿ. ಪೋಷಕರು ಮತ್ತು ಸಮುದಾಯದ ಜೊತೆಗೂಡಿ ಬದ್ಧತೆಯಿಂದ ಕೆಲಸ ನಿರ್ವಹಿಸಿದಲ್ಲಿ ಮಾತ್ರ ಗುಣಮಟ್ಟದ ಶಿಕ್ಷಣ ಸಾಧ್ಯ. ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲು **'ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ'**ಯನ್ನು ರಚಿಸಿ, ಎಲ್ಲ ಪ್ರೌಢಶಾಲೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ತಾವೆಲ್ಲಾ ಇದರ ಪ್ರಯೋಜನ ಪಡೆದುಕೊಂಡು ಎಲ್ಲ ಶೈಕ್ಷಣಿಕ ಚಟುವಟಿಕೆಗಳನ್ನು ಗುಣಾತ್ಮಕವಾಗಿ ನಿರ್ವಹಿಸಿ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಶ್ರಮಿಸಲು ಕೋರುತ್ತೇನೆ. ಕಳೆದ ವರ್ಷಕ್ಕಿಂತ 2016–17ನೇ ಸಾಲಿನಲ್ಲಿ ಇನ್ನೂ ಹೆಚ್ಚು ಉತ್ಸಾಹದಿಂದ, ಆಸಕ್ತಿಯಿಂದ ಕೆಲಸ ನಿರ್ವಹಿಸಿ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಿ ಎಂದು ಈ ಮೂಲಕ ಶುಭ ಕೋರುತ್ತೇನೆ.

**ಕಿಮ್ಮನೆ ರತ್ನಾಕರ**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ರಾಜ್ಯ ಸಚಿವರು ಕರ್ನಾಟಕ ಸರ್ಕಾರ**

**ಅಜಯ್ ಸೇಠ್ ಭಾ.ಆ.ಸೇ**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
ಬೆಂಗಳೂರು

**ಸಂದೇಶ**

ಪ್ರೌಢಶಾಲೆಯ ಎಲ್ಲಾ ಮುಖ್ಯಶಿಕ್ಷಕರು, ಮತ್ತು ಶಿಕ್ಷಕರಿಗೆ 2016–17ನೇ ಶೈಕ್ಷಣಿಕ ವರ್ಷಕ್ಕೆ ಹಾರ್ದಿಕ ಶುಭಾಶಯಗಳು. ಪ್ರೌಢಶಾಲಾ ಶಿಕ್ಷಣದ ಸಾರ್ವತ್ರೀಕರಣವನ್ನು ಆದ್ಯತೆಯ ಅಂಶವನ್ನಾಗಿ ಪರಿಗಣಿಸಿ, ಹಿರಿಯ ಪ್ರಾಥಮಿಕ ಶಾಲೆ ಪೂರ್ಣಗೊಳಿಸಿದ ಎಲ್ಲಾ ಮಕ್ಕಳೂ ಪ್ರೌಢಶಾಲೆಗೆ ದಾಖಲಾಗುವಂತೆ ಗಮನಹರಿಸಬೇಕಾದ್ದು ಅತ್ಯವಶ್ಯ. ಶಾಲೆಗೆ ಮಕ್ಕಳ ನಿರಂತರ ಹಾಜರಾತಿ ಗುಣಮಟ್ಟದ ಕಲಿಕೆಗೆ ಪೂರಕ. ಪ್ರೌಢಶಾಲಾ ಹಂತದಲ್ಲಿ ಹೆಣ್ಣುಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಕಲಿಕೆಗೆ ವಿಶೇಷ ಗಮನ ಹರಿಸಬೇಕಾಗಿದೆ. ಹದಿಹರೆಯದ ವಯಸ್ಸಿನ ಪ್ರೌಢಶಾಲಾ ಮಕ್ಕಳಿಗೆ ಬೋಧನೆ ಕಲಿಕೆ ಪ್ರಕ್ರಿಯೆಯಲ್ಲಿ ಆಸಕ್ತಿ ಹುಟ್ಟಿಸುವಂತೆ ಮಾಡುವುದು ಒಂದು ಸವಾಲೇ ಸರಿ! ಶಾಲೆಯ ಪ್ರತಿ ಮಗುವಿನ ಕುಟುಂಬದ ಹಿನ್ನೆಲೆಯನ್ನು ಅರಿತು, ಕಲಿಕೆಗೆ ಇರುವ ಕಷ್ಟ ಸುಖಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ ಮಗುವಿನ ಕಲಿಕೆಗೆ ಪ್ರೋತ್ಸಾಹಿಸಿ.

ಶಿಕ್ಷಕರು ನಿರಂತರ ಕಲಿಯುವ ಜೊತೆಗೆ ತಂತ್ರಜ್ಞಾನದ ಬಳಕೆಯಲ್ಲೂ ಪರಿಣತಿ ಹೊಂದಬೇಕು. ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ಎದುರಿಸುವ ಸಮಸ್ಯೆಗಳು ಮತ್ತು ಪಠ್ಯಕ್ಕೆ ಸೂಕ್ತ ಬೋಧನೆ ಕಲಿಕೆ ವಿಧಾನಗಳನ್ನು ಅಳವಡಿಸಿಕೊಳ್ಳಲು ಪರಸ್ಪರ ಅನುಭವ ಹಂಚಿಕೆಯ ಮೂಲಕ ಪ್ರಯತ್ನಿಸಿ. 2016–17ನೇ ಸಾಲಿಗೆ ಶಾಲಾ ಶಿಕ್ಷಕರು ಮತ್ತು ಮುಖ್ಯಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಎಲ್ಲಾ ಶಾಲೆಗಳಲ್ಲಿ ಏಕರೂಪದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು **'ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ'**ಯನ್ನು ತಯಾರಿಸಲಾಗಿದೆ. ಶಾಲಾ ಶಿಕ್ಷಕರು ಮತ್ತು ಮುಖ್ಯಶಿಕ್ಷಕರು ಮಾರ್ಗದರ್ಶಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಎಸ್.ಡಿ.ಎಂ.ಸಿ. ಪೋಷಕರು ಮತ್ತು ಸಮುದಾಯದ ಜೊತೆಗೂಡಿ ಕೆಲಸ ನಿರ್ವಹಿಸಿ, ವಿದ್ಯಾರ್ಥಿಗಳ ಗುಣಮಟ್ಟ ಶಿಕ್ಷಣಕ್ಕೆ ಶ್ರಮಿಸುತ್ತೀರೆಂದು ನಂಬಿದ್ದೇನೆ.

**ಪ್ರಧಾನ ಕಾರ್ಯದರ್ಶಿಗಳು**
**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ**

**ವಿ. ಪೊನ್ನುರಾಜ್ ಭಾ.ಆ.ಸೇ**
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಸಂದೇಶ**

ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಲವು ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಎಲ್ಲವನ್ನೂ ಸೂಕ್ತ ಸಮಯದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸಿ ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸಿ. ಇಲಾಖೆಯ ಮೂಲ ಘಟಕ ಶಾಲೆ. ಶಾಲೆ ಮತ್ತು ಮಕ್ಕಳ ಅಭಿವೃದ್ಧಿಗೆ ಇಲ್ಲಿ ಮೊದಲ ಆದ್ಯತೆ. ಮಕ್ಕಳ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಹಿರಿದು. ದೇಶದಲ್ಲಿ ಪ್ರತಿನಿತ್ಯದ ಆಗುಹೋಗುಗಳ ಬಗ್ಗೆ ಮಕ್ಕಳ ಗಮನ ಸೆಳೆದು ಅವರಲ್ಲಿ ವಿಚಾರವಂತಿಕೆ, ವೈಜ್ಞಾನಿಕ ಮನೋಭಾವ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ರೂಪಿಸಿವ ಕೆಲಸ ಶಾಲೆಗಳಲ್ಲಿ ಆರಂಭವಾಗಬೇಕು.

ಶಿಕ್ಷಕರು ನಿರಂತರ ವಿದ್ಯಾರ್ಥಿಗಳಾದಾಗ ಮಾತ್ರ ಅಧ್ಯಯನ, ಕಲಿಕೆ ಮತ್ತು ಹೊಸ ವಿಧಾನಗಳಲ್ಲಿ ಬೋಧನೆ ಸಾಧ್ಯ. ಒಂದೇ ವಿಷಯ ಬೋಧನೆಯ ಶಿಕ್ಷಕರು ತಮ್ಮ ಹೊಸ ಬೋಧನಾ ವಿಧಾನಗಳು, ಮೌಲ್ಯಮಾಪನ ಪದ್ಧತಿ, ಬೋಧನೆಯಲ್ಲಿನ ಗೊಂದಲ ಮತ್ತು ಸಮಸ್ಯೆಗಳನ್ನು ವರ್ಷಪೂರ್ತಿ ಪರಸ್ಪರ ಹಂಚಿಕೊಂಡು ಪರಿಹಾರ ಕಂಡುಕೊಳ್ಳಬೇಕಾಗಿದೆ. ಈಗಾಗಲೇ ಹಲವು ಶಿಕ್ಷಕರು 'ವಿಷಯ ಶಿಕ್ಷಕರ ವೇದಿಕೆ'(ಎಸ್.ಟಿ.ಎಫ್) ಗಳ ಮೂಲಕ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವುದು ಸಂತಸದ ವಿಷಯ.

ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯಶಿಕ್ಷಕರಿಗೆ ಶಾಲಾ ಆಡಳಿತದಲ್ಲಿ ಅತ್ಯಗತ್ಯ ವಿಚಾರಗಳು, ಮಾಹಿತಿಗಳು ಸುತ್ತೋಲೆಗಳು, ಮೌಲ್ಯಮಾಪನ ವಿಧಾನ, ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು ಇನ್ನೂ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯ ಅವಶ್ಯಕತೆಯನ್ನು ಮನಗಂಡು **'ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ'**ಯನ್ನು ತಯಾರಿಸಿ ತಮ್ಮ ಶಾಲೆಗಳಿಗೆ ಪೂರೈಸಲಾಗಿದೆ. ಮಾರ್ಗದರ್ಶಿಯನ್ನು ಸಂಪೂರ್ಣ ಓದಿ ಅರ್ಥ ಮಾಡಿಕೊಂಡು ಇದರ ಪ್ರಯೋಜನ ಪಡೆಯುತ್ತೀರೆಂದು ನಂಬಿದ್ದೇನೆ. 2016–17ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ., ಪೋಷಕರು ಮತ್ತು ಸಮುದಾಯದ ಜೊತೆಗೂಡಿ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮಾರ್ಗದರ್ಶಿ ಪೂರಕವಾಗಲಿ ಎಂದು ಹಾರೈಸುತ್ತೇನೆ.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಫಿಲೋಮಿನಾ ಲೋಬೋ**
ನಿರ್ದೇಶಕರು(ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ

**ಆತ್ಮೀಯರೇ,**

ಶಿಕ್ಷಕರಿಗೆ ಪ್ರತಿದಿನ ಹೊಸಹೊಸ ಸವಾಲುಗಳು ಕಾದಿರುತ್ತವೆ. ವಿದ್ಯಾರ್ಥಿಗಳ ವೈಯಕ್ತಿಕ ಸಮಸ್ಯೆಗಳ ಕಡೆ ಗಮನ ಹರಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು. ಪ್ರತಿ ಮಗುವಿಗೆ ಅರ್ಥವಾಗುವಂತೆ ಬೋಧನೆ ಕಲಿಕೆ ಪ್ರಕ್ರಿಯೆ ನಡೆಸಬೇಕು. ಹೊಸ ಹೊಸ ಬೋಧನಾ ಕಲಿಕಾ ವಿಧಾನಗಳನ್ನು ರೂಢಿಸಿಕೊಳ್ಳಬೇಕು. ಮಕ್ಕಳು ಕೇಳುವ ಪ್ರಶ್ನೆಗಳಿಗೆ ಕೆಲವೊಮ್ಮೆ ತಾವೇ ಉತ್ತರ ಕಂಡುಕೊಂಡು ಹೇಳಬೇಕು. ಕೆಲವೊಮ್ಮೆ ಉತ್ತರ ಸಿಗಬಹುದಾದ ಮೂಲಗಳ ಬಗ್ಗೆ ತಿಳಿಸಿದರೆ ಸಾಕಾಗಬಹುದು. ಮಗುವಿಗೆ **'ಕಲಿಯುವುದನ್ನು ಕಲಿಸುವ'** ಶಿಕ್ಷಕರೇ ಉತ್ತಮ ಶಿಕ್ಷಕರು.

ಶಾಲಾಮಕ್ಕಳಲ್ಲಿ ಕರ್ತವ್ಯಪ್ರಜ್ಞೆ, ಪ್ರಾಮಾಣಿಕತೆ, ಶ್ರದ್ಧೆ, ಸಮಯ ಪಾಲನೆ ಮುಂತಾದ ಮೌಲ್ಯಗಳನ್ನು ಮೂಡಿಸಲು ಶಿಕ್ಷಕರೇ ಸೂಕ್ತ ಮಾದರಿಗಳಾಗಬೇಕು. ರಾಜ್ಯದ ಪ್ರತಿಯೊಂದು ಶಾಲೆಯೂ ಒಂದು ಉತ್ತಮ ಶಿಕ್ಷಣ ಸಂಸ್ಥೆಯಂತೆ ರೂಪುಗೊಳ್ಳಬೇಕು. ಇದಕ್ಕಾಗಿ ಪ್ರತಿ ಶಾಲೆಯೂ ಶಾಲಾ ಶೈಕ್ಷಣಿಕ ಯೋಜನೆ ಹಾಗೂ ಪ್ರತಿ ಮಗುವಿನ ಕಲಿಕೆಗೆ ಯೋಜನೆ ತಯಾರಿಸಿಕೊಳ್ಳುವುದು ಅತ್ಯವಶ್ಯ.

ಈ ನಿಟ್ಟಿನಲ್ಲಿ ಶಿಕ್ಷಕರು ಮತ್ತು ಮುಖ್ಯಶಿಕ್ಷಕರಿಗೆ ಅನುಕೂಲವಾಗಲೆಂದು ಶಾಲಾ ಆಡಳಿತದಲ್ಲಿ ಅತ್ಯಗತ್ಯ ವಿಚಾರಗಳು, ಮಾಹಿತಿಗಳು, ಸುತ್ತೋಲೆಗಳು, ಮೌಲ್ಯಮಾಪನ ವಿಧಾನ, ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು ಇನ್ನೂ ಮುಂತಾದ ವಿಷಯಗಳನ್ನು ಒಳಗೊಂಡ **'ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ'** ಯನ್ನು ಹೊರತರಲಾಗಿದೆ. ಶಾಲಾ ಶೈಕ್ಷಣಿಕ ಚಟುವಟಿಕೆಗಳಿಗೆ ಮಾರ್ಗದರ್ಶಿ ಪೂರಕವಾಗಲಿ ಎಂದು ಹಾರೈಸುತ್ತೇನೆ. ಎಸ್.ಡಿ.ಎಂ.ಸಿ, ಪೋಷಕರು ಮತ್ತು ಸಮುದಾಯದ ಜೊತೆಗೂಡಿ ಶಾಲೆಗಳನ್ನು ಉತ್ತಮ ಕಲಿಕೆಯ ತಾಣಗಳಾಗುವಂತೆ ರೂಪಿಸಿ.

**ನಿರ್ದೇಶಕರು(ಪ್ರೌಢಶಿಕ್ಷಣ)**
**ಸಾರ್ವಜನಿಕ ಶಿಕ್ಷಣ ಇಲಾಖೆ**

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ |
|---|---|---|
| 01. | ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು | **11–18** |
| 02. | ಪ್ರೌಢಶಾಲಾ ಶುಲ್ಕದ ವಿವರ. | 19 |
| 03. | ಸಮುದಾಯದತ್ತ ಶಾಲಾ ಕಾರ್ಯಕ್ರಮ. | 20–21 |
| 04. | ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ | 21–22 |
| 05. | ಸಮನ್ವಯ ಶಿಕ್ಷಣ | 22 |
| 06. | ಕ್ರಿಯಾ ಸಂಶೋಧನೆ. | 22–23 |
| 07. | ಸೇತುಬಂಧ, ಪೂರಕ ಬೋಧನೆ, ಪರಿಹಾರ ಬೋಧನೆ. | 23–24 |
| 08. | ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು. | 24–25 |
| 09. | ತರಗತಿ ಪ್ರಕ್ರಿಯೆಗಳು. | 25–27 |
| | **ಅನುಬಂಧಗಳು** | |
| 01. | ವಿವಿಧ ಹಂತದಲ್ಲಿ ಅಧಿಕಾರಿಗಳು ಸಾರ್ವತ್ರಿಕವಾಗಿ ಗಮನಿಸಬೇಕಾದ ಪ್ರಮುಖ ಅಂಶಗಳು. | 28–29 |
| 02. | ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆ–ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕಾಲಾವಕಾಶ. | 30 |
| 03. | ಶಾಲೆಗಳಲ್ಲಿ ಮೊಬೈಲ್ ಬಳಕೆ ನಿಷೇಧ. | 31 |
| 04. | ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಮಕ್ಕಳ ಹಾಜರಾತಿ ನಿರ್ವಹಣೆ. | 32 |
| 05. | ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರ/ಉಪಪ್ರಾಂಶುಪಾಲರ ಕಾರ್ಯಹಂಚಿಕೆ. | 33–38 |
| 06. | ಮಹಿಳೆಯರ/ಬಾಲಕಿಯರ ಮೇಲೆ ಲೈಂಗಿಕ ಕಿರುಕುಳವನ್ನು ತಡೆಗಟ್ಟುವುದು. | 39 |
| 07. | ಶಾಲಾ ಕಟ್ಟಡಗಳ ಸುರಕ್ಷತೆ ಹಾಗೂ ಅಗ್ನಿಶಾಮಕ ಉಪಕರಣಗಳ ಬಳಕೆ. | 40–41 |
| 08. | ಡಿಸ್‌ಲೆಕ್ಸಿಯಾ ಇರುವ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ. | 42 |
| 09. | ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲ ಮಕ್ಕಳಿಗೆ ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ. | 43–45 |
| 10. | ಆರ್.ಎಂ.ಎಸ್.ಎ.ಯೋಜನೆ ಬಗ್ಗೆ ಮಾಹಿತಿ | 46–47 |
| 11. | ಆರ್.ಟಿ.ಇ. ಕಾಯ್ದೆ–2009ರಂತೆ 8ನೇ ತರಗತಿಯನ್ನುಪ್ರಾರಂಭಿಸುವ ಕುರಿತು | 48 |
| 12. | ಇಕೋ–ಕ್ಲಬ್ ಅನುದಾನ ಹಾಗೂ ಇಕೋ–ಕ್ಲಬ್‌ನ ಚಟುವಟಿಕೆಗಳು. | 49–50 |
| 13. | ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲನ್ನು ನೀಡುವ ಬಗ್ಗೆ. | 51–56 |
| 14. | ವಿಶೇಷ ಅಗತ್ಯವುಳ್ಳ ಪ್ರೌಢಶಾಲಾ ಮಕ್ಕಳ "ಸಮನ್ವಯಶಿಕ್ಷಣ" ಮಧ್ಯವರ್ತನೆಯ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ. | 57–60 |
| 15. | ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಗೆ ಕರಾಟೆ ಕೌಶಲ್ಯ ಕಲಿಸುವ ಮೂಲಕ ಸ್ವಯಂ ರಕ್ಷಣಾ ಸಾಮರ್ಥ್ಯ ಬೆಳಸುವ ಬಗ್ಗೆ. | 61–63 |
| 16. | ಎನ್.ಟಿ.ಎಸ್.ಇ ಮತ್ತು ಎನ್.ಎಮ್.ಎಮ್.ಎಸ್. ಪರೀಕ್ಷೆಗಳು ಮತ್ತು ಎನ್.ವಿ.ಇ.ಕ್ಯೂ.ಎಫ್.ಯೋಜನಾ ವಿವರಗಳು | 64–68 |

| | | |
|---|---|---|
| 17. | ಆರ್.ಎಂ.ಎಸ್.ಎ.–ಕರ್ನಾಟಕ, ಹಾಗೂ 2016–17ನೇ ಸಾಲಿನ ಪ್ರತಿಭಾಕಾರಂಜಿ ಕಾರ್ಯಕ್ರಮದ ಮತ್ತು ಚಿತ್ರಕಲಾ ವಿಭಾಗದ ಬಗ್ಗೆ ಮಾಹಿತಿ ಹಾಗೂ ಇತರೆ ಅಲ್ಪಸಂಖ್ಯಾತ ಭಾಷಾ ಯೋಜನೆಯ ವಿವರಗಳು. | 68–77 |
| 18. | ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿವಿಧ ಸೌಲಭ್ಯಗಳು | 78–84 |
| 19. | 2016–17ನೇ ಸಾಲಿನಲ್ಲಿ ನಡೆಸುವ ಕ್ರೀಡಾಕೂಟಗಳ ಮಾಹಿತಿ | 85–90 |
| 20. | ಡಿ.ಎಸ್.ಇ.ಆರ್.ಟಿ ಯಿಂದ ನಡೆಸುವ ವಿವಿಧ ಕಾರ್ಯಕ್ರಮಗಳು | 91–106 |
| 21. | ರಾಜ್ಯದ ಶಾಲೆಗಳಲ್ಲಿ ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯ್ದೆಯ ಬಗ್ಗೆ ಶಿಕ್ಷಕರು/ವಿದ್ಯಾರ್ಥಿಗಳಲ್ಲಿ ಅರಿವು/ಜಾಗೃತಿ ಮೂಡಿಸುವ ಬಗ್ಗೆ | 107 |
| 22. | ಕ,ಪ್ರೌ.ಶಿ.ಪ.ಮಂಡಳಿಯಿಂದ ಮೌಲ್ಯಮಾಪನ ಕಾರ್ಯ ಕಡ್ಡಾಯಗೊಳಿಸಿರುವ ಬಗ್ಗೆ ಮಾಹಿತಿ | 108–109 |
| 23. | ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಹೆಸರು/ಪೋಷಕರ ಹೆಸರು. ಜನ್ಮದಿನಾಂಕ,ಜಾತಿಇತ್ಯಾಧಿ ತಿದ್ದುಪಡಿ ಸಂಬಂಧ ನೀಡಿದ ನ್ಯಾಯಾಲಯಗಳ ಡಿಕ್ರಿ ಆದೇಶದ ಅನುಷ್ಠಾನದ ಬಗ್ಗೆ ಸುತ್ತೋಲೆ. | 110–112 |
| 24. | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ. | 113–114 |
| 25. | Implementation of the National Scheme of Incentive to Girls for Secondary Education (NSIGSE) | 115–117 |
| 26. | ರಾಜ್ಯದಲ್ಲಿನ ಅಲಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೂ ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವ ಬಗ್ಗೆ ಸರ್ಕಾರದ ನಡಾವಳಿಗಳು. | 118–119 |
| 27. | 2016–17ನೇ ಸಾಲಿಗೆ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಮಾಡಬೇಕಾದ ಪೂರ್ವ ಸಿದ್ಧತೆಗಳ ಬಗ್ಗೆ ಸುತ್ತೋಲೆ. | 120–121 |

# 1. ಮಾಹೆವಾರು ಶೈಕ್ಷಣಿಕ ಚಟುವಟಿಕೆಗಳು

| ಅವಧಿ | ಶಾಲೆಯಲ್ಲಿ ಹಮ್ಮಿಕೊಳ್ಳಬೇಕಾದ ವಿಶೇಷ ಕಾರ್ಯಕ್ರಮಗಳು | ಪೂರಕ ಚಟುವಟಿಕೆಗಳು |
|---|---|---|
| **ಮೇ – 2016** | ಶಾಲಾ ಪ್ರಾರಂಭದ ಪೂರ್ವಸಿದ್ದತೆ ಎಸ್.ಡಿ.ಎಂ.ಸಿ. ಪ್ರಥಮ ಸಭೆ. ಸಿದ್ಧಪಡಿಸಿರುವ ಸಂಸ್ಥಾ ಯೋಜನೆ / ವಾರ್ಷಿಕ ಯೋಜನೆ / ಶೈಕ್ಷಣಿಕ ಯೋಜನೆ ಕುರಿತು ಚರ್ಚಿಸಿ ಅನುಮೋದಿಸುವುದು. | • ವಿದ್ಯಾರ್ಥಿಗಳ ದಾಖಲಾತಿ ಪ್ರಾರಂಭಿಸುವುದು.<br>• ಶಾಲಾ ವಾರ್ಷಿಕ ಕಾರ್ಯಸೂಚಿ ಮತ್ತು ಪಾಠಗಳ ಹಂಚಿಕೆಯನ್ನು ಸಿದ್ಧಪಡಿಸುವುದು<br>• ತರಗತಿವಾರು ಮತ್ತು ಶಿಕ್ಷಕವಾರು ವೇಳಾಪಟ್ಟಿಯನ್ನು ಸಿದ್ಧಪಡಿಸುವುದು<br>• ಎಸ್.ಡಿ.ಎಂ.ಸಿ ಸಭೆಯಲ್ಲಿ ಶಾಲೆಯ ಮೂಲಭೂತ ಸೌಕರ್ಯ/ವಿದ್ಯಾರ್ಥಿ ದಾಖಲಾತಿ/ ಶೈಕ್ಷಣಿಕ ಸೌಲಭ್ಯ ಹಾಗೂ ಸದರಿ ವರ್ಷದಲ್ಲಿ ಕೈಗೊಳ್ಳಬೇಕಾದ ದೂರಗಾಮಿ ಯೋಜನೆಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು. |
| **ಮೇ–2016** | | • ಪರಿಹಾರ ಬೋಧನೆಗೆ ಒಳಪಟ್ಟ (ಕಲಿಕೆಯಲ್ಲಿ ಹಿಂದುಳಿದ) ಮಕ್ಕಳ ಕಲಿಕೆಯನ್ನು ದೃಡೀಕರಿಸುವುದು |
| 28–05–2016 | ಶಾಲಾ ಪ್ರಾರಂಭೋತ್ಸವ | • ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯದ ಮುಖಂಡರು ಮತ್ತು ಪೋಷಕರು ಶಾಲಾ ಪ್ರಾರಂಭೋತ್ಸವದಲ್ಲಿ ತೊಡಗಿಸಿಕೊಳ್ಳುವುದು.<br>• ತಳಿರು ತೋರಣಗಳಿಂದ ಅಲಂಕರಿಸಿ ಶಾಲೆಗೆ ಮಕ್ಕಳನ್ನು ಸ್ವಾಗತಿಸಿ, ಸಿಹಿ ಹಂಚುವುದು.<br>• ಉಚಿತ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರ ವಿತರಣೆ.<br>• ಪೂರ್ಣ ಪ್ರಮಾಣದಲ್ಲಿ ತರಗತಿಯ ಬೋಧನೆ ಪ್ರಾರಂಭ<br>• ಮಧ್ಯಾಹ್ನದ ಉಪಾಹಾರ ಯೋಜನೆ ಪ್ರಾರಂಭಿಸುವುದು. |
| **ಜೂನ್ – 2016**<br>01–06–2016<br>ರಿಂದ<br>16–06–2016 | ಸೇತುಬಂಧ ಶಿಕ್ಷಣ | • ಪೂರ್ವ ಪರೀಕ್ಷೆ<br>• ವಿದ್ಯಾರ್ಥಿವಾರು, ವಿಷಯವಾರು ಸಾಮರ್ಥ್ಯ ಗುರುತಿಸುವಿಕೆ<br>• ಫಲಿತಾಂಶದ ವಿಶ್ಲೇಷಣೆ<br>• ಪರಿಹಾರ ಬೋಧನೆ<br>• ಸಾಫಲ್ಯ ಪರೀಕ್ಷೆ<br>• ಅನುಪಾಲನಾ ಚಟುವಟಿಕೆಗಳು |
| **ಜೂನ್–2016** | ವಿಶ್ವ ಪರಿಸರ ದಿನ | • ಪರಿಸರದ ಕುರಿತು ಮಕ್ಕಳು ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಆಯೋಜನೆ ಮಾಡುವುದು. |

| | | |
|---|---|---|
| 10–06–2016 | | • 30–06–2016 ರವರೆಗೆ 7,8,9ನೇ ತರಗತಿ ಪಾಸಾದ ಅಥವಾ 8,9,10 ರಲ್ಲಿ ಶಾಲೆ ತೊರೆದ/ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಕರೆತರುವುದು.<br>• ಶಾಲೆಗೆ ಬರದಿರುವ ಮಕ್ಕಳ ಭಾವಚಿತ್ರ ತೆಗೆಸುವುದು ಮತ್ತು ಪೋಷಕರ ವಿಳಾಸ ಇನ್ನಿತರ ವಿವರಗಳನ್ನು ಸಂಗ್ರಹಿಸಿ ದಾಖಲಿಸುವುದು.<br>• ಗ್ರಾಮ ಶಿಕ್ಷಣ ವಹಿ(VER)ಅಥಾವ ವಾರ್ಡ್ ಶಿಕ್ಷಣ ವಹಿ(WER)ನಲ್ಲಿ ದಾಖಲಿಸುವುದು,<br>• ಇಂತಹ ಮಕ್ಕಳ ಪೋಷಕರಿಗೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಸಮುದಾಯದ ಮುಖಂಡರಿಂದ ಪತ್ರ ಕಳುಹಿಸುವುದು.<br>• ತಹಶೀಲ್ದಾರ್ ಸೇರಿದಂತೆ ಸ್ಥಳೀಯ ಅಧಿಕಾರಿಗಳಿಂದ ಪೋಷಕರನ್ನು ಭೇಟಿ ಮಾಡಿಸಿ, ತಿಳುವಳಿಕೆ ಮೂಡಿಸುವುದು. |
| 12–06–2016 | ಬಾಲಕಾರ್ಮಿಕ ಪದ್ಧತಿ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸುವುದು | • ಬಾಲಕಾರ್ಮಿಕ ಪದ್ಧತಿ ಕುರಿತು ಸಮುದಾಯದಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 16–06–2016 ರಿಂದ 20–06–2016 | ಸೇತುಬಂಧ ಶಿಕ್ಷಣದ ಸಾಫಲ್ಯ ಪರೀಕ್ಷೆಯ ಅನುಪಾಲನೆ | • ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವೈಯಕ್ತಿಕ ಗಮನ ನೀಡುವುದು. |
| 21–06–2016 | ವಿಶ್ವ ಯೋಗ ದಿನಾಚರಣೆ | ವಿದ್ಯಾರ್ಥಿಗಳಿಗೆ ಯೋಗದದ ಮಹತ್ವದ ಬಗ್ಗೆ ಅರಿವು ಮೂಡಿಸುವುದು. |
| 16.06.2016 ರಿಂದ 30–06–2016 | ಶಾಲಾಮಟ್ಟದ ಕ್ರೀಡಾಕೂಟಗಳು | • ಶಾಲೆಯಲ್ಲಿ ಎಲ್ಲಾ ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು. ವಿಜೇತರನ್ನು ಕ್ಲಸ್ಟರ್ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆ ಮಾಡುವುದು. |
| **ಜುಲೈ–2016**<br>11.7.2016 | ವಿಶ್ವ ಜನಸಂಖ್ಯಾ ದಿನಾಚರಣೆ | • ಜನಸಂಖ್ಯಾ ಸ್ಫೋಟ ಪರಿಣಾಮದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು. |
| 21–07–2016 ರಿಂದ 22.7.2016 | ಶಾಲಾ ಹಂತದಲ್ಲಿ ಪ್ರತಿಭಾಕಾರಂಜಿ | • ಶಾಲಾ ಮಟ್ಟದಲ್ಲಿ ಪ್ರತಿಭಾಕಾರಂಜಿ ಏರ್ಪಡಿಸುವುದು |
| 01–07–2016 ಮತ್ತು 30–07–2016 | ಕ್ಲಸ್ಟರ್ ಮಟ್ಟದ ಕ್ರೀಡಾಕೂಟಗಳ ಸಂಘಟನೆ | • ಕ್ಲಸ್ಟರ್ ಮಟ್ಟದ ಕ್ರೀಡಾಕೂಟಗಳ ಸಂಘಟನೆ ಕಾರ್ಯಕ್ರಮವನ್ನು ಏರ್ಪಡಿಸುವುದು. ತಾಲ್ಲೂಕು ಮಟ್ಟದ ಸ್ಪರ್ದೆಗಳಿಗೆ ಆಯ್ಕೆ ಮಾಡುವುದು. |
| 14–07–2016 ರಿಂದ 15–07–2016 | ಮೊದಲನೇ ರೂಪಣಾತ್ಮಕ ಮೌಲ್ಯಮಾಪನ | • ವಿಷಯವಾರು ಹಾಗೂ ತರಗತಿವಾರು ಒಂದು ಅವಧಿಗೆ ಸೀಮಿತಗೊಂಡಂತೆ ರೂಪಣಾತ್ಮಕ ಮೌಲ್ಯಮಾಪನ ನಡೆಸುವುದು. |
| **ಆಗಸ್ಟ್ 2016**<br>01–08–2016 ಹಾಗೂ 30–08–2016 | ಬ್ಲಾಕ್/ತಾಲ್ಲೂಕು ಮಟ್ಟದ ಕ್ರೀಡಾಕೂಟಗಳು | • ತಾಲ್ಲೂಕು ಮಟ್ಟದ ಕ್ರೀಡೆಗಳಲ್ಲಿ ಎಲ್ಲಾ ಶಾಲೆಯ ವಿಜೇತ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕಲ್ಪಿಸುವುದು. ವಿಜೇತರನ್ನು ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆ ಮಾಡುವುದು. |

| | | |
|---|---|---|
| 09–08–2016 ಮತ್ತು 10–08–2016 | ಕ್ಲಸ್ಟರ್/ಹೋಬಳಿ ಹಂತದ ಪ್ರತಿಭಾ ಕಾರಂಜಿ | • ಶಾಲಾಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕ್ಲಸ್ಟರ್/ಹೋಬಳಿ ಹಂತದ ಸ್ಪರ್ಧೆ ಏರ್ಪಡಿಸುವುದು. |
| 13–08–2016 ರಿಂದ 14–08–2016 | ಸ್ವಾತಂತ್ರ್ಯ ದಿನಾಚರಣೆಯ ಪೂರ್ವಸಿದ್ದತೆ | • ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಿಸಿದಂತೆ ಅಗತ್ಯ ಪೂರ್ವಸಿದ್ದತೆ ಮಾಡಿಕೊಳ್ಳುವುದು. |
| 15–08–2016 | ಸ್ವಾತಂತ್ರ್ಯ ದಿನಾಚರಣೆ | • ಮಕ್ಕಳು ಪೋಷಕರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗೆ ಸ್ವಾತಂತ್ರ್ಯ ದಿನಾಚರಣೆ ಆಚರಿಸುವುದು. |
| 01–08–2016ರಿಂದ 31–08–2016 | ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದ ಪ್ರಾರಂಭ. | • ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಶಾಲೆ ಹಂತದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವುದು |
| 26–08–2016 ಮತ್ತು 27–08–2016 | ಬ್ಲಾಕ್‌ಮಟ್ಟದ ಪ್ರತಿಭಾ ಕಾರಂಜಿ | • ಹೋಬಳಿ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಾಲ್ಲೂಕು ಮಟ್ಟದ ಸ್ಪರ್ಧೆಗೆ ಅಣಿಗೊಳಿಸುವುದು. |
| 29–08–2016 | ರಾಷ್ಟ್ರೀಯ ಕ್ರೀಡಾದಿನ | • ರಾಷ್ಟ್ರಮಟ್ಟದ ಕ್ರೀಡೆಗಳು ಹಾಗೂ ಪುರಸ್ಕಾರಗಳ ಬಗ್ಗೆ ತಿಳುವಳಿಕೆ ನೀಡುವುದು<br>• ನಾನು ಮೆಚ್ಚುವ ಆಟ ಎಂಬ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದು |
| 30–08–2016 31–08–2016 | ಎರಡನೇ ರೂಪಣಾತ್ಮಕ ಮೌಲ್ಯಮಾಪನ | • ಶಾಲಾಹಂತದಲ್ಲಿ ತರಗತಿವಾರು, ವಿಷಯವಾರು ಎರಡನೇ ರೂಪಣಾತ್ಮಕ ಮೌಲ್ಯಮಾಪನ ನಡೆಸುವುದು. |
| **ಸೆಪ್ಟೆಂಬರ್ 2016** 04–09–2016 | ಶಿಕ್ಷಕರ ದಿನಾಚರಣೆ ಪೂರ್ವ ತಯಾರಿ | • ಶಿಕ್ಷಕರ ದಿನಾಚರಣೆಗೆ ಪೂರ್ವಸಿದ್ಧತೆ ಮಾಡಿಕೊಳ್ಳುವುದು. ಬಾವುಟಗಳ ವಿತರಣೆ ಮತ್ತು ವಂತಿಗೆ ಸಂಗ್ರಹಣೆ |
| 05–09–2016 | ಶಿಕ್ಷಕರ ದಿನಾಚರಣೆ | • ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದು |
| 08–09–2016 | ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ | • ಸಾಕ್ಷರತೆಯ ಮಹತ್ವವನ್ನು ಕುರಿತು ಮಕ್ಕಳಿಗೆ ಆಶುಭಾಷಣ, ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ ಇತ್ಯಾದಿ ಏರ್ಪಡಿಸುವ ಮೂಲಕ ಮನವರಿಕೆ ಮಾಡುವುದು |
| 15–09–2016 | ಸರ್.ಎಂ.ವಿಶ್ವೇಶ್ವರಯ್ಯನವರ ದಿನಾಚರಣೆ | • ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು.<br>• ಮಕ್ಕಳಿಗೆ ಭಾಷಣ, ಪ್ರಬಂಧ ಸ್ಪರ್ಧೆ ಏರ್ಪಡಿಸುವುದು. |
| 01–09–2016 ರಿಂದ 30–09–2016 | ಜಿಲ್ಲಾ ಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಿಗನುಗುಣವಾಗಿ ಜಿಲ್ಲಾ ಹಂತದ ಕ್ರೀಡಾಕೂಟವನ್ನು ಏರ್ಪಡಿಸುವುದು. ವಿಭಾಗ ಮಟ್ಟಕ್ಕೆ ಅಗತ್ಯ ಸಿದ್ಧತೆ |
| 21–09–2016 | ಅಂತರಾಷ್ಟ್ರೀಯ ಶಾಂತಿ ಮತ್ತು ಅಹಿಂಸಾ ದಿನಾಚರಣೆ | • ಶಾಂತಿ ಮತ್ತು ಅಹಿಂಸೆಯ ಮಹತ್ವದ ಬಗ್ಗೆ ಮನವರಿಕೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| 22–09–2016 | ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ತಯಾರಿ | • ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದು. |
| 23–09–2016 ರಿಂದ 29–09–2016 | ಸಂಕಲನಾತ್ಮಕ ಮೌಲ್ಯಮಾಪನ | • 2016–17ನೇ ಶೈಕ್ಷಣಿಕ ಸಾಲಿನ ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಅಗತ್ಯ ಪೂರ್ವ ಸಿದ್ದತೆಯೊಂದಿಗೆ ನಡೆಸುವುದು. |
| **ಅಕ್ಟೋಬರ್ 2016** 02–10–2016 | ಗಾಂಧಿ ಜಯಂತಿ | • ಗಾಂಧೀಜಿ ಜೀವನಚರಿತ್ರೆ ಮಕ್ಕಳಿಗೆ ಪರಿಚಯಿಸುವುದು.<br>• ಶಾಂತಿ, ಅಹಿಂಸೆ, ಸತ್ಯಾಗ್ರಹ ತತ್ವಗಳ ಕುರಿತು ಮಕ್ಕಳಿಗೆ ಮನದಟ್ಟು ಮಾಡಿಕೊಡುವುದು.<br>• ಗಾಂಧೀಜಿ ಕುರಿತ ಪುಸ್ತಕಗಳ ಅಧ್ಯಯನ. |

| | | |
|---|---|---|
| 8.10.2016 | ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮ | • ಪ್ರೌಢಶಾಲೆಗಳಲ್ಲಿ ಮಕ್ಕಳ ಫಲಿತಾಂಶ/ ಕಲಿಕಾ ಸಾಮರ್ಥ್ಯಗಳ ವಿಶ್ಲೇಷಣೆ ಮಾಡಿ ಪೋಷಕರೊಂದಿಗೆ ಸಂವಾದ<br>• ಎಸ್.ಡಿ.ಎಂ.ಸಿ. ಸದಸ್ಯರು, ಸಮುದಾಯ ಮತ್ತು ಪೋಷಕರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು<br>• ಮಕ್ಕಳ ನಿರಂತರ ಹಾಜರಾತಿ ಮತ್ತು ಕಲಿಕೆಗೆ ಇರುವ ಸಂಬಂಧವನ್ನು ಪೋಷಕರಿಗೆ ಮನವರಿಕೆ ಮಾಡಿಕೊಡುವುದು.<br>• ಮಕ್ಕಳ ಕಲಿಕೆಯನ್ನು ಸಮುದಾಯಕ್ಕೆ ಪ್ರಸ್ತುತ ಪಡಿಸುವುದು<br>• ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಿಸುವುದು. |
| **09–10–2016 ರಿಂದ 27–10–2016 : ಮಧ್ಯಂತರ ರಜೆ** | | |
| 01.11.2016 ರಿಂದ 30.11.2016. | ವಿಭಾಗ ಮಟ್ಟದ ಕ್ರೀಡಾಕೂಟ | • ಇಲಾಖೆಯ ಸೂಚನೆಗಳಂತೆ ವಿಭಾಗೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸುವುದು. |
| 31–10–2016 | ರಾಷ್ಟ್ರೀಯ ಸಂಕಲ್ಪ ದಿನ | • ರಾಷ್ಟ್ರೀಯ ಭಾವೈಕ್ಯತೆ ಗೀತೆ ಹಾಡಿಸುವುದು<br>• ರಾಷ್ಟ್ರೀಯ ಭಾವೈಕ್ಯತೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡುವುದು<br>• ಕನ್ನಡ ರಾಜ್ಯೋತ್ಸವಕ್ಕೆ ಪೂರ್ವಸಿದ್ಧತೆ |
| **ನವೆಂಬರ್ 2016**<br>01–11–2016<br><br>5–11–2016ರಿಂದ 6–11–2016 | ಕನ್ನಡ ರಾಜ್ಯೋತ್ಸವ<br><br>ಸಾಂಸ್ಕೃತಿಕ ಜಿಲ್ಲಾ ಮಟ್ಟದ ಪ್ರತಿಭಕಾರಂಜಿ | • ಕನ್ನಡ ರಾಜ್ಯೋತ್ಸವ ಆಚರಿಸುವುದು<br>• ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಚಟುವಟಿಕೆಗಳು ಹಾಗೂ ಸ್ಪರ್ಧೆಗಳನ್ನು ನಡೆಸುವುದು.<br>• ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ಮಕ್ಕಳನ್ನು ಅಣಿಗೊಳಿಸುವುದು. |
| 11–11–2016 | ರಾಷ್ಟ್ರೀಯ ಶಿಕ್ಷಣ ದಿನ | • ಡಾ॥ ಮೌಲಾನಾ ಅಬ್ದುಲ್ ಕಲಂ ಅಜಾದ್ ಜನ್ಮದಿನಾಚರಣೆಯ ಪ್ರಯುಕ್ತ ಅವರ ಜೀವನ/ಸಾದನೆ ಬಗ್ಗೆ ಮಕ್ಕಳಿಗೆ ತಿಳುವಳಿಕೆ ನೀಡುವುದು |
| 14–11–2016 | ಮಕ್ಕಳ ದಿನಾಚರಣೆ | • ಮಕ್ಕಳ ಹಕ್ಕುಗಳ ಕ್ಲಬ್‌ನಿಂದ ಕಾರ್ಯಕ್ರಮ ನಡೆಸುವುದು<br>• ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರ ಸಮ್ಮುಖ ದಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲವೂ ಮಕ್ಕಳಿಂದ ವೇದಿಕೆಯಲ್ಲಿ ಕಾರ್ಯಕ್ರಮ ನಡೆಸುವುದು |
| 19.11.2016 ರಿಂದ 26.11.2016 | ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ | • ಭಾವೈಕ್ಯತಾ ಗೀತಗಾಯನ ಸ್ಪರ್ಧೆ, ಚರ್ಚಾ ಸ್ಪರ್ಧೆ, ಕೋಮು ಸೌಹಾರ್ದತೆಯ ಬಗ್ಗೆ ಪ್ರಬಂಧ ಹಾಗೂ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 25–11–2016 ರಿಂದ 26–11–2016 | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ | • ತಾಲ್ಲೂಕು ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸ್ಫರ್ಧೆ ಏರ್ಪಡಿಸುವುದು. |

| | | |
|---|---|---|
| ನವೆಂಬರ್ 2016 | ಬ್ಲಾಕ್‌ಹಂತದ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಬ್ಲಾಕ್ ಹಂತದ ವಿಜ್ಞಾನ ವಸ್ತು ಪ್ರದರ್ಶನ ಏರ್ಪಡಿಸುವ್ಯದು ಹಾಗೂ ನಾಟಕ ವಿಜ್ಞಾನ ಘೋಷ್ಠಿಗಳ ಆಯೋಜನೆ. |
| **ಡಿಸೆಂಬರ್ 2016**<br>01–12–2016 | ಏಡ್ಸ್ ದಿನಾಚರಣೆ | • ಏಡ್ಸ್ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| ಡಿಸೆಂಬರ್–2016 | ರಾಜ್ಯಮಟ್ಟದ ಪ್ರತಿಭಾ ಕಾರಂಜಿ ನಡೆಸುವುದು. | • ಇಲಾಖೆಯ ಸೂಚನೆಗಳಿಗೆ ಅನುಗುಣವಾಗಿ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಮ್ಮಿಕೊಳ್ಳುವುದು. |
| 02–12–2016 | ರಾಷ್ಟ್ರೀಯ ಮಾಲಿನ್ಯ ದಿನಾಚರಣೆ | • ವಿವಿಧ ಬಗೆಯ ಮಾಲಿನ್ಯಗಳ ಬಗ್ಗೆ ಹಾಗೂ ಅವುಗಳ ತಡೆಗಟ್ಟುವಿಕೆಯ ಅಗತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 03–12–2016 | ವಿಶ್ವ ವಿಕಲಚೇತನರ ದಿನಾಚರಣೆ. | • ವಿಕಲಚೇತನ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸುವುದು.<br>• ವಿವಿಧ ಬಗ್ಗೆಯ ಅಂಗವೈಕಲ್ಯತೆ ತಡೆಗಟ್ಟಲು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.<br>• ಶಾಲೆಗಳಲ್ಲಿ ದೃಷ್ಟಿದೋಷ, ಶ್ರವಣದೋಷ, ಮುಂತಾದ ನ್ಯೂನತೆಯುಳ್ಳ ಮಕ್ಕಳಿಗೆ ಅಗತ್ಯ ಉಪಕರಣಗಳನ್ನು ಒದಗಿಸುವುದು. |
| 03–12–2016<br>ರಿಂದ 31–12–2016 | ಶೈಕ್ಷಣಿಕ ಪ್ರವಾಸ | • ಶಾಲೆಗೆ ಸಮೀಪವಿರುವ ಪ್ರಸಿದ್ಧ ಸ್ಥಳಗಳಿಗೆ ಹೊರಸಂಚಾರ<br>• ಪಠ್ಯವಸ್ತುವಿಗೆ ಪೂರಕವಾದ ಸ್ಥಳಗಳಿಗೆ ಪ್ರವಾಸ ಕೈಗೊಂಡು ಭಾರತೀಯ ಸಂಸ್ಕೃತಿ, ವಿಜ್ಞಾನ, ಶಿಕ್ಷಣ, ಪರಂಪರೆ, ಇತಿಹಾಸದ ಪರಿಚಯ ಮಾಡಿಸುವುದು.<br>• ವಿದ್ಯಾರ್ಥಿಗಳಿಂದ ಪ್ರವಾಸದ ಅನುಭವ ಕುರಿತು ಪ್ರಬಂಧ/ಕಥೆ/ಕವನ ಬರೆಸಿ ಮಕ್ಕಳ ಪ್ರವಾಸ ಕಥನ ಪುಸ್ತಕ ಸಿದ್ಧಪಡಿಸುವುದು. |
| 08–12–2016<br>ರಿಂದ 09–12–2016 | ಮೂರನೇ ರೂಪಣಾತ್ಮಕ ಮೌಲ್ಯಮಾಪನ | • ತರಗತಿವಾರು ಹಾಗೂ ವಿಷಯವಾರು |
| 08–12–2016<br>ರಿಂದ<br>31–12–2016 | ಶಾಲಾ ವಾರ್ಷಿಕೋತ್ಸವ ಹಾಗೂ ಶಾಲಾ ಸಂಚಿಕೆ (ಶಾಲಾ ಮಕ್ಕಳ ಕೈಬರಹದ ಪತ್ರಿಕೆ) | • ಶಾಲಾ ವಾರ್ಷಿಕೋತ್ಸವಗಳನ್ನು ನಡೆಸಿ ಪೋಷಕರಿಗೆ ಮಕ್ಕಳ ಕಲಿಕೆಯನ್ನು ಪಠ್ಯ ಮತ್ತು ಸಹಪಠ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಸ್ತುತ ಪಡಿಸುವುದು.<br>• ಪ್ರತಿ ಶಾಲೆಯಲ್ಲಿ ಮಕ್ಕಳಿಂದಲೇ ಬರೆಸಿದ ಚುಟುಕ, ಲೇಖನಗಳ ಸಂಗ್ರಹ, ಚಿತ್ರಗಳು, ಸುಭಾಷಿತ ಇತ್ಯಾದಿ ಒಳಗೊಂಡ ಶಾಲಾ ಸಂಚಿಕೆ ಬಿಡುಗಡೆ ಮಾಡಿಸುವುದು. |
| 10.12.2016 | ಮಾನವ ಹಕ್ಕುಗಳ ದಿನಾಚರಣೆ | • ಮಾನವ ಹಕ್ಕುಗಳ ಕುರಿತು ಉಪನ್ಯಾಸ, ಪ್ರಬಂಧ ಸ್ಪರ್ದೆ, ಚರ್ಚಾಸ್ಪರ್ದೆ, ರಸಪ್ರಶ್ನೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು. |
| ಡಿಸೆಂಬರ್ 2016 | ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ | • ಇಲಾಖಾ ಸೂಚನೆಗನುಗುಣವಾಗಿ ಜಿಲ್ಲಾಮಟ್ಟದ ವಿಜ್ಞಾನ ವಸ್ತುಪ್ರದರ್ಶನ ನಡೆಸುವುದು. |

| | | |
|---|---|---|
| 23–12–2016 | ವಿಶ್ವ ರೈತರ ದಿನ | • ಪೋಷಕರು ಹಾಗೂ ಸ್ಥಳೀಯ ರೈತರಿಗೆ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಜಾಗತೀಕರಣದ ಪ್ರಭಾವದ ಬಗ್ಗೆ ಮಾಹಿತಿ ನೀಡುವುದು ಸ್ಥಳೀಯ ಬೆಳೆಗಳು, ಬೆಳೆಗಳಲ್ಲಿ ಕಂಡುಬರುವ ರೋಗಗಳ ಬಗ್ಗೆ, ಅಂತರ್ಜಲ, ಮಳೆ ನೀರು ಕೊಯ್ಲು, ಮಾರುಕಟ್ಟೆ ಇತ್ಯಾದಿ ವಿಚಾರಗಳ ಬಗ್ಗೆ ಸಂವಾದ ಏರ್ಪಡಿಸುವುದು. |
| 24–12–2016 | ಗ್ರಾಹಕರ ದಿನಾಚರಣೆ | • ಶಾಲಾ ಗ್ರಾಹಕ ಸಂಘಗಳು, ಗ್ರಾಹಕ ಹಕ್ಕುಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು.<br>ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಭಾರತದ ಚಿತ್ರಣದ ಬಗ್ಗೆ ಸ್ಥಳೀಯ ಯುವಕರೊಂದಿಗೆ ಸಂವಾದ |
| **ಜನವರಿ 2017**<br>12–01–2017 | • ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ | • ಸ್ವಾಮಿ ವಿವೇಕಾನಂದರ ಜೀವನ ಆದರ್ಶ ಕುರಿತು ಉಪನ್ಯಾಸ |
| 23–01–2017 | ನೇತಾಜಿ ಸುಭಾಷ್ ಚಂದ್ರ ಬೋಸ್ ಜನ್ಮ ದಿನಾಚರಣೆ | • ನೇತಾಜಿ ಸುಭಾಷ್ ಚಂದ್ರಬೋಸ್ ರವರ ಬಗ್ಗೆ ನೆನಪಿಸುವ ಕಾರ್ಯಕ್ರಮಗಳ ಆಯೋಜನೆ |
| 26–01–2017 | ಗಣರಾಜ್ಯೋತ್ಸವ ದಿನಾಚರಣೆ | • ಹೆಚ್ಚಿನ ಸಂಖ್ಯೆಯ ಪೋಷಕರು ಹಾಗೂ ಸಮುದಾಯದ ಗಣ್ಯರ ಹಾಜರಿಯಲ್ಲಿ ಗಣರಾಜ್ಯೋತ್ಸವ ಆಚರಿಸುವುದು |
| 30–01–2017 | ಹುತಾತ್ಮರ ದಿನಾಚರಣೆ | • ಮಹಾತ್ಮ ಗಾಂಧೀಜಿಯವರ ಮೌಲ್ಯಗಳನ್ನು ಮಕ್ಕಳಿಗೆ ಮನನ ಮಾಡಿಕೊಡುವುದು.<br>• ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮ ರಾದವರನ್ನು ನೆನಪಿಸಿಕೊಳ್ಳುವುದು.<br>• ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮ ಹಮ್ಮಿಕೊಳ್ಳುವುದು |
| **ಫೆಬ್ರವರಿ 2017**<br>17–02–2017 ರಿಂದ<br>18–02–2017 | ನಾಲ್ಕನೇ ರೂಪಣಾತ್ಮಕ ಮೌಲ್ಯಮಾಪನ | • ವಿಷಯವಾರು ತರಗತಿವಾರು ಕಟ್ಟುನಿಟ್ಟಾಗಿ ರೂಪಣಾತ್ಮಕ ಮೌಲ್ಯಮಾಪನ ನಡೆಸುವುದು. |
| 28–02–2017 | ರಾಷ್ಟ್ರೀಯ ವಿಜ್ಞಾನ ದಿನಾಚರಣೆ | • ವಿಜ್ಞಾನ ದಿನಾಚರಣೆಯ ಮಹತ್ವದ ಬಗ್ಗೆ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವ ಬಗ್ಗೆ ಅರಿವು ಮೂಡಿಸುವುದು.<br>• ಮೊಬೈಲ್‌ನ ಅತೀ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡುವುದು.<br>• ವಿಜ್ಞಾನ ವಸ್ತುಪ್ರದರ್ಶನ ಏರ್ಪಡಿಸಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಮುದಾಯ ವೀಕ್ಷಿಸಲು ಅನುವು ಮಾಡಿಕೊಡುವುದು.<br>• ವಿಜ್ಞಾನದ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸುವುದು. |
| **ಮಾರ್ಚ್ 2017**<br>08–03–2017 | ವಿಶ್ವ ಮಹಿಳಾ ದಿನಾಚರಣೆ | • ಮಹಿಳಾ ಸಬಲೀಕರಣದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು.<br>• ಲಿಂಗತಾರತಮ್ಯ ನಿವಾರಣೆಗೆ ಪೋಷಕರಿಗೆ ಹಾಗೂ ಮಕ್ಕಳಿಗೆ ತಿಳುವಳಿಕೆ |

| | | |
|---|---|---|
| | | • ಬಾಲ್ಯವಿವಾಹದ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸುವುದು. |
| 18–03–2017 | ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನದ ಪೂರ್ವಸಿದ್ಧತೆ | • ತರಗತಿವಾರು ಹಾಗೂ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿಕೊಳ್ಳುವುದು.<br>• ಪರೀಕ್ಷೆಗೆ ಆಸನ ವ್ಯವಸ್ಥೆ ಮಾಡಿಕೊಳ್ಳುವುದು. |
| 20–03–2017 ರಿಂದ 27–03–2017 | ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ | • ಸಮಗ್ರ ಸಂಕಲನಾತ್ಮಕ ಮೌಲ್ಯಮಾಪನ ನಡೆಸುವುದು.<br>• (ಟಿಪ್ಪಣಿ: ಎಸ್.ಎಸ್.ಎಲ್.ಸಿ. ಪರೀಕ್ಷಾ ವೇಳಾಪಟ್ಟಿಯ ಅನುಸಾರ ಪ್ರಸ್ತುತ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸುವ ಸಮಯ ಪಲ್ಲಟವಾಗಬಹುದು) |
| **ಏಪ್ರಿಲ್ 2017**<br>01–04–2017 ರಿಂದ 05–04–2017 | ಮುಂಬರುವ ವರ್ಷಕ್ಕೆ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿಕೊಳ್ಳುವುದು | • ಶಾಲೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕಾರ್ಯ ಯೋಜನೆ ಸಿದ್ಧಪಡಿಸುವುದು<br>• ಶಾಲಾ ವೇಳಾಪಟ್ಟಿ, ಶಾಲಾ ಪಂಚಾಂಗ ಸಿದ್ಧಪಡಿಸುವುದು<br>• ಸಮುದಾಯದತ್ತ ಶಾಲಾ ಕಾರ್ಯಕ್ರಮದ ದಿನದೊಂದು ಎಸ್.ಡಿ.ಎಂ.ಸಿ.ಸಭೆಯಲ್ಲಿ ಶಾಲಾ ಶೈಕ್ಷಣಿಕ ಯೋಜನೆ ಮಂಡಿಸಿ, ಒಪ್ಪಿಗೆ ಪಡೆಯುವುದು. |
| 07–04–2017 | ವಿಶ್ವ ಆರೋಗ್ಯ ದಿನಾಚರಣೆ | • ವಿದ್ಯಾರ್ಥಿಗಳಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಪ್ರಾಮುಖ್ಯತೆ ಬಗ್ಗೆ ವಿವಿಧ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಮೂಲಕ ಮನವರಿಕೆ ಮಾಡುವುದು. |
| 10–04–2017 | ಎರಡನೇ ಸಮುದಾಯದತ್ತ ಶಾಲಾ ಕಾರ್ಯಕ್ರಮ | • ಜೂನ್ 2016 ರಿಂದ ಶಾಲೆಯಲ್ಲಿ ಸಿದ್ಧಪಡಿಸಿದ ಶಾಲಾ ಶೈಕ್ಷಣಿಕ ಯೋಜನೆ ಹಾಗೂ ಶಾಲಾಭಿವೃದ್ಧಿ ಯೋಜನೆಯ ಅನ್ವಯ ಆಗಿರುವ ಪರಿಶೀಲನೆ<br>• ಮಕ್ಕಳ ಕಲಿಕೆಯನ್ನು ಪೋಷಕರಿಗೆ ಪ್ರಸ್ತುತ ಪಡಿಸುವುದು.<br>• ಉತ್ತರ ಪತ್ರಿಕೆಗಳನ್ನು ಪೋಷಕರಿಗೆ ತೋರಿಸಿ ಮಗುವಿನ ಕಲಿಕೆಯ ಪ್ರಗತಿಯ ಬಗ್ಗೆ ವಿವರಣೆ ನೀಡುವುದು.<br>• ಪ್ರಗತಿ ಪತ್ರದನ್ವಯ ಮಕ್ಕಳ ಕಲಿಕೆಯು ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.<br>• ಪ್ರತಿಭಾ ಪ್ರದರ್ಶನ<br>• ಫಲಿತಾಂಶ ಪ್ರಕಟಣೆ |
| 11–04–2017 ರಿಂದ | ಬೇಸಿಗೆ ರಜೆ ಆರಂಭ | • ಬೇಸಿಗೆ ರಜೆ ಆರಂಭ |
| 14–04–2017 | ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ | • ಡಾ. ಬಿ.ಆರ್. ಅಂಬೇಡ್ಕರ್ ಜೀವನ ಕುರಿತು ಭಾಷಣ/ಚರ್ಚೆ ಇತ್ಯಾದಿ. |

**ವಿ.ಸೂ :** ದಿನಾಂಕ:14–4–2016ರಂದು ಬೇಸಿಗೆ ರಜೆ ಇದ್ದರು ಸಹ ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಶಾಲಾ ಮುಖ್ಯ ಶಿಕ್ಷಕರು/ವಿದ್ಯಾರ್ಥಿಗಳು ಭಾಗವಹಿಸಿ ಡಾ. ಬಿ.ಆರ್ ಅಂಬೇಡ್ಕರ್ ಜಯಂತಿಯನ್ನು ಕಡ್ಡಾಯವಾಗಿ ಆಚರಿಸುವುದು.

**ಟಿಪ್ಪಣಿ:**

- ರಾಷ್ಟ್ರೀಯ ದಿನಾಚರಣೆಗಳಲ್ಲದೆ ಶಾಲೆಯಲ್ಲಿ ಅನೇಕ ಮಹನೀಯರ ಕುರಿತು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವೆನಿಸುವ ಇನ್ನೂ ಕೆಲವು ದಿನಾಚರಣೆಗಳನ್ನು ಆಚರಿಸಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಆಚರಣೆಯ ಔಚಿತ್ಯ ಮತ್ತು ಮಹತ್ವದ ಅರಿವು ಬೆಳೆಯುತ್ತದೆ. ಇಂತಹ ಆಚರಣೆಗಳಲ್ಲಿಯೇ ಸಮಯ ಕಳೆದರೆ ಪಾಠ ಮಾಡಲಿಕ್ಕೆ ಸಮಯ ಎಲ್ಲಿ ಎಂಬ ಆಲೋಚನೆ ಹಲವರದು. ಅದು ಸಹಜ ಕೂಡಾ. ಶಾಲೆಯ ಮುಖ್ಯಸ್ಥರು ಈ ಎರಡೂ ವಿಚಾರಗಳ ಧಾಟಿಯನ್ನು ಗಮನಿಸಿ–ದಿನಾಚರಣೆಗಳನ್ನು ಆಯೋಜಿಸಲು ಕ್ರಮ ವಹಿಸುವುದು. ಉದಾಹರಣೆಗೆ ಕೆಲವು ಕಾರ್ಯಕ್ರಮಗಳ ಮಹತ್ವ ಕುರಿತು ಪ್ರಾರ್ಥನಾ ವೇಳೆಯಲ್ಲಿ 5–10 ನಿಮಿಷಗಳ ಪರಿಚಯಾತ್ಮಕ ಭಾಷಣವನ್ನು ವಿದ್ಯಾರ್ಥಿಗಳು ಅಥವಾ ಶಿಕ್ಷಕರು ನೀಡುವುದು ಅಥವಾ 40–50 ನಿಮಿಷಗಳ ಕಾರ್ಯಕ್ರಮವನ್ನು ಶಾಲೇತರ ಅವಧಿಯಲ್ಲಿ ಸಂಯೋಜಿಸುವುದರಿಂದ ಸಮಯ ಹೊಂದಾಣಿಕೆ ಮಾಡಿಕೊಳ್ಳಬಹುದು.
- ಕಿರು ಪರೀಕ್ಷೆಗಳು ನಡೆದ 03 ದಿನಗಳೊಳಗೆ ವಿದ್ಯಾರ್ಥಿಯ ಕಲಿಕೆಯ ಮಟ್ಟ ಕುರಿತು ಹಿಮ್ಮಾಹಿತಿ ನೀಡುವುದು ಮತ್ತು ಪೋಷಕರ ಗಮನಕ್ಕೆ ಈ ವಿಷಯ ತರುವುದು.

## 2. ಪ್ರೌಢಶಾಲಾ ಶುಲ್ಕದ ವಿವರ

**(ಸರ್ಕಾರಿ/ಅನುದಾನಿತ ಪ್ರೌಢಶಾಲೆಗಳಲ್ಲಿ 2016–17ನೇ ಸಾಲಿನಲ್ಲಿ ನಿಗದಿಪಡಿಸಿರುವ ಶುಲ್ಕ ವಿವರ)**

| ಕ್ರ ಸಂ | ಶುಲ್ಕದ ವಿವರಗಳು | 8 ನೇ ತರಗತಿ | 9 ರಿಂದ 10ನೇ ತರಗತಿ |
|---|---|---|---|
| 1 | ದಾಖಲಾತಿ ಶುಲ್ಕ | 00 | 10.00 |
| 2 | ಕ್ರೀಡಾ ಶುಲ್ಕ | 00 | 25.00 |
| 3 | ರೀಡಿಂಗ್ ರೂಂ ಶುಲ್ಕ | 00 | 20.00 |
| 4 | ಪ್ರಯೋಗಾಲಯ ಶುಲ್ಕ | 00 | 20.00 |
| 5 | ದೃಕ್ ಶ್ರವಣ [ಎವಿಇ] ಶುಲ್ಕ | 00 | 10.00 |
| 6 | ಡ್ರಾಯಿಂಗ್ ಶುಲ್ಕ | 00 | 10.00 |
| 7 | ವೈದ್ಯಕೀಯ ಶುಲ್ಕ | 00 | 05.00 |
| 8 | ವೃತ್ತಿ ಶಿಕ್ಷಣ ಶುಲ್ಕ | 00 | 10.00 |
| 9 | ಶಾಲಾ ಸ್ವಚ್ಛತಾ ಶುಲ್ಕ | 00 | 15.00 |
| 10 | ವಿದ್ಯಾರ್ಥಿ ಕ್ರೀಡಾ ನಿಧಿ | 15 | 15.00 |
| 11 | ವಿದ್ಯಾರ್ಥಿಕ್ಷೇಮಾಭಿವೃದ್ದಿ ನಿಧಿ [ಎಸ್.ಡಬ್ಲ್ಯೂಎಫ್] | 15 | 15.00 |
| 12 | ಶಿಕ್ಷಕರ ಕಲ್ಯಾಣ ನಿಧಿ [ಟಿ.ಡಬ್ಲ್ಯೂಎಫ್] | 15 | 15.00 |
| 13 | ಶಾಲಾಭಿವೃದ್ಧಿ ಶುಲ್ಕ | 00 | 20.00 |
| 14 | ಶಿಕ್ಷಕರ ದಿನಾಚರಣೆಯ ಬಾವುಟ | 08 | 08.00 |
| **ಒಟ್ಟು** | | **53** | **198.00** |

**ಶುಲ್ಕ ರಿಯಾಯಿತಿ:**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಗುಂಪು–1ರ ಅಡಿಯಲ್ಲಿ ಬರುವ ಎಲ್ಲಾ ವಿದ್ಯಾರ್ಥಿಗಳಿಗೆ
2. ಎಲ್ಲಾ ವಿದ್ಯಾರ್ಥಿನಿಯರಿಗೆ
3. ರೂ.44.500/– ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ

**ವಿಶೇಷ ಸೂಚನೆ:**

1. ಸೇವಾದಳ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಇರುವ ಶಾಲೆಗಳಲ್ಲಿ ಪ್ರತಿ ಘಟಕಕ್ಕೆ ತಲಾ 5.00 ರೂ ಸಂಗ್ರಹಿಸುವುದು.
2. ಕ್ರಮ ಸಂಖ್ಯೆ: 10, 11 ಮತ್ತು 12 ಈ ನಿಧಿಗಳಿಗೆ ಶುಲ್ಕ ರಿಯಾಯಿತಿ ಇರುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳು ನಿಧಿ ಪಾವತಿಸುವುದು ಕಡ್ಡಾಯವಾಗಿದೆ.
3. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 5ನೇ ತರಗತಿಯಿಂದ 7ನೇ ತರಗತಿಯವರೆಗೆ ನಡೆಯುತ್ತಿರುವ ಶಾಲೆಗಳಲ್ಲಿ 5ನೇ ತರಗತಿ ವಿದ್ಯಾರ್ಥಿ ಕ್ರೀಡಾನಿಧಿ ಪಾವತಿಸುವುದು ಕಡ್ಡಾಯವಾಗಿದೆ.

**ಪ್ರಾಥಮಿಕ ಶಿಕ್ಷಕರ ವಿವರ**

| ಕ್ರ.ಸಂ | ಶುಲ್ಕದ ವಿವರಗಳು | 5,6,7ನೇ ತರಗತಿ | ಉನ್ನತೀಕರಿಸಿದ ಹಿ.ಪ್ರಾ.ಶಾಲೆ 8ನೇ ತರಗತಿಗೆ |
|---|---|---|---|
| 1 | ಕ್ರೀಡಾ ಶುಲ್ಕ | – | – |
| 2 | ವಿದ್ಯಾರ್ಥಿ ಕ್ರೀಡಾ ನಿಧಿ | 05.00 | 15.00 |

**ವಿಶೇಷ ಸೂಚನೆ:–**

- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 5ನೇ ತರಗತಿಯಿಂದ 7ನೇ ತರಗತಿಯವರೆಗೆ ನಡೆಯುತ್ತಿರುವ ಶಾಲೆಗಳಲ್ಲಿ 5ನೇ ತರಗತಿ ವಿದ್ಯಾರ್ಥಿಗಳು ರೂ.5.00 ವಿದ್ಯಾರ್ಥಿ ಕ್ರೀಡಾ ನಿಧಿ ಪಾವತಿಸುವುದು ಕಡ್ಡಾಯವಾಗಿದೆ.
- ಉನ್ನತ್ತೀಕರಿಸಿದ ಹಿ.ಪ್ರಾ.ಶಾಲೆಗಳಲ್ಲಿನ 8ನೇ ತರಗತಿಯ ಮಕ್ಕಳು ರೂ.15.00 ವಿದ್ಯಾರ್ಥಿ ಕ್ರೀಡಾ ನಿಧಿಯನ್ನು ಪಾವತಿಸುವುದು.

- ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ಚೆನ್ನಮ್ಮ ವಸತಿ ಶಾಲೆ ಮತ್ತು ಆದರ್ಶ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಹ ವಿದ್ಯಾರ್ಥಿ ಕ್ರೀಡಾ ನಿಧಿಯನ್ನು ಪಾವತಿಸುವುದು.

**ಪ್ರೌಢಶಾಲೆ –ಶುಲ್ಕದ ವಿವರ**

| ಕ್ರ.ಸಂ | ಶುಲ್ಕದ ವಿವರಗಳು | 8 ರಿಂದ 10ನೇ ತರಗತಿ |
|---|---|---|
| 1 | ಕ್ರೀಡಾ ಶುಲ್ಕ | 25.00 |
| 2 | ವಿದ್ಯಾರ್ಥಿ ಕ್ರೀಡಾ ನಿಧಿ | 15.00 |

**ವಿಶೇಷ ಸೂಚನೆ:**

- ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ಚೆನ್ನಮ್ಮ ವಸತಿ ಶಾಲೆ ಮತ್ತು ಆದರ್ಶ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಹ ವಿದ್ಯಾರ್ಥಿ ಕ್ರೀಡಾ ನಿಧಿಯನ್ನು ಪಾವರಿಸುವುದು.
- 

## 3. ಸಮುದಾಯದತ್ತ ಶಾಲಾ ಕಾರ್ಯಕ್ರಮ

**ಕಾರ್ಯಕ್ರಮದ ವ್ಯಾಪ್ತಿ:–**

"ಸಮುದಾಯದತ್ತ ಶಾಲೆ" ಕಾರ್ಯಕ್ರಮದನ್ವಯ ನಿಗದಿತ ದಿನಾಂಕಗಳಂದು ಪ್ರತಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಲ್ಲಾ ಪಾಲಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರು ಭಾಗವಹಿಸುವಂತೆ ಎಲ್ಲಾ ಕ್ರಮಗಳನ್ನು ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ತೆಗೆದುಕೊಳ್ಳಬೇಕು. ಈ ದಿನಾಂಕದಂದು, ಮಾರ್ಗದರ್ಶಕರು, ಶಿಕ್ಷಕರು, ಕಡ್ಡಾಯವಾಗಿ ಭಾಗವಹಿಸಿ ನಿಯೋಜಿತ ಕಾರ್ಯವನ್ನು ನಿರ್ವಹಿಸುವುದು.

**ಕಾರ್ಯಕ್ರಮ ನಡೆಸಬೇಕಾದ ದಿನಾಂಕಗಳು**

| ಕ್ರ ಸಂ | ಪ್ರೌಢಶಾಲೆಗಳಿಗೆ |
|---|---|
| 1. | ದಿನಾಂಕ: 08.10.2016 |
| 2. | ದಿನಾಂಕ: 10.04.2017 |

(**ವಿಶೇಷ ಸೂಚನೆ:–** ಮೇಲೆ ನಿಗದಿಪಡಿಸಿದ ದಿನಗಳಲ್ಲಿ ಅನಿವಾರ್ಯ ಕಾರ್ಯಗಳಿಂದ ರಜೆ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನದಂದು ಕಾರ್ಯಕ್ರಮ ನಡೆಸತಕ್ಕದ್ದು.)

**ವರದಿ ಮತ್ತು ಅನುಪಾಲನೆ**

ಪ್ರತಿ ಸಮುದಾಯದತ್ತ ಶಾಲೆ ಕಾರ್ಯಕ್ರಮ ನಡೆದ ನಂತರ ವರದಿಯನ್ನು ತಯಾರಿಸಿ ಮಾರ್ಗದರ್ಶಕರು ಹಾಗೂ ಅಧಿಕಾರಿಗಳು ತಕ್ಷಣ ಮೇಲಧಿಕಾರಿಗಳಿಗೆ/ಶಿಕ್ಷಣ ಸಂಯೋಜಕರಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡತಕ್ಕದ್ದು. ಕಾರ್ಯಕ್ರಮ ನಡೆದ ಎಂಟು ದಿನಗಳೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್‌ಮಟ್ಟದಲ್ಲಿ ವರದಿಗಳನ್ನು ಕ್ರೋಡೀಕರಿಸಿ ವಿಶ್ಲೇಷಿಸಿ ಅವರ ಹಂತದಲ್ಲಿ ಕೈಗೊಳ್ಳಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಂಡು ಕ್ರೋಡೀಕೃತ ವರದಿಯನ್ನು ಜಿಲ್ಲಾ ಉಪನಿರ್ದೇಶಕರು[ಆಡಳಿತ] ಮತ್ತು ಉಪನಿರ್ದೇಶಕರು [ಅಭಿವೃದ್ಧಿ] ಇವರಿಗೆ ಕಳುಹಿಸತಕ್ಕದ್ದು.

ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ಜಿಲ್ಲಾ ಮಟ್ಟದಲ್ಲ ಉಪನಿರ್ದೇಶಕರು[ಅಭಿವೃದ್ಧಿ] ರವರು ಕ್ರೋಢೀಕರಿಸಿ ಅವರವರ ವ್ಯಾಪ್ತಿಗೆ ಬರುವ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಂಡು ಕ್ರೋಢೀಕೃತ ಜಿಲ್ಲಾ ವರದಿಯನ್ನು ಆಯುಕ್ತರಿಗ ಕಳುಹಿಸತಕ್ಕದ್ದು.

## ವರದಿಯಲ್ಲಿರಬೇಕಾದ ಮುಖ್ಯಾಂಶಗಳು

ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಕಾರ್ಯಕ್ರಮ ಜರುಗಿತೆ? ಇಲ್ಲವಾದರೆ ಯಾವ ಶಾಲೆಯಲ್ಲಿ ನಡೆಯಲಿಲ್ಲ? ಕಾರಣಗಳು ಮತ್ತು ಕೈಗೊಂಡ ಪರ್ಯಾಯ ಕ್ರಮಗಳೇನು? ಈ ದಿನದಂದು ಶಾಲೆಗೆ ಹಾಜರಾದ ಪೋಷಕರ ಅಂದಾಜು ಸಂಖ್ಯೆ, ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ನಡೆದ ಪ್ರಮುಖ ಚಟುವಟಿಕೆಗಳು, ಮೂಡಿಬಂದ ಪ್ರಮುಖ ಸಮಸ್ಯೆಗಳು (Issue), ಈ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮ, ಈ ಕಛೇರಿ ಕೈಗೊಳ್ಳಬೇಕಾದ ಕ್ರಮಗಳು.

**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ**

ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಪಾತ್ರ ಬಹುಮುಖ್ಯವಾದುದು. ಸಮುದಾಯವನ್ನು ಸಕ್ರಿಯವಾಗಿ ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಾನೂನುಬದ್ಧವಾಗಿ ಎಸ್.ಡಿ.ಎಂ.ಸಿ ರಚನೆಗೆ ಅವಕಾಶ ಕಲ್ಪಿಸಿದೆ. ಆರ್.ಟಿ.ಇ ಪ್ರಕಾರ ಎಸ್.ಡಿ.ಎಂ.ಸಿಗಳು ಪುನರ್ ರಚನೆ ಆಗಿದ್ದು ಪ್ರತ್ಯೇಕ ಸುತ್ತೋಲೆ ಹೊರಡಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳುವುದು

**ಎಸ್.ಡಿ.ಎಂ.ಸಿ ಅಧಿಕಾರ ಮತ್ತು ಕರ್ತವ್ಯಗಳು:**

1. ಎಸ್.ಡಿ.ಎಂ.ಸಿಯನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಆ ಶಾಲೆಯ ತಂದೆತಾಯಿ ಪರಿಷತ್ತು ಆಯ್ಕೆ ಮಾಡುತ್ತದೆ. ಈ ಸಮಿತಿಗಳು ಮೂರು ವರ್ಷ ಕಾರ್ಯನಿರ್ವಹಿಸುತ್ತವೆ.
2. ಊರಿನ 6 ರಿಂದ 14 ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರಕುವಂತೆ ನೋಡಿಕೊಳ್ಳಬೇಕು.
3. ಯಾವ ಮಗುವು ಶಾಲೆಗೆ ಗೈರು ಹಾಜರಾಗದಂತೆ ನೋಡಿಕೊಳ್ಳಬೇಕು ಹಾಗೂ ಗೈರು ಹಾಜರಿ ಇರುವ ಮಕ್ಕಳ ಮನೆಗೆ ವಾರಕ್ಕೊಮ್ಮೆ ಭೇಟಿ ನೀಡಿ, ಮಗು ಶಾಲೆಗೆ ಬರುವಂತೆ ಮಾಡಬೇಕು.
4. ವಿಶೇಷ ಸಂದರ್ಭಗಳಲ್ಲಿ ಹೆಣ್ಣುಮಕ್ಕಳಿಗೆ "ಎಸ್ಕಾರ್ಟ್ " ಸೇವೆಯನ್ನು ನೀಡುವುದು.
5. ಶಾಲಾ ಆಸ್ತಿ ರಕ್ಷಣೆ ಹಾಗೂ ನಿರ್ವಹಣೆ ಮಾಡಬೇಕು.
6. ಪಠ್ಯಪುಸ್ತಕ, ಸಮವಸ್ತ್ರ, ಬೈಸಿಕಲ್ ಶ್ಯೂ, ಶಾಕ್ಸ್ ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳ ಪರಿಕರಗಳು ಸರಿಯಾಗಿ ವಿತರಣೆಯಾಗುವಂತೆ ಗಮನಿಸಬೇಕು. ರೇಡಿಯೋ, ಟಿ.ವಿಯಂತಹ ಸಾಮಗ್ರಿಗಳು ಸುಸ್ಥಿತಿಯಲ್ಲಿರುವಂತೆ ನೋಡಿ ಕೊಳ್ಳಬೇಕು ಮತ್ತು ಮಕ್ಕಳು ಬಳಸುವಂತಾಗಬೇಕು.
7. ಶಾಲಾ ಪ್ರಾರಂಭದಲ್ಲೇ ಶಾಲಾ ಶೈಕ್ಷಣಿಕ ಯೋಜನೆ (SAP) ತಯಾರಿಸಿಕೊಂಡು ಅನುಷ್ಠಾನಗೊಳಿಸುವುದು ಹಾಗೂ ಅವಲೋಕನ ಮಾಡುತ್ತಾ ಹೊಸ ಹೊಸ ಸಾಧ್ಯತೆಗಳನ್ನು ಹುಡುಕುವುದು.
8. ಗುಣಾತ್ಮಕ ನಮೂನೆಗಳನ್ನು ತುಂಬಿ ಶಾಲೆಯ ಕೊರತೆಗಳನ್ನು ಗಮನಿಸಿ ಅವುಗಳ ಸುಧಾರಣೆಗೆ ಯತ್ನಿಸುವುದು.
9. ಶಾಲಾ ಮಕ್ಕಳ ಕಲಿಕೆ ಕುರಿತಂತೆ ಅಧ್ಯಾಪಕರೊಂದಿಗೆ ಚರ್ಚಿಸಿ ಉತ್ತಮಪಡಿಸಲು ಪ್ರಯತ್ನಿಸುವುದು.
10. ಮನೆಯಲ್ಲಿ ಮಗುವಿಗೆ ಬೇಕಾದ ಕಲಿಕೆಯ ಸಮಯವನ್ನು ಪೋಷಕರು ಒದಗಿಸುವಂತೆ ಪ್ರೇರೇಪಿಸುವುದು ಹಾಗೂ ಕಲಿಕೆಯ ಪರಿಕರಗಳನ್ನು ಒದಗಿಸಿಕೊಡುವಂತೆ ಪೋಷಕರು ಮತ್ತು ಸಮುದಾಯವನ್ನು ಕೋರುವುದು.
11. ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಪೋಷಕರ ಸಭೆ ಕರೆದು ಪ್ರತಿ ಮಗುವಿನ ಕಲಿಕೆಯ ಪ್ರಗತಿ ಹಾಗೂ ಶಾಲಾ ಕಾಮಗಾರಿಗಳ ಬಗ್ಗೆ ಚರ್ಚಿಸಬೇಕು.

## <u>ಎಸ್.ಡಿ.ಎಂ.ಸಿ ತನ್ನೆಲ್ಲಾ ಕಾರ್ಯಗಳನ್ನು ನಿರ್ವಹಿಸಲು ಕೆಲವು ಅಧಿಕಾರಗಳನ್ನು ಹೊಂದಿದೆ.</u>

1. ಎಸ್.ಡಿ.ಎಂ.ಸಿ ಸದಸ್ಯರು ಶಾಲೆಯ ಎಲ್ಲ ದಾಖಲೆಗಳ ಮೇಲ್ವಿಚಾರಣೆ ಹಾಗೂ ಪರಿಶೀಲನೆಯನ್ನು ಮಾಡುವುದು.
2. ಶಾಲೆಯಲ್ಲಿ ದೊರೆಯುವ ಎಲ್ಲಾ ಪ್ರೋತ್ಸಾಯದಾಯಕ ಸೌಲಭ್ಯಗಳು ವಿತರಣೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಮೇಲ್ವಿಚಾರಣೆ ಮಾಡುವುದು.
3. ಶಾಲೆಗೆ ಅವಶ್ಯಕವಿರುವ ಕಟ್ಟಡ ಅಥವಾ ಇತರೆ ಕಾಮಗಾರಿಗಳ ನಿರ್ವಹಣೆ, ಅಭಿವೃದ್ಧಿಯನ್ನು ಮಾಡುವುದು.
4. ಶಾಲೆಗೆ ಅನುಕೂಲ ಅಥವಾ ಅವಶ್ಯಕವೆನಿಸುವ ಸ್ಥಿರ, ಚರ ಸ್ವತ್ತು ಖರೀದಿ ಅಥವಾ ಬಾಡಿಗೆಗೆ ಪಡೆಯುವುದು.
5. ಎಸ್.ಡಿಎಂ.ಸಿ ಶಾಲೆಯ ಅಭಿವೃದ್ದಿಗಾಗಿ ಹಣ ಅಥವಾ ನಿಧಿಗಳನ್ನು ಪಡೆಯಲು ಮನವಿಗಳು ಅಥವಾ ಅರ್ಜಿಗಳನ್ನು ನೀಡುವುದು.
6. ನಗದು ರೂಪದಲ್ಲಿ ಯಾವುದೇ ದಾನ ಅಥವಾ ದೇಣಿಗೆಗಳು, ಭದ್ರತೆಗಳು ಅಥವಾ ಚರ ಅಥವಾ ಸ್ಥಿರ ರೂಪದಲ್ಲಿ ಯಾವುದೇ ಸ್ವತ್ತನ್ನು ಸ್ವೀಕರಿಸುವುದು, ಸಂಗ್ರಹಿಸುವುದು ಮತ್ತು ಖರ್ಚು ಮಾಡುವುದು.

7. ಶಾಲೆಗೆ ಸಂಬಂಧಿಸಿದಂತೆ ಪಂಚಾಯತಿಯ ಸಿ.ಎ.ಸಿ.ಗೆ ಅಥವಾ ಇಲಾಖೆಯ ಅಧಿಕಾರಿಗಳಿಗೆ ಶಾಲಾ ವ್ಯವಸ್ಥೆಯ ಅಥವಾ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆ ನೀಡುವುದು.
8. ವಿದ್ಯಾರ್ಥಿ, ಶಿಕ್ಷಕರು, ಪೋಷಕರು ಹಾಗೂ ಇತರೇ ಶಾಲಾ ಸಿಬ್ಬಂದಿಗಳ ಕುಂದುಕೊರತೆ ಹಾಗೂ ದೂರುಗಳನ್ನು ಬಗೆಹರಿಸುವುದು.

ಈ ಎಲ್ಲಾ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ಶಾಲೆಯ ಸರ್ವಾಂಗೀಣ ಪ್ರಗತಿಗಾಗಿ ದುಡಿಯುವ ಕಟಿಬದ್ಧ ಮನೋಭಾವ ಪ್ರತಿಯೊಬ್ಬ ಎಸ್.ಡಿ.ಎಂ.ಸಿ ಸದಸ್ಯರಲ್ಲಿರಬೇಕಾಗಿದೆ.

## 4. ಸಮನ್ವಯ ಶಿಕ್ಷಣ

ಸಮನ್ವಯ ಶಿಕ್ಷಣವು ಎಲ್ಲಾ ಮಕ್ಕಳಿಗೂ ಅವರವರ ಅಗತ್ಯಗಳನ್ನು ಆಧರಿಸಿ ನೀಡುವ ಸಮಾನವಾದ ಶಿಕ್ಷಣವಾಗಿದೆ. ಇಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳೊಡನೆ ಸಮಾನ ಶೈಕ್ಷಣಿಕ ಅವಕಾಶ ಪಡೆಯುವಂತಹ ವಾತಾವರಣವಿರುತ್ತದೆ. ವಿಶೇಷ ಅಗತ್ಯವುಳ್ಳ ಶೈಕ್ಷಣಿಕ ಅಗತ್ಯಗಳನ್ನು ಸಾಮಾನ್ಯ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕ/ಶಿಕ್ಷಕಿಯರಿಂದಲೇ ಪೂರೈಸುವುದರ ಮೂಲಕ ಸರ್ವರಿಗೂ ಶಿಕ್ಷಣ ಅವಕಾಶ ನೀಡುವುದಾಗಿದೆ.

1986ರ ರಾಷ್ಟ್ರೀಯ ಶಿಕ್ಷಣ ನೀತಿ, 1990ರಲ್ಲಿ ಮಂಡಿಸಿದ 'ಸರ್ವರಿಗೂ ಶಿಕ್ಷಣ', 1995ರ ಅಂಗವಿಕಲ ವ್ಯಕ್ತಿಗಳ ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ವಿಕಾಸ ಕಾಯ್ದೆಯು: ಅಂಗವಿಕಲ ಮಕ್ಕಳು ಸಾಮಾನ್ಯ ಶಾಲೆಯಲ್ಲಿ ಶಿಕ್ಷಣ ಪಡೆಯುವ ಅವಕಾಶ ಹೊಂದಿ ಅಂತಹ ಮಕ್ಕಳು ಧೈರ್ಯ ಮತ್ತು ಅತ್ಮವಿಶ್ವಾಸದಿಂದ ಜೀವನವನ್ನು ಎದುರಿಸಬೇಕು ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯಬೇಕು ಎಂದು ತಿಳಿಸುತ್ತದೆ.

**ಸಮನ್ವಯ ಶಿಕ್ಷಣದ ಉದ್ದೇಶಗಳು**

- ವಿಶೇಷ ಅಗತ್ಯವುಳ್ಳ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಕಲಿಯಲು ಅವಕಾಶ ಕಲ್ಪಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಇತರ ಮಕ್ಕಳೊಂದಿಗೆ ಸಾಮಾಜಿಕ ಸಂಬಂಧ ಏರ್ಪಡಿಸುವುದು
- ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಹಾಗೂ ಇತರರಲ್ಲಿರುವ ಋಣಾತ್ಮಕ ಭಾವನೆ ಹೋಗಲಾಡಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶೇಷ ಕಲಿಕಾ ಸಾಮಗ್ರಿಗಳು ಹಾಗೂ ಬೋಧಕರಿಗೆ ಬೋಧನಾ ಸಾಮಗ್ರಿಗಳನ್ನು ಒದಗಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಇರುವ ಅವರ ಹಕ್ಕುಗಳನ್ನು ಭದ್ರಪಡಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬಿ ಸ್ವಾವಲಂಬಿ ಜೀವನಕ್ಕೆ ಅಣಿಗೊಳಿಸುವುದು.

**ದೋಷಗಳು ಮತ್ತು ಅವುಗಳ ವರ್ಗೀಕರಣ**

1. ಶ್ರವಣ ದೋಷ
2. ದೃಷ್ಟಿದೋಷ
3. ಬುದ್ಧಿ ದೋಷ
4. ಕಲಿಕಾದೋಷ
5. ದೈಹಿಕ ದೋಷ

## 5. ಕ್ರಿಯಾ ಸಂಶೋಧನೆ

ಶಿಕ್ಷಣದ ಪ್ರಮುಖ ಉದ್ದೇಶ ಮಗುವಿನ ಸರ್ವಾಂಗೀಣ ಬೆಳವಣಿಗೆ ಮತ್ತು ಉತ್ತಮ ರಾಷ್ಟ್ರ ನಿರ್ಮಾಣ, ಈ ಕಾರ್ಯದಲ್ಲಿ ನಿರತವಾಗಿರುವ ಶಿಕ್ಷಣ ಕ್ಷೇತ್ರ ಬಹಳ ವಿಶಾಲ ಹಾಗೂ ಸಂಕೀರ್ಣವಾದುದು. ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತವೆ. ದಿನನಿತ್ಯ ಎದುರಾಗುವ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಅಥವಾ ಬಗೆಹರಿಸದಿದ್ದರೆ, ಗುರಿ ತಲುಪುವಲ್ಲಿ ಸಮಸ್ಯೆಗಳು ಅಡ್ಡಿಯಾಗುತ್ತವೆ. ಸಮಸ್ಯೆಗಳನ್ನು ಬಗೆಹರಿಸಲು ಕಂಡುಕೊಂಡ ವಿಧಾನ ಸಂಶೋಧನಾ ವಿಧಾನ, ಸಂಶೋಧನೆಗಳಲ್ಲಿ ಹಲವು ವಿಧ. ಅವುಗಳಲ್ಲಿ ಒಂದು "ಕ್ರಿಯಾ ಸಂಶೋಧನೆ."

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು, ಮೇಲ್ವಿಚಾರಕರು, ಆಡಳಿತಗಾರರು ಮುಂತಾದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳು ಒಂದು ಸೀಮಿತ ಚೌಕಟ್ಟಿನಲ್ಲಿ ಅಧ್ಯಯನ ನಡೆಸಿ ಸಮಸ್ಯೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ಕಂಡುಕೊಳ್ಳುವುದಕ್ಕೆ ಕ್ರಿಯಾತ್ಮಕ ಸಂಶೋಧನೆ ಎನ್ನುತ್ತೇವೆ.

**ಕ್ರಿಯಾ ಸಂಶೋಧನೆಯ ಹಂತಗಳು:**

- ಸಮಸ್ಯೆಯನ್ನು ಗುರುತಿಸುವುದು.
- ಸಮಸ್ಯೆಯನ್ನು ನಿರ್ಧಿಷ್ಟಗೊಳಿಸುವುದು.
- ಸಮಸ್ಯೆಗಳಿಗೆ ಕಾರಣಗಳನ್ನು ಪಟ್ಟಿ ಮಾಡುವುದು.
- ಪ್ರಕಲ್ಪನೆಗಳನ್ನು ರೂಪಿಸುವುದು.
- ಕ್ರಿಯಾಯೋಜನೆಯ ಅನುಷ್ಠಾನ
- ದತ್ತಾಂಶಗಳ ವಿಶ್ಲೇಷಣೆ.
- ತೀರ್ಮಾನ ಮತ್ತು ಅರ್ಥೈಸುವಿಕೆ.
- ಅನುಸರಣೆ/ಪರಿಹಾರ.

**ವರದಿ ತಯಾರಿಕೆ**

- ಪೀಠಿಕಾ ಭಾಗದಲ್ಲಿ ಮುಖಪುಟ, ಮುನ್ನುಡಿ ಮತ್ತು ಪರಿವಿಡಿ ಇರಬೇಕು.
- ವರದಿಯ ಮುಖ್ಯಭಾಗದಲ್ಲಿ ಸಮಸ್ಯೆಯ ನಿರೂಪಣೆ, ಅಧ್ಯಯನದ ಉದ್ದೇಶಗಳು, ಕ್ರಿಯಾ ಪ್ರಕಲ್ಪನೆ, ಅಧ್ಯಯನದ ವಿನ್ಯಾಸ, ಸಂಶೋಧನಾ ಸಾಧನಗಳು/ದತ್ತಾಂಶಗಳ ಆಧಾರಗಳು, ಮಾಹಿತಿ ಸಂಗ್ರಹಣೆಯ ತಂತ್ರಗಳು, ದತ್ತಾಂಶಗಳ ವರ್ಗೀಕರಣ ಮತ್ತು ವಿಶ್ಲೇಷಣೆ ನಕಾಶೆಗಳ ವ್ಯಾಖ್ಯಾನ ಉಪಸಂಹಾರ ಫಲಿತಾಂಶಗಳು, ಮುಖ್ಯ ಪರಿಹಾರಗಳು ಇರಬೇಕು.
- ಉಲ್ಲೇಖ ಭಾಗದಲ್ಲಿ ಗ್ರಂಥಋಣ ಇರಬೇಕು.

**ಕೈಗೊಳ್ಳಬೇಕಾದ ಚಟುವಟಿಕೆಗಳು:**

- ಮಾರ್ಗದರ್ಶನ ಅಗತ್ಯವಿದ್ದರೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಸಂಪರ್ಕಿಸಿ
- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಅಧ್ಯಾಪಕರು ಒಂದಾದರೂ ಕ್ರಿಯಾ ಸಂಶೋಧನೆ ಮಾಡಿ ಶಾಲಾ ಹಂತದಲ್ಲಿ ಎಲ್ಲಾ ಅಧ್ಯಾಪಕರೊಂದಿಗೆ ತಮ್ಮ ಅನುಭವ ಹಂಚಿಕೊಳ್ಳಬೇಕು.
- ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟದಲ್ಲಿ ನಡೆಯುವ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಪ್ರಕಟಣೆಗಳಿಗೆ ಲೇಖನ ಬರೆಯುವ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಕ್ರಮ ಮಾಡಿ. ಈ ಕುರಿತು ನಿಕಟ ಮೇಲಧಿಕಾರಿಗಳನ್ನು ಸಂಪರ್ಕಿಸಿ.

## 6. ಸೇತುಬಂಧ ಕಾರ್ಯಕ್ರಮ, ಪೂರಕ ಬೋಧನೆ, ಪರಿಹಾರ ಬೋಧನೆ

**ಅ) ಸೇತುಬಂಧ ಕಾರ್ಯಕ್ರಮ:**

ಕಲಿಕೆಯಲ್ಲಿನ ಕೊರತೆಯನ್ನು ತುಂಬುವ ಮತ್ತು ದೃಢಪಡಿಸಿಕೊಳ್ಳಲು ಯೋಜಿಸಿರುವ ಕಾರ್ಯಕ್ರಮ ಈ ಕಾರ್ಯಕ್ರಮವನ್ನು ಜೂನ್ 15 ರವರೆಗೆ ನಡೆಸುವುದು.

**ಹಂತಗಳು**

- ನೈದಾನಿಕ ಪರೀಕ್ಷೆ / ಪೂರ್ವಪರೀಕ್ಷೆ.
- ದೋಷನಿದಾನ.
- ಪರಿಹಾರ ಬೋಧನೆ/ ಚಿಕಿತ್ಸಕ ಬೋಧನೆ.
- ಸಾಫಲ್ಯ ಪರೀಕ್ಷೆ.

**ಆ) ಪರಿಹಾರ ಬೋಧನೆ**

ಪರಿಹಾರ ಬೋಧನೆ ಪ್ರತಿ ಆಧ್ಯಾಯದ ಆಥವಾ ಘಟಕ ಬೋಧನೆಯ ತರುವಾಯ ಪರೀಕ್ಷೆ/ವೀಕ್ಷಣೆ/ಯೋಜನೆಕಾರ್ಯ ವರದಿ ತಯಾರಿಕೆಯಂತಹ ಕಾರ್ಯಗಳನ್ನು ನಡೆಸಿ ಮಕ್ಕಳ ಕಲಿಕೆಯ ಕೊರತೆಯನ್ನು ಗುರುತಿಸಿ ಪರಿಹಾರಾತ್ಮಕ ಚಟುವಟಿಕೆಯನ್ನು ಕೈಗೊಳ್ಳುವುದಾಗಿದೆ. ಈ ಕುರಿತು ಸೌರಭ ಪುಸ್ತಕದಲ್ಲಿ ವಿವರಿಸಿದೆ. ಘಟಕ ಪರೀಕ್ಷೆ ಮತ್ತು ಪರಿಹಾರ ಬೋಧನೆಯು ಒಟ್ಟಿಗೆ ಬರುವ ಪರಿಕಲ್ಪನೆಗಳು.

**ಇ) ಕಲಿಕೆಗೆ ಪೂರಕವಾಗುವ ಚಟುವಟಿಕೆಗಳು.**

- ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಿಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಗಳು, ಕಥೆಗಳ ಪುಸ್ತಕಗಳು, ಚಿತ್ರಕಥೆಗಳು ಮುಂತಾದ ಸಾಮಗ್ರಿಯನ್ನು ಶಾಲೆಗೆ ನಿಯತವಾಗಿ ತರಿಸುವುದು ಹಾಗೂ ಮಕ್ಕಳು ಒಂದೆಡೆ ಕುಳಿತು ಓದಲು ಅವಕಾಶ ಮಾಡಿಕೊಡುವುದು. ವರ್ಷಕ್ಕೆ ಸುಮಾರು ರೂ.2000/– ದಿಂದ ರೂ.3000/– ರೂಗಳವರೆಗೆ ಶಾಲಾ ಅನುದಾನದಿಂದ ಭರಿಸಬಹುದು.
- ಗ್ರಂಥಭಂಡಾರದ ಪುಸ್ತಕಗಳನ್ನು ಓರಣವಾಗಿ ಜೋಡಿಸಿ ಮಕ್ಕಳಿಗೆ ಎಟುಕುವಂತೆ ಇಡುವುದು.
- ವಿದ್ಯಾರ್ಥಿಗಳು ತಾವು ಓದಿದ ಕಥೆಗಳ ಸಾರಾಂಶವನ್ನು ಕೈಬರಹ ಹೊತ್ತಿಗೆ ರೂಪದಲ್ಲಿ ಪ್ರಕಟಿಸುವುದು.
- ಗೋಡೆಪತ್ರಿಕೆಗಳನ್ನು ಮಕ್ಕಳಿಗೆ ಅನುಕೂಲವಾಗುವಂತೆ ನೇತುಹಾಕಿ ಓದಲು ಅವಕಾಶ ಮಾಡಿಕೊಡುವುದು ಹಾಗೂ ಅಲ್ಲಿನ ವಿಷಯಗಳ ಕುರಿತು ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದು.

**ಉ) ತರಗತಿಗೊಂದು ಫ್ಲಾನಲ್ ಬೋರ್ಡ್:–**

ಪ್ರತಿ ತರಗತಿ ಕೋಣೆಯಲ್ಲಿ 4 ಫಿ 4 1/2 ಅಡಿಯ ಅಥವಾ ಆಯಾ ತರಗತಿಗೆ ಅನುಕೂಲವೆನಿಸುವ ಅಳತೆಯ ಫ್ಲಾನಲ್ ಬೋರ್ಡ್ ಅನ್ನು ಅಳವಡಿಸಿ – ವಿದ್ಯಾರ್ಥಿಗಳು ಬರೆಯುವ ಕಥೆ–ಕವನ ಲೇಖನ ಸಂಗ್ರಹಿಸುವ ಚಿತ್ರ–ಲೇಖನಗಳನ್ನು ಇಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳು ಓದುವಂತೆ ವ್ಯವಸ್ಥೆ ಮಾಡುವುದು. ಉತ್ತಮವಾದ ಪ್ರದರ್ಶಿಕೆಗಳನ್ನು ಒಂದೆಡೆ ಸಂಗ್ರಹಿಸಿ ತರಗತಿಗೊಂದು ಹಸ್ತಪ್ರತಿಯನ್ನು ಹೊರತರುವುದು. ಫ್ಲಾನಲ್ ಬೋರ್ಡ್ ತಯಾರಿಕೆಗೆ ಥರ್ಮಾಕೋಲ್ ಬಳಸಿ ಕಡಿಮೆ ಖರ್ಚಿನಲ್ಲಿ ವ್ಯವಸ್ಥೆಗೊಳಿಸಬಹುದು. ಇದಕ್ಕಾಗಿ ಶಾಲಾ ಅನುದಾನವನ್ನು ಬಳಸಬಹುದು.

- ಇಂತಹ ಇನ್ನಿತರೆ ಚಟುವಟಿಕೆಗಳನ್ನು ಅಧ್ಯಾಪಕರು ಯೋಜಿಸುವುದು.

## 7. ಮುಖ್ಯಶಿಕ್ಷಕರ ಶೈಕ್ಷಣಿಕ ಕರ್ತವ್ಯಗಳು

ಶೈಕ್ಷಣಿಕ ವ್ಯವಸ್ಥೆಯ, ಮೊದಲನೆಯ ಉಸ್ತುವಾರಿದಾರ ಶಾಲೆಯ/ಸಂಸ್ಥೆಯ ಮುಖ್ಯಸ್ಥ. ಗುಣಾತ್ಮಕ ಶಿಕ್ಷಣದ ಬಹುಪಾಲು ಆಯಾಮಗಳು, ಆಶಯಗಳು ಈಡೇರುವುದು ಆಯಾ ಶಾಲೆಯ/ಸಂಸ್ಥೆಯ ಮುಖ್ಯಸ್ಥರ ಕಾಳಜಿ, ಬದ್ಧತೆ ಮತ್ತು ಕಾರ್ಯಶೈಲಿಯಿಂದ. ಬೋಧನಾ ಕಲಿಕಾ ಚಟುವಟಿಕೆಯ ಸಮರ್ಥತೆ ಮುಖ್ಯಶಿಕ್ಷಕರ ಉಪಸ್ಥಿತಿ, ಅವರ ಕಾರ್ಯಯೋಜನೆ, ಪೂರ್ವಸಿದ್ಧತೆ, ಕಲಿಸುವ ಪದ್ಧತಿ, ಮೌಲ್ಯಮಾಪನದ ಕಾರ್ಯತಂತ್ರಗಳ ಬಳಕೆ, ಎಲ್ಲಾ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ, ಕಲಿಕಾ ವಾತಾವರಣ ಕಲ್ಪಿಸುವ ಸಾಮರ್ಥ್ಯ, ಪಠ್ಯವಿಷಯ ಜ್ಞಾನ, ವ್ಯಕ್ತಿತ್ವ, ಇತ್ಯಾದಿ ಅಂಶಗಳು ಯುಕ್ತವಾಗಿ ಬಳಕೆ ಮಾಡಿಕೊಂಡಾಗ. ಇವುಗಳನ್ನು ಮುಖ್ಯಶಿಕ್ಷಕರು [ಇತರ ಶಿಕ್ಷಕರು] ಸಮರ್ಪಕವಾಗಿ ನಿರ್ವಹಿಸಿದರೆ ನಿರೀಕ್ಷಿತ ಗುಣಮಟ್ಟವನ್ನು ಸಾಧಿಸಲು ಸಾಧ್ಯವಾಗುತ್ತದೆ.

- ತರಗತಿ ಬೋಧನೆ ಮಾಡುವುದು.
- ಯೋಜನೆಗಳ ತಯಾರಿ/ಅವಲೋಕನ.
- ಶಿಕ್ಷಕರ ಪೂರ್ವಸಿದ್ಧತೆಯ ಅವಲೋಕನ
- ಶಿಕ್ಷಕರ ಬೋಧನೆಯ ಅವಲೋಕನ ಮತ್ತು ಹಿಮ್ಮಾಹಿತಿ – ತರಗತಿಯ ಮೇಲ್ವಿಚಾರಣೆ
- ತರಗತಿಯ ಭೇಟಿ ಮತ್ತು ಕಲಿಕೆಯ ಪ್ರಗತಿ ಪರಿಶೀಲನೆ, ಮೇಲ್ವಿಚಾರಣೆ
- ಮೌಲ್ಯಮಾಪನ ಕಾರ್ಯದ ಅವಲೋಕನ ಮತ್ತು ಹಿಮ್ಮಾಹಿತಿ
- ಬೋಧಕವರ್ಗದ ಸಭೆ ನಡೆಸುವಿಕೆ
- ಎಸ್‌ಡಿಎಂಸಿ ಸಭೆಗಳು
- ಸಹಪಠ್ಯ ಚಟುವಟಿಕೆಗಳ ಸಂಘಟನೆ

**ಸಹಶಿಕ್ಷಕರ ಕಾರ್ಯನಿರ್ವಹಣೆ**

- ಎಲ್ಲಾ ಶಿಕ್ಷಕರು ವಿವಿಧ ತರಬೇತಿಗಳಲ್ಲಿ ಪಾಲ್ಗೊಂಡು ಅವುಗಳನ್ನು ತರಗತಿಯಲ್ಲಿ ಅನುಪಾಲನೆ ಮಾಡುವುದು.
- ಶಿಕ್ಷಕರ ಅನುದಾನ ಸದ್ಬಳಕೆ, ಕ್ರಿಯಾಸಂಶೋಧನೆ ಮತ್ತು ಆವಿಷ್ಕೃತ ಚಟುವಟಿಕೆಗಳ ಅಳವಡಿಕೆ.
- ಶಿಕ್ಷಕರು ಗಳಿಸಿದ ಪ್ರಶಸ್ತಿ ಮತ್ತು ಸ್ಥಳೀಯ ಸನ್ನಿವೇಶದಲ್ಲಿ ಧನಾತ್ಮಕವಾಗಿ ಗುರುತಿಸಿಕೊಂಡಿರುವುದು.
- ಶಿಕ್ಷಕರು ವಿಶೇಷ ಸಾಮರ್ಥ್ಯಗಳನ್ನು ಶಾಲಾ ಕೆಲಸಗಳಲ್ಲಿ ಬಳಸುವುದು.
- ಪೂರ್ವಸಿದ್ಧತೆ, ಮೌಲ್ಯಮಾಪನ ಆಯಾಮಗಳಾದ ಸಾಮರ್ಥ್ಯಾಧಾರಿತ ಪರೀಕ್ಷೆ, ಘಟಕ ಪರೀಕ್ಷೆ ಮತ್ತು ಸೆಮಿಸ್ಟರ್ ಪರೀಕ್ಷೆಗಳೊಂದಿಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆಯ ಅನುಷ್ಠಾನ.
- ಪಠ್ಯವಿಷಯಗಳನ್ನು ಸ್ಥಳೀಯ ಸನ್ನಿವೇಶ, ಸಂಪನ್ಮೂಲ ಸೌಲಭ್ಯಗಳಿಗೆ ಸಮೀಕರಿಸಿ ವಿದ್ಯಾರ್ಥಿಗಳಿಗೆ ಕಲಿಸಿರುವುದು

- ಮಗು ತರಗತಿಯಲ್ಲಿ ಸಂತಸದಿಂದ ಕಲಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು.
- ಮಗುವಿಗೆ ಹೆದರಿಕೆ, ಹಿಂಜರಿಕೆ ಬಾರದಂತೆ ಶಿಕ್ಷಕರು ವರ್ತಿಸುವುದು [ಒಂದೇ ಪದ, ವಾಕ್ಯ ಮತ್ತು ವಿಚಾರವನ್ನು ಹಲವು ಬಾರಿ ಬರೆಸುವುದು ಒಂದು ಶಿಕ್ಷೆ–ಎಂಬುದನ್ನು ಗಮನಿಸಿ]
- ಕಲಿಕೆಯ ವೇಳೆ ವಿದ್ಯಾರ್ಥಿ ಇತರರೊಂದಿಗೆ ಮಾತನಾಡಿ ನಿರ್ಣಯಕ್ಕೆ ಬರುವುದನ್ನು – ಪ್ರಶ್ನೆ ಕೇಳುವುದನ್ನು ಸ್ವಾಗತಿಸುವುದು.
- ಗೃಹಪಾಠವನ್ನು ಚಟುವಟಿಕೆಯುಕ್ತವಿರುವಂತೆ ಮಾಡುವುದು.

## 8. ತರಗತಿಯ ಪ್ರಕ್ರಿಯೆಗಳು

ಕೆಳಹಂತದ ತರಗತಿಗಳಲ್ಲಿ ನಲಿ–ಕಲಿ ಕಾರ್ಯಕ್ರಮ ಜಾರಿಯಲ್ಲಿದೆ. ಈ ಕಾರ್ಯಕ್ರಮದ ಸ್ವರೂಪವು ಚಟುವಟಿಕೆಯಿಂದ ಕೂಡಿರುವುದರಿಂದ ತರಗತಿಯ ಪ್ರಕ್ರಿಯೆಗಳು ಮಗುವಿಗೆ ಆಹ್ಲಾದವನ್ನು ಉಂಟುಮಾಡುತ್ತಿವೆ. ನಲಿ–ಕಲಿಯೇತರ ತರಗತಿಗಳಲ್ಲಿ ಕಲಿಕೆಯನ್ನು ಚಟುವಟಿಕೆಯಿಂದ ಕೂಡಿರುವಂತೆ ಮಾಡುವುದು ನಮ್ಮ ಮುಂದಿನ ಸವಾಲು, ಇದಕ್ಕಾಗಿ ಶಿಶುಕೇಂದ್ರಿತ ವಿಧಾನಗಳನ್ನು ಅಳವಡಿಸಬೇಕಾಗಿದೆ. ಇದಕ್ಕಾಗಿ ಯೋಜನಾಕಾರ್ಯ, ಕ್ಷೇತ್ರ ಅಧ್ಯಯನ, ಪ್ರಾತ್ಯಕ್ಷಿಕೆ, ಗುಂಪು ಚಟುವಟಿಕೆ, ಪಾತ್ರಾಭಿನಯ, ಸಂದರ್ಶನ ಮತ್ತು ವರದಿ ಮಾಡುವುದು, ಅನ್ವೇಷಣಾ ವಿಧಾನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳು ನಮ್ಮ ನೆರವಿಗೆ ಬರುತ್ತವೆ.

- **ಯೋಜನಾ ಕಾರ್ಯವನ್ನು** ಬೇರೆ ಬೇರೆ ವಿಷಯಗಳ ಬೋಧನೆಯಲ್ಲಿ ಅಳವಡಿಸಬಹುದು. ಉದಾಹರಣೆಗೆ – ಸಮಾನಾರ್ಥಕ; ಅನೇಕಾರ್ಥಕ ಪದಗಳನ್ನು ಸಂಗ್ರಹಿಸುವುದು. ಗದ್ಯಭಾಗವನ್ನು–ಸಂಭಾಷಣೆಯ ರೂಪದಲ್ಲಿ ಬರೆದು ಪಾತ್ರಾಭಿನಯದ ಮೂಲಕ ಪ್ರಸ್ತುತಪಡಿಸಲು ಹೇಳುವುದು, ಪ್ರಾಸಬದ್ಧ ಸಾಲುಗಳನ್ನು ಬರೆದು ತರುವಂತೆ ಮಾಡುವುದು ಇತ್ಯಾದಿ. ನಕಾಶೆ, ಭೂಪಟ ರಚಿಸಿ ಬಣ್ಣ ಹಾಕಿ ಮುಖ್ಯಾಂಶಗಳನ್ನು ವಿವರಿಸುವಂತೆ ಹೇಳುವುದು. 3ಡಿ ನಕಾಶೆಯ ಮೇಲೆ ನೈಸರ್ಗಿಕ ಅಂಶಗಳಾದ ಕಾಡು, ಗಿರಿಶ್ರೇಣಿ, ನದಿ ಇತ್ಯಾದಿಗಳನ್ನು ಬಿಡಿಸುವಂತೆ ಮಾಡುವುದು ಅಥವಾ ಯುದ್ಧ ನಡೆದ ಜಾಗಗಳಲ್ಲಿ ಅಂತಹ ಚಿತ್ರಣ ಬಿಡಿಸುವುದು. ಬಡಗಿ ತಯಾರಿಸುವ ಅನೇಕ ಆಕಾರಗಳನ್ನು ಯಾವ ಪರಿಕರಗಳ ಸಹಾಯದಿಂದ ತಯಾರಿಸುತ್ತಾರೆ ಅಥವಾ ಹೇಗೆ ತಯಾರಿಸಿರುತ್ತಾರೆ. ವೀಕ್ಷಿಸಿ ಬರೆದು ನೀಡಲು ತಿಳಿಸುವುದು.

ಮೇಲ್ಕಂಡ ಚಟುವಟಿಕೆಗಳು ಯೋಜನಾ ಕಾರ್ಯವೆಂದು ಕಂಡರೂ ಕ್ಷೇತ್ರ ಭೇಟಿ, ಅನ್ವೇಷಣೆ, ಸಂದರ್ಶನ, ಅನುಗಮನ ವಿಧಾನ ಇತ್ಯಾದಿ ಬೋಧನಾ ವಿಧಾನಗಳನ್ನು ಒಳಗೊಂಡಿದೆ. ಅಂದರೆ ಒಂದು ವಿಧಾನವು ಹಲವು ವಿಧಾನಗಳನ್ನು ಒಳಗೊಂಡಿರುತ್ತದೆ.

- **ಕ್ಷೇತ್ರ ಅಧ್ಯಯನ** ನಮ್ಮ ತರಗತಿಗಳನ್ನು ಶಿಶುಕೇಂದ್ರಿತ ಮಾಡಲು ಇರುವ ಇನ್ನೊಂದು ಬೋಧನಾ ಸಾಧ್ಯತೆ. ಮಕ್ಕಳಷ್ಟೆ ಅಲ್ಲ ವಯಸ್ಕರಿಗೂ ಈ ವಿಧಾನ ಕಲಿಕೆಗೆ ಸಹಕಾರಿ ಮತ್ತು ಉಲ್ಲಾಸದಾಯಕ. ತರಗತಿಯ ಕಲಿಕೆ ಮತ್ತು ಕ್ಷೇತ್ರಮಟ್ಟದಲ್ಲಿ ಕಂಡುಬರುವ ಚಿತ್ರಣಗಳ ನಡುವೆ ಇರುವ ಸಾದೃಶ್ಯ/ವಿದೃಶ್ಯಗಳ ತಿಳುವಳಿಕೆಯನ್ನು ಕಲಿಯುವವನಿಗೆ ನೀಡುತ್ತದೆ.

ಯಾವ ಕಲಿಕಾಂಶಗಳು ಇಂತಹ ಕ್ಷೇತ್ರಭೇಟಿಗಳಿಗೆ ಅನುಕೂಲ? ತೆಗದುಕೊಳ್ಳಬೇಕಾದ ಎಚ್ಚರಿಕೆ, ಹಣಕಾಸು ಇತಿ–ಮಿತಿ, ಇತ್ಯಾದಿ ಅಂಶಗಳನ್ನು ಆಧರಿಸಿ ಕ್ಷೇತ್ರಭೇಟಿಗಳನ್ನು ಯೋಜಿಸಬಹುದು. ಉದಾಹರಣೆಗೆ ಮಾನಸ ಸರೋವರದ ಪ್ರಾಂತ್ಯದಲ್ಲಿ ಭಾರತ ಉಪಖಂಡದ 3 ದೊಡ್ಡ ನದಿಗಳು ಹುಟ್ಟುತ್ತವೆ ಎಂಬ ಸಂಗತಿ ತಿಳಿಯಲು ಕ್ಷೇತ್ರಭೇಟಿಗೆ ಮಕ್ಕಳನ್ನು ಮಾನಸ ಸರೋವರಕ್ಕೆ ಕರೆದೊಯ್ಯಲು ಸಾಧ್ಯವೆ? ಪರ್ಯಾಯವಾಗಿ ತನ್ನ ಊರಿನ ಸುತ್ತಮುತ್ತ ಇರುವ ಎತ್ತರ ಪ್ರದೇಶಗಳಿಗೆ

ಮಕ್ಕಳನ್ನು ಕರೆದೊಯ್ದು ಮಳೆ ನೀರು ಹೇಗೆ ಭಿನ್ನ ಭಿನ್ನ ದಿಕ್ಕುಗಳಿಗೆ ಹರಿಯುತ್ತದೆ ಎಂದು ತಿಳಿಯಲು ಅವಕಾಶ ಮಾಡಿಕೊಡಬಹುದು.

ಎನ್‌ಸಿಎಫ್ ಆಶಯ ಅಥವಾ ಬೋಧನಾಶಾಸ್ತ್ರದ ಸಮಗ್ರ ಆಶಯ ಮಗು ತನ್ನ ನಿಕಟ ಪರಿಸರದ ಸಂಗತಿಗಳಿಂದ ಜ್ಞಾನವನ್ನು ತಿಳಿಯುತ್ತದೆ ಮತ್ತು ತನ್ನ ಜ್ಞಾನದ ಎಲ್ಲೆಯನ್ನು ವಿಸ್ತರಿಸಿಕೊಳ್ಳುತ್ತದೆ ಎಂಬುದಾಗಿದೆ. ಕ್ಷೇತ್ರಭೇಟಿಗಳು ಈ ಆಶಯಗಳನ್ನು ಈಡೇರಿಸಲು ಮುಖ್ಯ ಸಾಧನಗಳಾಗುತ್ತವೆ.

- **ಸಂದರ್ಶನ ವಿಧಾನ**ದಿಂದ ಅನೇಕ ಕೌಶಲಗಳು ಮಗುವಿಗೆ ಸಿದ್ಧಿಸುತ್ತವೆ. ಪರಿಚಿತ/ಅಪರಿಚಿತರೊಡನೆ ಸಂವಾದ, ಇತರರಿಂದ ವಿಷಯ ಹೊರತೆಗೆಯುವುದು, ಜಾಣ್ಮೆ, ಧೈರ್ಯ, ವಿಷಯಗಳ ಜೋಡಣೆ ಇತ್ಯಾದಿ. ಉದಾಹರಣೆಗೆ ಸ್ವಾತಂತ್ರ್ಯ ಹೋರಾಟ ಹೇಗೆ ನಡೆಯಿತು? ತನ್ನ ಊರಿನ ಜನರು ಇದನ್ನು ಕಂಡ ಬಗೆ ಹೇಗೆ? ಕೃಷಿಯಲ್ಲಿ ಆಗುತ್ತಿರುವ ಬದಲಾವಣೆಗಳು ಹಾಗೂ ಪ್ರಯೋಜನಗಳೇನು? ಪರಿಸರ ಹೇಗೆ 50–60 ವರ್ಷಗಳಲ್ಲಿ ಬದಲಾಗುತ್ತಿದೆ. ಚುನಾವಣೆಗಳು ಹೇಗೆ ನಡೆಯುತ್ತವೆ? ಚುನಾಯಿತ ಸದಸ್ಯರು ಏನೇನು ಕೆಲಸ ಮಾಡುತ್ತಾರೆ? ಕುಶಲ ಕರ್ಮಿಗಳು ಯಾವ ಯಾವ ತಂತ್ರಜ್ಞಾನವನ್ನು ಬಳಸುತ್ತಾರೆ? ಇಂತಹ ಅನೇಕ ಸಾಧ್ಯತೆಗಳನ್ನು ವಿದ್ಯಾರ್ಥಿ ಈ ತಂತ್ರದ ಮೂಲಕ ತಿಳಿಯಬಹುದು.
- **ಅನ್ವೇಷಣಾ ವಿಧಾನ** ತುಂಬಾ ವ್ಯಾಪಕ ಅರ್ಥ ಹೊಂದಿದೆ. ಪೂರ್ಣ ಪ್ರಮಾಣದಲ್ಲಿ ಈ ವಿಧಾನಗಳ ಬಳಕೆ ಪ್ರಶ್ನಾರ್ಹ. ನಿರ್ದೇಶಿತ ಅನ್ವೇಷನಾ ವಿಧಾನ [Guided Exploration] ಒಂದು ಅನುಸರಣಾ ಯೋಗ್ಯ ಸಾಧ್ಯತೆ. ಉದಾಹರಣೆಗೆ ಕಬ್ಬಿಣ ಯಾವಾಗ ತುಕ್ಕು ಹಿಡಿಯುತ್ತದೆ ಮತ್ತು ಏಕೆ? ಬಟ್ಟೆಗಳು – ಬಿಸಿಲು, ನೆರಳು, ಮನೆಯೊಳಗಿನ ಈ ಮೂರು ಸನ್ನಿವೇಶಗಳಲ್ಲಿ ಯಾವಾಗ ಬೇಗ ಒಣಗುತ್ತವೆ. ಹಿಡಿದ ಸಮಯ ಎಷ್ಟು? ನನ್ನೂರಿನ ಜನಪದ ಹಾಡುಗಳು ಯಾವುವು [ಬೇರೆ ವಿಧಾನಗಳೂ ಇಲ್ಲಿ ಬರಬಹುದು] ಧ್ಯುತಿಸಂಶ್ಲೇಷಣೆ ಕ್ರಿಯೆಯ ದರ ಯಾವಾಗ ಜಾಸ್ತಿ? ಇಂತಹ ಹಲವು ಕುತೂಹಲಗಳಿಗೆ ಮಕ್ಕಳು ಉತ್ತರವನ್ನು ಕಂಡುಕೊಳ್ಳಲು, ಅನ್ವೇಷಣೆ ನಡೆಸಲು ಮಕ್ಕಳಿಗೆ ಮಾರ್ಗದರ್ಶನ ನೀಡಬಹುದು.
- **ಅನುಗಮನ** ವಿಧಾನವಲ್ಲ**,** ಅದೊಂದು ಕ್ರಮ. ಅನೇಕ ಬೋಧನಾ ವಿಧಾನಗಳ ಸಮುಚ್ಚಯ. ಇವುಗಳ ಬಳಕೆಯಿಂದ ವಿದ್ಯಾರ್ಥಿ ಒಂದು ಜ್ಞಾನವನ್ನು ತಾನೇ ಸಾಮಾನ್ಯೀಕರಿಸಲು ಸಹಾಯಕವಾಗುತ್ತದೆ. ಉದಾಹರಣೆಗೆ ಕ್ರಿಯಾಪದ, ನಾಮಪದ, ಸವರ್ಣ ದೀರ್ಘಸಂಧಿ ಇಂತಹ ಪರಿಕಲ್ಪನೆಗಳನ್ನು ಬೋಧಿಸುವಾಗ ಸಾಮಾನ್ಯವಾಗಿ ಹಲವು ಉದಾಹರಣೆ ನೀಡಿ ಅಲ್ಲಿನ ಸಾದೃಶ್ಯಗಳನ್ನು ಗಮನಿಸುವಂತೆ ತಿಳಿಸಲಾಗುತ್ತದೆ ಹಾಗೂ ಇವುಗಳ ಆಧಾರದ ಮೇಲೆ ಸಾಮಾನ್ಯ ಅಭಿಪ್ರಾಯಗಳನ್ನು ವಿದ್ಯಾರ್ಥಿ ತಿಳಿಯುವಂತೆ ಮಾಡಲಾಗುತ್ತದೆ. ರೇಖಾಗಣಿತದ ಅನೇಕ ಪರಿಕಲ್ಪನೆಗಳನ್ನು ಮೂಡಿಸಲು ಇದು ಸಹಕಾರಿ – ಉದಾಹರಣೆಗೆ ಸಮಬಾಹು ತ್ರಿಭುಜ, ಲಂಬಕೋನ ತ್ರಿಭುಜ ಇತ್ಯಾದಿ ಅಥವಾ ಸೂತ್ರಗಳು ಹೇಗೆ ಹುಟ್ಟಿದವು ಎನ್ನುವುದನ್ನು ಅನುಗಮನ ಕ್ರಮದಿಂದ ಯಶಸ್ವಿಯಾಗಿ ವಿದ್ಯಾರ್ಥಿಗೆ ಕಲಿಸಲು ಸಾಧ್ಯ. ವಿಜ್ಞಾನದ ಪರಿಕಲ್ಪನೆಗಳಾದ ಬೆಳಕು ಸರಳರೇಖೆಯಲ್ಲಿ ಚಲಿಸುವುದು, ಬೆಳಕಿನ ಪ್ರತಿಫಲದ ನಿಯಮಗಳು, ಲೋಹ, ಆಮ್ಲದ ಗುಣಗಳು ಮುಂತಾದ ಪರಿಕಲ್ಪನೆಗಳನ್ನು ಕಲಿಸಲು ಅನುಗಮನ ವಿಧಾನ ಸಹಕಾರಿ.
- **ಗೃಹಪಾಠಗಳು** ಕಲಿಕೆಯ ವಿಸ್ತರಣೆಗಳಾಗಬೇಕೆ ವಿನಃ ಕಲಿಕೆಯನ್ನು ಪುನರಾವರ್ತಿಸುವ ಯಾಂತ್ರಿಕ ಕ್ರಿಯೆ ಆಗಬಾರದು. ಎಲ್ಲಾ ಮಕ್ಕಳಿಗೂ ಒಂದೇ ತೆರನಾದ ಗೃಹಪಾಠ ಸಲ್ಲದು. ವಿದ್ಯಾರ್ಥಿಯ ಕಲಿಕೆಯ ವೇಗ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ವೈವಿಧ್ಯಮಯ ಗೃಹಪಾಠ ನೀಡಿ, ತಿದ್ದಿ ತೀಡಿ ಕಲಿಕೆಯನ್ನು ಗಟ್ಟಿಗೊಳಿಸಲು ಗೃಹಪಾಠ ಒಂದು ಪ್ರಬಲ ಅಸ್ತ್ರ.

- **ಗುಂಪು ಚಟುವಟಿಕೆ** ಕಲಿಕೆಗೆ ಮತ್ತೊಂದು ಪರಿಣಾಮಕಾರಿ ತಂತ್ರ. ಕೆಲವು ಸಾಮಾನ್ಯ ಸಂಗತಿಗಳನ್ನು ಚರ್ಚಿಸಿ – ತೀರ್ಮಾನಿಸಲು ಬಳಸಬಹುದು. ಇದಕ್ಕಾಗಿ ತರಗತಿಯ ಪಠ್ಯಪುಸ್ತಕಗಳನ್ನು ಅಕರವಾಗಿ ಬಳಸಬಹುದು ಅಥವಾ ಗ್ರಂಥಭಂಡಾರದಲ್ಲಿ ದೊರೆಯುವ ಪುಸ್ತಕಗಳನ್ನು ಬಳಸಬಹುದು. ಭಾಷೆ–ಸಮಾಜ ಪರಿಚಯದ ತತ್ವ ಪರಿಕಲ್ಪನೆಗಳನ್ನು ಸುಲಭವಾಗಿ ಇಲ್ಲಿ ಅಳವಡಿಸಬಹುದು. ಉದಾಹರಣೆಗೆ ತ್ರಿಭುಜದ ಮೂರು ಕೋನಗಳ ಮೊತ್ತ, ಪೈ–ಬೆಲೆ, ಏಕದಳ/ದ್ವಿದಳಧಾನ್ಯ, ಸಸ್ಯಗಳ ಗುಣಲಕ್ಷಣಗಳು, ಪಂಚಾಯಿತಿಯ ಕರ್ತವ್ಯಗಳು, ತನ್ನ ಊರಿನ ಸಂಪನ್ಮೂಲಗಳು, ಧಾರ್ಮಿಕ ಕೇಂದ್ರಗಳು, ಜನಪದ ಕಥೆ, ಹಾಡುಗಳು ಇತ್ಯಾದಿಗಳನ್ನು ಗುಂಪು ಚಟುವಟಿಕೆಯ ಮೂಲಕ ಪರಿಣಾಮಕಾರಿಯಾಗಿ ಕಲಿಸಬಹುದು.
- **ಸೃಜನಶೀಲತೆಗೆ ಪ್ರೋತ್ಸಾಹ:–**
  - **ತರಗತಿಗೊಂದು ಫ್ಲಾನೆಲ್ ಬೋರ್ಡ್,** ಹಿಂದಿನ ಭಾಗಗಳಲ್ಲಿ ಈ ಕುರಿತು ವಿವರಿಸಿದೆ. ಹಿರಿಯ ತರಗತಿಗಳಲ್ಲಿ ಮಕ್ಕಳ ಕೃತಿಗಳನ್ನು ಪ್ರದರ್ಶಿಸಿ, 10–15 ದಿನಗಳಿಗೊಮ್ಮೆ ಪ್ರದರ್ಶಿಕೆಗಳನ್ನು ಬದಲಾಯಿಸಿ ಉತ್ತಮ ಕೃತಿಗಳನ್ನು ಸಂಗ್ರಹಿಸಿ – ಕೈಬರಹದ ಹಸ್ತಪ್ರತಿ ಹೊರತನ್ನಿ.
  - **20 ಅಂಶಗಳ ಕಾರ್ಯಕ್ರಮ –** 2002–03ರಲ್ಲಿನ ಕಾರ್ಯಕ್ರಮಗಳನ್ನು ಜ್ಞಾಪಿಸಿಕೊಳ್ಳಿ. ತೆಗೆ ಪುಸ್ತಕ ಹೊರಗೆ, ತರಗತಿಗೊಂದು ಹಸ್ತಪ್ರತಿ. ನಾನು ಶಿಕ್ಷಕನಾದರೆ, ಗೆಳೆಯನಿಗೊಂದು ಪತ್ರ ಇಂತಹ ಸುಲಭ ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳು ಲವಲವಿಕೆಯಿಂದ ಕೂಡಿರುವಂತೆ ಮಾಡಿ, ಸೃಜನಶೀಲತೆಯನ್ನು ಉತ್ತೇಜಿಸಿ.
  - **ವಿದ್ಯಾರ್ಥಿಗಳಿಂದ ಕಥೆ ಕವನ ರಚನೆ:** ವಿದ್ಯಾರ್ಥಿಗಳ ಸೃಜನಾತ್ಮಕತೆ, ಭಾಷಾ ಕೌಶಲಗಳ ಅಭಿವೃದ್ಧಿ ಮತ್ತು ಬಳಕೆಯ ಉದ್ದೇಶದಿಂದ ಶಾಲೆಗಳ ವಿದ್ಯಾರ್ಥಿಗಳಿಂದ ಅವರ ಇಚ್ಛೆಗನುಗುಣವಾಗಿ ಕಥೆಗಳನ್ನು ರಚಿಸಲು ಶಾಲಾ ಶಿಕ್ಷಕರು ಮಾರ್ಗದರ್ಶನ ನೀಡುವುದು. ಈ ಕಥೆಗಳ ಸಂಕಲನವನ್ನು ಫ್ಲಾನೆಲ್ ಬೋರ್ಡಿನಲ್ಲಿ ಪ್ರದರ್ಶಿಸುವುದು. ಉತ್ತಮವಾದ ಕೃತಿಗಳನ್ನು ಕ್ಲಸ್ಟರ್ ಹಂತದ ವಾರ್ತಾಸಂಚಿಕೆ, ಜಿಲ್ಲಾಹಂತದ ಸಂಚಿಕೆ ಮತ್ತು ಉತ್ತಮವಾದವುಗಳ ಶಿಕ್ಷಣ ವಾರ್ತೆ ಸಂಚಿಕೆಗಳಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳೊಡನೆ ಮಾಹಿತಿ ಹಂಚಿಕೊಳ್ಳುವುದು. ಮಕ್ಕಳು ಮಾಡಿದ ಇಂತಹ ಕಾರ್ಯಗಳನ್ನು ಒಂದು ಹೊತ್ತಿಗೆಯಲ್ಲಿ ಮಾಸಿಕವಾಗಿ ಮತ್ತು ವಾರ್ಷಿಕ ಸಂಚಿಕೆಯಾಗಿ ಹೊರತರುವುದು.
  - **ತಿಂಗಳಿಗೊಂದು ವಿಜ್ಞಾನಪ್ರಶ್ನೆ ಕಾರ್ಯಕ್ರಮ:** ವಿಜ್ಞಾನದಲ್ಲಿನ ಕಲಿಕಾಂಶಗಳು ಅಭ್ಯಾಸ ಚಟುವಟಿಕೆಯಾಗಿ, ನಿಜಜೀವನಕ್ಕೆ ಅನ್ವಯಿಸುವ ಚಟುವಟಿಕೆಯಾಗಿ, ಅನ್ವೇಷಣೆ ಮತ್ತು ಪ್ರಯೋಗಾತ್ಮಕ ಅಂಶಗಳನ್ನು ಆಧರಿಸಿ ಸ್ಪಷ್ಟ ಮತ್ತು ಸ್ಫುಟವಾದ ಪ್ರಶ್ನೆ ತುಣುಕನ್ನು ಪ್ರಶ್ನಾರೂಪದಲ್ಲಿ ಪ್ರತಿ ವಾರಕ್ಕೊಂದರಂತೆ ಪ್ರಶ್ನೆಯನ್ನು ಪಿನ್ ಬೋರ್ಡಿನಲ್ಲಿ ಹಾಕುವುದು. ಉತ್ತರಗಳನ್ನು ಪಡೆದು ಪ್ರದರ್ಶಿಸುವುದು.

ಮೇಲ್ಕಾಣಿಸಿದ ಚಟುವಟಿಕೆಗಳಿಂದ ನಮ್ಮ ತರಗತಿಗಳಲ್ಲಿ ಕೆಳಕಂಡ ಬದಲಾವಣೆಗಳನ್ನು ಕಾಣಬಹುದಾಗಿದೆ.

- ಮಕ್ಕಳ ಮುಖದಲ್ಲಿ ಮಂದಹಾಸ ಕಾಣುತ್ತದೆ.
- ಮಕ್ಕಳು ಲವಲವಿಕೆಯಿಂದ ಇರುತ್ತಾರೆ.
- ಯುಕ್ತ ಪ್ರತಿಕ್ರಿಯೆಯನ್ನು ಮಕ್ಕಳು ತತ್‌ಕ್ಷಣ ನೀಡುತ್ತಾರೆ.
- ಮಕ್ಕಳು ಶಿಕ್ಷಕರೊಂದಿಗೆ ಗೌರವದಿಂದ ವರ್ತಿಸುತ್ತಾರೆ. ಆದರೆ ಭಯದಿಂದ ಅಲ್ಲ.
- ಯಾವ ಮಕ್ಕಳಲ್ಲಿಯೂ ಹಿಂಜರಿಕೆ ಕಾಣದು, ಅಧ್ಯಾಪಕರನ್ನು ಪ್ರಶ್ನಿಸುತ್ತಾರೆ. ಸಹಪಾಠಿಗಳೊಂದಿಗೆ ಚರ್ಚಿಸುತ್ತಾರೆ.

**ಕರ್ನಾಟಕ ಸರ್ಕಾರ**
**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು–1**

**ಸಂಖ್ಯೆ:ನಿ(ಪ್ರೌ.ಶಿ)ಪ್ರ.ಅಂಶಗಳು 2009–10 ದಿನಾಂಕ : 09–03–2010.**

**ಜ್ಞಾಪನ**

ವಿಷಯ: ವಿವಿಧ ಹಂತದಲ್ಲಿ ಅಧಿಕಾರಿಗಳು ಸಾರ್ವತ್ರಿಕವಾಗಿ ಗಮನಿಸಬೇಕಾದ ಪ್ರಮುಖ ಅಂಶಗಳು.

2010–11ನೇ ಶೈಕ್ಷಣಿಕ ವರ್ಷ ಒಂದು ವಿಶೇಷ ಕಾರ್ಯ ಯೋಜನೆಯನ್ನು ರೂಪಿಸಿ ಅವುಗಳ ಅನುಷ್ಠಾನದ ಕ್ರಮವಾಗಿ ಹಲವು ನಿರ್ದಿಷ್ಟ ಅಂಶಗಳ ವಿವಿಧ ಹಂತದಲ್ಲಿ ಅವಲೋಕಿಸಬೇಕಾಗಿದ್ದು ಅತ್ಯವಶ್ಯಕವಾಗಿದೆ.

**ಶಾಲಾ ಹಂತದಲ್ಲಿ ಈ ಕೆಳಗಿನ ವಿವರಗಳು:**

- ತರಗತಿ ಕೋಣೆಯಲ್ಲಿ ಶಿಕ್ಷಕರ ಬೋಧನಾ – ಕಲಿಕೆ ಪ್ರಕ್ರಿಯೆಯ ಸ್ಪಷ್ಟ ಅವಲೋಕನ.
- ಮುಖ್ಯ ಶಿಕ್ಷಕರಿಂದ ಮೇಲ್ವಿಚಾರಣಾ ಕ್ರಮದ ಬಗ್ಗೆ ಪರಿಶೀಲಿನೆ.
- ಮೇಲ್ವಿಚಾರಣೆಯ ದಾಖಲೀಕರಣ ಹಾಗೂ ಅನುಪಾಲನೆ
- ಶೈಕ್ಷಣಿಕ ಪ್ರಗತಿ ಅವಲೋಕನ/ತಪಾಸಣೆಯ ಹಿನ್ನೆಲೆಯಲ್ಲಿ
- ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಪ್ರಗತಿ ಪರಿಶೀಲನೆ
- ಶಿಕ್ಷಕರ ಚಲನವಲನ ರಿಜಿಸ್ಟರ್ ಪರಿಶೀಲನೆ.
- ಮಕ್ಕಳ ಹಾಜರಾತಿ ಬಗ್ಗೆ ಹೆಚ್ಚಿನ ಗಮನ
- ಏಕರೂಪದ ಅಂಕಿ–ಅಂಶಗಳ ಕುರಿತು ಕಡ್ಡಾಯ ಗಮನ ಹಾಗೂ ಕ್ರಮ

**2. ಬ್ಲಾಕ್ ಹಂತದಲ್ಲಿ:**

- ಬಿ.ಇ.ಓ/ಬಿ.ಆರ್.ಸಿ ಕ್ಲಸ್ಟರ್ ಕೋ–ಆರ್ಡಿನೇಟರ್/ಶಿಕ್ಷಣ ಸಂಯೋಜಕರ ವರದಿ.
- ಪ್ರವಾಸ ಸೂಚಿ, ಪ್ರವಾಸ ದಿನಚರಿ, ಶಾಲಾ ಭೇಟಿ ಹಾಗೂ ತಪಾಸಣಾ ವಿವರಗಳು.
- ನಿಗದಿತ ಗುರಿ ಹಾಗೂ ಪ್ರಗತಿಯ ದಾಖಲೀಕರಣದ ವಿವರಗಳು
- ಕಾರ್ಯಾಲಯದಲ್ಲಿಯ ನೋಡಲ್ ಅಧಿಕಾರಿಗಳ ಪರಿಶೀಲನಾ ವರದಿಗಳು.
- ಸಾಮಾನ್ಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿಯ ವಿವರವನ್ನು ಪರಿಶೀಲಿಸುವುದು.
- ಕರ್ತವ್ಯ ಲೋಪಕ್ಕಾಗಿ ತೆಗೆದುಕೊಂಡ ಕ್ರಮಗಳು.
- ಏಕರೂಪದ ಅಂಕಿ–ಅಂಶಗಳ ನಿರ್ವಹಣೆ ಬಗ್ಗೆ ವಿಶೇಷ ಗಮನ.

**3. ಜಿಲ್ಲಾ ಮಟ್ಟದಲ್ಲಿ:**

- ಜಿಲ್ಲೆಯಲ್ಲಿ ಡಿ.ಡಿ.ಪಿ.ಐ/ಬಿ.ಇ.ಓ/ಡಿ.ವೈ.ಪಿ.ಸಿ/ಇ.ಓ/ಡಿ.ಎಸ್.ಪಿ.ಇ/ವಿಷಯ ಪರಿವೀಕ್ಷಕರು/ಎ.ಪಿ.ಸಿಗಳ ವರದಿ.
- ಜಿಲ್ಲೆಯ ಡಯಟ್ ಪ್ರಾಂಶುಪಾಲರು/ಹಿರಿಯ–ಕಿರಿಯ ಅಧಿಕಾರಿಗಳ ವರದಿ.
- ಪ್ರವಾಸ ಸೂಚಿ ಪ್ರವಾಸ ದಿನಚರಿ, ಶಾಲಾ ಭೇಟಿ ಹಾಗೂ ತಪಾಸಣೆಯ ವಿವರಗಳು.
- ವರದಿಗಳ ಪುನರ್ ಪರಿಶೀಲನೆ ಹಾಗೂ ದಾಖಲೀಕರಣ.
- ಕಾರ್ಯಾಲಯದ ನೋಡಲ್ ಅಧಿಕಾರಿಗಳ ಪರಿಶೀಲನಾ ಕಾರ್ಯ.
- ನೋಡಲ್ ಅಧಿಕಾರಿಗಳ ತ್ರೈಮಾಸಿಕ ವರದಿಗಳ ಕ್ರೋಡೀಕರಣಗಳ ವರದಿ ತಯಾರಿಕೆ ವಿವರ ಪರಿಶೀಲನೆ.
- ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ಕಾರ್ಯಕ್ರಮಗಳ ವಿವರ ಪರಿಶೀಲನೆ.
- ಕರ್ತವ್ಯ ಲೋಪಕ್ಕಾಗಿ ತಾಲ್ಲೂಕುವಾರು ತೆಗೆದುಕೊಂಡ ಕ್ರಮಗಳ ವಿವರ.
- ಇತರೆ ಪ್ರಮುಖ ಅಭಿವೃದ್ಧಿ ಹಾಗೂ ಆಡಳಿತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ.
- ಏಕರೂಪದ ಅಂಕಿ–ಅಂಶಗಳ ಪರಿಶೀಲನೆ ಹಾಗೂ ಮಾರ್ಗೋಪಾಯ ಸೂಚನೆ.

**4. ರಾಜ್ಯಮಟ್ಟದಲ್ಲಿ:**

- ಜಿಲ್ಲಾ ಹಾಗೂ ಆಯಾ ಆಯುಕ್ತಾಲಯದಿಂದ ವರದಿಗಳ ಕ್ರೋಡೀಕರಣ ಹಾಗೂ ಅವಶ್ಯಕತೆಯಂತೆ ಸರ್ಕಾರಕ್ಕೆ ಆಯುಕ್ತರ ಮೂಲಕ ವರದಿ.
- ಜಿಲ್ಲಾವಾರು ನೋಡೆಲ್ ಅಧಿಕಾರಿಗಳ ತ್ರೈಮಾಸಿಕ ಪರಿಶೀಲನಾ ವರದಿಗಳ ಪರಿಶೀಲನೆ ಹಾಗೂ ಮಾರ್ಗದರ್ಶನ ನೀಡುವುದು.
- ಅವಶ್ಯಕತೆ ಆಧಾರದ ಮೇಲೆ ಹೊಸ ಹೊಸ ಕಾರ್ಯಕ್ರಮಗಳು ರೂಪಿಸುವುದು ಹಾಗೂ ಮಾರ್ಗದರ್ಶನ ನೀಡುವುದು.

ಈ ಎಲ್ಲಾ ಅಂಶಗಳ ವಿವಿಧ ಹಂತದಲ್ಲಿ ಅವಶ್ಯವಾಗಿ ಅವಲೋಕಿಸಲು ಈ ಮೂಲಕ ಸೂಚಿಸಿದೆ.

ಸಹಿ/–
ನಿರ್ದೇಶಕರು(ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಆಯುಕ್ತರ ಕಛೇರಿ, ಬೆಂಗಳೂರು.

**ಸೂಚನೆ :** 2010–11ನೇ ವರ್ಷದ ವಿಶೇಷ ಕಾರ್ಯಯೋಜನೆಯನ್ನೇ 2016–17ನೇ ಸಾಲಿಗೂ ಮುಂದುವರಿಸುವುದು

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಏಪ್ರಿಲ್ 2010ರಂದು ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ: ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಪತ್ರ ಸಂಖ್ಯೆ: ಎ 8 ಪಸವಿ/69/2009-10 ದಿ: 20.03.2010

**ಪ್ರಸ್ತಾವನೆ:-**

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಏಪ್ರಿಲ್ 2010ರಂದು ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆಪತ್ರಿಕೆಗಳ ಮಾದರಿಯನ್ನು ಶೈಕ್ಷಣಿಕ ದೃಷ್ಟಿಯಿಂದ ಬದಲಾಯಿಸಿದ್ದು, ಬರವಣಿಗೆ ಸಮಯದ ಬಗ್ಗೆ ವಿದ್ಯಾರ್ಥಿಗಳಲ್ಲಿನ ಆತಂಕವನ್ನು ನಿವಾರಿಸುವ ಸಲುವಾಗಿ ಏಪ್ರಿಲ್ 2010 ರಿಂದ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಮೊದಲ 15 ನಿಮಿಷಗಳನ್ನು ಪ್ರಶ್ನೆಪತ್ರಿಕೆಯನ್ನು ವಿದ್ಯಾರ್ಥಿಗಳು ಅವಲೋಕಿಸುವ ಸಲುವಾಗಿ ನೀಡಲು ಹಾಗೂ ಹೆಚ್ಚುವರಿಯಾಗಿ ನೀಡುವ ಈ 15 ನಿಮಿಷದ ಸಮಯದಲ್ಲಿ ಪರೀಕ್ಷೆ ಮುಗಿಯುವ ಸಮಯದಲ್ಲಿ 15 ನಿಮಿಷ ಮುಂದೂಡಿ ನಿಗದಿಪಡಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. "ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ; ಇಡಿ 70 ಎಸ್‌ಎಲ್‌ಬಿ 2010**

**ಬೆಂಗಳೂರು ದಿ: 22ನೇ ಮಾರ್ಚ್ 2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010ನೇ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಅವಲೋಕಿಸಲು ಮೊದಲ 15 ನಿಮಿಷಗಳ ಹೆಚ್ಚುವರಿ ಕಾಲಾವಕಾಶವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿ ಆದೇಶಿಸಿದೆ.

ಷರತ್ತುಗಳು:-

1) ಪರೀಕ್ಷಾ ವೇಳೆಯು ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿದ್ದು, 10-30 ರಿಂದ 10-45ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಪ್ರಾರಂಭವಾಗುವ ಪರೀಕ್ಷೆಗೆ 2.30 ರಿಂದ 2.45 ರವರೆಗೆ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಗಳನ್ನು ಮಾತ್ರ ಅವಲೋಕಿಸತಕ್ಕದ್ದು. ಈ ಅವಧಿಯಲ್ಲಿ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಲು ಅವಕಾಶವಿರುವುದಿಲ್ಲ.
2) ಪ್ರಶ್ನೆಗಳಿಗೆ ಉತ್ತರವನ್ನು ಬೆಳಿಗ್ಗೆ 10.30ರಿಂದ ಪ್ರಾರಂಭವಾಗುವ ಪರೀಕ್ಷೆಗೆ 10.45ರ ನಂತರ ಹಾಗೂ ಮಧ್ಯಾಹ್ನ ಪ್ರಾರಂಭವಾಗುವ ಪರೀಕ್ಷೆಗಳಿಗೆ ಮಧ್ಯಾಹ್ನ 2.45ರ ನಂತರವೇ ಬರೆಯಲು ಪ್ರಾರಂಭಿಸಬೇಕು.
3) ಪ್ರಶ್ನೆಪತ್ರಿಕೆಯನ್ನು ಅವಲೋಕಿಸುವುದಕ್ಕಾಗಿ ನೀಡಿರುವ 15 ನಿಮಿಷಗಳ ಹೆಚ್ಚುವರಿ ಕಾಲವನ್ನು ಪರೀಕ್ಷಾ ವೇಳಾಪಟ್ಟಿಯಲ್ಲಿ ಸೂಚಿಸಿರುವ ಪರೀಕ್ಷಾ ಮುಕ್ತಾಯದ ಸಮಯವನ್ನು 15 ನಿಮಿಷಗಳ ಕಾಲ ಮುಂದೂಡಿ ನಿಗದಿಪಡಿಸತಕ್ಕದ್ದು.
4) ಯಾವುದೇ ಕಾರಣಕ್ಕೂ ಮೇಲೆ ಸೂಚಿಸಿರುವ 15 ನಿಮಿಷಗಳ ಹೆಚ್ಚುವರಿ ಸಮಯಕ್ಕಿಂತ ಹೆಚ್ಚಿನ ಕಾಲಾವಕಾಶಕ್ಕೆ ಅವಕಾಶವಿರುವುದಿಲ್ಲ.
5) ಮೇಲಿನ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಈ ಸಂಬಂಧ ಯಾವುದೇ ದೂರುಗಳು ಬಂದಲ್ಲಿ, ಇದಕ್ಕೆ ಸಂಬಂಧಪಟ್ಟ ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರೇ ನೇರ ಜವಾಬ್ದಾರರಾಗಿರುತ್ತಾರೆ.

ಸಹಿ/-

ಹೆಚ್.ಟಿ.ಜಯರಾಂ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ[ಪ್ರೌಢ]

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು 1.**

ಸಂಖ್ಯೆ: ಎಡಿಎಂ 2 ಶಾಮೊನ 97/2009–10 ದಿ: 04.03.2010

**ಸುತ್ತೋಲೆ**

ವಿಷಯ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳ ಉಪಯೋಗಿಸುವಿಕೆಯನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಶಿಪ್ರಕಾ ಪ್ರಾಪ್ರೌಶಿ–44/2010 ದಿ: 18.02.2010

2.ಸರ್ಕಾರದ ಆದೇಶ ಸಂಖ್ಯೆ: ಇಡಿ 226 ಎಲ್‌ಐಬಿ 2007 ದಿ: 05.10.2007

ಶಿಕ್ಷಕ ಮತ್ತು ನೌಕರರ ವರ್ಗದವರು; ಅವರುಗಳು ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುತ್ತಿರುವುದರಿಂದ ಬೋಧನಾ ಚಟುವಟಿಕೆಗಳಿಗೆ ಅತೀವ ತೊಂದರೆಯಾಗುತ್ತಿರುವುದಾಗಿ ಸರ್ಕಾರದ ಗಮನಕ್ಕೆ ಬಂದಿದೆ. ಮೊಬೈಲ್ ಬಳಕೆ ಮಾಡಲಾಗುತ್ತಿರುವುದರಿಂದ ಉತ್ತಮ ವಾತಾವರಣವನ್ನು ಕಲುಷಿತಗೊಳಿಸಿದಂತಾಗಿ ಬೋಧನಾ ಕ್ರಮಕ್ಕೆ ಅಡ್ಡಿಯಾಗುತ್ತಿರುತ್ತದೆ. ಈ ಜ್ಞಾನಮಂದಿರಗಳ ಶಾಲೆಗಳಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸುವ ಸಲುವಾಗಿ ಮೊಬೈಲ್‌ಗಳ ಬಳಕೆ ಮಾಡುವುದನ್ನು ನಿಷೇಧಿಸುವುದು ಸೂಕ್ತವೆಂದು ಭಾವಿಸಲಾಗಿದೆ.

ಆದ್ದರಿಂದ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್‌ಗಳನ್ನು ಬಳಕೆ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಶಾಲೆಗಳಲ್ಲಿ ಮೊಬೈಲ್‌ಗಳನ್ನು ಉಪಯೋಗಿಸುವುದು ಕಂಡಲ್ಲಿ, ಅವರ ಮೇಲೆ ಶಿಸ್ತು ಕ್ರಮ ಜರುಗಿಸಲು ಸೂಚಿಸಿದೆ. ಶಾಲೆಯ ಮುಖ್ಯ ಶಿಕ್ಷಕರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಶಾಲಾ ಅವಧಿಯಲ್ಲಿ ಯಾವುದೇ ಶಿಕ್ಷಕರು ಮೊಬೈಲ್‌ಗಳನ್ನು ಬಳಸದೇ ಇರುವಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಶಾಲಾ ಮುಖ್ಯಶಿಕ್ಷಕರಿಗೆ ಈ ನಿಷೇಧದಿಂದ ವಿನಾಯಿತಿ ನೀಡಲಾಗಿದ್ದರೂ ಸಹ, ಅವರು ತಮ್ಮ ಬೋಧನಾ ಕಾರ್ಯದ ಅವಧಿಯಲ್ಲಿ ಮೊಬೈಲ್‌ಗಳನ್ನು ಬಳಸುವುದನ್ನು ನಿಷೇದಿಸಿದೆ. ಯಾವುದೇ ಪ್ರಾಥಮಿಕ ಶಾಲೆ ಪ್ರೌಢಶಾಲೆಗಳಲ್ಲಿ ಶಾಲಾ ವೇಳೆಯಲ್ಲಿ ಮೊಬೈಲ್ ಉಪಯೋಗಿಸುತ್ತಿರುವುದು ಗಮನಕ್ಕೆ ಬಂದಲ್ಲಿ ಶಾಲೆಯ ಮುಖ್ಯ ಶಿಕ್ಷಕರೇ ಹೊಣೆಗಾರರಾಗುತ್ತಾರೆಂದು ತಿಳಿಸುತ್ತಾ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಸಹಿ/–
[ಬಿ.ಎ.ಹರೀಶ್‌ಗೌಡ]
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಶಿ ಪ್ರ ಕಾ/ಪ್ರಾಪ್ರೌಶಿ/15/2010

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ, ಬೆಂಗಳೂರು
ದಿನಾಂಕ:18.12.2010

**ಸುತ್ತೋಲೆ**

ವಿಷಯ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ಹಾಜರಾತಿ ನಿರ್ವಹಣೆ ಕುರಿತು

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಕೆಲವು ಕಡೆ ಹಾಜರಾದ ಮಕ್ಕಳಿಗೆ "ಕ" ಎಂದು ಹಾಗೂ ಗೈರುಹಾಜರಿದ್ದ ಮಕ್ಕಳಿಗೆ "೦" ಎಂದು ನಮೂದಿಸುತ್ತಿರುವುದು, ಕೆಲವೆಡೆ ಹಾಜರಿಗೆ ಒಂದು ಉದ್ದಗೆರೆ, ಗೈರು ಹಾಜರಿಗೆ "ಗೈ" ಎಂದೂ, "೦" ನಮೂದಿಸುತ್ತಿರುವುದು ರೂಢಿಯಲ್ಲಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಗೈರು ಹಾಜರಾತಿಗಳ ನಮೂದನೆಯಲ್ಲಿ ಗೊಂದಲಗಳಾಗುವ ಸಾಧ್ಯತೆ ಇದೆ.

ಆದ್ದರಿಂದ ಮಕ್ಕಳ ಹಾಜರಾತಿ ವಹಿ ವ್ಯವಸ್ಥೆಯಲ್ಲಿ ಅಗತ್ಯ ಸುಧಾರಣೆಗಾಗಿ ಹಾಗೂ ರಾಜ್ಯದಾದ್ಯಂತ ಏಕರೂಪ ವ್ಯವಸ್ಥೆ ತರುವ ನಿಟ್ಟಿನಲ್ಲಿ ಇನ್ನೂ ಮುಂದೆ ವಿದ್ಯಾರ್ಥಿಗಳ ಹಾಜರಾತಿ ವಹಿಯಲ್ಲಿ ಶಾಲೆಯ ತರಗತಿಗಳು ಪ್ರಾರಂಭವಾಗುವ ಮೊದಲು ಹಾಜರಿದ್ದ ಮಕ್ಕಳಗೆ "ಹಾ" ಎಂದು ಗೈರು ಹಾಜರಿದ್ದ ಮಕ್ಕಳಿಗೆ "ಗೈರು" ಎಂದು ಕಡ್ಡಾಯವಾಗಿ ನಮೂದಿಸುವುದು.

ಮುಖ್ಯೋಪಾಧ್ಯಾಯರು ವರ್ಗವಾರು ಹಾಜರಾತಿ ವಹಿ ಪಡೆದು ಶಾಲೆಯ ಆ ದಿನದ ಒಟ್ಟಾರೆ ದಾಖಲಾತಿ/ಹಾಜರಾತಿಯ ಅಂಕಿ ಸಂಖ್ಯೆಗಳನ್ನು ಪ್ರತ್ಯೇಕ ವಹಿಯಲ್ಲಿ ದಾಖಲಿಸಬೇಕು. ಈ ಕೆಲಸವನ್ನು ಆಯಾ ದಿನ ಶಾಲೆ ಪ್ರಾರಂಭವಾದ ಒಂದು ಗಂಟೆಯೊಳಗೆ ಮಾಡಬೇಕು.

ಹಾಜರಾತಿ ವಹಿಯಲ್ಲಿ ಯಾವುದೇ ತಿದ್ದುಪಡಿ, ತಿದ್ದಿ ಬರೆಯುವುದು ಮುಂತಾದವು ಕಂಡು ಬಂದಲ್ಲಿ ಅಂತಹ ವರ್ಗದ ಶಿಕ್ಷಕರ ಮೇಲೆ ಹಾಗೂ ಮುಖ್ಯೋಪಾಧ್ಯಾಯರ ಮೇಲೆ ಅಗತ್ಯ ಶಿಸ್ತು ಕ್ರಮ ಜರುಗಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ/ಉಪನಿರ್ದೇಶಕರುಗಳಿಗೆ ತಿಳಿಸಲಾಗಿದೆ.

ವಿವಿಧ ಯೋಜನೆಗಳಡಿ ಪ್ರಯೋಜನ ಪಡೆಯುವ ಮಕ್ಕಳ ಅಂಕಿಸಂಖ್ಯೆಗಳಿಗೂ ವಾಸ್ತವ ಹಾಜರಾತಿಗೂ ತಾಳೆಯಾಗಬೇಕು, ವ್ಯತಿರಿಕ್ತವಾದಲ್ಲಿ ಸೂಕ್ತ ಅಗತ್ಯ ಕ್ರಮ ಜರುಗಿಸಲಾಗುವುದು. ಈ ನಿಟ್ಟಿನಲ್ಲಿ ಪ್ರತಿ ಶಾಲೆಗಳಲ್ಲಿ ಈ ವ್ಯವಸ್ಥೆ ದಿ: 01.03.2010ರಿಂದ ಜಾರಿಯಾಗುವಂತೆ ಕ್ರಮ ಕೈಗೊಳ್ಳುವುದು.

ಸಹಿ/–
[ಡಾ॥ ರ.ಗೋ.ನಡಾದೂರ]
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರು ಉಪಪ್ರಾಂಶುಪಾಲರುಗಳ ಕಾರ್ಯ ಹಂಚಿಕೆ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 433 ಡಿಪಿಐ 2001 ದಿ: 09.01.2003
2. ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಎಲ್‌ಎಲ್‌ಬಿ 2004 ದಿ:
3. ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಡಿಪಿಐ 2006 ದಿ: 16.09.2006
4. ಸರ್ಕಾರದ ಆದೇಶ ಸಂಖ್ಯೆ: ಇಡಿ 92 ಡಿಪಿಐ 2006 ದಿ: 28.03.2007

**ಪ್ರಸ್ತಾವನೆ:**

ರಾಜ್ಯದಲ್ಲಿನ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ವಿಭಾಗ ಮತ್ತು ಪ್ರೌಢಶಾಲಾ ವಿಭಾಗಗಳಿರುತ್ತವೆ. ಇಂತಹ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ 750ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ 01 ಉಪ ಪ್ರಾಂಶುಪಾಲರ ಹುದ್ದೆಗೆ ಅವಕಾಶವಿದೆ. ಇಂತಹ ಸಂದರ್ಭದಲ್ಲಿ ಪ್ರಾಂಶುಪಾಲರು/ಉಪ ಪ್ರಾಂಶುಪಾಲರುಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಅಧಿಕಾರಿಗಳ ಬಗ್ಗೆ ಮೇಲೆ [1] ಮತ್ತು [2]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾರ್ಯಸೂಚಿಗಳನ್ನು ಹೊರಡಿಸಲಾಗಿದೆ.

ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಕಾರ್ಯ ಹಂಚಿಕೆಯನ್ನು ಸುಗಮಗೊಳಿಸುವ ದೃಷ್ಠಿಯಿಂದ ದಿ: 18.07.2006ರಂದು ಸಭೆಯನ್ನು ನಡೆಸಿ, ಈ ಹಿಂದೆ ಹೊರಡಿಸಿದ ಆದೇಶಗಳನ್ನು ರದ್ದುಪಡಿಸಿ ಮೇಲೆ [3]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರುಗಳಿಗೆ ಶೈಕ್ಷಣಿಕ, ಆಡಳಿತಾತ್ಮಕ ಆರ್ಥಿಕ ಹಾಗೂ ಇತರೆ ಅಧಿಕಾರಿಗಳ ಕಾರ್ಯಸೂಚಿಗಳನ್ನು ಹೊರಡಿಸಲಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ದಿ: 08.01.2007ರ ಪತ್ರದಲ್ಲಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರ ಕಾರ್ಯ ಹಂಚಿಕೆ ಬಗ್ಗೆ ಮರು ಪರಿಶೀಲಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ [3]ರಲ್ಲಿ ಓದಲಾದ ಸರ್ಕಾರದ ದಿ: 16.09.2006ರ ಆದೇಶವನ್ನು ಹಿಂದಕ್ಕೆ ಪಡೆದು ದಿ: 09.01.2003ರಂದು ಹೊರಡಿಸಲಾಗಿದೆ.

ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರ ಮತ್ತು ಉಪ ಪ್ರಾಂಶುಪಾಲರುಗಳು ಕ್ರಮವಾಗಿ ಪದವಿ ಪೂರ್ವ ವಿಭಾಗ ಮತ್ತು ಪ್ರೌಢಶಾಲಾ ವಿಭಾಗವನ್ನು ಪ್ರತಿನಿಧಿಸುತ್ತಿರುವುದರಿಂದ, ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರಿಗೆ, ಪ್ರೌಢಶಾಲೆಗೆ ಸಂಬಂಧಿಸಿದಂತೆ ಉಪ ಪ್ರಾಂಶುಪಾಲರಿಗೆ ಹಾಗೂ ಉಪ ಪ್ರಾಂಶುಪಾಲರು ಇಲ್ಲದಿರುವ ಕಡೆ ಪ್ರೌಢಶಾಲಾ ವಿಭಾಗದಲ್ಲಿನ ಹಿರಿಯ ಸಹ ಶಿಕ್ಷಕರಿಗೆ ಕಾರ್ಯ ಹಂಚಿಕೆಯನ್ನು ವಹಿಸುವುದು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಠಿಯಿಂದ ಯೋಗ್ಯವಾದುದ್ದೆಂದು ಭಾವಿಸಿ ಇದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 70 ಎಸ್‌ಎಲ್‌ಬಿ 2009
ಬೆಂಗಳೂರು ದಿ: 22ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಠಿಯಿಂದ ಪೂರ್ವ ಅಧಿಕಾರಗಳನ್ನು ಉಪ ಪ್ರಾಂಶುಪಾಲರಿಗೆ ಮತ್ತು ಉಪ ಪ್ರಾಂಶುಪಾಲರ ಹುದ್ದೆ ಇಲ್ಲದಿರುವ ಕಡೆ ಪ್ರೌಢಶಾಲೆಯ ಹಿರಿಯ ಸಹ ಶಿಕ್ಷಕರಿಗೆ ವಹಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ. ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಮತ್ತು ಉಪ ಪ್ರಾಂಶುಪಾಲರು ನಿರ್ವಹಿಸಬೇಕಾದ ಕಾರ್ಯಸೂಚಿಗೆ ಸಂಬಂಧಿಸಿದಂತೆ ಹೊರಡಿಸಿರುವ ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಪಡಿಸಿದೆ. ಉಪ ಪ್ರಾಂಶುಪಾಲರು/ಹಿರಿಯ ಸಹ ಶಿಕ್ಷಕರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1ರಲ್ಲಿ ಪ್ರಾಂಶುಪಾಲರ ಕರ್ತವ್ಯಕ್ಕೆ ಸಂಬಂಧಿಸಿದಂತೆ ಅನುಬಂಧ–2ರಲ್ಲಿ ಸೂಚಿಸಿರುವಂತೆ ಕಾರ್ಯ ಹಂಚಿಕೆಯನ್ನು ನಿರ್ವಹಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/–
ಹೆಚ್.ಟಿ.ಜಯರಾಂ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ[ಪ್ರೌಢ]

**ದಿನಾಂಕ: 22.01.2010 ರ ಸರ್ಕಾರದ ಆದೇಶ ಸಂಖ್ಯೆ: ಇಡಿ 251 ಎಸ್.ಒ.ಹೆಚ್ 2009 ಕ್ಕೆ**
**ಅನುಬಂಧ–1**

**ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಶಿಕ್ಷಕರು/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿಕಾರ್ಯನಿರ್ವಹಿಸುತ್ತಿರುವ ಉಪಪ್ರಾಂಶುಪಾಲರು/ಹಿರಿಯ ಶಿಕ್ಷಕರ ಜವಾಬ್ದಾರಿ ಮತ್ತು ಕರ್ತವ್ಯಗಳು**

**ಶೈಕ್ಷಣಿಕ ಕಾರ್ಯಾಭಾರ:**

- ಶಿಕ್ಷಕರಿಗೆ ವಾರ್ಷಿಕ ಕಾರ್ಯಹಂಚಿಕೆ
- ಶಿಕ್ಷಕರ ವಾರ್ಷಿಕ ಕಾರ್ಯಯೋಜನೆ ವಿಷಯವಾರು ಸಿದ್ಧಪಡಿಸುವುದನ್ನು ಖಾತರಿಪಡಿಸಿಕೊಳ್ಳುವುದು.
- ತರಗತಿವಾರು, ವಿಷಯವಾರು ಹಾಗೂ ಕ್ರೋಡೀಕೃತ ವೇಳಾಪಟ್ಟಿ ಸಿದ್ಧಪಡಿಸುವುದು.
- ಅರ್ಧವಾರ್ಷಿಕ ಪರೀಕ್ಷೆ, ಮಾಸಿಕ ಪರೀಕ್ಷೆಗಳಿಗೆ ಕಾರ್ಯಯೋಜನೆ ತಯಾರಿಸುವುದು.
- ಶಿಕ್ಷಕರ ಪಾಠಟಿಪ್ಪಣಿ ಪರಿಶೀಲಿಸುವುದು
- ಶಿಕ್ಷಕರು ನಿರ್ವಹಿಸುವ ಪಾಠಗಳ ವೀಕ್ಷಣೆ, ಮೇಲ್ವಿಚಾರಣೆ ಹಾಗೂ ಪಾಠೋಪಕರಣಗಳ ದೈನಂದಿನ ಬಳಕೆ ಬಗ್ಗೆ ಕ್ರಮ ವಹಿಸುವುದು.
- ಸೇತುಬಂಧ ಶಿಕ್ಷಣ ನೀಡುವ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಹೆಚ್ಚಿನ ಗಮನಹರಿಸಿ ಅವರ ಕಲಿಕೆಯಲ್ಲಿ ಪ್ರಗತಿ ಸಾಧಿಸಲು ಕಾರ್ಯ ಯೋಜನೆ ರೂಪಿಸವುದು. ಇಂತಹ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸುವುದು ಮತ್ತು ಪರಿಹಾರ ಬೋಧನಾ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಶಿಕ್ಷಕರಿಗೆ ವಿಷಯವಾರು ಕಾರ್ಯಗಾರಗಳನ್ನು ಏರ್ಪಡಿಸುವುದು ಹಾಗೂ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಲು ಅವಕಾಶ ಕಲ್ಪಿಸುವುದು.
- ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯನ್ನು ಗುರುತಿಸಲು ವೈಯಕ್ತಿಕ ಮಾಹಿತಿ ಇರುವಂತೆ ಪ್ರತ್ಯೇಕ ವಹಿಗಳನ್ನು ನಿರ್ವಹಿಸುವುದು.
- ಕಂಪ್ಯೂಟರ್ ಕಾರ್ಯ ನಿರ್ವಹಣೆ ಬಗ್ಗೆ ಮಕ್ಕಳ ಕಂಪ್ಯೂಟರ್ ಕಲಿಕೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಸಹಪಠ್ಯ ಚಟುವಟಿಕೆಗಳ ವಾರ್ಷಿಕ ಯೋಜನೆ ಹಾಗೂ ಅನುಷ್ಠಾನ
- ಪಠ್ಯೇತರ ಚಟುವಟಿಕೆಗಳಾದ ಚರ್ಚಾಸ್ಪರ್ಧೆ, ಪ್ರಬಂಧಸ್ಪರ್ಧೆ, ಕ್ವಿಜ್ ಸಾಮಾನ್ಯ ಜ್ಞಾನ ಸ್ಪರ್ಧೆ ಇವುಗಳನ್ನು ಆಯೋಜಿಸಲು ಕ್ರಿಯಾಯೋಜನೆ ತಯಾರಿಸುವುದು. ಸಾಂಸ್ಕೃತಿಕ ಸಂಘದ ಮೂಲಕ ನಾಟಕೋತ್ಸವ, ನೃತ್ಯ, ಪ್ರತಿಭಾ ಕಾರಂಜಿ ಇತ್ಯಾದಿ ಕಾರ್ಯಕ್ರಮಗಳನ್ನು ಯೋಜಿಸುವುದು.
- ರಾಷ್ಟ್ರೀಯ ಭಾವೈಕ್ಯತೆ, ಏಕತೆಯ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆಯನ್ನು ಬಿಂಬಿಸುವಂತೆ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಶಿಕ್ಷಕರಿಗೆ ವಿಷಯವಾರು ಸಂಪನ್ಮೂಲ ವ್ಯಕ್ತಿಗಳಿಂದ ಮಾದರಿ ಪಾಠಗಳನ್ನು ಆಯೋಜಿಸುವುದು ಹಾಗೂ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತುಪ್ರದರ್ಶನ/ಕಲಾ ಪ್ರದರ್ಶನ/ಆಟೋಟಗಳನ್ನು ಏರ್ಪಡಿಸುವುದು.
- ಶಾಲಾ ಚಟುವಟಿಕೆಗಳನ್ನು ಶಾಲಾ ಶಿಕ್ಷಕರಲ್ಲಿ ಹಂಚಿ ಹೊಣೆಗಾರಿಕೆ ಹಂಚಿಕೊಳ್ಳುವುದು.
- ವಿಜ್ಞಾನ ಬೋಧನೆ ಮಾಡುವಾಗ ಬರುವ ಎಲ್ಲಾ ಪ್ರಯೋಗಗಳ ವಾರ್ಷಿಕ ಕಾರ್ಯಯೋಜನೆ ತಯಾರಿಕೆ ಹಾಗೂ ಅನುಷ್ಠಾನ.
- ಮಕ್ಕಳ ಕಲಿಕೆಯ ಬಗ್ಗೆ ಪರಿಶೀಲನೆ ಹಾಗೂ ಮಾರ್ಗದರ್ಶನ
- ಪ್ರತಿ ತರಗತಿ/ವಿಭಾಗದ ಹಾಜರಿ ಪುಸ್ತಕದಲ್ಲಿ ಪ್ರತಿ ಮಾಹೆಯ ಅಂತ್ಯದಲ್ಲಿ ಪ್ರತಿ ವಿದ್ಯಾರ್ಥಿಯ ಹಾಗೂ ತರಗತಿಯ ಸರಾಸರಿ ಹಾಜರಾತಿಗಳನ್ನು ಲೆಕ್ಕಾಚಾರ ಮಾಡಬೇಕು.
- ಗೈರು ಹಾಜರಾದ ಮಕ್ಕಳ ಹಾಜರಾತಿ ಅನುಪಾಲನೆ ಹಾಗೂ ಶಾಲೆಗೆ ಬರುವಂತೆ ಮಾಡಿದ ಪ್ರಯತ್ನಗಳ ದಾಖಲೀಕರಣ ಶಾಲೆಗಳಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು.
- ಮಕ್ಕಳಲ್ಲಿ ಇರುವ ಸೃಜಾನಾತ್ಮಕತೆ ಹಾಗೂ ಹವ್ಯಾಸಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು. ವಿಷಯವಾರು ಕ್ಲಬ್ [ಇಕೋ ಕ್ಲಬ್, ಗ್ರಾಹಕರ ವಿಜ್ಞಾನ ಕ್ಲಬ್] ಸ್ಥಾಪಿಸಿ, ಇದರನ್ವಯ ಚಟುವಟಿಕೆಗಳನ್ನು ನಡೆಸುವುದು. ಶಾಲೆಯಲ್ಲಿ ವಿವಿಧ ವಿಷಯದ [ಭಾಷೆ, ಗಣಿತ, ವಿಜ್ಞಾನ] ಸಂಘಗಳನ್ನು ಸ್ಥಾಪಿಸಿ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮ ಏರ್ಪಡಿಸುವುದು. ವಾಚನಾಲಯ ಪುಸ್ತಕಗಳನ್ನು ಶಿಕ್ಷಕರು ಹಾಗೂ ಮಕ್ಕಳೂ ಸಹ ಓದುವಂತೆ ಪ್ರೋತ್ಸಾಹಿಸುವುದು. ತರಗತಿಯ ಮಕ್ಕಳಿಗೆ ತರಗತಿ ಶಿಕ್ಷಕರಿಂದ ತರಗತಿಯಲ್ಲಿಯೇ ಪುಸ್ತಕಗಳ ವಿತರಣೆ ಮಾಡುವುದು ಹಾಗೂ ದಾಖಲೆಗಳನ್ನು ನಿರ್ವಹಿಸುವುದು.

- ಶಾಲೆಯಲ್ಲಿ ನೋಟೀಸ್ ಬೋರ್ಡ್, ಡಿಸ್‌ಪ್ಲೇಬೋರ್ಡ್‌ಗಳಲ್ಲಿ ಪ್ರಮುಖವಾದ ವಿಷಯಗಳನ್ನು ಪ್ರಕಟಿಸುವುದು. [ವೈಜ್ಞಾನಿಕ, ಸಾಮಾನ್ಯ ಜ್ಞಾನ, ಕ್ರೀಡೆ ಹಾಗೂ ಇತರೆ]
- ಯೋಗ ಶಿಕ್ಷಣ, ಆರೋಗ್ಯ, ಶಾಲೆಯಲ್ಲಿನ ಶಿಸ್ತು, ಸಾಮೂಹಿಕ ಕವಾಯತು, ಕ್ರೀಡೆಗಳಿಗೆ ಶಾಲಾ ಮಟ್ಟದ ಹಾಗೂ ಅಂತರಶಾಲಾ ವಿವಿಧ ಮಟ್ಟದ ಕ್ರೀಡೆಗಳಿಗೆ ಶಾಲಾಮಟ್ಟದ ಹಾಗೂ ಅಂತರ ಶಾಲಾ ವಿವಿಧ ಮಟ್ಟದ ಕ್ರೀಡೆಗಳಿಗೆ ಪ್ರೋತ್ಸಾಹಿಸುವುದು.
- ಶಾಲೆಯಲ್ಲಿ ಬೆಳಗಿನ ಪ್ರಾರ್ಥನೆಯಾದ ಕೂಡಲೇ ಸುಭಾಷಿತ ಮತ್ತು ದಿನಪತ್ರಿಕೆಯ ಮುಖ್ಯಾಂಶಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು.
- ಮಕ್ಕಳಲ್ಲಿ ಮುಖಂಡತ್ವವನ್ನು ಬೆಳೆಸಲು ಹಾಗೂ ಹಿಂಜರಿಕೆಯನ್ನು ಹೋಗಲಾಡಿಸಲು ಶಾಲೆಯಲ್ಲಿ ಮಾಕ್ ಪಾರ್ಲಿಮೆಂಟ್ ಕಾರ್ಯಕ್ರಮವನ್ನು ಆಯೋಜಿಸುವುದು.
- ಶಾಲೆಯಲ್ಲಿ ಔಷಧಿಯ ಸಸ್ಯಗಳನ್ನು ಒಳಗೊಂಡಂತೆ ಕೈ ತೋಟಗಳನ್ನು ನಿರ್ವಹಿಸುವುದು.
- ಮಕ್ಕಳ ಕಲಿಕೆಯ ಬಗ್ಗೆ ಪೋಷಕರ ಗಮನಕ್ಕೆ ತರಲು ಪ್ರತಿ ತಿಂಗಳು / 2 ತಿಂಗಳಿಗೊಮ್ಮೆ ಪೋಷಕರ ಸಭೆಯನ್ನು ಮತ್ತು ಶಾಲಾಭಿವೃದ್ಧಿ ಸಮಿತಿ ಸಭೆಯನ್ನು ಆಯೋಜಿಸಿ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು.
- ಶಾಲಾ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸುವುದು.
- ಮಕ್ಕಳಲ್ಲಿ ವ್ಯಕ್ತಿತ್ವ ವಿಕಾಸ, ಜೀವನ ಕೌಶಲ್ಯವನ್ನು ಬೆಳೆಸುವಂತಹ ಹಾಗೂ ಏಡ್ಸ್‌ನಂತಹ ಮಾರಕ ರೋಗ, ಕುಡಿತದ ದುಷ್ಪರಿಣಾಮಗಳು ಹಾಗೂ ಸಾಕ್ಷರತೆ ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸಮುದಾಯ, ಸಾಮಾಜಿಕ ಸಾಮರಸ್ಯ, ಸಹಬಾಳ್ವೆ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಸ್ಥಳೀಯವಾಗಿ ಲಭ್ಯವಿರುವ ವೈಜ್ಞಾನಿಕ, ಐತಿಹಾಸಿಕ ಪ್ರಮುಖ ಸ್ಥಳಗಳು, ಪ್ಲಾನೆಟೇರಿಯಂ, ಕಾರ್ಖಾನೆಗಳು, ಗಣಿಗಳು, ಜಾನಪದ ಲೋಕ, ಅಗ್ನಿಶಾಮಕ ಕೇಂದ್ರ, ಹೂದೋಟಗಳು, ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿ ಇತ್ಯಾದಿಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಕಾರ್ಯಕ್ರಮ ಆಯೋಜಿಸುವುದು.
- ಸಾಹಿತಿಗಳು, ವಿಜ್ಞಾನಿಗಳು, ಶಿಕ್ಷಣ ತಜ್ಞರು, ಸ್ವಾತಂತ್ರ್ಯ ಯೋಧರು ಹಾಗೂ ಜಾನಪದ ಕ್ಷೇತ್ರದಲ್ಲಿ ಆಳವಾದ ಜ್ಞಾನವುಳ್ಳ ವ್ಯಕ್ತಿಗಳಿಂದ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಪ್ರಥಮ ಚಿಕಿತ್ಸೆ, ಆರೋಗ್ಯ ನೈರ್ಮಲ್ಯದ ಬಗ್ಗೆ ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಪರೀಕ್ಷಾ ಪದ್ಧತಿ, ನೂತನ ಪರೀಕ್ಷಾ ಕ್ರಮಗಳಿಗೆ ಅಗತ್ಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು. [ವಸ್ತುನಿಷ್ಠ ಪ್ರಶ್ನೆಬ್ಯಾಂಕ್ ತಯಾರಿಸುವುದು]
- ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಳಿತಾಯ ಯೋಜನೆಯ ಬಗ್ಗೆ ಅರಿವು ಮೂಡಿಸಿ ವಿದ್ಯಾರ್ಥಿಗಳ ಉಳಿತಾಯ ಖಾತೆಗಳನ್ನು ಬ್ಯಾಂಕ್‌ಗಳಲ್ಲಿ ತೆರೆಯುವುದು.
- ಚಿತ್ರಕಲೆ, ತೋಟಗಾರಿಕೆ, ಹೂ ಜೋಡಣೆ, ಹೊಲಿಗೆ, ಮರಗೆಲಸಗಳಂತಹ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಬಿಂಬಿಸುವಂತಹ ನೃತ್ಯರೂಪಕ, ನಾಟಕಗಳು, ಸಮೂಹಗಾನ, ಸಮೂಹ ನೃತ್ಯಗಳಲ್ಲಿ ಮಕ್ಕಳನ್ನು ಪ್ರೋತ್ಸಾಹಿಸುವುದು.
- ಶಾಲಾ ವಾರ್ಷಿಕೋತ್ಸವ ದಿನಾಚರಣೆ, ಪರಿಸರ ದಿನ, ಶಿಕ್ಷಕರ ದಿನಾಚರಣೆ, ರಾಷ್ಟ್ರನಾಯಕರ ಜನ್ಮ ದಿನಗಳ ಆಚರಣೆ, ವಿವೇಕಾನಂದ ದಿನಾಚರಣೆ ಇವುಗಳನ್ನು ಆಯೋಜಿಸುವುದು.
- ವೃತ್ತಿಪರ ಕೋರ್ಸ್‌ಗಳು, ಉನ್ನತ ವ್ಯಾಸಂಗದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
- ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆಗಳ ಬಗ್ಗೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸಮುದಾಯದಲ್ಲಿ ಅರಿವು ಮೂಡಿಸಿ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಗುರುತಿಸಿ ತರಬೇತಿ ನೀಡಿ ಪ್ರೋತ್ಸಾಹಿಸುವುದು.
- ಅಂತರ್‌ಶಾಲಾಮಟ್ಟ, ತಾಲ್ಲೂಕುಮಟ್ಟ ಹಾಗೂ ಜಿಲ್ಲಾಮಟ್ಟದಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಸೂಕ್ತ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದು.

**ಆಡಳಿತಾತ್ಮಕ ಕಾರ್ಯಭಾರ:**

- ಮೇಲಾಧಿಕಾರಿಗಳಿಗೆ ಕಾಲಕಾಲಕ್ಕೆ ಸಲ್ಲಿಸಬೇಕಾದ ದಾಖಲೆಗಳನ್ನು ಅಂಕಿ–ಅಂಶಗಳನ್ನು ಸಲ್ಲಿಸುವುದು. [ಶಾಲಾ ಆಯವ್ಯಯ, ಅಂಕಿ–ಅಂಶಗಳು, ಸಿಬ್ಬಂದಿ ವಿವರ, ಖಾಲಿ ಹುದ್ದೆಗಳ ವಿವರ ಇತ್ಯಾದಿ]
- ಸಹಶಿಕ್ಷಕರ ವಾರ್ಷಿಕ ಕಾರ್ಯ ನಿರ್ವಹಣಾ ವರದಿ ಸಲ್ಲಿಸುವುದು. ಆಸ್ತಿ ಮತ್ತು ಋಣಭಾರ ಪಟ್ಟಿಗಳನ್ನು ಸಲ್ಲಿಸುವುದು.

- ಸಹಶಿಕ್ಷಕರಿಗೆ ಸಾಂದರ್ಭಿಕ ರಜೆ, ಮತ್ತಿತರ ರಜೆ ಮಂಜೂರು ಮಾಡುವುದು. ವಾರ್ಷಿಕ ಬಡ್ತಿ ಮಂಜೂರು ಮಾಡುವುದು. ಕಾಲಮಿತಿ ವೇತನ ಬಡ್ತಿ, ವಿಶೇಷ ವೇತನ ಬಡ್ತಿ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಸಲ್ಲಿಸುವುದು.
- ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ ವಿತರಿಸುವುದು.
- ಶಾಲೆಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ವೈದ್ಯಕೀಯ ತಪಾಸಣೆಯನ್ನು ಮಾಡಿಸುವುದು. ವೈದ್ಯಕೀಯ ದಾಖಲೆ ನಿರ್ವಹಿಸುವುದು [ಊಜಚಿಟಣಖ ಅಚಿಡಿಢ]
- ಪ್ರೌಢಶಾಲೆಗೆ ಅವಶ್ಯವಿರುವ ಹಾಗೂ ಅಗತ್ಯವಿರುವ ವೃತ್ತಪತ್ರಿಕೆಗಳು, ಗ್ರಂಥಗಳು, ನಿಯತ ಕಾಲಿಕೆಗಳು, ಕ್ರೀಡಾಸಾಮಗ್ರಿಗಳು, ವೃತ್ತಿಶಿಕ್ಷಣ ಹಾಗೂ ಪ್ರಾಯೋಗಿಕ ಉಪಕರಣಗಳನ್ನು ಖರೀದಿಸುವುದು.
- ಸರ್ಕಾರ ಮತ್ತು ಸರ್ಕಾರೇತರ ನಗದು ಪುಸ್ತಕಗಳನ್ನು ದಿನವಹಿ ನಿಯಮಬದ್ಧವಾಗಿ ನಿರ್ವಹಿಸುವುದು.
- ಪ್ರೌಢಶಾಲಾ ಬೋಧಕೇತರ ಸಿಬ್ಬಂದಿಯ ಪೂರ್ಣ ನಿರ್ವಹಣೆ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
- ಎಸ್‌ಡಿಎಂಸಿ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.
- ಶಾಲಾ ದಾಖಲೆಗಳನ್ನು ಆಗಿಂದಾಗ್ಗೆ ನಿಯಮಬದ್ಧವಾಗಿ ಬರೆದು ಸುರಕ್ಷಿತವಾಗಿ ಇಟ್ಟು, ಉತ್ತಮ ಸ್ಥಿತಿಯಲ್ಲಿ ಕಾಪಾಡುವುದು.
- ಶಾಲೆಯ ಸಾಂಸ್ಥಿಕ ಯೋಜನೆ ಸಿದ್ಧಪಡಿಸುವುದು ಹಾಗೂ ಕಾರ್ಯಗತಗೊಳಿಸುವಂತೆ ಶ್ರಮ ವಹಿಸುವುದು.
- ಶಾಲೆಯ ಅಭಿವೃದ್ಧಿ ಯೋಜನೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು.
- ಶಾಲಾ ವೇಳಾಪಟ್ಟಿಯಲ್ಲಿ ನಿಗದಿತ ಆವರಣದ ಸ್ವಚ್ಛತೆ ಹಾಗೂ ಶಿಸ್ತಿನ ಬಗ್ಗೆ ಗಮನಹರಿಸುವುದು.
- ಮಾಹಿತಿ ಸಿಂಧು ಶಾಲೆಗಳನ್ನು ಗಣಕ ಯಂತ್ರ ಪೂರಕ ಶಿಕ್ಷಣವು ಪರಿಣಾಮಕಾರಿಯಾಗಿ ವಿದ್ಯಾರ್ಥಿಗಳಲ್ಲಿ ಮೂಡುತ್ತಿದೆಯೇ ಎಂದು ಖಾತ್ರಿ ಮಾಡಿಕೊಳ್ಳುವುದು ಹಾಗೂ ಬೇಸಿಗೆ ಮತ್ತು ಮಧ್ಯಂತರ ರಜೆಯ ಸಂದರ್ಭದಲ್ಲಿ ಸೇವಾನಿರತ ಶಿಕ್ಷಕರಿಗೆ ತರಬೇತಿಯನ್ನು ಹಮ್ಮಿಕೊಳ್ಳುವುದು. [ಮಾಹಿತಿ ಸಿಂಧು ಶಾಲೆಯಲ್ಲಿ ಎಲ್ಲಾ ಶಿಕ್ಷಕರಿಗೂ ತರಬೇತಿ ಮುಗಿದಿದ್ದರೆ ಪಕ್ಕದ ಪ್ರೌಢಶಾಲೆ/ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ತರಬೇತಿ ನೀಡುವುದು]
- ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರು, ಶಾಲೆಯ ನಾಯಕ, ಮಾರ್ಗದರ್ಶಕ ಹಾಗೂ ಶಿಕ್ಷಣ ಪ್ರಗತಿಯ ಪ್ರತೀಕವಾಗಿದ್ದು, ಉತ್ತಮ ಆಡಳಿತಗಾರನಾಗಿರಬೇಕು.
- ಮುಖ್ಯ ಶಿಕ್ಷಕರು/ಉಪ ಪ್ರಾಂಶುಪಾಲರು, ಸಮುದಾಯದತ್ತ ಶಾಲೆಯ ಯೋಜನೆ ದತ್ತು ಯೋಜನೆ, ರಾಷ್ಟ್ರೀಯ ಹಬ್ಬಗಳ ಆಚರಣೆ, ಮಕ್ಕಳ ಪ್ರತಿಭಾ ಪುರಸ್ಕಾರ, ಶಿಕ್ಷಕರಿಗೆ ಪ್ರೋತ್ಸಾಹ ಇತರೆ ಶೈಕ್ಷಣಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.
- ಸಮುದಾಯ ಹಾಗೂ ಎಸ್‌ಡಿಎಂಸಿ ರವರ ಸಹಾಯದಿಂದ ಸಂಪನ್ಮೂಲವನ್ನು ಕ್ರೋಡೀಕರಿಸಿ ಶಾಲೆಯ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುವುದು.
- ಶಿಕ್ಷಣದಲ್ಲಿ ನೂತನವಾಗಿ ಜಾರಿಗೆ ಬರುವ ಪದ್ಧತಿಯನ್ನು ಅನುಷ್ಠಾನಗೊಳಿಸುವುದು.

**ಹಣಕಾಸಿನ ಕಾರ್ಯಭಾರ:**

- ಸರ್ಕಾರಿ ಹಾಗೂ ಸರ್ಕಾರೇತರ ನಗದು ಪುಸ್ತಕವನ್ನು ಪ್ರತಿದಿನವೂ ಬರೆಯಬೇಕು. ಇದಕ್ಕೆ ಪೂರಕವಾಗಿರುವ ವೈಯಕ್ತಿಕ ವಹಿಗಳು, ರಸೀದಿಗಳು, ಪಾವತಿಯಾಗಿರುವ ಸರ್ಕಾರಿ ಚಲನ್‌ಗಳು, ಹಣ ನೀಡಿರುವ ವಹಿ, ಕೊಟೇಷನ್‌ಗಳ ಕಡತ, ಸರ್ಕಾರೇತರ ಶುಲ್ಕವನ್ನು ನಿಯಮಾನುಸಾರ ಖರ್ಚು ಮಾಡಲು ಆಯವ್ಯಯ ಅನುಮೋದನೆಯ ನಡಾವಳಿಯನ್ನು ನಿರ್ವಹಣೆ ಮಾಡುವುದು.
- ವಿದ್ಯಾರ್ಥಿಗಳಿಂದ ಕಾಲಕಾಲಕ್ಕೆ ಸಂಗ್ರಹಿಸಿದ ಶುಲ್ಕವು ಕಡ್ಡಾಯವಾಗಿ ಸರ್ಕಾರದ ರಸೀದಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಒಂದು ಪ್ರತಿಯನ್ನು ವಿದ್ಯಾರ್ಥಿಗಳಿಗೆ/ಪೋಷಕರಿಗೆ ನೀಡಬೇಕು.
- ಸರ್ಕಾರಿ ರಸೀದಿ ಪುಸ್ತಕಗಳು ಅಥವಾ ಸರ್ಕಾರೇತರ ರಸೀದಿ ಪುಸ್ತಕಗಳು ಇಲ್ಲದ ಸಂದರ್ಭದಲ್ಲಿ ಅದರ ಬದಲಾಗಿ ಉಪಯೋಗಿಸುವಂತಹ ರಸೀದಿ ಪುಸ್ತಕಗಳನ್ನು ಸ್ಟಾಕ್ ಪುಸ್ತಕಕ್ಕೆ ತೆಗೆದುಕೊಂಡಿರಬೇಕು ಹಾಗೂ ಅವುಗಳ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಹಿಯಲ್ಲಿ ನಿರ್ವಹಿಸಿರಬೇಕು.
- ಸರ್ಕಾರಿ ಅಥವಾ ಸರ್ಕಾರೇತರ ಶುಲ್ಕವನ್ನು ವಸೂಲಿ ಮಾಡಿದ ನಂತರ ಅದೇ ದಿನ ತಪ್ಪಿದಲ್ಲಿ ಮಾರನೆಯ ದಿನ ಖಜಾನೆ/ಬ್ಯಾಂಕ್‌ಗೆ ಪಾವತಿಸಬೇಕು. ಬ್ಯಾಂಕ್ ಅಥವಾ ಖಜಾನೆ ದೂರವಿದ್ದಲ್ಲಿ ಕ್ಯಾಷ್ ಆನ್ ಹ್ಯಾಂಡ್ ಪುಸ್ತಕದಲ್ಲಿ ನಮೂದಿಸಿ, ಹಣವನ್ನು ಶಾಲೆಯಲ್ಲಿ ಭದ್ರವಾಗಿ ರಕ್ಷಿಸಿ ಆಯಾ ತಿಂಗಳ ಅಂತ್ಯಕ್ಕೆ ಜಮಾ ಮಾಡಬೇಕು.
- ಆರ್.ಆರ್., ಕ್ರೀಡೆ, ಗ್ರಂಥಾಲಯ, ವೈದ್ಯಕೀಯ, ದೃಕ್ ಶ್ರವಣ ಮತ್ತು ಬಡ್ಡಿಯ ಹಣವನ್ನು ಆರ್ಥಿಕ ವರ್ಷದಲ್ಲಿ ಬಳಸಿ ಇನ್ನೂ ಉಳಿದಿದ್ದಲ್ಲಿ ಮುಂದಿನ ಆರ್ಥಿಕ ವರ್ಷದಲ್ಲಿ ಖರ್ಚು ಮಾಡುವ ಪ್ರಸಂಗ ಉದ್ಭವವಾದಲ್ಲಿ ಇಲಾಖೆಯ ಲಿಖಿತ ಆದೇಶ/ಸುತ್ತೋಲೆಯ ಆಧಾರದ ಮೇಲೆ ಮಾತ್ರ ಡ್ರಾ ಮಾಡಿ ಬಳಸಬೇಕು. ಕಡತದಲ್ಲಿ ಒಂದು ಪ್ರತಿ ಆದೇಶವನ್ನು ಕಡ್ಡಾಯವಾಗಿ ಇಟ್ಟಿರಬೇಕು.
- ತಡವಾಗಿ ವರ್ಗಾವಣೆ ಪತ್ರ ನೀಡುವಾಗ ವಸೂಲಿ ಮಾಡುವಂತಹ ಸರ್ಚಿಂಗ್ ಫೀಸ್ ಅನ್ನು ನಿಯಮಾನುಸಾರ ಖಜಾನೆಗೆ ಜಮಾ ಮಾಡಿರಬೇಕು ಹಾಗೂ ಭಾಗಶಃ ದಾಖಲೆ ಹುಡುಕಿದಂತಹ ಸಹಾಯಕರಿಗೆ ನೀಡಿರಬೇಕು.

- o ಎಸ್.ಎಸ್.ಎಲ್.ಸಿ ರಿಜಿಸ್ಟ್ರೇಷನ್ ಶುಲ್ಕ, ಪರೀಕ್ಷಾ ಶುಲ್ಕ, ಪುನರಾವರ್ತಿತ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳನ್ನು ಸಂಗ್ರಹಿಸಿ ರಸೀದಿ ಪುಸ್ತಕದಲ್ಲಿ ನಮೂದಿಸಿರಬೇಕು. ವಿದ್ಯಾರ್ಥಿಗಳಿಗೆ ರಸೀದಿ ನೀಡಿರಬೇಕು. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಗೆ ಕಟ್ಟಿದಂತಹ ಡಿಡಿ ವಿವರಗಳೊಂದಿಗೆ ಇತರೆ ದಾಖಲೆಗಳನ್ನು ನಿರ್ವಹಿಸಬೇಕು.
- o ಎಸ್‌ಡಿಎಂಸಿ ಯಲ್ಲಿ ನಿಯಮಾನುಸಾರವಾಗಿ ನಡಾವಳಿಗಳಲ್ಲಿ ಸೂಚಿಸಿರುವಂತೆ ಹಣವನ್ನು ಸಾರ್ವಜನಿಕರಿಂದ ವಂತಿಗೆ ರೂಪದಲ್ಲಿ ಪಡೆದಿದ್ದಲ್ಲಿ ಸ್ಟಾಕ್‌ಗೆ ತೆಗೆದುಕೊಂಡಿರುವಂತಹ ರಸೀದಿ ಪುಸ್ತಕಗಳಿಂದ ರಸೀದಿಗಳನ್ನು ನೀಡಬೇಕು ಹಾಗೂ ಇದಕ್ಕೆ ಪೂರಕವಾದ ಕಡತ ಮತ್ತು ನಗದು ಪುಸ್ತಕ ನಿರ್ವಹಣೆ ಮಾಡಿರಬೇಕು.
- o ವಂತಿಗೆಯನ್ನು ದಾನಿಗಳು ನಿರ್ದಿಷ್ಠ ಉದ್ದೇಶಕ್ಕಾಗಿ ನೀಡಿದಲ್ಲಿ ಅಂತಹದೆ ಉದ್ದೇಶಕ್ಕಾಗಿ ಅದನ್ನು ಬಳಸಿರಬೇಕು ಹಾಗೂ ಅಂತಹ ದಾನಿಗಳಿಗೆ ಅಭಿನಂದನಾ ಪತ್ರವನ್ನು ಇಲಾಖೆಯ ಮೇಲಾಧಿಕಾರಿಗಳಿಂದ ಅಥವಾ ಮುಖ್ಯಶಿಕ್ಷಕರು ನೀಡಬೇಕು.
- o ಎಸ್‌ಡಿಎಂಸಿಯ ಮೂಲಕ ಸರ್ಕಾರದಿಂದ/ಸಾರ್ವಜನಿಕ ವಂತಿಗೆಯ ಮೂಲಕ ಯಾವುದೇ ಸಿವಿಲ್ ಕಾಮಗಾರಿಗಳು ಅಥವಾ ಶಾಲೆಗೆ ಸಾಮಗ್ರಿಗಳನ್ನು ಖರೀದಿಸಿದ್ದಲ್ಲಿ ಅದನ್ನು ಬಳಕೆ ಮಾಡಿರುವ ಬಗ್ಗೆ ಎಸ್‌ಡಿಎಂಸಿ ಯ ಸದಸ್ಯರ ಗಮನಕ್ಕೆ ತರಬೇಕು.
- o ಸರ್ಕಾರದ ಮೂಲಕ ನೀಡಿದಂತಹ ಕಾಮಗಾರಿಗಳನ್ನು ಎಸ್‌ಡಿಎಂಸಿ/ಯಾವುದೇ ಏಜೆನ್ಸಿಯ ಮೂಲಕ ನಿರ್ಮಾಣ ಮಾಡಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಪ್ಲಾನ್, ಎಸ್ಟಿಮೇಟ್, ಕಂಪ್ಲೀಷನ್ ಸರ್ಟಿಫೀಕೇಟ್ ಮತ್ತು ವ್ಯಾಲ್ಯುಯೇಷನ್ ಸರ್ಟಿಫಿಕೇಟ್ ಅಧಿಕೃತ ಅಭಿಯಂತರರಿಂದ ಪಡೆದಿರಬೇಕು. ಕೆಲವೊಮ್ಮೆ ಫೋಟೊ ದಾಖಲೆಗಳು ಅವಶ್ಯಕವಾಗಿರುತ್ತದೆ.
- o ಶಾಲೆಯ ಸಿಬ್ಬಂದಿಗೆ ವೇತನ, ವಾರ್ಷಿಕ ಬಡ್ತಿ, ಹಬ್ಬದ ಮುಂಗಡ, ಗಳಿಕೆ ರಜೆ, ಅಂಗವಿಕಲರ ಭತ್ಯೆ, ಪರ್ಸನಲ್ ಪೇ ಇತರೆ ಮತ್ತು ಕಛೇರಿಯ ಮುಖ್ಯಸ್ಥರ ವ್ಯಾಪ್ತಿಯಲ್ಲಿರುವ ವಿವಿಧ ರಜೆಗಳನ್ನು ಮಂಜೂರು ಮಾಡುವುದು ಸೇರಿದಂತೆ ವೈಯಕ್ತಿಕ ಕ್ಲೇಮ್‌ಗಳನ್ನು ಯಾವುದೇ ಕಾರಣಕ್ಕೂ ತಡ ಮಾಡಬಾರದು ಕಾಲಕಾಲಕ್ಕೆ ಮಂಜೂರು ಮಾಡಬೇಕು.
- o ಖಜಾನೆಯಿಂದ ಹಣ ಸೆಳೆಯುವ ಪ್ರಕ್ರಿಯೆಯಲ್ಲಿ ಪ್ರತ್ಯೇಕ ಡ್ರಾಯಿಂಗ್ ಕೋಡ್ ಹೊಂದಿದ್ದು, ಅದಕ್ಕೆ ಸಂಬಂಧಿಸಿದ ಪ್ರತ್ಯೇಕ ಪೇಪರ್ ಹೊಂದಿದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪೇಪರ್ ಟೋಕನ್ ಅನ್ನು ಕಛೇರಿಯ ಮುಖ್ಯಸ್ಥರ ವಶದಲ್ಲಿ ಇಟ್ಟುಕೊಂಡಿರಬೇಕು.
- o ಜಿಪಿಎಫ್ ಸಾಲಗಳ ಬಿಲ್‌ಗಳು / ಹಿಂದಿನ ಬಾಕಿ ಬಿಲ್‌ಗಳು / ವೇತನದ ಬಿಲ್‌ಗಳು ಒಮ್ಮೆ ಡ್ರಾ ಮಾಡಿದ ನಂತರ ಮತ್ತೊಮ್ಮೆ ಖಜಾನೆಯಿಂದ ಹಣ ಸೆಳೆಯುವ ಪ್ರಯತ್ನ ಅಪರಾಧವಾಗಿರುತ್ತದೆ. ಹಾಗಾಗದ ರೀತಿಯಲ್ಲಿ ಮುನ್ನೆಚ್ಚರಿಕೆ ವಹಿಸಬೇಕು.
- o ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ಮತ್ತು ವಿದ್ಯಾರ್ಥಿ ಕಲ್ಯಾಣ ನಿಧಿಗಾಗಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕದಲ್ಲಿ ಪ್ರತಿ ತರಗತಿಯಲ್ಲಿ ಅತ್ಯಂತ ಹೆಚ್ಚಿನ ಅಂಕ ಗಳಿಸಿದ ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ನಿಯಮಾನುಸಾರ ವಿದ್ಯಾರ್ಥಿ ವೇತನ ನೀಡಿ, ಅದೇ ಆರ್ಥಿಕ ವರ್ಷದಲ್ಲಿ ಶಿಕ್ಷಕರ ಕಲ್ಯಾಣ ನಿಧಿಯ ಕಛೇರಿಗೆ ತಲುಪಿಸಿ ದಾಖಲೆಗಳನ್ನು ರಕ್ಷಿಸಿಡಬೇಕು.
  - ವಿವಿಧ ಇಲಾಖೆಗಳಿಂದ ಶಾಲೆಗೆ ಮಂಜೂರಾಗಿರುವಂತಹ ವಿದ್ಯಾರ್ಥಿ ವೇತನವನ್ನು ಮುಖ್ಯ ಶಿಕ್ಷಕರ ಖಾತೆಗೆ ಜಮಾ ಮಾಡಿ ವಿದ್ಯಾರ್ಥಿಗಳಿಗೆ ನೀಡುವ ಸಂದರ್ಭದಲ್ಲಿ ಚೆಕ್ ಮೂಲಕ ಹಣ ವಿತರಿಸುವುದು ಸೂಕ್ತ. ಇದರ ಜೊತೆಗೆ ಬಟವಾಡೆ ಪುಸ್ತಕವನ್ನು ನಿರ್ವಹಿಸಬೇಕು. ವಿವಿಧ ಕಾರಣಗಳಿಂದ ವಿದ್ಯಾರ್ಥಿ ವೇತನ ವಿತರಣೆಯಾಗದೇ ಉಳಿದಿದ್ದಲ್ಲಿ ಸಂಬಂಧಿಸಿದ ಇಲಾಖೆಗೆ ಬಟವಾಡೆ ಪ್ರತಿಯ ಜೊತೆಗೆ ಹಿಂದಿರುಗಿಸಬೇಕು.
- ಮಧ್ಯಾಹ್ನ ಉಪಹಾರ ಯೋಜನಾ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸುವುದು.
- ಸರ್ಕಾರದಿಂದ ಮಕ್ಕಳಿಗೆ ನೀಡಬೇಕಾದ ಪ್ರೋತ್ಸಾಹ ಯೋಜನಾ ಅಡಿಯಲ್ಲಿ ಪಠ್ಯಪುಸ್ತಕ, ಸಮವಸ್ತ್ರ ವಿದ್ಯಾರ್ಥಿ ವೇತನಗಳನ್ನು ಸಕಾಲದಲ್ಲಿ ವಿತರಿಸಿ ಸೂಕ್ತ ದಾಖಲೆಗಳನ್ನು ಇಟ್ಟಿರಬೇಕು.
- ಇವುಗಳ ಕೊರತೆ ಇದ್ದಲ್ಲಿ ಹೆಚ್ಚಿನ ಬೇಡಿಕೆ ಸಲ್ಲಿಸುವುದು. ಹೆಚ್ಚುವರಿ ಇದ್ದಲ್ಲಿ, ಮೇಲಾಧಿಕಾರಿಗಳಲ್ಲಿ ವರದಿ ಮಾಡಿ ತಕ್ಷಣ ಹಿಂದಿರುಗಿಸುವುದು.
- ಶಾಲೆಯ ಚರಾಸ್ಥಿ / ಸ್ಥಿರಾಸ್ಥಿಗಳ ಸೂಕ್ತ ಸಂರಕ್ಷಣೆ ಹಾಗು ಇವುಗಳ ದಾಖಲೆಗಳ ಸಂರಕ್ಷಣೆ ಅತಿ ಮುಖ್ಯವಾಗಿದೆ.

**ಇತರೆ ಕಾರ್ಯಭಾರ:**

- 10ನೇ ತರಗತಿಗೆ ಖಾಸಗಿಯಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ದಾಖಲಾತಿ ವಹಿಗಳನ್ನು ನಿರ್ವಹಿಸಬೇಕು. ಆ ಸಮಯದಲ್ಲಿ ವಿದ್ಯಾರ್ಥಿಯು ಒದಗಿಸುವ ದಾಖಲೆಗಳನ್ನು [ಅಂಕಪಟ್ಟಿ / ಟಿ.ಸಿ] ಆಧರಿಸಿ ಪ್ರತ್ಯೇಕ ದಾಖಲಾತಿ ಸಂಖ್ಯೆಯನ್ನು ನೀಡಬೇಕು. ವಿದ್ಯಾರ್ಥಿಯು ಪಾಸಾಗಲೀ ಅಥವಾ ನಪಾಸಾಗಲೀ ಟಿ.ಸಿ.ಯನ್ನು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ನೀಡುವಂತೆಯೇ ವಿತರಣೆ ಮಾಡಬೇಕು.
- ಎಸ್.ಡಿ.ಎಂ.ಸಿ.ಯನ್ನು ನಿಯಮಾನುಸಾರ ರಚನೆ ಮಾಡಬೇಕು. ಇದೊಂದು ಸಂವಿಧಾನಾತ್ಮಕವಾಗಿ ರಚನೆಯಾದ ಸಮಿತಿಯಾಗಿದೆ. ಇದರಲ್ಲಿ ಮುಖ್ಯ ಶಿಕ್ಷಕರು / ಉಪಪ್ರಾಂಶುಪಾಲರು ಕಾರ್ಯದರ್ಶಿಗಳಾಗಿರುತ್ತಾರೆ.

- ಹಿರಿಯ ವಿದ್ಯಾರ್ಥಿಗಳು / ಹಳೆಯ ವಿದ್ಯಾರ್ಥಿಗಳ ಸಂಘಗಳು ಯಾವುದೇ ಸಮಯದಲ್ಲಿ ಶಾಲೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೆ ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಹಣಕಾಸಿನ ವಹಿಯನ್ನು ನಿರ್ವಹಿಸಬೇಕು.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೆ ಅನೇಕ ಸಂಘ ಸಂಸ್ಥೆಗಳ ಮೂಲಕ ಸಾಮಗ್ರಿಗಳನ್ನು [ಉದಾ : ವೀಲ್ ಚೇರ್, ಟ್ರೈಸೈಕಲ್ ಇತ್ಯಾದಿ] ಒದಗಿಸಿಕೊಡುವಲ್ಲಿ ಪ್ರಯತ್ನಿಸುವುದು.
- ಶಾಲೆಗೆ ಮಂಜೂರಾದ ನಿವೇಶನ ಹಾಗು ಆಟದ ಮೈದಾನವನ್ನು ದಾನದ ರೂಪದಲ್ಲಿ ಅಥವಾ ಸರ್ಕಾರದಿಂದ ಒದಗಿಸಿದ್ದಲ್ಲಿ ಜಮೀನಿನ ದಾಖಲೆಗಳನ್ನು ಕಛೇರಿಯ ಮುಖ್ಯಸ್ಥರು ರಕ್ಷಿಸಿಡಬೇಕು. [ಕಂದಾಯ ಹಾಗು ಭೂಮಾಪನ ಇಲಾಖೆ ಸಹಕಾರದೊಂದಿಗೆ ಪಡೆಯುವುದು.
- ಶಾಲೆಗೆ ಹೊಂದಿಕೊಂಡಂತಹ ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಶಾಸಕರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು, ರಾಜ್ಯ ಸಭೆ ಹಾಗು ಲೋಕ ಸಭಾ ಸದಸ್ಯರುಗಳ ಮೂಲಕ ಬಿಡುಗಡೆಯಾಗುವ ಅನುದಾನವನ್ನು ಪಡೆದು ಶಾಲೆಯ ಉನ್ನತಿಗೆ ಗಮನ ಹರಿಸುವುದು ಹಾಗು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಆಹ್ವಾನ ನೀಡುವುದು.
- ವಿಶೇಷ ತರಗತಿಗಳನ್ನು ನಡೆಸುವುದು.
- ಆರೋಗ್ಯ ತಪಾಸಣೆ, ವಿವರವಾಗಿ (Eye, Ear, Dental etc.) ಕೈಗೊಂಡು ಮಕ್ಕಳಿಗೆ ಉಚಿತ ವೈದ್ಯಕೀಯ ನೆರವು ಕಲ್ಪಿಸುವುದು.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು ಗುರುತಿಸಿ, ಅವರಿಗೆ ಅವಶ್ಯ ಸೌಲಭ್ಯಗಳನ್ನು ಕಲ್ಪಿಸುವುದು ಹಾಗು ಅವರನ್ನು ಪ್ರೋತ್ಸಾಹಿಸುವುದು.
- ದತ್ತು ಯೋಜನೆಗೆ ಶಾಲೆಯಿಂದ ಶಾಲೆಗೆ ಅನುಕೂಲ ಪಡೆಯುವುದು.
- ಮಕ್ಕಳಲ್ಲಿ ಸಮಾನತೆ ಮೂಡಿಸಲು ಸಮಾನ ಅವಕಾಶವನ್ನು ಕಲ್ಪಿಸುವುದು.
- ಸಮವಸ್ತ್ರ ಪಠ್ಯಪುಸ್ತಕವನ್ನು ಪಡೆದು ಪೂರೈಸುವುದು.

ಸಹಿ/–
[ಹೆಚ್.ಟಿ.ಜಯರಾಂ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.[ಪ್ರೌಢ]

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಪ್ರಕಾ/ಪ್ರಾಪ್ರೌಶಿ/ಆಶಾ/43/2010

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು – 01
ದಿನಾಂಕ: 18–02–2010

**ಸುತ್ತೋಲೆ**

ವಿಷಯ: ಮಹಿಳೆಯರ/ಬಾಲಕಿಯರ ಮೇಲೆ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಬಗ್ಗೆ.

–&&&–

1. ಶಿಕ್ಷಣ ಇಲಾಖೆಯಲ್ಲಿ ಮಹಿಳೆಯರಿಗೆ / ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿರುವ ಬಗ್ಗೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಆದ್ಯತೆ ಮೇರೆಗೆ ಗಂಭೀರ ಕ್ರಮವನ್ನು ಜರುಗಿಸುವುದು ಅಗತ್ಯವಾಗಿರುತ್ತದೆ.
ಕರ್ನಾಟಕ ಸಿವಿಲ್ ಸೇವಾ [ನಡತೆ] ನಿಯಮಗಳು, 1966ಕ್ಕೆ ದಿನಾಂಕ: 17–06–1998 ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್.14.ಎಸ್.ಆರ್.ಸಿ.97 ರಲ್ಲಿರುವಂತೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ಅಧಿಸೂಚನೆಯ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ಧರಿಸಿದೆ.

2. **Insertion of new rule 29 B**:- After rule 29A of the Karnataka Civil Services [Conduct] Rules, 1966, the following rule shall be inserted, namely:-

29ಃ. **Prohibition of sexual harassment:-** No Government Servant shall subject any woman Government servant to sexual harassment in working places".

Explanation:- For the purpose of this rule, " sexual harassment " includes such un welcome sexually determined [Whether directly or by implication] behavior as:

[a] Physical Contact and advances:
[b] A demand or request for sexual favours:
[c] Sexually coloured remarks:
[d] showing pornography : or
[e] Any other unwelcome physical, verbal or non-verbal conduct of sexual nature".

ಶಾಲಾ/ಕಾಲೇಜು/ಕಛೇರಿಯಲ್ಲಿ ಮಹಿಳೆಯರಿಗೆ ಹಾಗೂ ಬಾಲಕಿಯರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ವಿಚಾರಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಗಳ ಸಮಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೊರಡಿಸಿದ ದಿನಾಂಕ:08–06–2000 ರ ಸರ್ಕಾರಿ ಆದೇಶ ಸಂಖ್ಯೆ:ಮಮಇ..36.ಮಮ.98 ರನ್ವಯ ರಚಿಸಲಾಗಿದೆ.

ಮಹಿಳೆಯರಿಗೆ / ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಬಗ್ಗೆ ಗಮನಕ್ಕೆ ಬಂದಲ್ಲಿ ಆರೋಪಿಗಳನ್ನು ನಿಯಮಾನುಸಾರ ಈ ಕೆಳಗಿನಂತೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಈ ಮೂಲಕ ಸೂಚಿಸಿದೆ.

1. ಇಂತಹ ಆರೋಪಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವುದು.
2. ಇಲಾಖಾ ವಿಚಾರಣಾ ಕ್ರಮಗಳನ್ನು ಕೈಗೊಳ್ಳುವುದು.
3. ವಿಚಾರಣೆ ಕಾಯ್ದಿರಿಸಿ, ಅಮಾನತ್ತುಗೊಳಿಸುವುದು.
4. ವಿಚಾರಣೆ ಪೂರ್ಣಗೊಳ್ಳುವವರೆಗೆ ಅಮಾನತ್ತನ್ನು ತೆರವುಗೊಳಿಸದಿರುವುದು.
5. ವಿಚಾರಣೆಯಲ್ಲಿ ಅಪರಾಧ ಸಾಬೀತಾದಲ್ಲಿ, ಕಠಿಣ ಶಿಕ್ಷೆಗೆ ಗುರಿಪಡಿಸುವುದು.

ಈ ವಿಷಯಕ್ಕೆ ಸೂಕ್ತವಾದ ಮಹತ್ವ ನೀಡಿ, ಶಾಲಾ / ಕಾಲೇಜು / ಕಛೇರಿಯ ವಾತಾವರಣವನ್ನು ಚೆನ್ನಾಗಿ ಇಟ್ಟುಕೊಳ್ಳುವಂತೆ ಎಲ್ಲರಿಗೂ ಕಟ್ಟುನಿಟ್ಟಿನ ಎಚ್ಚರಿಕೆಯನ್ನು ನೀಡುವಂತೆ ಸೂಚಿಸಿದೆ.

ಸಹಿ/–
[ಡಾ: ರ.ಗೋ.ನಡಾದೂರ]
ಸರ್ಕಾರದ ಪ್ರಧಾನ ಕಾರ್ಯದರ್ಶಿ

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ: ಎಡಿಎಂ2/ಮಕ್ಕಳ ಸುರಕ್ಷತೆ 20/2007–08 ದಿನಾಂಕ: 10–12–2009.

ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ
ಎಲ್ಲಾ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ವಿಷಯ: ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡಗಳಲ್ಲಿ ಸುರಕ್ಷತೆ ಹಾಗು ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ. 483/2004, ದಿನಾಂಕ: 13.04.2009ರ ಆದೇಶ.
2. ಸರ್ಕಾರಿ ಪತ್ರದ ಸಂಖ್ಯೆ, ಇಡಿ 140 ಎಂಸಿಡಿ 2009 ದಿನಾಂಕ: 17.04.2009.
3. ಅಧೀಕ್ಷಕ ಇಂಜಿನಿಯರ್, ಕಟ್ಟಡ ವೃತ್ತ ಬೆಂಗಳೂರು ಇವರ ಪತ್ರ ಸಂಖ್ಯೆ. ಅಅ.ಕವೃ.ಎಇ–3:2009–10/3438 ದಿನಾಂಕ: 27.06.2009.

&&&

ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರದಲ್ಲಿನ ಎಲ್ಲಾ ಸರ್ಕಾರಿ, ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ ರಾಜ್ಯ ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ಈ ಸಂಬಂಧ ಕಟ್ಟಡಗಳ ಸುರಕ್ಷತೆ ಬಗ್ಗೆ ಹಾಗು ವಿಷಪೂರಿತ ವಸ್ತುಗಳನ್ನು ಶಾಲಾ ಆವರಣದಲ್ಲಿ ದಾಸ್ತಾನು ಮಾಡುತ್ತಿಲ್ಲವೆಂಬ ಬಗ್ಗೆ ರಾಜ್ಯ ಸರ್ಕಾರವು ಪ್ರಮಾಣ ಪತ್ರವನ್ನು ಸಲ್ಲಿಸಬೇಕೆಂಬುದಾಗಿ ತೀರ್ಪನ್ನು ನೀಡಿದ್ದು, ಈ ಸಂಬಂಧ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ಈ ಕಾರಣದಿಂದಾಗಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಅನುದಾನಿತ / ಅನುದಾನರಹಿತ ಶಾಲೆಗಳು ಮಕ್ಕಳ ಸುರಕ್ಷತೆಗೋಸ್ಕರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು, ಅದರಂತೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿರುತ್ತದೆ.

1. ಶಾಲಾ ಕಟ್ಟಡಗಳನ್ನು ನಿರ್ಮಿಸುವಾಗ ರಾಷ್ಟ್ರೀಯ ಕಟ್ಟಡ ಸಂಹಿತೆಯ ಸೂಚನೆಗಳನ್ನು ಅಳವಡಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳುವುದು.
2. ಯಾವುದೇ ಕಟ್ಟಡವನ್ನು ತೆಂಗಿನಗರಿ ಅಥವಾ ಸಂಪೂರ್ಣ ಮರದಿಂದ ನಿರ್ಮಿಸಿರುವ ಸ್ಥಳಗಳಲ್ಲಿ ಶಾಲೆಗಳಿಗೆ ಅನುಮತಿ ನೀಡಬಾರದು. ಈ ರೀತಿಯ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುತ್ತಿದ್ದಲ್ಲಿ ಅಂತಹ ಶಾಲೆಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ತಕ್ಷಣವೇ ಸೂಕ್ತ ಸುರಕ್ಷತೆಯ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲು ತಿಳಿಸುವುದು.
3. ಒಂದು ವೇಳೆ ಅನುದಾನಿತ / ಅನುದಾನರಹಿತ ಶಾಲೆಗಳಲ್ಲಿ ಇಂತಹ ಕಟ್ಟಡಗಳು ಹೊಂದಿರುವ ಶಾಲೆಗಳನ್ನು ನಡೆಸುತ್ತಿದ್ದಲ್ಲಿ ಈ ಶಾಲೆಗಳ ಅನುದಾನ ಮತ್ತು ಮಾನ್ಯತೆಯನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲು ತಿಳಿಸುವುದು.
4. ತರಗತಿಗಳು ನಡೆಯುವ ಸ್ಥಳಗಳಲ್ಲಿ ಅಡುಗೆ ತಯಾರಿಸುವ ಕಾರ್ಯವನ್ನು ಮಾಡದಿರಲು ಸೂಚಿಸಿದೆ. ಗ್ಯಾಸ್ ಸಿಲಿಂಡರ್‌ಗಳನ್ನು ತರಗತಿ ಕೋಣೆಗಳಲ್ಲಿ ಇಡುವುದಾಗಲೀ, ಸ್ವೀಕರಿಸುವುದಾಗಲೀ ಅಥವಾ ನೀಡುವುದಾಗಲಿ ಮಾಡಬಾರದೆಂದು ಸೂಚನೆಗಳನ್ನು ನೀಡಲು ತಿಳಿಸಿದೆ.
5. ವಿದ್ಯಾರ್ಥಿಗಳ ತರಗತಿ ನಡೆಯುವ ಸ್ಥಳಗಳಲ್ಲಿ ಯಾವುದೇ ವಿಷಪೂರಿತ ವಸ್ತುಗಳನ್ನು ದಾಸ್ತಾನು ಮಾಡಬಾರದೆಂದು ಸೂಚಿಸಿದೆ.
6. ಪ್ರತಿ ಶಾಲೆಗಳಲ್ಲೂ ಅವಶ್ಯಕತೆಯಿರುವಷ್ಟು ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿಕೊಳ್ಳುವುದು ಅಲ್ಲದೆ ಅಗ್ನಿಶಾಮಕ ಉಪಕರಣಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನೋಡುವ ಜೊತೆಗೆ, ಶಾಲಾ ಸಿಬ್ಬಂದಿಯವರಿಗೆ ಅಗ್ನಿಶಾಮಕ ಉಪಕರಣವನ್ನು ಉಪಯೋಗಿಸುವ ಬಗ್ಗೆ ತರಬೇತಿಯನ್ನು ನೀಡುವುದು.
7. ಒಂದು ವೇಳೆ ಶಾಲಾ ತರಗತಿಗಳು ಮಹಡಿ ಕಟ್ಟಡಗಳಲ್ಲಿ ನಡೆಯುತ್ತಿದ್ದಲ್ಲಿ, ಅಂತಹ ಶಾಲೆಗಳ ನರ್ಸರಿ ಹಾಗು 1 ಮತ್ತು 2ನೇ ತರಗತಿ ಮಕ್ಕಳನ್ನು ಕಡ್ಡಾಯವಾಗಿ ನೆಲ ಮಹಡಿಗಳಲ್ಲಿ ತರಗತಿಗಳನ್ನು ನಡೆಸಲು ಸೂಚಿಸುವುದು.
8. ಮಹಡಿ ಕಟ್ಟಡಗಳಲ್ಲಿ ಮೆಟ್ಟಿಲುಗಳು ವಿಶಾಲವಾಗಿ ಮತ್ತು ಕಟ್ಟಡದ ಎರಡೂ ಭಾಗಗಳಲ್ಲಿ ಇರುವಂತೆ ನಿರ್ಮಾಣ ಕಾರ್ಯವನ್ನು ಮಾಡುವಂತೆ ಸೂಚಿಸುವುದು. ಈಗಾಗಲೇ ನಿರ್ಮಾಣ ಕಾರ್ಯ ಮಾಡಲಾಗಿರುವ ಕಡೆಗಳಲ್ಲಿ ಮೆಟ್ಟಿಲುಗಳು ಇಲ್ಲದಿದ್ದಲ್ಲಿ, ಕಟ್ಟಡದ ಎರಡೂ ಕಡೆಗಳಲ್ಲಿ ವಿಶಾಲವಾದ ಮತ್ತು ತಡೆಗೋಡೆಗಳನ್ನು ಹೊಂದಿರುವಂತಹ ಮೆಟ್ಟಿಲುಗಳನ್ನು ನಿರ್ಮಾಣ ಮಾಡಲು ತಿಳಿಸುವುದು.
9. ಮಹಡಿ ಕಟ್ಟಡಗಳು ಇರುವ ಶಾಲೆಗಳ ಕೊಠಡಿಗಳ ಮುಂಭಾಗದಲ್ಲಿ ಓಡಾಡಲು ವಿಶಾಲವಾದ ಜಾಗಗಳನ್ನು ಬಿಡುವುದು ಹಾಗು ತಡೆಗೋಡೆಗಳನ್ನು ನಿರ್ಮಿಸುವುದು. ಯಾವುದೇ ವಿದ್ಯಾರ್ಥಿಯು ಮಹಡಿ ಕಟ್ಟಡಗಳಿಂದ

ಕೆಳಗೆ ಬೀಳಲು ಅವಕಾಶವಿರುವಂತಹ ಕಡೆ ತಡೆಗೋಡೆಗಳನ್ನು ನಿರ್ಮಿಸುವುದು ಕಡ್ಡಾಯ. ಒಂದು ವೇಳೆ ತಡೆ ಗೋಡೆ ನಿರ್ಮಿಸದಿದ್ದಲ್ಲಿ ಗ್ರಿಲ್‌ಗಳನ್ನು ಅಳವಡಿಸಿ ಸುರಕ್ಷತೆ ಕಾಪಾಡಲು ಸೂಚಿಸುವುದು.

10. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಉಪನಿರ್ದೇಶಕರು ಯಾವುದೇ ಹೊಸ ಶಾಲೆಗೆ ಅನುಮತಿಯನ್ನು ನೀಡುವಾಗ ಅಂತಹ ಆಡಳಿತ ಮಂಡಳಿಗಳು ಸುರಕ್ಷತೆವುಳ್ಳ ಹಾಗು ರಾಷ್ಟ್ರೀಯ ಕಟ್ಟಡ ಸಂಹಿತೆ ಅನುಸಾರ ಕಟ್ಟಡ ಅಗತ್ಯ ಎಂಬುದನ್ನು ಪರಿಶೀಲಿಸಿ ಅನುಮತಿ ನೀಡುವುದು. ಮತ್ತು ಅನುದಾನಕ್ಕೆ ಒಳಪಡಿಸುವ ಪೂರ್ವದಲ್ಲಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅನುದಾನಕ್ಕೆ ಶಿಫಾರಸ್ಸು ಮಾಡುವುದು.
11. ಈ ಕಛೇರಿಯಿಂದ ಕಾಲಕಾಲಕ್ಕೆ ಶಾಲಾ ಮಕ್ಕಳ ಸುರಕ್ಷತೆ ಬಗ್ಗೆ ನೀಡಿರುವ ಸೂಚನೆಗಳನ್ನು ಒಳಗೊಂಡಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು.
12. ಯಾವುದೇ ಒಂದು ಆಡಳಿತ ಮಂಡಳಿಯು, ಇಲಾಖೆಯು ಮಕ್ಕಳ ಸುರಕ್ಷತೆಗಾಗಿ ನೀಡುವ ಯಾವುದೇ ಸುತ್ತೋಲೆಗಳನ್ನು / ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಸಂಸ್ಥೆಗಳ ಮೇಲೆ ಮಾನ್ಯತೆ ರದ್ದುಪಡಿಸಲು ಕ್ರಮಕೈಗೊಳ್ಳವುದು, ಮತ್ತು ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಉಪನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡಿ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಿದೆ.

ಸಹಿ/–
(ಡಿ.ಎಸ್.ರಾಜಣ್ಣ]
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

1. ಪ್ರತಿಯನ್ನು ಗೌರವಪೂರ್ವಕವಾಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ) ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 142 ಯೋಯೋಕ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು

ದಿನಾಂಕ: 21–02–2009.

**: ಸುತ್ತೋಲೆ :**

ವಿಷಯ : ಕಲಿಕೆಯಲ್ಲಿ ನ್ಯೂನತೆಯಿರುವ ಡಿಸ್‌ಲೆಕ್ಸಿಯಾ ಇರುವ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ.

ಉಲ್ಲೇಖ : ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 03 ಯೋಯೋಕ 2007, ದಿನಾಂಕ: 21–01–2008.

*********

ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಪರೀಕ್ಷಾ ಮಂಡಳಿಯು ನಡೆಸುತ್ತಿರುವ 10ನೇ ತರಗತಿಯ ಪರೀಕ್ಷೆಯಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯವನ್ನು 1 ರಿಂದ 10ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಮತ್ತು ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಕಿವುಡು ಮತ್ತು ಮೂಗ, ಕಲಿಕಾ ನ್ಯೂನತೆ ಮತ್ತು ಬುದ್ಧಿಮಾಂದ್ಯ ಮಕ್ಕಳಿಗೆ ನೀಡಲು ಸೂಚಿಸಲಾಗಿದೆ. ಮುಂದುವರೆದು, ಕಲಿಕೆಯಲ್ಲಿ ನ್ಯೂನತೆಯಿರುವ, ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಸಿಯಾ ಮಕ್ಕಳಿಗೆ 1 ರಿಂದ 10 ತರಗತಿಯವರೆಗೆ ನಡೆಯುವ ಎಲ್ಲಾ ಪರೀಕ್ಷೆಗಳಲ್ಲಿ ಪರೀಕ್ಷಾ ಸಂದರ್ಭದಲ್ಲಿ ಸರಳ ಕಲನ (calculator) ಯಂತ್ರಗಳನ್ನು (ಕ್ಯಾಲ್ಕ್ಯುಲೇಟರ್) ತಂದಲ್ಲಿ ಉಪಯೋಗಿಸಲು ಅನುಮತಿ ನೀಡುವ್ವದು.

ಇಂತಹ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಒದಗಿಸುವುದು.

- ನಾಮಪದಗಳು, ಸರ್ವನಾಮಗಳು, ನಿರ್ದಿಷ್ಟ ನಾಮಪದಗಳನ್ನು (ಪ್ರಾಪರ್‌ನೌನ್ಸ್) ಹೊರತುಪಡಿಸಿ ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ಉಚ್ಛಾರಣಾ ದೋಷಗಳನ್ನು ಪರಿಗಣಿಸದಿರುವಂತೆ ಮೌಲ್ಯಮಾಪಕರಿಗೆ ಸೂಚನೆಗಳನ್ನು ನೀಡುವುದು.

ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ 1 ರಿಂದ 9ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಡಿಸ್‌ಲೆಕ್ಸಿಯಾ ವಿದ್ಯಾರ್ಥಿಗಳಿಗೆ, ಮೌಖಿಕ ಮತ್ತು ಲಿಖಿತ ಪರೀಕ್ಷೆಯಲ್ಲಿ ಈ ಕೆಳಕಂಡಂತೆ ಅಂಕ ಪ್ರಮಾಣ ನೀಡತಕ್ಕದ್ದು.

| ಹಂತ | ಗುರುತ್ವ (Weightage) | |
|---|---|---|
| | ಮೌಖಿಕ ಪರೀಕ್ಷೆ | ಲಿಖಿತ ಪರೀಕ್ಷೆ |
| ತರಗತಿ 1 ಮತ್ತು 2 | 100 | – |
| ತರಗತಿ 3 ಮತ್ತು 4 | 75 | 25 |
| ತರಗತಿ 5, 6 ಮತ್ತು 7 | 50 | 50 |
| ತರಗತಿ 8 ಮತ್ತು 9 | 30 | 70 |

ಸಹಿ/–

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,
ಶಿಕ್ಷಣ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 142 ಯೋಯೋಕ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಬೆಂಗಳೂರು
ದಿನಾಂಕ: 06–07–2009.

**: ಸುತ್ತೋಲೆ :**

ವಿಷಯ : ಕಲಿಕೆಯಲ್ಲಿ ನ್ಯೂನತೆಯಿರುವ ಡಿಸ್‌ಲೆಕ್ಸಿಯಾ ಇರುವ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ವಿಶೇಷ ಸೌಲಭ್ಯ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 32 ಯೋಯೋಕ 2007, ದಿನಾಂಕ: 21–01–2008.
2. ಸಮಸಂಖ್ಯೆ: ಸುತ್ತೋಲೆ, ದಿನಾಂಕ: 21–02–2009.

* * *

ಉಲ್ಲೇಖಿತ ಸುತ್ತೋಲೆಯಲ್ಲಿ ಪರೀಕ್ಷಾ ಮಂಡಳಿಯವರು ನಡೆಸುತ್ತಿರುವ 10ನೇ ತರಗತಿಯ ಪರೀಕ್ಷೆಯಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯವನ್ನು, 1 ರಿಂದ 10ನೇ ತರಗತಿಯವರೆಗೆ ಎಲ್ಲಾ ಹಂತಗಳಲ್ಲಿ ಮತ್ತು ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಮೂಗ, ಕಲಿಕಾ ನ್ಯೂನತೆ ಮತ್ತು ಬುದ್ಧಿಮಾಂದ್ಯ ಮಕ್ಕಳಿಗೆ ನೀಡಲು ಸೂಚಿಸಲಾಗಿದೆ.

ಮುಂದುವರೆದು, ಕಲಿಕೆಯಲ್ಲಿ ನ್ಯೂನತೆಯಿರುವ, ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಸಿಯಾ ಮಕ್ಕಳಿಗೆ, 1 ರಿಂದ 10 ತರಗತಿಯವರೆಗೆ ನಡೆಯುವ ಎಲ್ಲಾ ಪರೀಕ್ಷೆಗಳಲ್ಲಿ ಸರಳ ಕಲನ (calculator) ಉಪಯೋಗಿಸಲು, ಸಹಾಯಕರನ್ನು ಒದಗಿಸಲು ಅನುಮತಿ ಹಾಗೂ ಸಣ್ಣಪುಟ್ಟ ದೋಷಗಳನ್ನು ಪರಿಗಣಿಸದಿರುವಂತೆ ಸೂಚಿಸಲಾಗಿದೆ.

ಮುಂದುವರೆದು, ಈ ಕೆಳಕಂಡ ಕಲಿಕೆಯಲ್ಲಿ ನ್ಯೂನತೆಯಿರುವ ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲಾ ಶಾಲೆಗಳಲ್ಲಿ ಓದುತ್ತಿರುವ ಡಿಸ್‌ಲೆಕ್ಸಿಯಾ ಮಕ್ಕಳಿಗೆ ವಿಶೇಷ ಸೌಲಭ್ಯ ದೃಢೀಕರಣ ನೀಡುವಲ್ಲಿ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು.

1. ಕಲಿಕೆಯಲ್ಲಿ ನ್ಯೂನತೆಯಿರುವ ವಿದ್ಯಾರ್ಥಿಗಳು ಕೆಳಕಂಡ ಸಂಸ್ಥೆಗಳು ದೃಢೀಕರಿಸಿದಲ್ಲಿ ಅದನ್ನು ಪರಿಗಣಿಸುವುದು.
    - ನಿಮ್ಹಾನ್ಸ್.
    - ಅಖಿಲ ಭಾರತ ದೃಕ್ – ಶ್ರವಣ ಸಂಸ್ಥೆ ಮೈಸೂರು.
    - ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರ.
    - ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆಯನ್ನು ಹೊಂದಿರುವ ಕ್ಲಿನಿಕಲ್ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇರದ ಸರ್ಕಾರಿ ವೈದ್ಯರು ದೃಢೀಕರಿಸಿದ ಪ್ರಮಾಣ ಪತ್ರ.
    - ಮಲ್ಲೇಶ್ವರಂ ಡಿಸ್‌ಲೆಕ್ಸಿಯಾ ಅಸೋಸಿಯೇಷನ್ (ರಿ) ನಂ. 103, ಶರ್ನಾಗ್ ಅಪಾರ್ಟ್‌ಮೆಂಟ್, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55 ರವರು ನೀಡುವ ಪ್ರಮಾಣ ಪತ್ರ.

44

2. ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಡಿಸ್‌ಲೆಕ್ಸಿಯಾ / ಸ್ಪಾಸ್ಟಿಕ್ ಎಂದು ಮುದ್ರಿಸಿ ನೀಡುವ ಬದಲು ಅಭ್ಯರ್ಥಿಗೆ ಇರುವ ಕಲಿಕಾ ನ್ಯೂನತೆ ದೋಷವನ್ನು ಮಾತ್ರ (Specific Learning Disability) ಎಂದು ಮುದ್ರಿಸಿ ನೀಡುವುದು. ಈ ಸೌಲಭ್ಯವನ್ನು ಪಡೆಯಲು ವಿದ್ಯಾರ್ಥಿಗಳ ಇರುವ ಕಲಿಕಾ ನ್ಯೂನತೆ ದೋಷದ (Specific Learning Disability) ಪ್ರಮಾಣ ಪತ್ರಗಳನ್ನು 2009 – 10ರ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಈ ಸುತ್ತೋಲೆಯನ್ನು ಹೊರಡಿಸಿದ ಒಂದು ತಿಂಗಳೊಳಗೆ 9 ಅಥವಾ 10ನೇ ತರಗತಿ ವಿದ್ಯಾರ್ಥಿಗಳು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಮೂಲಕ ಸಲ್ಲಿಸತಕ್ಕದ್ದು. ಮುಂದಿನ ಶೈಕ್ಷಣಿಕ ವರ್ಷದಿಂದ

9ನೇ ತರಗತಿಯ ಪ್ರಾರಂಭದ ದಿನದಲ್ಲಿಯೇ ನೀಡುವುದು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಅದಕ್ಕೆ ಲಗತ್ತಿಸಿ ಕಳುಹಿಸುವುದು. ಆದರೆ 2009ರ ಮಾರ್ಚ್ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ. ಅಂಕಪಟ್ಟಿಗಳು ಈಗಾಗಲೇ ವಿತರಣೆಯಾಗಿದ್ದು, ಅಂಕಪಟ್ಟಿಯ ಮೇಲೆ ಡಿಸ್‌ಲೆಕ್ಸಿಯಾ / ಸ್ಪಾಸ್ಟಿಕ್ ಎಂದು ನಮೂದಿಸಲಾಗಿದೆ. ವಿದ್ಯಾರ್ಥಿಗಳು / ಪೋಷಕರು (Specific Learning Disability) ಎಂದು ಮರು ಮುದ್ರಿಸಿಕೊಡಲು ಶಾಲೆ ಮುಖಾಂತರ ಮಂಡಳಿಯನ್ನು ರೂ. 200–00 ಗಳ ಶುಲ್ಕದೊಂದಿಗೆ ಮೂಲ ಪ್ರಮಾಣ ಪತ್ರವನ್ನು ಮಂಡಳಿಗೆ ಹಿಂದಿರುಗಿಸಿದಲ್ಲಿ ಅಂತಹವರಿಗೆ (Specific Learning Disability) ಎಂದು ಮುದ್ರಿಸಿ ಪರಿಷ್ಕೃತ ಪ್ರಮಾಣ ಪತ್ರವನ್ನು ನೀಡುವುದು.

3. ದೃಷ್ಟಿಮಾಂದ್ಯ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನದ ಬದಲು ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ, ಭಾರತೀಯ ಅರ್ಥಶಾಸ್ತ್ರ, ಭಾರತೀಯ ಸಮಾಜ ಶಾಸ್ತ್ರ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಇವುಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ತೆಗೆದುಕೊಂಡು ಪರೀಕ್ಷೆ ಬರೆಯಲು ಅನುಮತಿಸಲಾಗಿದೆ. ಈ ಸೌಲಭ್ಯವನ್ನು ಕಲಿಕಾ ನ್ಯೂನತೆ ಇರುವ ಮಕ್ಕಳಿಗೂ ಸಹ ವಿಸ್ತರಿಸಲಾಗಿದೆ.

ಸಹಿ/–
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ,
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕಲಿಕೆಯಲ್ಲಿ ನ್ಯೂನತೆ ಇರುವ ಅಂಗವಿಕಲ ಮಕ್ಕಳು ಒಂದೇ ಭಾಷೆಯನ್ನು ಮಾತ್ರ ಅಧ್ಯಯನ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂ: ಸಕಕಾ 79 ಪಿಹೆಚ್‌ಪಿ 78 ದಿ: 16:18–1–78
2) ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿ: 30–06–92
3) ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರ ಪತ್ರದ ಸಂ: ನಿಅಕಿ:ಭಾವಿ:93–04/2000 ದಿನಾಂಕ: 17–12–99.

ಪ್ರಸ್ತಾವನೆ:–

ಮೇಲೆ ಓದಲಾದ (1) ಮತ್ತು (2) ರ ಸರ್ಕಾರದ ಆದೇಶಗಳಲ್ಲಿ, ಮಾನ್ಯತೆ ಪಡೆದ ಶಾಲೆಗಳಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕೆಯಲ್ಲಿ ತೊಂದರೆಯಿರುವ ಮಕ್ಕಳು ಅಂದರೆ, ಲರ್ನಿಂಗ್ ಡಿಸೆಬಿಲಿಟಿ ಇರುವವರಿಗೆ ಅಲ್ಲದೆ, ಬುದ್ಧಿಮಾಂದ್ಯ ಮಕ್ಕಳಿಗೂ ಸಹ ಎಲ್ಲಾ ಹಂತಗಳಲ್ಲಿ ಒಂದೇ ಒಂದು ಭಾಷೆಯನ್ನು ಕಲಿಯಲು ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆಗಳ ಅಭ್ಯಾಸದಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಕೆಲವು ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಇಂತಹ ಮಕ್ಕಳು ಮೊದಲನೆ ಭಾಷೆ ಸಹ ಕಲಿಯಬೇಕಾಗಿದ್ದು, ಎರಡೂ ಭಾಷೆಗಳನ್ನು ಕಲಿಯಲು ಸಾಧ್ಯವಾಗದೇ ತೊಂದರೆಯಾಗುತ್ತಿರುವುದರಿಂದ ದ್ವಿತೀಯ, ತೃತೀಯ ಭಾಷೆ ಎಂದು ನಿರ್ಬಂಧಪಡಿಸದೇ ಶಿಕ್ಷಣ ಮಾಧ್ಯಮ ಭಾಷೆಯನ್ನು ಮಾತ್ರ ಕಲಿಯಲು ಅವಕಾಶ ನೀಡುವಂತೆ ನಿರ್ದೇಶಕರು, ಮೇಲೆ ಓದಲಾದ (3) ರ ಪತ್ರದಲ್ಲಿ ಕೋರಿರುತ್ತಾರೆ.

ಈ ಬಗ್ಗೆ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ಮೇಲೆ ಸೂಚಿಸಿರುವ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಹೊರೆಯಾಗದಿರುವುದು ಅಗತ್ಯವಿದೆ. ಆದ್ದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂ: ಮಮ 65 ಪಿಹೆಚ್‌ಪಿ 2000, ಬೆಂಗಳೂರು, ದಿನಾಂಕ: 10–03–2000 ಸರ್ಕಾರದ ಆದೇಶ ಸಂ: ಸಕಕಾ 141 ಪಿಹೆಚ್‌ಪಿ 92 ದಿನಾಂಕ: 30–06–92 ರ ಆದೇಶವನ್ನು ಮಾರ್ಪಡಿಸಿ, ಮಾನ್ಯತೆ ಪಡೆದ ಶಾಲೆಯಲ್ಲಿ ಓದುತ್ತಿರುವ ಕಿವುಡ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ಮಕ್ಕಳು ಶಿಕ್ಷಣ ಮಾಧ್ಯಮ ಭಾಷೆಯೊಂದನ್ನು ಮಾತ್ರ ಕಲಿಯಲು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/–

ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ –ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡಗಳು**
**ಕೆ. ಆರ್. ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು– 560001**

**ಸಂಖ್ಯೆ ಆರ್.ಎಂ.ಎಸ್.ಎ./42/ಬ್ಯಾಂಕ್ ಖಾತೆ/ 2009–10** **ದಿನಾಂಕ: 11.10.1012**

**ಗೆ,**

**ಉಪನಿರ್ದೇಶಕರು(ಆಡಳಿತ)**

**ಜಿಲ್ಲೆ**

**ಮಾನ್ಯರೇ,**

**ವಿಷಯ: 2012–13ನೇ ಸಾಲಿನ ಚಟುವಟಿಕೆಗಳ ಅನುಷ್ಠಾನ ಕುರಿತಂತೆ**

**ಉಲ್ಲೇಖ:ಕೇಂದ್ರ ಸರ್ಕಾರದ ಪತ್ರ ಸಂಖ್ಯೆ** No.F1-71/2012RMSA-1(A), GOI, MHRD,Department of school education and literacy, New Delhi, dated 17th September 2012

2012–13ನೇ ಸಾಲಿಗೆ ಜಿಲ್ಲಾಹಂತದಿಂದ ಯೋಜನೆಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸಲಾಗಿತ್ತು ಯೋಜನೆಗಳನ್ನು ಪರಿಶೀಲಿಸಿದ ಕೇಂದ್ರ ಸರ್ಕಾರವು 2012–13ನೇ ಸಾಲಿಗೆ ಅನುಮೋದಿಸಿರುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು ಈ ಮುಂದೆ ತಿಳಿಸಿರುವಂತೆ ಕ್ರಮವಹಿಸಲು ಮಾರ್ಗಸೂಚಿ ನೀಡಲಾಗಿದೆ.

1. **8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನು ಉನ್ನತೀಕರಿಸುವ ಬಗ್ಗೆ.**
   ಜಿಲ್ಲೆಗಳಿಂದ ಬಂದಿದ್ದ ಪ್ರಸ್ತಾವನೆಗಳನ್ನಾಧರಿಸಿ 146 ಶಾಲೆಗಳನ್ನು ಉನ್ನತೀಕರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಕೇಂದ್ರ ಸರ್ಕಾರವು 2012–13ನೇ ಸಾಲಿಗೆ ಯಾವುದೇ ಶಾಲೆಗಳನ್ನು ಉನ್ನತೀಕರಿಸಿರುವುದಿಲ್ಲ.

2. **ಶಾಲೆಗಳ ಬಲವರ್ಧನೆ:–**
   ಹಾಲಿ ಪ್ರೌಢಶಾಲೆಗಳ ಬಲವರ್ಧನೆಗಾಗಿ ಜಿಲ್ಲೆಗಳಿಂದ ಪ್ರಸ್ತಾವನೆ ಪಡೆದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. 2012–13ನೇ ಸಾಲಿಗೆ ಕೇಂದ್ರ ಸರ್ಕಾರವು ಯಾವುದೇ ಶಾಲೆಗಳ ಬಲವರ್ಧನೆಯನ್ನು ಅನುಮೋದಿಸಿರುವುದಿಲ್ಲ. ಒಟ್ಟಾರೆ **ಸಿವಿಲ್ ಕಾಮಗಾರಿಗಳು ಇರುವ ಯಾವುದೇ ಕಾರ್ಯ ಚಟುವಟಿಕೆ 2012–13ನೇ ಸಾಲಿಗೆ ಅನುಮೋದನೆಯಾಗಿರುವುದಿಲ್ಲ.**

3. **10ನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ:–**
   2011–12ನೇ ಸಾಲಿನಲ್ಲಿ ಈ ಕಾರ್ಯ ಚಟುವಟಿಕೆಯನ್ನು ಅನುಷ್ಠಾನಗೊಳಿಸಿದ್ದು ಈ ಸಂಬಂಧ ಹೊರಡಿಸಿರುವ ಮಾರ್ಗಸೂಚಿಯನ್ನು 2012–13ನೇ ಸಾಲಿಗೂ ಅನುಸರಿಸಲು ತಿಳಿಸಿದೆ. ಜಿಲ್ಲಾವಾರು ವಿದ್ಯಾರ್ಥಿಗಳ ಸಂಖ್ಯೆಯನ್ನು ಲಗತ್ತಿಸಿದ್ದು ಇದನ್ನು ಪರಿಶೀಲಿಸಿ ನಿಖರ ಸಂಖ್ಯೆಯನ್ನು 25.10.2012ರ ಒಳಗೆ ಈ ಕಛೇರಿಗೆ ಈ ಪತ್ರದೊಂದಿಗೆ ನೀಡಿರುವ ನಮೂನೆಯಲ್ಲಿ ಸಲ್ಲಿಸಿದಲ್ಲಿ ಅನುದಾನವನ್ನು ಬಿಡುಗಡೆ.
   ಮಾಡಲಾಗುವುದು ಶೈಕಣಿಕ ಪ್ರವಾಸವನ್ನು ಡಿಸೆಂಬರ್ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸುವ ಬಗ್ಗೆ ನೀಲನಕ್ಕೆಯನ್ನು ಹಾಗೂ ಸೂಕ್ತ ಪೂರ್ವಸಿದ್ಧತೆಯನ್ನು (ಕೆ.ಎಸ್.ಆರ್.ಟಿ.ಸಿ ಬಸ್ ಕಾಯ್ದಿರಿಸುವುದು ಇತ್ಯಾದಿ) ನಡೆಸುವುದು.
   2011–12ನೇ ಸಾಲಿನಲ್ಲಿ ಕೆಲವು ಮುಖ್ಯ ಶಿಕ್ಷಕರ ಮೇಲೆ ಹೆಚ್ಚುವರಿಯಾಗಿ ಹಣ ವಸೂಲಿ ಮಾಡಿರುವ ಬಗ್ಗೆ ದೂರುಗಳು ಬಂದಿದ್ದು ಶಿಸ್ತಿನ ಕ್ರಮವನ್ನು ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಶಿಕ್ಷಕರು ನಿಯಮಾನುಸಾರ ಕ್ರಮವಹಿಸಲು ಸೂಚನೆ ನೀಡುವುದು.

| **ಕ್ರಮ ಸಂಖ್ಯೆ** | **ತಾಲ್ಲೂಕಿನ ಹೆಸರು** | **10ನೇ ತರಗತಿ ಮಕ್ಕಳ ಸಂಖ್ಯೆ** | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |

4. **ಶಾಲಾನುದಾನ:–**
   ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಗಳು ವೆಚ್ಚ ಅಗಿರುವ ಬಗ್ಗೆ ಮತ್ತು ಉಳಿಕೆಯಾಗಿರುವ ಬಗ್ಗೆ ಶಾಲಾವಾರು ವಿವರವನ್ನು ಪಡೆದು ಸಲ್ಲಿಸುವುದು. ಮಾಹಿತಿ ಬಂದ ನಂತರ 2012–13ನೇ ಸಾಲಿನ ಅನುದಾನ ಬಿಡುಗಡೆ ಮಾಡಲಾಗುವುದು (ನಮೂನೆ–2)
   2012–13ನೇ ಸಾಲಿಗೂ ಶಾಲಾ ಅನುದಾನ ಮಂಜೂರಾಗಿರುತ್ತದೆ. ಈ ಅನುದಾನ ಈ ಮುಂದೆ ಕಾಣಿಸಿರುವ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾಗಿರುತ್ತದೆ. ಈ ಅನುದಾನವನ್ನು ಪ್ರಯೋಗಾಲಯ ಉಪಕರಣಗಳ ರಿಪೇರಿ, ಖರೀದಿ ಪ್ರಯೋಗಗಳನ್ನು ಮಾಡಲು ಬೇಕಾದ ಸಾಮಗ್ರಿಗಳ ಖರೀದಿ, (ರಸಾಯನಿಕಗಳು ಸ್ಪಿರಿಟ್, ಮುಂತಾದವು)

ಗ್ರಂಥಾಲಯಕ್ಕೆ ಪುಸ್ತಕಗಳು ಮತ್ತು ನಿಯತಕಾಲಿಕಗಳ ಖರೀದಿ, ವಿದ್ಯುಚ್ಛಕ್ತಿ ಬಿಲ್ ಪಾವತಿ, ಡಾಟಾ ಕಾರ್ಡ್ ಖರೀದಿ, ಕ್ರೀಡೋಪಕರಣಗಳ ಖರೀದಿ, ಸಂಗೀತೋಪಕರಣಗಳ ಖರೀದಿ, ಚಿತ್ರಕಲೆ ಶಿಕ್ಷಕರಿದ್ದಲ್ಲಿ ಅದಕ್ಕೆ ಸಂಬಂಧಿಸಿದ ಸಾಮಗ್ರಿಗಳು. ಎಲ್ಲಾ ವಿಷಯಗಳಿಗೆ ಕಲಿಕೋಪಕರಣಗಳು, ಶಾಲೆ ನಿರ್ವಹಣೆಗೆ ಬೇಕಾದ ಲೇಖನ ಸಾಮಗ್ರಿಗಳು, ಪ್ರಯೋಗಾಲಯ ಹಾಗೂ ಗ್ರಂಥಾಲಯಗಳ ನಿರ್ವಹಣೆಗೆ ಬೇಕಾದ ಪೀಠೋಪಕರಣಗಳನ್ನು ಖರೀದಿಸಬಹುದಾಗಿದೆ. ಈ ಅನುದಾನವನ್ನು ನೀಡುವಾಗ ಮುಖ್ಯಶಿಕ್ಷಕರಿಗೆ ನೀಡುವ ಬಿ.ಎಸ್.ಎನ್.ಎಲ್ ಸಿಮ್ ಕಾರ್ಡ್ ಬಳಕೆ ವೆಚ್ಚವನ್ನು ಕಟಾಯಿಸಲಾಗುವುದು.

**5. ಸಣ್ಣ ಪ್ರಮಾಣದ ದುರಸ್ಥಿ ಅನುದಾನ:–**

ಹಿಂದಿನ ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನಗಳು ವೆಚ್ಚ ಆಗಿರುವ ಬಗ್ಗೆ ಮತ್ತು ಉಳಿಕೆಯಾಗಿರುವ ಬಗ್ಗೆ ಶಾಲಾವಾರು ವಿವರವನ್ನು ಪಡೆದು ಸಲ್ಲಿಸುವುದು. ಮಾಹಿತಿ ಬಂದ ನಂತರ 2012–13ನೇ ಸಾಲಿನ ಅನುದಾನ ಬಿಡುಗಡೆ ಮಾಡಲಾಗುವುದು (ನಮೂನೆ–3)

ಈ ಮೇಲಿನ ಅಂಶಗಳನ್ನು ಶಾಲೆ ವಸ್ತುಸ್ಥಿತಿಯನ್ನಾಧರಿಸಿ ಅವಶ್ಯಕತೆಗಳನ್ನು ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಸದಸ್ಯರ ಸಭೆಯಲ್ಲಿ ತೀರ್ಮಾನಿಸಬೇಕು. ಏಕಪಕ್ಷೀಯ ತೀರ್ಮಾನಗಳಿಗೆ ಅವಕಾಶ ವಿರುವುದಿಲ್ಲ. ಈ ರೀತಿ ಏಕಪಕ್ಷೀಯವಾಗ ಎಸ್.ಡಿ.ಎಂ.ಸಿ ಅನುಮೋದನೆ ಮತ್ತು ಶಿಕ್ಷಕರಿಂದ ಬೇಡಿಕೆ ಪಡೆಯದೆ ಖರೀದಿ ಮಾಡಿರುವುದು ಆಡಿಟ್ ಸಂದರ್ಭದಲ್ಲಿ ಕಂಡುಬಂದಲ್ಲಿ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು.

ಈ ಅನುದಾನವನ್ನು ಶಾಲಾ ಕಟ್ಟಡದ ದುರಸ್ಥಿ, ಶೌಚಾಲಯದ ದುರುಸ್ತಿ, ಆಟದ ಮೈದಾನದ ದುರಸ್ತಿ, ಕಂಪ್ಯೂಟರ್ ದುರಸ್ತಿ, ವಿದ್ಯುತ್ ಉಪಕರಣಗಳು, ವೈಟ್ ವಾಷಿಂಗ್, ಶಾಲೆಯನ್ನು ಅಕರ್ಷಣೆಯವಾಗಿ ಮಾಡುವುದು, ಶೌಚಾಲಯಕ್ಕೆ ಬೇಕಾದ ಸಾಮಗ್ರಿಗಳ ಜೋಡಣೆ ಪೀಠೋಪಕರಣಗಳ ರಿಪೇರಿಗಳಿಗೆ ಬಳಸಬಹುದು. ಮೇಲ್ಕಂಡ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ದಿನಾಂಕ: 30.10.2012ರೊಳಗೆ ಈ ಕಛೇರಿಗೆ ಸಲ್ಲಿಸುವುದು.

**ಶಾಲಾ ಅನುದಾನ (ನಮೂನೆ–2)**

ಜಿಲ್ಲೆಯ ಹೆಸರು:–

| ಕ್ರ. ಸಂ | ತಾಲ್ಲೂಕು | ಶಾಲೆಯ ಹೆಸರು | ಬಿಡುಗಡೆ ಆಗಿರುವ ಅನುದಾನ | | | ಉಳಿಕೆ 30–09–2012 ರಲ್ಲಿ ಪಾಸ್ ಬುಕ್ ನಲ್ಲಿದ್ದಂತೆ | ಉಳಿಕೆ 30.09.2012 ರಂದು ನಗದು ಹಣ |
|---|---|---|---|---|---|---|---|
| | | | 2009–10 ರೂ 40000/– | 2010–11 ರೂ 50000/– | 2011–12 ರೂ 50000/– | | |
| | | | | | | | |

**ಸಣ್ಣ ಪ್ರಮಾಣದ ಅನುದಾನ (ನಮೂನೆ–3)**

**ಜಿಲ್ಲೆಯ ಹೆಸರು:–**

| ಕ್ರ. ಸಂ | ತಾಲ್ಲೂಕು | ಶಾಲೆಯ ಹೆಸರು | ಬಿಡುಗಡೆ ಆಗಿರುವ ಅನುದಾನ | | | ಉಳಿಕೆ 30–09–2012ರಲ್ಲಿ ಪಾಸ್ ಬುಕ್ ನಲ್ಲಿದ್ದಂತೆ | ಉಳಿಕೆ 30.09.2012 ರಂದು ನಗದು ಹಣ |
|---|---|---|---|---|---|---|---|
| | | | 2009–10 ರೂ 25000/– | 2010–11 ರೂ 25000/– | 2011–12 ರೂ 25000/– | | |
| | | | | | | | |

ವಂದನೆಗಳೊಂದಿಗೆ.

ತಮ್ಮ ನಂಬುಗೆಯ

ಸಹಿ/–
ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು– 560 001**

**ಸಂಖ್ಯೆ : ಸಿ7[2]/ಪ್ರಾ.ಶಿ.ಅ.ಹೊ.ಶಾ.ಅನು.01/2011–12** **ದಿನಾಂಕ :24/04/2013.**

**: ಸುತ್ತೋಲೆ :**

**ವಿಷಯ:–ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರಂತೆ 8 ನೇ ತರಗತಿಯನ್ನು ಪ್ರಾರಂಭಿಸುವ ಕುರಿತು.**
**ಉಲ್ಲೇಖ:–ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆಯ ದಿನಾಂಕ:18/02/2013 ಮತ್ತು 5/04/2013.**

*********

**ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರಂತೆ 8 ನೇ ತರಗತಿಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಸುವ ಬಗ್ಗೆ ಉಲ್ಲೇಖದಲ್ಲಿ ತಿಳಿಸಿರುವಂತೆ ಸುತ್ತೋಲೆಯನ್ನು ದಿನಾಂಕ:18/02/2013 ಹಾಗೂ 05/04/2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿನ ಅಂಶಗಳನ್ನು ಭಾಗಶಃ ಮಾರ್ಪಡಿಸಿ ಕೆಳಗೆ ತಿಳಿಸಿರುವಂತೆ ಪರಿಷ್ಕೃತ ಸುತ್ತೋಲೆ ಹೊರಡಿಸಿದೆ.**

1. 2013–14 ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 7 ನೇ ತರಗತಿಗಳು ನಡೆಸುತ್ತಿದ್ದಲ್ಲಿ ಅದೇ ಶಾಲೆಯಲ್ಲಿ ಹೊಸದಾಗಿ 8 ನೇ ತರಗತಿಯನ್ನು ಉನ್ನತೀಕರಿಸುವುದನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ. ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಈಗಾಗಲೇ 4000 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8 ನೇ ತರಗತಿಯನ್ನು ಪ್ರಾರಂಭಿಸಿದ್ದು ಅದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅಂತಹ ಶಾಲೆಗಳಲ್ಲಿ 1 ರಿಂದ 8 ನೇ ತರಗತಿಗಳು ಮುಂದುವರೆಯುತ್ತವೆ.
2. ಸರ್ಕಾರಿ ಪ್ರೌಢಶಾಲೆಗಳಲ್ಲಿ 8, 9 ಮತ್ತು 10 ನೇ ತರಗತಿಗಳು ನಡೆಯುತ್ತಿದ್ದಲ್ಲಿ **8 ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲಾ ವಿಭಾಗ ಎಂದು ಪರಿಗಣಿಸಿ** ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದು. ಪ್ರತ್ಯೇಕ ದಾಖಲಾತಿ ವಹಿ, ಹಾಜರಾತಿ ವಹಿ, ಹಾಗೂ ಇನ್ನಿತರೆ ವಹಿಗಳನ್ನು ನಿರ್ವಹಿಸುವುದು. ಪ್ರೌಢಶಾಲೆಯಲ್ಲಿರುವ ಶಿಕ್ಷಕರೇ 8 ನೇ ತರಗತಿಯ ವಿದ್ಯಾರ್ಥಿಗಳಿಗೂ ಪಾಠಗಳನ್ನು ಬೋಧಿಸುವುದು. 8, 9, 10 ನೇ ತರಗತಿಯ ಉಸ್ತುವಾರಿಯನ್ನು ಮುಖ್ಯಶಿಕ್ಷಕರೇ ನೋಡಿಕೊಳ್ಳುವರು. ಶಾಲೆಯ ಎಲ್ಲಾ ಮೂಲಭೂತ ಸೌಕರ್ಯಗಳು ಹಾಗೆಯೇ ಮುಂದುವರೆಯುವುದು. ಸರ್ಕಾರಿ ಪ್ರೌಢಶಾಲೆಗಳಲ್ಲಿ 2013–14 ನೇ ಸಾಲಿನಲ್ಲಿ 8ನೇ ತರಗತಿಯಿಂದ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದಲ್ಲಿ ಈ ವಿದ್ಯಾರ್ಥಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಪ್ರೌಢಶಾಲೆಯ ಮುಖ್ಯಶಿಕ್ಷಕರು ನೀಡಿ 9 ನೇ ತರಗತಿಗೆ ಪ್ರತ್ಯೇಕ ದಾಖಲಾತಿ ವಹಿಯಲ್ಲಿ ದಾಖಲು ಮಾಡಿಕೊಳ್ಳುವುದು. ಈ ಅಂಶಗಳನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.
3. 8 ನೇ ತರಗತಿಯ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.
4. ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 8 ನೇ ತರಗತಿಯನ್ನು ಉನ್ನತೀಕರಿಸುವುದನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.
5. ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ 1 ರಿಂದ 7 ನೇ ತರಗತಿಗಳು ನಡೆಯುತ್ತಿದ್ದಲ್ಲಿ ಈ ಶಾಲೆಗಳ ಆಡಳಿತ ಮಂಡಳಿಯವರು 8 ನೇ ತರಗತಿಯನ್ನು ಪ್ರಾರಂಭಿಸಲು ಇಚ್ಛಿಸಿದ್ದಲ್ಲಿ ಉಪನಿರ್ದೇಶಕರು ಶಾಲೆಗೆ ಭೇಟಿ ನೀಡಿ ಆಡಳಿತ ಮಂಡಳಿಯವರು ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಹಾಗೂ ಅಗತ್ಯ ತರಬೇತಿ ಹೊಂದಿರುವ ಶಿಕ್ಷಕರನ್ನು ಶಾಲೆಗೆ ಒದಗಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ಥಳ ಪರಿಶೀಲನಾ ವರದಿ ತರಿಸಿಕೊಂಡು ಪರಿಶೀಲಿಸಲು ತಿಳಿಸಿದೆ. ಆಂಗ್ಲ ಮಾಧ್ಯಮ ಹಾಗೂ ಇನ್ನಿತರೆ ಮಾಧ್ಯಮಗಳಲ್ಲಿ ಆಡಳಿತ ಮಂಡಳಿಯವರು ಉನ್ನತೀಕರಿಸಲು ಇಚ್ಛಿಸಿದ್ದಲ್ಲಿ ಮೇಲಿನಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.
6. ಅನುದಾನಿತ ಪ್ರೌಢಶಾಲೆಗಳಲ್ಲಿ 8 ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲಾ ವಿಭಾಗ ಎಂದು ಪರಿಗಣಿಸಿ ಪ್ರತ್ಯೇಕ ದಾಖಲಾತಿ ವಹಿ, ಹಾಜರಾತಿ ವಹಿ, ಹಾಗೂ ಇನ್ನಿತರೆ ವಹಿಗಳನ್ನು ನಿರ್ವಹಿಸುವುದು. ಹಾಲಿ ಇರುವ ಅನುದಾನಿತ ಪ್ರೌಢಶಾಲೆಗಳಲ್ಲಿ 2013–14 ನೇ ಸಾಲಿನಲ್ಲಿ 8ನೇ ತರಗತಿಯಿಂದ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದಲ್ಲಿ ಈ ವಿದ್ಯಾರ್ಥಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಪ್ರೌಢಶಾಲೆಯ ಮುಖ್ಯಶಿಕ್ಷಕರು ನೀಡಿ 9ನೇ ತರಗತಿಗೆ ಪ್ರತ್ಯೇಕ ದಾಖಲಾತಿ ವಹಿಯಲ್ಲಿ ದಾಖಲು ಮಾಡಿಕೊಳ್ಳುವುದು.
7. ಅನುದಾನರಹಿತ ಪ್ರೌಢಶಾಲೆಗಳಲ್ಲಿಯೂ 8 ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲಾ ವಿಭಾಗ ಎಂದು ಪರಿಗಣಿಸಿ ಪ್ರತ್ಯೇಕ ದಾಖಲಾತಿ ವಹಿ, ಹಾಜರಾತಿ ವಹಿ, ಹಾಗೂ ಇನ್ನಿತರೆ ವಹಿಗಳನ್ನು ನಿರ್ವಹಿಸುವುದು. ಹಾಲಿ ಇರುವ ಅನುದಾನರಹಿತ ಪ್ರೌಢಶಾಲೆಗಳಲ್ಲಿ 2013–14 ನೇ ಸಾಲಿನಲ್ಲಿ 8ನೇ ತರಗತಿಯಿಂದ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದಲ್ಲಿ ಈ ವಿದ್ಯಾರ್ಥಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಪ್ರೌಢಶಾಲೆಯ ಮುಖ್ಯಶಿಕ್ಷಕರು ನೀಡಿ 9 ನೇ ತರಗತಿಗೆ ಪ್ರತ್ಯೇಕ ದಾಖಲಾತಿ ವಹಿಯಲ್ಲಿ ದಾಖಲು ಮಾಡಿಕೊಳ್ಳುವುದು.

ಮೇಲಿನ ಸೂಚನೆಗಳನ್ನು ರಾಜ್ಯದ ಎಲ್ಲಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ/ತಾಲ್ಲೂಕುಗಳಲ್ಲಿ ವ್ಯಾಪಕ ಪ್ರಚಾರ ಕೈಗೊಂಡು ಸಾರ್ವಜನಿಕರಿಗೆ ಹಾಗೂ ಶಾಲೆಗಳ ಆಡಳಿತ ಮಂಡಳಿಯವರಿಗೆ ಅರಿವು ಮೂಡಿಸುವಲ್ಲಿ ಸ್ಥಳೀಯ ಮಾಧ್ಯಮಗಳಲ್ಲಿ ಹಾಗೂ ಎಲ್ಲಾ ಆಡಳಿತ ಮಂಡಳಿಗಳಿಗೆ ಸುತ್ತೋಲೆಯನ್ನು ಕಳುಹಿಸಿ ಕ್ರಮ ಕೈಗೊಳ್ಳಲು ತಿಳಿಸಿದೆ. ಈ ಸಂಬಂಧ ಬೇರೆ ಏನಾದರೂ ಸ್ಪಷ್ಟೀಕರಣ ಬೇಕಾದಲ್ಲಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ನಿರ್ದೇಶಕರು, ಪ್ರೌಢಶಿಕ್ಷಣ ರವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/–
**[ಎಸ್.ಆರ್.ಉಮಾಶಂಕರ್]**
**ಆಯುಕ್ತರು,**

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ: ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ ನೃಪತುಂಗ ರಸ್ತೆ ಬೆಂಗಳೂರು–1**

ಸಂಖ್ಯೆ:ಆರ್.ಎಂ.ಎಸ್.ಎ/ಇಕೋ–ಕ್ಲಬ್/4//2012–13 ದಿನಾಂಕ: 23.03.2013

**ಜ್ಞಾಪನ**

ವಿಷಯ:–ಸರ್ಕಾರಿ ಪ್ರೌಢಶಾಲೆ ಹಾಗೂ ಅನುದಾನಿತ ಪ್ರೌಢಶಾಲೆಗಳಿಗೆ ಇಕೋ ಕ್ಲಬ್ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ:16.7.2013ರ ಮಾನ್ಯ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಮತ್ತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ

* * * * *

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹಾಗೂ Environmental Management and Policy Research Institute, (EMPRI) ಕರ್ನಾಟಕ ಸರ್ಕಾರ ಇವ ಸಹಯೋಗದೊಂದಿಗೆ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದಡಿಯಲ್ಲಿ 2012–13ನೇ ಸಾಲಿನಲ್ಲಿ ರಾಜ್ಯದಲ್ಲಿರುವ 6974 ಪ್ರೌಢಶಾಲೆಗಳಲ್ಲಿ ಇಕೋ ಕ್ಲಬ್ ಚಟುವಟಿಕೆ ನಡೆಸಲು ಯೋಜಿಸಲಾಗಿದೆ.

ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಪ್ರತಿ ಪ್ರೌಢಶಾಲೆಗಳಿಗ 2500/– ರೂಗಳನ್ನು ಬಿಡುಗಡೆ ಮಾಡಲಾಗಿದೆ ಜಿಲ್ಲೆಗಳಿಗೆ ಅನುದಾನ ಬಿಡುಗಡೆಯಾದ ನಂತರ ಸಂಬಂದಿಸಿದ ಜಿಲ್ಲೆಯ ಉಪನಿರ್ದೇಶಕರು ಹಾಗೂ ಯೋಜನಾ ಉಪಸಮನ್ವಯಾಧಿಕಾರಿಗಳು, ಮುಖ್ಯಶಿಕ್ಷಕರ ಸಭೆಯನ್ನು ನಡೆಸಿ ರಾಜ್ಯ ಯೋಜನಾ ಕಛೇರಿಯಿಂದ ನೀಡಿರುವ ನಮೂನೆಯಲ್ಲಿಯೇ ಮಾಹಿತಿಯನ್ನು ಪಡೆದು, ಅನುದಾವನ್ನು ಇಕೋ ಕ್ಲಬ್‌ನ ಚಟುವಟಿಕೆಗಳಿಗೆ ಬಿಡುಗಡೆ ಮಾಡುವುದು ಕೈಗೊಳ್ಳಬೇಕಾದ ಚಟುವಟಿಕೆಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಲಗತ್ತಿಸಿರುವ ಪ್ರೌಢಶಾಲೆಗಳ ಪಟ್ಟಿಯಲ್ಲಿಯ ಯಾವುದೇ ಪ್ರೌಢ ಶಾಲೆ ಮುಚ್ಚಿದ್ದರೆ ಅಥವಾ ಇನ್ನಾವುದೋ ಕಾರಣದಿಂದ ಕೆಲವು ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗದಿದ್ದಲ್ಲಿ, ಈ ವಿಷಯವನ್ನು ಉಪನಿರ್ದೇಶಕರು/ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಪತ್ರ ಮುಖೇನ EMPRI (ನಿರ್ದೇಶಕರು "ಹಸಿರು ಭವನ" ದೊರೆಸಾನಿ ಪಾಳ್ಯ ವಿನಾಯಕ ನಗರ ಸರ್ಕಲ್, ಜೆ.ಪಿ.ನಗರ, 5ನೇ ಹಂತ ಬೆಂಗಳೂರು ದೂ.ಸಂ. 080–26490747 (E mail: empri@gmail.com)ಗೆ ತಿಳಿಸುವುದು ಲಗತ್ತಿಸಿರುವ ಸ್ವೀಕೃತಿ ಪತ್ರದಲ್ಲಿ ಜಿಲ್ಲಾ ಹಂತದಲ್ಲಿ ಅನುದಾನವನ್ನು ಪಡೆದ ಕೂಡಲೇ ಸ್ವೀಕೃತಿ ಪತ್ರವನ್ನು ರಾಜ್ಯ ಕಛೇರಿಗೆ ದಿನಾಂಕ:27.3.2013 ರೊಳಗಾಗಿ ಸಲ್ಲಿಸಲು ಸೂಚನೆ ನೀಡುವುದು.

ಜಿಲ್ಲಾ ಕಛೇರಿಯಲ್ಲಿ ದಾಖಲೀಕರಣ ಮತ್ತು ಇಕೋ ಕ್ಲಬ್‌ನ ಮೇಲ್ವಿಚಾರಣೆಗಾಗಿ ಜಿಲ್ಲಾ ಕಛೇರಿಗೆ 25000/–ರೂಗಳನ್ನು ನೀಡಲಾಗುವುದು ಅದರಲ್ಲಿ ರೂ.15000/– ಗಳನ್ನು ಪ್ರೌಢಶಾಲೆಗಳ ಮುಖ್ಯಶಿಕ್ಷಕರ ಸಭೆ ಕರೆದು ಅವರಿಗೆ ಎಂಪ್ರಿ ಸಂಸ್ಥೆಯಿಂದ ಪುನಶ್ಚೇತನ ತರಬೇತಿಯನ್ನು ನೀಡಲು ಬಳಸಿಕೊಳ್ಳುವುದು ಮತ್ತು 10000/– ರೂಗಳನ್ನು ಮೇಲ್ವಿಚಾರಣೆಗಾಗಿ ಮತ್ತು ದಾಖಲೀಕರಣಕ್ಕಾಗಿ ಉಪನಿರ್ದೇಶಕರ ಹಂತದಲ್ಲಿ ಬಳಸಿಕೊಳ್ಳುವುದು ಇಕೋ ಕ್ಲಬ್‌ನ ಚಟುವಟಿಕೆಗಳನ್ನು ಅನುಬಂಧ–1 ರಂತೆ ಎಲ್ಲಾ ಪ್ರೌಢಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಿ ನಂತರ ಬಳಸಿಕೊಂಡ ಅನುದಾನದ ಮೊತ್ತದ ವಿವರವನ್ನು ನೀಡಿರುವ ನಮೂನೆಗಳಲ್ಲಿ ಭರ್ತಿ ಮಾಡಿ ಜಿಲ್ಲಾ ಹಂತದಲ್ಲಿ ಯೋಜನಾ ಉಪಸಮನ್ವಯಾಧಿಕಾರಿಗಳು ಸಂಗ್ರಹಿಸಿ ಅದರ ಉಪಯೋಗಿತಾ (ಬಳಕೆ) ಪ್ರಮಾಣಪತ್ರವನ್ನು 27.3.2013 ರೊಳಗಾಗಿ ರಾಜ್ಯ ಕಛೇರಿಗೆ ಸಲ್ಲಿಸುವುದು.

<u>ಜಿಲ್ಲಾ ಕಛೇರಿಯ ಶಾಲೆಗಳಿಂದ ಸಮಗ್ರಹಿಸಬೇಕಾದ ಮಾಹಿತಿಗಳು:–</u>

1. ಖರ್ಚು–ವೆಚ್ಚದ ವಿವರ
2. ಉಪಯೋಗಿತಾ ಪ್ರಮಾಣ ಪತ್ರ.
3. ಶಾಲೆಗಳಲ್ಲಿ ನಡೆಸಿರುವ ಚಟುವಟಿಕೆಗಳ ಬಗ್ಗೆ ವರದಿ:–
    1) ನಿಗಧಿತ ಅವಧಿಯಲ್ಲಿ ನಡೆಯುವ ಚಟುವಟಿಕೆಗಳ ವರದಿ
    2) ನಿರಂತರವಾಗಿ ಶಾಲೆಗಳಲ್ಲಿ ನಡೆಯುವ ಚಟುವಟಿಕೆಗಳ ವರದಿ
4. ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಫೋಟೋಗಳು –ಕನಿಷ್ಠ 3.

<u>ಜಿಲ್ಲಾ ಕಛೇರಿಯ ರಾಜ್ಯ ಕಛೇರಿಗೆ ಸಲ್ಲಿಸಬೇಕಾದ ಮಾಹಿತಿಗಳು:</u>

1. ಉಪನಿರ್ದೇಶಕರಿಗಂದ ದೃಢೀಕರಿಸಿದ ಕ್ರೋಢೀಕೃತ ಉಪಯೋಗಿತಾ ಪ್ರಮಾಣ ಪತ್ರ.
2. ಶಾಲೆಗಳಲ್ಲಿ ನೀಡಿದ ಉಪಯೋಗಿತಾ ಪ್ರಮಾಣ ಪತ್ರ ಮೂಲ ಪ್ರತಿಗಳು.
3. ಶಾಲೆಗಳಲ್ಲಿ ನಡೆದಿರುವ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಉಪನಿರ್ದೇಶಕರ ವರದಿ–ಫೋಟೋಗಳ ಸಮೇತ.

ಇಕೋ ಕ್ಲಬ್ ಅನುಷ್ಠಾನದ ಸಂಪೂರ್ಣ ವರದಿಯನ್ನು ಪುನಿರ್ದೇಶಕರು ಹಾಗೂ ಯೋಜನಾ ಉಪಸಮನ್ವಯಯಾಧಿಕಾರಗಳು ದೃಢೀಕರಿಸಿ ರಾಜ್ಯ ಕಛೇರಿಗೆ ಹಾರ್ಡ್ ಮತ್ತು ಸಾಫ್ಟ್ ಕಾಪಿಯಲ್ಲಿ ಸಲ್ಲಿಸುವುದು.

ಸಹಿ/–
ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು.

**ಅನುಬಂಧ–1**
**ಇಕೋ–ಕ್ಲಬ್ ಚಟುವಟಿಕೆಗಳು**

1. **ಸೆಮಿನಾರ್ ಚರ್ಚೆ ಉಪನ್ಯಾಸ ಮತ್ತು ನಿರ್ಧಿಷ್ಟವಾದ ಪರಿಸರ ಸಂಬಂಧಿತ ವಿಷಯಗಳ ಬಗ್ಗೆ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವುದು.**
   - **ಸಸಿಗಳನ್ನು ನಡಿಸುವುದು**
   - **ಔಷಧಿಯ ಸಸ್ಯಗಳು ಮತ್ತು ಅವುಗಳ ಉಪಯೋಗ.**
   - **ಆರೋಗ್ಯ ಮತ್ತು ಸ್ವಚ್ಚತೆ,**
   - **ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ವಿವರಣೆ.**
   - **ಪರಿಸರ ಮಾಲಿನ್ಯದಿಂದಾಗು ಅನುನುಕೂಲಗಳು.**
   - **ಭೂತಾಪಮಾನ ಮತ್ತು ಪರಿಸರದಲ್ಲಿ ಬದಲಾವಣೆ.**
   - **ಪರಿಸರದಿದಂದ ಉಂಟಾಗುವ ಅವಘಡಗಳು.**
   - **ವಿಷಕಾರಿ ತ್ಯಾಜ್ಯ ವಸ್ತುಗಳ ಬಗ್ಗೆ ಅರಿವು ಮೂಡಿಸುವುದು**
2. ಪರಿಸರ ಸಂತಕ್ಷಣೆಗಾಗಿ ಮುನ್ನೆಚ್ಚರಿಕೆ ಕ್ರಮಗಳ ಸಂಘಟಿಸುವುದಕ್ಕಾಗಿ ಪರಿಸರ ಜಾಗೃತಿ ಅಭಿಯಾನಗಳು ಮಾಲಿನ್ಯದಿಂದ ಕೂಡಿದ ಪ್ರದೇಶಗಳಲ್ಲಿ ಉಂಟಾಗುವ ಆನಾರೋಗ್ಯಗಳನ್ನು ಪರಿಚಯಿಸುವುದು ಪ್ರಾಣಿ ಸಂಗ್ರಹಾಲಯ ಅಭಯಾರಣ್ಯಗಳಿಗೆ ಭೇಟಿ, ಪ್ರಾಣಿ–ಪಕ್ಷಿಗಳ ಬಗ್ಗೆ ಅರಿವು ಮೂಡಿಸುವುದು.
   - ಅಂತರ್ಜಲ ಸಂರಕ್ಷಣೆ
   - ಮಾಲಿನ್ಯ ನಿಯಂತ್ರಣ
   - ಶಬ್ದ ಮಾಲಿನ್ಯ.
   - ಭೂ ಸವೆತ.
   - ಅನುಪಯುಕ್ತ ವಸ್ತುಗಳ ನಿರ್ವಹಣೆ ಪೇಪರ್ ಮತ್ತು ಪ್ಲಾಸ್ಟಿಕ್ ಮರುಬಳಕೆ.
   - ಮಳೆ ನೀರು ಕೊಯಲು.
   - ಗಂಡಾಂತರಕಾರಿ ಅಥವಾ ಮಾರಕ ಕಾಯಿಲೆಗಳು, ಚಿಕನ್‌ಗುನ್ಯ ಡೆಂಗ್ಯೂ, ಊ1 ಓ1 ವೈರಸ್.
   - ರಾಸಾಯನಿಕ ಗೊಬ್ಬರಗಳನ್ನು ಹಾಗೂ ಕುಲಾಂತರಿ ಬೀಜಗಳು.
   - ರಾಸಾಯನಿಕ ವಸ್ತುಗಳ ಸೇವನೆಯಿಂದ ಆಯೋಗ್ಯದ ಮೇಲೆ ಉಂಟಾಗುವ ಪರಿಣಾಮ.
3. ಪರಿಸರ ಜಾಗೃತಿಗಾಗಿ ರ‍್ಯಾಲಿ, ಜಾಥಾ, ಮಾನವ ಸರಪಳಿ, ಭಾಷಣ, ಚರ್ಚೆ ಸಾರ್ವಜನಿಕ ಸಭೆ, ಸಾರ್ವಜನಿಕ ಅಭಿಪ್ರಾಯ ಸಂಗ್ರಹವನ್ನು ರೈಲ್ವೆ ನಿಲ್ದಾಣ, ಬಡ್ ನಿಲ್ದಾಣ, ತೃತ ಸಂತೆ ಮತ್ತು ಜನನಿಬಿಡ ಪ್ರದೇಶಗಳಲ್ಲಿ ನಡೆಸುವುದು.
4. ಪರಿಸರ ಜಾಗೃತಿಗಾಗಿ ವಿದ್ಯಾರ್ಥಿಗಳಿಂದ ಕೈಗೊಳ್ಳಬೇಕಾದ ಷಟುವಟಿಕೆಗಳು:
   - ಸಾವಯುವ ಕೃಷಿ.
   - ಎಲ್ ಹುಳಗಳಿಂದ  ಗೊಬ್ಬರ ತಯಾರಿಕೆ.
   - ಜೀವ ವೈವಿದ್ಯತೆ ಬಗ್ಗೆ ಅರಿವು ಮೂಡಿಸುವುದು.
   - ಶಾಲಾ ಕಾಲೇಜುಗಳಲ್ಲಿ ಸಸಿಗಳನ್ನು ನೆಡುವುದು.
   - ಸಾರ್ವಜನಿಕ ಸ್ಥಳ, ಮನೆಯ ಅಕ್ಕಪಕ್ಕ ಹಾಗೂ ಶಾಲಾ ಕಾಲೇಜುಗಳಲ್ಲಿ ಸ್ವಚ್ಚತೆಯನ್ನು ಕಾಪಾಡುವುದು.
   - ಪರಿಸರದ ಮಹತ್ವ ತಿಳಿಯಲು ಅರಣ್ಯ ಪ್ರದೇಶ ಹಾಗೂ ಬೆಟ್ಟಗುಡ್ಡ ಪ್ರದೇಶದಲ್ಲಿ ಜಾರಣ ನಡೆಸುವುದು.
5. ಪರಿಸರ ಜಾಗೃತಿಗಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ರಸಪ್ರಶ್ನೆ ಕಾರ್ಯಕ್ರಮ, ಪರಿಸರದ ವಿಷಯವಾಗಿ ಚುಟುಕು ಭಾಷಣ ಸ್ಪರ್ಧೆಯನ್ನು ಏರ್ಪಡಿಸುವುದು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲನ್ನು ನೀಡುವ ಬಗ್ಗೆ.

**ಓದಲಾಗಿದೆ:**

**ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಪ್ರಸ್ತಾವನೆ ಸಂಖ್ಯೆ: ಪತ್ರ :: ಸಂಖ್ಯೆ:ಎಂ:2/ಅ.ದಾ/ಮ.ಹಾ.ಯೋ/2013-14 ದಿನಾಂಕ:26-07-2013**

**ಪ್ರಸ್ತಾವನೆ:**

1. ರಾಜ್ಯದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಳೆ ವಯಸ್ಸಿನ ಮಕ್ಕಳಲ್ಲಿ ಕಂಡು ಬರುವ ರಕ್ತಹೀನತೆ, ಅಪೌಷ್ಠಿಕತೆಯನ್ನು ನಿವಾರಿಸುವ ಹಿನ್ನೆಲೆಯಲ್ಲಿ ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಿಂದ ಮಧ್ಯಾಹ್ನದ ಬಿಸಿಯೂಟ ಯೋಜನೆಯು ಜಾರಿಯಲ್ಲಿದ್ದು ಮಕ್ಕಳಲ್ಲಿನ ರಕ್ತಹೀನತೆ, ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣ ಶೇ.50 ಕ್ಕಿಂತ ಹೆಚ್ಚಿರುವ ಬಗ್ಗೆ ವರದಿಗಳು ದಾಖಲಾಗಿವೆ.
2. ಮಕ್ಕಳಲ್ಲಿ ಅಪೌಷ್ಠಿಕತೆ ಮತ್ತು ರಕ್ತ ಹೀನತೆಯಿಂದಾಗಿ ಜೀವ ಕೋಶಗಳಿಗೆ ಬೇಕಾಗುವ ಆಮ್ಲಜನಕದ ಸರಬರಾಜಿಗೆ ತೊಂದರೆಯಾಗುತ್ತದೆ. ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಮತ್ತು ಸಾಮರ್ಥ್ಯ ಕುಂಠಿತವಾಗುತ್ತದೆ. ಏಕಾಗ್ರತೆ ಕೊರತೆಯಿಂದಾಗಿ ಗ್ರಹಣ ಶಕ್ತಿ ಕಡಿಮೆಯಾಗುತ್ತದೆ. ಹಸಿವು ಆಗದಿರುವುದು. ಪಾಠ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ನಿರಾಸಕ್ತಿ ಮೂಡುತ್ತದೆ.
3. ಮಕ್ಕಳಲ್ಲಿ ಕಂಡುಬರುವ ಅಪೌಷ್ಠಿಕತೆ ಮತ್ತು ರಕ್ತ ಹೀನತೆ ತಡೆಗಟ್ಟುವುದು. ಮಕ್ಕಳು ಆರೋಗ್ಯಪೂರ್ಣವಾಗಿ ಶಕ್ತಿವಂತರು ಹಾಗೂ ದೃಡಕಾಯರಾಗಿ ಬೆಳೆಯಲು ಪ್ರೋಟೀನ್ ಮತ್ತು ಕೊಬ್ಬಿನಂಶಗಳನ್ನೊಳಗೊಂಡ ಸಮತೋಲನ ಆಹಾರ ನೀಡುವುದು. ಶಾಲಾ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶಗಳಾಗಿವೆ.
4. ಇದನ್ನು ನಿವಾರಿಸುವ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ಎಲ್ಲಾ ಮಕ್ಕಳಿಗೂ ವಾರದಲ್ಲಿ ಮೂರು ದಿನ (ದಿನ ಬಿಟ್ಟು ದಿನ-ಸೋಮವಾರ, ಬುಧವಾರ-ಶುಕ್ರವಾರ/ಉರ್ದು ಶಾಲೆಗಳಿಗೆ ಶನಿವಾರ) ಪ್ರತಿ ಮಗುವಿಗೆ ಒಂದು ಬಾರಿಗೆ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಮಿ.ಲಿ ಹಾಲನ್ನು ದಿನಾಂಕ :01-08-2013 ರಿಂದ ನೀಡಲು ನಿರ್ಧರಿಸಿದೆ.
5. ಅದರಂತೆ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಸಾ.ಶಿ.ಇಲಾಖೆ ಇವರು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮಾರ್ಗಸೂಚಿಯನ್ನೊಳಗೊಂಡ ಆದೇಶವನ್ನು ಹೊರಡಿಸಲು ಕೋರಿದ್ದಾರೆ.
6. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಈ ಆದೇಶವನ್ನು ಹೊರಡಿಸಿದೆ

**ಸರ್ಕಾರದ ಆದೇಶ ಸಂಖ್ಯೆ:: ಇಡಿ 40 ಎಂಎಂಎಸ್2012 ಬೆಂಗಳೂರು, ದಿನಾಂಕ:: 27-07-2013**

7. ರಾಜ್ಯದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಲ್ಲಿ ಕಂಡು ಬರುವ ರಕ್ತಹೀನತೆ, ಅಪೌಷ್ಠಿಕತೆಯನ್ನು ನಿವಾರಿಸಿ, ಮಕ್ಕಳು ಆರೋಗ್ಯಪೂರ್ಣವಾಗಿ ಶಕ್ತಿವಂತರು ಹಾಗೂ ದೃಡಕಾಯರಾಗಿ ಬೆಳೆಯಲು ಪ್ರೋಟೀನ್ ಮತ್ತು ಕೊಬ್ಬಿನಾಂಶಗಳನ್ನೊಳಗೊಂಡ ಸಮತೋಲನ ಆಹಾರ ನೀಡಿ, ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನ (ದಿನ ಬಿಟ್ಟು ದಿನ-ಸೋಮವಾರ, ಬುಧವಾರ-ಶುಕ್ರವಾರ/ಉರ್ದು ಶಾಲೆಗಳಿಗೆ ಶನಿವಾರ) ಪ್ರತಿ ಮಗುವಿಗೆ ಒಂದು ಬಾರಿಗೆ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ 150 ಮಿ.ಲಿ ಹಾಲನ್ನು ವಿತರಿಸುವ ಕಾರ್ಯಕ್ರಮವನ್ನು ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅನುಮತಿ ನೀಡಲಾಗಿದೆ.
8. **ಫಲಾನುಭವಿಗಳು :**
   ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಯ ಮಕ್ಕಳು.
9. **ವ್ಯವಸ್ಥಾಪನೆ :**
   - 1 ರಿಂದ 10ನೇತರಗತಿಯ ಶಾಲಾವಾರು ಮಕ್ಕಳು/ಫಲಾನುಭವಿಗಳ ಸಂಖ್ಯೆಯನ್ನು ಮಾಹೆಯ ಸರಾಸರಿ ಹಾಜರಿಯಂತೆ ಮಾಹಿತಿಯನ್ನು ಶಾಲಾ ಮುಖ್ಯ ಶಿಕ್ಷಕರು , ಪ್ರತಿ ಮಗುವಿಗೆ ಪ್ರತಿ ಮಗುವಿಗೆ 18 ಗ್ರಾಂ ಹಾಲಿನ ಪುಡಿಯಂತೆ ಒಂದು ದಿನಕ್ಕೆ ಅಗತ್ಯವಿರುವ ಹಾಲಿನ ಪುಡಿ ಪ್ರಮಾಣವನ್ನು ನಮೂದಿಸಿ

ಮಾಹೆಯಲ್ಲಿ ಶಾಲೆ ನಡೆಯುವ ದಿನಗಳ ವಿವರಗಳೊಂದಿಗೆ ಒಂದು ಮಾಹೆಗೆ ದಿನ ಬಿಟ್ಟು ದಿನಕ್ಕೆ ಅಗತ್ಯವಿರುವ ಹಾಲಿನ ಪುಡಿಯ ಬೇಡಿಕೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.

- ಶಾಲೆಯಿಂದ ಸ್ವೀಕೃತಗೊಂಡ ಬೇಡಿಕೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ತಾಲ್ಲೂಕು ಪಂಚಾಯತ್‌ಗೆ ಸಲ್ಲಿಸುವುದು.
- ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ಬೇಡಿಕೆಯನ್ವಯ ಹಾಲಿನ ಪುಡಿಯ ಬೇಡಿಕೆಯ ವಿವರಗಳನ್ನು ಪ್ರತಿ ಶಾಲೆಗೆ (ಒಂದು ಕೆ.ಜಿ ತೂಕದ ಎಷ್ಟು ಪ್ಯಾಕ್‌ಗಳು) ಬೇಕಾಗಿರುವ ಪ್ರಮಾಣದ ಬಗ್ಗೆ ವಿವರ ನಮೂದಿಸಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.
- ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳವರು ಜಿಲ್ಲೆಗೆ ಅವಶ್ಯಕತೆ ಇರುವ ಹಾಲಿನ ಪುಡಿಯ ಬೇಡಿಕೆಯನ್ನು ಕೆ.ಎಂ.ಎಫ್‌ನ ಜಿಲ್ಲಾ ಘಟಕಕ್ಕೆ ಸರಬರಾಜು ಆದೇಶವನ್ನು ತಾಲ್ಲೂಕು ಮತ್ತು ಶಾಲಾವಾರು ವಿವರಗಳೊಂದಿಗೆ ನೀಡುವುದು.
- ಕೆನೆಭರಿತ ಹಾಲಿನ ಪುಡಿಯನ್ನು ಹಾಲನ್ನಾಗಿ ಪರಿವರ್ತಿಸಿ, ಸಕ್ಕರೆ ಬೆರೆಸಿ, ಕಾಯಿಸಿ ಮಕ್ಕಳಿಗೆ ನೀಡಲು ತಗಲುವ ಪರಿವರ್ತನಾ ವೆಚ್ಚ ಪ್ರತಿ ಮಗುವಿಗೆ ಪ್ರತಿ ದಿನಕ್ಕೆ ರೂ.0.59/– ರಂತೆ ಒಂದು ತಿಂಗಳಿಗೆ ಬೇಕಾಗುವ ಅನುದಾನವನ್ನು 2 ತಿಂಗಳ ಮುಂಗಡವಾಗಿ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್‌ನಿಂದ ಮಧ್ಯಾಹ್ನದ ಬಿಸಿಯೂಟದ ಪರಿವರ್ತನಾ ವೆಚ್ಚದ ಜೊತೆಗೆ ಶಾಲೆಯ ಅಕ್ಷರ ದಾಸೋಹ ಖಾತೆಗೆ ಜಮಾ ಮಾಡುವುದು.
- ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಶಾಲಾ ಮಕ್ಕಳಿಗೆ ಹಾಲಿನ ಪುಡಿಯಿಂದ ಹಾಲನ್ನು ಕಾಯಿಸಿ ನೀಡುವ ಕಾರ್ಯಕ್ರಮದ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದು.
- ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕೆ.ಎಂ.ಎಫ್, ಪಶುಸಂಗೋಪನಾ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮದ ಅನುಷ್ಠಾನದ ರೂಪುರೇಶೆಗಳನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ವಹಿಸುವುದು.

**10. ಯೋಜನೆಯ ಅನುಷ್ಠಾನ/ಜವಾಬ್ದಾರಿ :**

- ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕೆ.ಎಂ.ಎಫ್, ಪಶುಸಂಗೋಪನಾ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಯೋಗದೊಂದಿಗೆ ವಾರದಲ್ಲಿ ಮೂರು ದಿನ ಅಂದರೆ ದಿನ ಬಿಟ್ಟು ದಿನ (ಸೋಮವಾರ, ಬುಧವಾರ ಮತ್ತು ಶುಕ್ರವಾರ/ಉರ್ದು ಶಾಲೆಗಳಲ್ಲಿ ಶನಿವಾರ) ಮಕ್ಕಳಿಗೆ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲನ್ನು ವಿತರಿಸಲು ನಿರ್ಧರಿಸಲಾಗಿದೆ.
- **ಶಾಲೆಗಳ ಬಾಗಿಲಿಗೆ ಹಾಲಿನ ಪುಡಿಯನ್ನು ಸರಬರಾಜು ಮಾಡುವ ಜವಾಬ್ದಾರಿಯು ಕೆ.ಎಂ.ಎಫ್‌ನದ್ದಾಗಿರುತ್ತದೆ.**
- ಜಿಲ್ಲಾ ಪಂಚಾಯತ್‌ನ ಆದೇಶದ ಮೇರೆಗೆ ಕೆ.ಎಂ.ಎಫ್ ಸೀಲ್ ಮಾಡಿದ, ತಯಾರಿಸಿದ ದಿನಾಂಕ, ಪ್ಯಾಕ್ ಮಾಡಿದ ದಿನಾಂಕ, ಮತ್ತು ಎಕ್ಸ್‌ಪೈರಿ ದಿನಾಂಕಗಳನ್ನು ನಮೂದಿಸಿದ ಪ್ಯಾಕ್‌ಗಳ ಬಾಕ್ಸ್‌ಗಳನ್ನು ಸೀಲ್ ಮಾಡಿ ಶಾಲೆಗೆ ಮಾಹೆಗೆ ಬೇಕಾಗುವ ಪ್ರಮಾಣದಂತೆ 10 ದಿನಗಳ ಮುಂಚಿತವಾಗಿ ಶಾಲೆಯ ಮುಖ್ಯ ಶಿಕ್ಷಕರು/ಶಿಕ್ಷಕರ ಸಮ್ಮುಖದಲ್ಲಿ ಶಾಲೆಗೆ ತಲುಪಿಸತಕ್ಕದ್ದು.
- ಶಾಲೆಗೆ ಸರಬರಾಜಾದ ಹಾಲಿನ ಪುಡಿಯನ್ನು ಗುಣಮಟ್ಟ ಹಾಳಾಗದಂತೆ ಸಂರಕ್ಷಿಸಿಡುವ ಜವಾಬ್ದಾರಿ ಆಯಾ ಶಾಲೆಯ ಮುಖ್ಯ ಶಿಕ್ಷಕರು/ಶಿಕ್ಷಕರು/ಅಡುಗೆಯವರದ್ದಾಗಿದೆ.
- ಮಾಹೆಯಾನ ಅಗತ್ಯವಿರುವ ಹಾಲಿನ ಪುಡಿ, ಅನುದಾನದ ಬೇಡಿಕೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು ಹಾಗೂ ಹಾಲಿನ ಪುಡಿಯ ಸರಬರಾಜು ಮತ್ತು ಅನುದಾನಗಳನ್ನು ಶಾಲೆಗಳಿಗೆ ನಿಗದಿತ ಅವಧಿಯೊಳಗೆ ತಲುಪಿಸುವ ಜವಾಬ್ದಾರಿಯು ಅಕ್ಷರ ದಾಸೋಹ ಕಾರ್ಯಕ್ರಮದ ನೋಡಲ್ ಅಧಿಕಾರಿಗಳದ್ದಾಗಿರುತ್ತದೆ.

**11. ಕಾರ್ಯಕ್ರಮದ ಅನುಷ್ಠಾನ :**

**ಜಿಲ್ಲಾ ಪಂಚಾಯತ್ :–**

- ✓ ಶಾಲೆಗಳಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ಕೆನೆಭರಿತ ಹಾಲಿನ ಪುಡಿಯ ಬೇಡಿಕೆಯನ್ನು ಶಾಲಾವಾರು ಬೇಡಿಕೆಯ ವಿವರಗಳನ್ನು ಜಿಲ್ಲಾ ಕೆ.ಎಂ.ಎಫ್ ಘಟಕಕ್ಕೆ ಯಾವ ದಿನಾಂಕದೊಳಗೆ ಸರಬರಾಜು ಮಾಡಬೇಕು ಎಂಬ ಬಗ್ಗೆ ಸ್ಪಷ್ಟ ನಿರ್ದೇಶನದೊಂದಿಗೆ ಸರಬರಾಜು ಆದೇಶವನ್ನು ನೀಡುವುದು.
- ✓ 1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ 18 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲು ನೀಡುವ ಕಾರ್ಯಕ್ರಮಕ್ಕೆ ಅಗತ್ಯ ಅನುದಾನಗಳನ್ನು ಅಕ್ಷರ ದಾಸೋಹ/ಮಧ್ಯಾಹ್ನದ ಬಿಸಿಯೂಟ ಯೋಜನೆಯ ಲೆಕ್ಕಶೀರ್ಷಿಕೆಯಡಿ ಭರಿಸುವುದು.

- ✓ ಶಿಕ್ಷಣ ಇಲಾಖೆ, ಕೆ.ಎಂ.ಎಫ್, ಪಶುಸಂಗೋಪನಾ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಸಹಕಾರವನ್ನು ಕೇಂದ್ರಿಕರಿಸಿ ಸಮನ್ವಯ ಸಾಧಿಸುವುದು.
- ✓ ಕೆ.ಎಂ.ಎಫ್ ಸರಬರಾಜು ಮಾಡಿದ ಕೆನೆ ಭರಿತ ಹಾಲಿನ ಪುಡಿಯ ಹಾಲಿನ ಪ್ರಮಾಣಕ್ಕೆ ಜಿಲ್ಲಾ ಹಂತದಲ್ಲಿ ಕ್ರೋಡೀಕೃತ ಸ್ವೀಕೃತಿಗಳನ್ನು ನೀಡುವುದು.
- ✓ ಹಾಲನ್ನು ಬಿಸಿ ಮಾಡಿ ಮಕ್ಕಳಿಗೆ ವಿತರಿಸಲು ತಗಲುವ ತಯಾರಿಕಾ ವೆಚ್ಚವನ್ನು ಶಾಲೆಯ ಮಧ್ಯಾಹ್ನದ ಬಿಸಿಯೂಟ ಯೋಜನೆಯ ಖಾತೆಗೆ ಎರಡು ತಿಂಗಳ ಮುಂಚಿತವಾಗಿ ಬಿಡುಗಡೆಗೊಳಿಸುವುದು.
- ✓ ಖರ್ಚು ವೆಚ್ಚಗಳು ಹಾಗೂ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸುವುದು.

**ತಾಲ್ಲೂಕು ಪಂಚಾಯತ್ :**

- ✓ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಬಂದ ಹಾಲಿನ ಪುಡಿಯ ಬೇಡಿಕೆ ಮತ್ತು ಪರಿವರ್ತನಾ ವೆಚ್ಚದ ಅನುದಾನದ ಬೇಡಿಕೆ ಪಟ್ಟಿಗಳನ್ನು ಪರಿಶೀಲಿಸಿ ಹಾಲಿನ ಪುಡಿಯ ಬೇಡಿಕೆಯನ್ನು ಶಾಲಾವಾರು ಪಟ್ಟಿಯನ್ನು ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.
- ✓ 1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಕೆನೆ ಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲನ್ನು ನೀಡುವ ಕಾರ್ಯಕ್ರಮಕ್ಕೆ ಅಗತ್ಯ ಅನುದಾನಗಳ ಬೇಡಿಕೆ/ಬಿಡುಗಡೆ, ಖರ್ಚು–ವೆಚ್ಚಗಳ ಮೇಲೆ ನಿಗಾ ವಹಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿ ಮತ್ತು ಮೇಲ್ವಿಚಾರಣೆ ಮಾಡುವುದು.
- ✓ ಹಾಲನ್ನು ಬಿಸಿ ಮಾಡಿ ಮಕ್ಕಳಿಗೆ ವಿತರಿಸಲು ತಗಲುವ ತಯಾರಿಕಾ ವೆಚ್ಚವನ್ನು ಶಾಲೆಯ ಅಕ್ಷರ ದಾಸೋಹ ಖಾತೆಗೆ ಬಿಡುಗಡೆಗೊಳಿಸುವುದು.
- ✓ ಹಾಲನ್ನು ಕಾಯಿಸಲು ಬೇಕಾಗುವ ಹೆಚ್ಚುವರಿ ಅನಿಲ ಸಿಲಿಂಡರ್ ವ್ಯವಸ್ಥೆ ಮಾಡುವುದು.

**ಕೆ.ಎಂ.ಎಫ್.ನ ಪಾತ್ರ :**

ಶಾಲೆಗಳಿಗೆ ಮಕ್ಕಳ ಸಂಖ್ಯೆಗನುಗುಣವಾಗಿ ಇಲಾಖೆ ನಿಗದಿಪಡಿಸಿರುವ ಪ್ರಮಾಣದಲ್ಲಿ ಸೀಲ್ ಮಾಡಿದ ಪ್ಯಾಕ್‌ನಲ್ಲಿ ಹಾಲಿನ ಪುಡಿಯನ್ನು ನಿಗದಿತ ಅವಧಿಯೊಳಗೆ ಶಾಲಾ ಬಾಗಿಲಿಗೆ ಮತ್ತು ಎನ್.ಜಿ.ಓ ಅಡುಗೆ ಕೇಂದ್ರಗಳ ಬಾಗಿಲಿಗೆ ಜಿಲ್ಲಾ ಪಂಚಾಯತ್‌ನ ಸರಬರಾಜು ಆದೇಶದಲ್ಲಿ ನಮೂದಿಸಿದ ಸಮಯದೊಳಗೆ ಸರಬರಾಜು ಮಾಡುವುದು.

ಮಾಹೆಯಾನ ಶಾಲಾವಾರು ಸ್ವೀಕೃತಿ ಪತ್ರಗಳನ್ವಯ ಬಿಲ್ಲನ್ನು ಸಿದ್ದಪಡಿಸಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತ**

- ✓ ಶಾಲೆಗಳಿಂದ ಮಾಹೆಯಾನ ಸರಾಸರಿ ಹಾಜರಾತಿ ಆಧಾರದ ಮೇಲೆ ಫಲಾನುಭವಿಗಳನ್ನು ನಿಗದಿಪಡಿಸಿ ಶಾಲಾವಾರು, ಸಂಘವಾರು ಬೇಡಿಕೆ ಪಟ್ಟಿಯನ್ನು ಕೆನೆ ಭರಿತ ಹಾಲಿನ ಪುಡಿಯ ಪ್ಯಾಕ್‌ನ ಪರಿಮಾಣ/ಸರಬರಾಜು ಮಾಡಬೇಕಾದ ದಿನ ಮತ್ತು ದಿನಾಂಕ ಮತ್ತು ಪರಿವರ್ತನಾ ವೆಚ್ಚ ಗಳ ವಿವರಗಳನ್ನು ಪಡೆದು ಕ್ರೋಢೀಕರಿಸಿ ತಾಲ್ಲೂಕು ಪಂಚಾಯತ್‌ಗೆ ಸಲ್ಲಿಸುವುದು.
- ✓ 1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಹಾಲು ನೀಡುವ ಕಾರ್ಯಕ್ರಮಕ್ಕೆ ಅಗತ್ಯ ಅನುದಾನಗಳ ಬೇಡಿಕೆ, ಖರ್ಚು–ವೆಚ್ಚಗಳ ಮೇಲೆ ನಿಗಾ ವಹಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿ ಮತ್ತು ಮೇಲ್ವಿಚಾರಣೆ ಮಾಡುವುದು.
- ✓ ಈ ಉದ್ದೇಶಕ್ಕಾಗಿ ಬಿ.ಇ.ಓ ಕಛೇರಿಯಲ್ಲಿ ಒಬ್ಬರನ್ನು ಮಧ್ಯಾಹ್ನ ಉಪಹಾರ ಯೋಜನೆ ಮತ್ತು ಹಾಲು ಕೊಡುವ ಕಾರ್ಯಕ್ರಮದ ಅನುಷ್ಠಾನ ಸುಗಮವಾಗಿ ಆಗುತ್ತಿರುವ ಬಗ್ಗೆ ಉಸ್ತುವಾರಿ ವಹಿಸಲು ಅಗತ್ಯ ಮಾಹಿತಿ ನೀಡಲು ನೋಡಲ್ ಅಧಿಕಾರಿಯನ್ನು ನೇಮಿಸುವುದು.

**ಶಾಲಾ ಹಂತ**

- ✓ ಶಾಲೆಯ ಮಕ್ಕಳ ಮಾಹೆಯ ಸರಾಸರಿ ಹಾಜರಾತಿಯನ್ವಯ ಇಲಾಖೆ ನಿಗದಿಪಡಿಸಿರುವ ದಿನಗಳಿಗೆ ಅಗತ್ಯ ಬೀಳುವ ಹಾಲಿನ ಪುಡಿ ಮತ್ತು ಪರಿವರ್ತನಾ ವೆಚ್ಚಗಳ ಬೇಡಿಕೆಯ ವಿವರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ 15 ದಿನಗಳ ಮುಂಚಿತವಾಗಿ ಸಲ್ಲಿಸುವುದು.
- ✓ ಶಾಲಾ ಮುಖ್ಯ ಶಿಕ್ಷಕರು/ಶಿಕ್ಷಕರು ಕೆ.ಎಂ.ಎಫ್ ನಿಂದ ಸ್ವೀಕೃತಗೊಂಡ ಹಾಲಿನ ಪುಡಿಯ ಸೀಲ್ ಆಗಿರುವ ಬಗ್ಗೆ, ತಯಾರಿಸಿದ ದಿನಾಂಕ, ಪ್ಯಾಕ್ ಮಾಡಿದ ದಿನಾಂಕ, ಮತ್ತು ಎಕ್ಸ್‌ಪೈರಿ ದಿನಾಂಕಗಳನ್ನು ನಮೂದಿಸಿರುವ ಬಗ್ಗೆ ಪರಿಶೀಲಿಸಿ ಸ್ವೀಕರಿಸಿದ ಹಾಲಿನ ಪುಡಿಯ ಪ್ರಮಾಣವು ಎಕ್ಸ್‌ಪೈರಿ ದಿನಾಂಕದೊಳಗೆ ಬಳಸಬಹುದೇ ಎಂಬುದರ ಬಗ್ಗೆ ಪರಿಶೀಲಿಸಿ ದಾಸ್ತಾನನ್ನು ಸ್ವೀಕರಿಸಿ ಕೆ.ಎಂ.ಎಫ್.ನ ಸರಬರಾಜು ಪ್ರತಿನಿಧಿಗೆ ದೃಢೀಕರಣ ನೀಡುವುದು.
- ✓ ಕಾಯಿಸಿದ ಹಾಲನ್ನು ಶಾಲಾ ಪ್ರಾರಂಭದ ಪ್ರಾರ್ಥನೆಯ ನಂತರ ತರಗತಿಗಳು ಪ್ರಾರಂಭವಾಗುವ ಮುಂಚಿತವಾಗಿ 15 ನಿಮಿಷಗಳಲ್ಲಿ ಮಕ್ಕಳಿಗೆ ವಿತರಿಸುವುದು.

**ಎಸ್.ಡಿ.ಎಂ.ಸಿ ಪಾತ್ರ**

- ✓ ಪ್ರತಿ ತಿಂಗಳು ನಡೆಯುವ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಖರ್ಚು–ವೆಚ್ಚಗಳು, ಸಾಧಕ ಬಾಧಕಗಳು/ಹಾಲಿನ ಪುಡಿಯ ಗುಣಮಟ್ಟ/ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಿ ಅಗತ್ಯ ಸಲಹೆ ಮಾರ್ಗದರ್ಶನ ನೀಡುವುದು.
- ✓ ಎಲ್ಲಾ ಮಕ್ಕಳಿಗೂ ನಿಗದಿತ ಪ್ರಮಾಣದಲ್ಲಿ ಹಾಲು ನೀಡುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡುವುದು.

12. **ಮುಂಜಾಗ್ರತೆ :**

**ಕೆನೆಭರಿತ ಹಾಲಿನ ಪುಡಿಯನ್ನು ಉಪಯೋಗಿಸುವ ಮತ್ತು ಮುನ್ನೆಚ್ಚರಿಕೆ ಕ್ರಮಗಳು :**

- ✓ ಕೆನೆಭರಿತ ಹಾಲಿನ ಪುಡಿಯನ್ನು ಪಡೆದ ಸಂಧರ್ಭದಲ್ಲಿ ಹಾಲಿನ ಪುಡಿಯ ಪ್ಯಾಕ್‌ನ ಪರಿಮಾಣ, ಗುಣಮಟ್ಟ, ತಯಾರಾದ ದಿನಾಂಕ ನಮೂದಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ಅದನ್ನು ಸ್ವೀಕರಿಸಿದ ನಂತರ ವಹಿಯಲ್ಲಿ ನಮೂದಿಸಿಕೊಂಡು ಕೆ.ಎಂ.ಎಫ್ ಪ್ರತಿನಿಧಿಗೆ ಸ್ವೀಕೃರಿಸಿದ ಬಗ್ಗೆ ದೃಢೀಕರಣ ನೀಡುವುದು.
- ✓ ಹಾಲಿನ ಪುಡಿಯನ್ನು ಪ್ಯಾಕ್ ಮಾಡಿದ ದಿನಾಂಕದಿಂದ ಮೂರು ತಿಂಗಳೊಳಗೆ ಉಪಯೊಗಿಸಬೇಕು.
- ✓ ಹಾಲಿನ ಪುಡಿಯ ಪ್ಯಾಕನ್ನು ತೆರೆದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಉಪಯೋಗಿಸುವುದು, ತೆರೆದ ಪ್ಯಾಕನ್ನು ಒಂದು ತಿಂಗಳ ನಂತರ ದಾಸ್ತಾನು ಮಾಡಬಾರದು/ಬಳಸಬಾರದು.
- ✓ ಹಾಲಿನ ಪುಡಿಯ ಪ್ಯಾಕ್ ತೆಗೆದ ನಂತರ ಗಾಳಿ ಹೋಗದ, ತೇವಾಂಶವಿಲ್ಲದ, ಸ್ವಚ್ಛವಾದ ಡಬ್ಬಿಗೆ ಹಾಕಿ ಅನ್ನು ತಂಪಾದ ತೇವವಿಲ್ಲದ ಸ್ಥಳದಲ್ಲಿ ಇಡಬೇಕು ಇಲ್ಲವಾದಲ್ಲಿ ಹಾಲಿನ ಪುಡಿ ಗಟ್ಟಿಯಾಗಿ ಫಂಗಸ್ ಆಗುವ ಸಾಧ್ಯತೆಗಳಿರುತ್ತವೆ.
- ✓ ಕೆನೆಭರಿತ ಹಾಲಿನ ಪುಡಿಯನ್ನು ಪ್ಯಾಕ್/ಡಬ್ಬಿಯಿಂದ ತೆಗೆದುಕೊಳ್ಳುವಾಗ ಸ್ವಚ್ಛ ಹಾಗೂ ಒಣಗಿದ ಚಮಚ ಉಪಯೋಗಿಸಿ ತೆಗೆದುಕೊಳ್ಳುವುದು.
- ✓ ಹಾಲಿಗೆ ಸಮನಾದ ಮಿಶ್ರಣ ಪಡೆಯಲು 4 ಭಾಗದ ಉಗುರು ಬೆಚ್ಚನೆಯ ಬಿಸಿನೀರಿಗೆ ಒಂದು ಭಾಗದ ಕೆನೆಭರಿತ ಹಾಲಿನ ಪುಡಿ ಬೆರಸಿ ಉಪಯೋಗಿಸುವುದು
- ✓ 100 ಗ್ರಾಂ ಕೆನೆಭರಿತ ಹಾಲಿನ ಪುಡಿಯಿಂದ 820 ಮಿ.ಲಿ ಟೋನ್ಡ್ ಹಾಲು ತಯಾರಿಸಬಹುದು.
- ✓ ಗುಣಮಟ್ಟದ ಹಾಲಿನ ಪುಡಿಯು ಹಿತಕರ ಸುವಾಸನೆಯಿಂದ ಮತ್ತು ಸ್ವಚ್ಛವಾಗಿರುತ್ತದೆ.
- ✓ ಕೆನೆಭರಿತ ಹಾಲಿನ ಪುಡಿಯ ಮಿಶ್ರಣಕ್ಕೆ ಸ್ವಚ್ಛವಾದ ನೀರನ್ನು ಮಾತ್ರ ಬಳಸಬೇಕು.
- ✓ ಹಾಲಿನ ಮಿಶ್ರಣ ತಯಾರಿಸಿದ ನಂತರ ಶುದ್ಧವಾದ ಬಟ್ಟೆ/ಫಿಲ್ಟರ್ ನಿಂದ ಶೋಧಿಸಿ ಮಕ್ಕಳಿಗೆ ನೀಡಬೇಕು.
- ✓ ಹಾಲಿನ ಪುಡಿಯಿಂದ ತಯಾರಿಸಲ್ಪಟ್ಟ ಹಾಲನ್ನು ಆಯಾ ದಿನದಂದೇ ಉಪಯೋಗಿಸಬೇಕು ಹಾಗೂ 3 ಗಂಟೆಗೂ ಹೆಚ್ಚಿನ ಕಾಲ ಇಡಬಾರದು.
- ✓ ಹಾಲು ಕುದಿಸುವ ಮೊದಲು ಒಂದು ಲೀಟರ್ ಹಾಲಿಗೆ 70 ರಿಂದ 80 ಗ್ರಾಂ ಸಕ್ಕರೆಯನ್ನು ಬೆರೆಸಬೇಕು.
- ✓ ಕಾಯಿಸುವ ಪಾತ್ರೆ ಶುಚಿಯಾಗಿರಬೇಕು. ಸಮರ್ಪಕವಾಗಿ ಸ್ವಚ್ಛಗೊಳಿಸಿದ ಪಾತ್ರೆಯಲ್ಲಿ ಹಾಲು ಕಾಯಿಸಬೇಕು.
- ✓ ಹಾಲನ್ನು ಸ್ವಚ್ಛವಾದ ಪಾತ್ರೆಗೆ ಹಾಕಿ ಕಾಯಿಸುವಾಗ ತಳ ಕಟ್ಟದಂತಿರಲು ಆಗಿಂದ್ದಾಗ್ಗೆ ಚಮಚ/ಸೌಟನಿಂದ ಕದಡುತ್ತಿರಬೇಕು.
- ✓ ಹಾಲನ್ನು ಪ್ರಕರವಾದ ಉರಿಯಲ್ಲಿ ಕಾಯಿಸದೇ, ಮಂದ ಉರಿಯಲ್ಲಿ ಕಾಯಿಸಬೇಕು.
- ✓ ಕಾಯಿಸುವಾಗ ಹಾಲಿಗೆ ಕ್ರಿಮಿ ಕೀಟಗಳು, ಹಲ್ಲಿ, ಧೂಳು ಬೀಳದಂತೆ ಎಚ್ಚರ ವಹಿಸಬೇಕು ಹಾಗೂ ಮುಚ್ಚಳದಿಂದ ಮುಚ್ಚಿರಬೇಕು.
- ✓ ಹಾಲನ್ನು ಕುದಿಸದೇ ಸೇವಿಸಬಾರದು, ಹಾಲನ್ನು ಉಕ್ಕುವ ಹಂತದವರೆಗೆ ಕಾಯಿಸಿದ ನಂತರ ಮಕ್ಕಳು ಸೇವಿಸಬಹುದಾದ (ಉಗುರು ಬೆಚ್ಚಗೆ) ಉಷ್ಣಾಂಶದವರೆಗೆ ತಣ್ಣಗೆ ಮಾಡಿ ಮಕ್ಕಳಿಗೆ ವಿತರಿಸಬೇಕು.
- ✓ ಹಾಲು ಕಾಯಿಸಿದ ಪಾತ್ರೆ, ಮುಚ್ಚಳ ಕದಡಲು ಉಪಯೋಗಿಸಿದ ಚಮಚ/ಸೌಟು, ಹಾಲಿನ ಕ್ಯಾನ್ ಮತ್ತು ಹಾಲು ಕುಡಿದ ಲೋಟಗಳನ್ನು ಕೂಡಲೇ ಸ್ವಚ್ಛಗೊಳಿಸಿ ಬೋರಲಾಗಿ ಸ್ವಚ್ಛವಾದ ಸ್ಥಳದಲ್ಲಿಡಬೇಕು.
- ✓ ಹಾಲಿಗೆ ಬಳಸುವ ಪಾತ್ರೆ ಮತ್ತು ಪರಿಕರಗಳನ್ನು ಬೇರೆ ಆಹಾರ, ಅನ್ನ, ಸಾಂಬಾರು, ಮೊಸರು ಮುಂತಾದವುಗಳನ್ನು ತಯಾರಿಸಲು ಉಪಯೋಗಿಸಬಾರದು. ಹಾಗೂ ಶೋಧಿಸುವ ಬಟ್ಟೆ, ಫಿಲ್ಟರ್‌ಗಳನ್ನು ಸ್ವಚ್ಛವಾಗಿ ತೊಳೆದು, ಒಣಗಿಸಿಡಬೇಕು.
- ✓ ಕಾಯಿಸಿದ ಹಾಲನ್ನು ಮಕ್ಕಳಿಗೆ ಸೇವನೆಗೆ ನೀಡುವ ಮುಂಚೆ ಕಾಯಿಸಿದ ಪಾತ್ರೆಯಿಂದ ಕಂಟೈನರ್‌ಗೆ ವರ್ಗಾಹಿಸುವ ಮೊದಲು ಮತ್ತೊಮ್ಮೆ ಕಡ್ಡಾಯವಾಗಿ ಶೋಧಿಸುವುದು.
- ✓ ಹಾಲಿನ ಪುಡಿಯಯ ಗುಣಮಟ್ಟ ಹಾಗೂ ಸರಬರಾಜಿನಲ್ಲಿ ಸಮಸ್ಯೆಯಿದ್ದಲ್ಲಿ ಡೇರಿ/ಒಕ್ಕೂಟದ ಅಥವಾ ಪ್ಯಾಕೆಟ್ ಮೇಲೆ ಮುದ್ರಿಸಿರುವ ದೂರವಾಣಿಗೆ ಕರೆ ಮಾಡಿ ಗಮನಕ್ಕೆ ತರುವುದು.

13. **ಪಾತ್ರೆ ಪರಿಕರಗಳ ಒದಗಿಸುವ ಬಗ್ಗೆ**

ಕೆನೆ ಭರಿತ ಹಾಲಿನ ಪುಡಿಯನ್ನು ಶೇಕರಿಸಿಡಲು ಮತ್ತು ಹಾಲನ್ನು ಕಾಯಿಸುವ ಸಲುವಾಗಿ ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲಾ ಅನುದಾನ, ಶಾಲಾ ಸಂಚಿತ ನಿಧಿ, ದಾನಿಗಳ ಸಹಕಾರ, ಅಕ್ಷರ ದಾಸೋಹದ ಪಾತ್ರೆ ಪರಿಕರಗಳ ಅನುದಾನ, ಅಕ್ಷರ ದಾಸೋಹದ ಖಾತೆಯಲ್ಲಿನ ಸಂಚಿತ ಮೊತ್ತಗಳಿಂದ ಅಗತ್ಯ ಗಾತ್ರದ stainless steel ಅಥವಾ Bottom thick aluminum ಪಾತ್ರೆ ಪರಿಕರಗಳು, ಪರಿಮಾಣ ಅಳೆಯಲು ಅಳತೆ ಮಾಪನ(ಲೀಟರ್), ಹಾಲಿನ ಕುಕ್ಕರ್, ಹಾಲನ್ನು ಶೋಧಿಸುವ ಜಾಲರಿ, ಹಾಲನ್ನು ಕಲಕಲು ಸೌಟು, ಮಕ್ಕಳಿಗೆ ಹಾಲನ್ನು ಒಂದೇ ಪ್ರಮಾಣದಲ್ಲಿ ವಿತರಿಸಲು 150 ಮಿ.ಲಿ ಗಿಂತ ಹೆಚ್ಚಿನ ಹಾಲು ಹಿಡಿಯುವ ಮಾಪನ ಸಾಮಾಗ್ರಿ/ಸೌಟು, ಬೇಕಾಗುವ ಲೋಟ, ಇತರೆ ಸಾಮಾಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು.

**14. ಅನುದಾನದ ಬಳಕೆ**

- ಕೆನೆಭರಿತ ಹಾಲಿನ ಪುಡಿಗೆ ತಗಲುವ ವೆಚ್ಚ ಹಾಗೂ ಕೆನೆಭರಿತ ಹಾಲಿನ ಪುಡಿಯಿಂದ ಹಾಲನ್ನು ತಯಾರಿಸಲು ತಗಲುವ ತಯಾರಿಕಾ ವೆಚ್ಚವನ್ನು ಮಧ್ಯಾಹ್ನ ಉಪಹಾರ ಯೋಜನೆಯ ಲೆಕ್ಕಶೀರ್ಷಿಕೆಯಡಿ ಕಲ್ಪಿಸಿರುವ ಅನುದಾನದಡಿಯಲ್ಲಿಯೇ ಭರಿಸುವುದು.
- ಕೆನೆಭರಿತ ಹಾಲಿನ ಪುಡಿಗೆ ತಗಲುವ ವೆಚ್ಚವನ್ನು ಶಾಲಾ ಸ್ವೀಕೃತಿ ಮತ್ತು ದೃಢೀಕರಣಗಳನ್ನಾಧರಿಸಿ ಕೆ.ಎಂ.ಎಫ್ ಸಲ್ಲಿಸುವ (ಕಾಲಕಾಲಕ್ಕೆ ಬದಲಾಗುವ ತೆರಿಗೆ ಸೇರಿಸಿದ) ಬಿಲ್ಲಿಗೆ ಎದುರಾಗಿ ಅನುದಾನಗಳನ್ನು ಜಿಲ್ಲಾ ಹಂತದಲ್ಲಿ ಕೆ.ಎಂ.ಎಫ್‌ಗೆ ಬಿಡುಗಡೆಗೊಳಿಸುವುದು.
- ಕೆನೆ ಭರಿತ ಹಾಲಿನ ಪುಡಿಯಿಂದ ಹಾಲನ್ನು ತಯಾರಿಸಲು ತಗಲುವ ತಯಾರಿಕಾ ವೆಚ್ಚವನ್ನು ಶಾಲೆಯ ಅಕ್ಷರ ದಾಸೋಹ ಖಾತೆಗೆ ಎರಡು ತಿಂಗಳ ಮುಂಚಿತವಾಗಿ ಜಿಲ್ಲಾ/ತಾಲ್ಲೂಕು ಪಂಚಾಯತ್ ಹಂತದಿಂದ ನೇರವಾಗಿ ಬಿಡುಗಡೆಗೊಳಿಸುವುದು.
- ತಯಾರಿಕಾ ವೆಚ್ಚಗಳಲ್ಲಿ ಕಾಯಿಸಲು ತಗಲುವ ಇಂಧನ ವೆಚ್ಚ, ಸಕ್ಕರೆಗೆ ತಗಲುವ ವೆಚ್ಚ, ಅಡುಗೆಯವರ ಸಂಭಾವನೆ, ಸರಬರಾಜು/ಇತರೆ ವೆಚ್ಚಗಳು ಒಳಗೊಂಡಿರುತ್ತವೆ.
- ಅಡುಗೆ ಸಿಬ್ಬಂದಿಗೆ ಪ್ರತಿ ಮಾಹೆಯಾನ ರೂ.100 ಗಳ ಗೌರವ ಸಂಭಾವನೆಯನ್ನು ಅಕ್ಷರ ದಾಸೋಹದ ಮಾಸಿಕ ಗೌರವ ಸಂಭಾವನೆಯೊಂದಿಗೆ ಹೆಚ್ಚುವರಿಯಾಗಿ ಬಿಡುಗಡೆಗೊಳಿಸುವುದು.

**15. ದಾಖಲೆಗಳ ನಿರ್ವಹಣೆ :**

- ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿ ಶಾಲೆಗಳಿಂದ ಸ್ವೀಕರಿಸಿದ ಬೇಡಿಕೆಗಳ ವಿವರಗಳನ್ನು ನಿರ್ವಹಿಸುವುದು ಮತ್ತು ಅನುದಾನ ಬಿಡುಗಡೆಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸುವುದು.
- ದಾಖಲೆಗಳ ನಿರ್ವಹಣೆ ಆಯಾ ಶಾಲೆಯ ಮುಖ್ಯ ಅಡುಗೆಯವರದ್ದಾಗಿರುತ್ತದೆ ಮತ್ತು ಮೇಲ್ವಿಚಾರಣೆ ಆಯಾ ಶಾಲಾ ಮುಖ್ಯ ಶಿಕ್ಷಕರು/ಎಸ್.ಡಿ.ಎಂ.ಸಿ ಯದ್ದಾಗಿರುತ್ತದೆ.
- ಪ್ರತಿ ಮಾಹೆಗೆ ಅಗತ್ಯವಿರುವ ಹಾಲಿನ ಪುಡಿಯ ಪ್ರಮಾಣದನ್ವಯ ಸ್ವೀಕರಿಸಿದ ಪ್ರಮಾಣ, ಸೀಲ್ ಮಾಡಿರುವ ಬಗ್ಗೆ ದೃಢೀಕರಣ, ತಯಾರಿಸಿದ ದಿನಾಂಕ, ಪ್ಯಾಕ್ ಮಾಡಿದ ದಿನಾಂಕ, ಮತ್ತು ಎಕ್ಸ್‌ಪೈರಿ ದಿನಾಂಕಗಳನ್ನು ನಮೂದಿಸಿ, ಸ್ವೀಕರಿಸಿದ ದಿನಗಳ ಬಗ್ಗೆ ಮತ್ತು ಗುಣಮಟ್ಟದ ಬಗ್ಗೆ ವಹಿಯಲ್ಲಿ ನಿರ್ವಹಿಸುವುದು.
- ಖರ್ಚು ವೆಚ್ಚಗಳ ಬಗ್ಗೆ ಪ್ರತಿ ದಿನ ಅಕ್ಷರ ದಾಸೋಹದ ನಗದು ವಹಿಯಲ್ಲಿಯೇ ಅಕ್ಷರ ದಾಸೋಹದ ಅಡುಗೆ ತಯಾರಿಕಾ ವೆಚ್ಚದ ಜೊತೆಗೆ ನಮೂದಿಸಿ ನಿರ್ವಹಿಸುವುದು.
- ಪ್ರತಿ ಮಾಹೆಯಾನ ಖರ್ಚು ವೆಚ್ಚಗಳ ಬಗ್ಗೆ ಆಯಾ ಮಾಹೆಯ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಚರ್ಚೆ ಮಾಡಿ ಅನುಮೋದನೆ ಪಡೆಯತಕ್ಕದ್ದು.

**16. ನೋಡಲ್ ಅಧಿಕಾರಿಯ ನೇಮಕ :**

ವಿವಿಧ ಹಂತಗಳಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಮಧ್ಯಾಹ್ನದ ಬಿಸಿಯೂಟ ಯೋಜನೆಯ ಮತ್ತು ಮಕ್ಕಳಿಗೆ ಕೆನೆ ಭರಿತ ಹಾಲಿನ ಪುಡಿಯಿಂದ ತಯಾರಿಸಿದ ಹಾಲನ್ನು ಕೊಡುವ ಯೋಜನೆಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡುವುದು.

- ಜಿಲ್ಲಾ ಪಂಚಾಯತ್ ಹಂತದಲ್ಲಿ– ಶಿಕ್ಷಣಾಧಿಕಾರಿಗಳು(ಅಕ್ಷರ ದಾಸೋಹ)
- ಉಪನಿರ್ದೇಶಕರು(ಆಡಳಿತ) ರವರ ಕಛೇರಿ ಹಂತದಲ್ಲಿ– ಉಪನಿರ್ದೇಶಕರು(ಆಡಳಿತ)ರವರ ಕಛೇರಿಯ ಶಿಕ್ಷಣಾಧಿಕಾರಿಗಳು.
- ತಾಲ್ಲೂಕು ಪಂಚಾಯತ್ ಹಂತದಲ್ಲಿ – ಸಹಾಯಕ ನಿರ್ದೇಶಕರು(ಅಕ್ಷರ ದಾಸೋಹ)
- ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಂತದಲ್ಲಿ– ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಪದವೀಧರ ಶಿಕ್ಷಣ ಸಂಯೋಜಕರು

**17. ಹಾಲಿನ ಪರಿಮಾಣ ಮತ್ತು ಪರಿವರ್ತನಾ ವೆಚ್ಚದ ವಿವರ :**

**ಪ್ರತಿ ಮಗುವಿಗೆ ಒಂದು ಬಾರಿಗೆ**

| ಕ್ರ ಸಂ | ಪದಾರ್ಥ/ವಿವರ | ಪರಿಮಾಣ | ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಹಾಲಿನ ಪುಡಿ | 18 ಗ್ರಾಂ (ತೆರಿಗೆ ಹೊರತುಪಡಿಸಿ) | 4.05 |
| 2 | ಸಕ್ಕರೆ | 10 ಗ್ರಾಂ | 0.32 |
| 3 | ಇಂಧನ | – | 0.15 |
| 4 | ಇತರೆ | 0.12 | 0.12 |
| **ಒಟ್ಟು** | | | **4.64** |
| **ಅಡುಗೆಯವರ ಗೌರವ ಸಂಭಾವನೆ ಮಾಸಿಕ** | | | **100.00** |

ಅಡುಗೆಯವರಿಗೆ ಕನಿಷ್ಠ ಪ್ರತಿ ಮಾಹೆಯಾನ ರೂ.100 ಗಳ ಗೌರವ ಸಂಭಾವನೆಯನ್ನು ಅಕ್ಷರ ದಾಸೋಹದ ಮಾಸಿಕ ಗೌರವ ಸಂಭಾವನೆಯೊಂದಿಗೆ ಹೆಚ್ಚುವರಿಯಾಗಿ ಬಿಡುಗಡೆಗೊಳಿಸುವುದು.

**18. ತರಬೇತಿ :**

ಅಕ್ಷರ ದಾಸೋಹದ ಮಧ್ಯಾಹ್ನದ ಬಿಸಿಯೂಟ ಯೋಜನೆ ನೀಡುವ ಅಡುಗೆಯವರ ತರಬೇತಿ ಕಾರ್ಯಕ್ರಮಗಳಲ್ಲಿ ಕೆ.ಎಂ.ಎಫ್ ನ Field Officers ಸಹಕಾರ ಪಡೆದು ಹಾಲಿನ ಪುಡಿಯನ್ನು ಹಾಲನ್ನಾಗಿ ಪರಿವರ್ತಿಸುವ ಮತ್ತು ಹಾಲನ್ನು ಕಾಯಿಸುವ ಬಗ್ಗೆ ಮತ್ತು ತೆಗೆದುಕೊಳ್ಳುವ ಮುಂಜಾಗ್ರತೆಯ ಬಗ್ಗೆ ತರಬೇತಿಗಳನ್ನು ನೀಡುವುದು.

**19. ಸ್ವಯಂಸೇವಾ ಸಂಸ್ಥೆಗಳ ಪಾತ್ರ :**

- ಎನ್.ಜಿ.ಓಗಳು ಹಿಂದಿನ ದಿನದ ಫಲಾನುಭವಿಗಳ/ಹಾಜರಾತಿ ಆಧಾರದ ಮೇಲೆ ಶಾಲಾ ಮುಖ್ಯ ಶಿಕ್ಷಕರ ಬೇಡಿಕೆಯನ್ವಯ ಕೆನೆ ಭರಿತ ಹಾಲನ ಪುಡಿಯಿಂದ ಸಿದ್ದಪಡಿಸಿದ ಹಾಲನ್ನು ಶಾಲೆಗೆ ಶಾಲಾ ಪ್ರಾರಂಭಕ್ಕೂ 15 ರಿಂದ 30 ನಿಮಿಷಗಳ ಮುಂಚಿತವಾಗಿ ಶಾಲಾ ಬಾಗಿಲಿಗೆ ಶಾಲಾ ಮುಖ್ಯ ಶಿಕ್ಷಕರು/ಶಿಕ್ಷಕರು/ಮುಖ್ಯ ಅಡುಗೆಯವರ ಸಮ್ಮುಖದಲ್ಲಿ ಸರಬರಾಜು ಮಾಡುವುದು.
- ಎನ್.ಜಿ.ಓ ಅಡುಗೆ ಕೇಂದ್ರದ ಬಾಗಿಲಿಗೆ ಅಗತ್ಯವಿರುವ ಹಾಲಿನ ಪುಡಿಯನ್ನು ಬೇಡಿಕೆಯ ಅನುಸಾರ ಕೆ.ಎಂ.ಎಫ್‌ಮೂಲಕ ಪಡೆಯುವುದು.
- ಪ್ರತಿ ಮಾಹೆಗೆ ಅಗತ್ಯವಿರುವ ಹಾಲಿನ ಪುಡಿಯ ಪ್ರಮಾಣದನ್ವಯ ಸ್ವೀಕರಿಸಸಿದ ಪ್ರಮಾಣ, ಸೀಲ್ ಮಾಡಿರುವ ಬಗ್ಗೆ ದೃಢೀಕರಣ, ತಯಾರಿಸಿದ ದಿನಾಂಕ, ಪ್ಯಾಕ್ ಮಾಡಿದ ದಿನಾಂಕ, ಮತ್ತು ಎಕ್ಸ್‌ಪೈರಿ ದಿನಾಂಕಗಳನ್ನು ನಮೂದಿಸಿ, ಸ್ವೀಕರಿಸಿದ ದಿನಗಳ ಬಗ್ಗೆ ಮತ್ತು ಗುಣಮಟ್ಟದ ಬಗ್ಗೆ ವಹಿಯಲ್ಲಿ ನಿರ್ವಹಿಸುವುದು.
- ಕೆನೆಭರಿತ ಹಾಲಿನ ಪುಡಿಯನ್ನು ಉಪಯೋಗಿಸುವ ಬಗ್ಗೆ ಮೇಲೆ ತಿಳಿಸಿರುವಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು.
- ಮಕ್ಕಳ ಸಂಖ್ಯೆಗನುಗುಣವಾಗಿ ಶಾಲೆಗಳಲ್ಲಿ ಫಲಾನುಭವಿಗಳ ಸಂಖ್ಯೆಗನುಗುಣವಾಗಿ ನಿಗದಿಪಡಿಸಿರುವ ಪರಿಮಾಣದಂತೆ ಪ್ರತ್ಯೇಕವಾದ ಸ್ವಚ್ಛಗೊಳಿಸಿದ ಪ್ಲಾಸ್ಕ್‌ಗಳಲ್ಲಿ ಸುರಕ್ಷಿತವಾಗಿ ತಲುಪಿಸುವ ವ್ಯವಸ್ಥೆ ಮಾಡುವುದು.
- ಶಾಲಾ ಪ್ರಾರಂಭ ಸಮಯದಲ್ಲಿ ಪ್ರಾರ್ಥನೆಯ ನಂತರ ನೀಡುವುದರಿಂದ ಶಾಲಾ ತರಗತಿಗಳ ಪ್ರಾರಂಭಕ್ಕೂ ಮುನ್ನ ಸರಬರಾಜು ಮಾಡುವುದು.
- ಶಾಲೆಗಳಿಗೆ ಸರಬರಾಜಾದ ಹಾಲಿನ ಪ್ಲಾಸ್ಕ್/ಕಂಟೈನರ್‌ಗಳನ್ನು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು/ಅಡುಗೆ ಸಹಾಯಕರು ಪಡೆದುಕೊಂಡು ಸುರಕ್ಷಿತವಾದ ಸ್ಥಳದಲ್ಲಿರಿಸಿ ನಂತರ ಮಕ್ಕಳಿಗೆ ವಿತರಿಸುವುದು.
- ಜಿಲ್ಲಾ ಪಂಚಾಯತ್‌ಗಳು ಸ್ವಯಂ ಸೇವಾ ಸಂಸ್ಥೆಗಳು ಹಾಲಿನ ಪುಡಿಯನ್ನು ಹಾಲನ್ನಾಗಿ ಪರಿವರ್ತಿಸಿ, ಸಕ್ಕರೆ ಬೆರೆಸಿ, ಕಾಯಿಸಿ, ಸರಬರಾಜು ಮಾಡಲು ತಗಲುವ ಪರಿವರ್ತನಾ ವೆಚ್ಚವನ್ನು ಮಧ್ಯಾಹ್ನ ಬಿಸಿಯೂಟದ ಅಡುಗೆ ತಯಾರಿಕಾ ವೆಚ್ಚದೊಂದಿಗೆ ಬಿಡುಗಡೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ529/ವೆಚ್ಚ8/2013 ದಿನಾಂಕ:26–07–2013 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

## ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ನೃಪತುಂಗ ರಸ್ತೆ ಬೆಂಗಳೂರು

ಎಂ.ಸಿ/ಐ.ಇಡಿ.ಎಸ್.ಎಸ್./ಜಿ.ಹಂ.ಕಾ.ನಿ/2013–14 ದಿನಾಂಕ:30..08.2013

**ಸುತ್ತೋಲೆ**

ವಿಷಯ:– ವಿಶೇಷ ಅಗತ್ಯವುಳ್ಳ ಪ್ರೌಢಶಾಲಾ ಮಕ್ಕಳ "ಸಮನ್ವಯಶಿಕ್ಷಣ" ಮಧ್ಯವರ್ತನೆಯ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ.

ಉಲ್ಲೇಖ:–1. ಎಂ.ಹೆಚ್.ಆರ್.ಡಿ ನವದೆಹಲಿ ಇವರ ನಡವಳಿ ಪತ್ರ ಸಂಖ್ಯೆ: ಈ 21/2012–13 RMSA.1.Dated F.No.14-7/2009-1E Dated:13.8.2009:30.7.2013.

2. ಸಮ ಸುತ್ತೋಲೆ ಸಂಖ್ಯೆ:ದಿನಾಂಕ 15.7.2013..
3. ದಿನಾಂಕ:12.8.2013 ರಂದು ನಡೆದ ಸಭೆಯಲ್ಲಿ ರಾಜ್ಯ ಯೋಜನಾ ನಿರ್ದೇಶಕರು ನೀಡಿದ ಮೌಖಿಕ ಆದೇಶ.
4. ಎಂ.ಹೆಚ್.ಆರ್.ಡಿ. ಪತ್ರ ಸಂಖ್ಯೆ1438/2002- 1E D C ದಿನಾಂಕ :21.10.2008 ಮತ್ತು F.No.14-7/2009-1E ದಿನಾಂಕ:13.8.2009:

* * * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಅನುದಾನಿಕ ಪ್ರೌಢಶಾಲೆಗಳಲ್ಲಿ 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯವುಳ್ಳ ಮಕ್ಕಳ ಸಮನ್ವಯ ಶಿಕ್ಷಣ ಚಟುವಟಿಕೆಗಳನ್ನು 2009–10 ರಿಂದ 2012–13 ರವರೆಗೆ ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು ಅದನ್ನು 2013–14ನೇ ಸಾಲಿನಿಂದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಆಭಿಯಾನದ ಮೂಲಕ ಇಲಾಖೆಯ ಒಂದು ಕಾರ್ಯಕ್ರಮವನ್ನಾಗಿ ಹಮ್ಮಿಕೊಳ್ಳಲಾಗುತ್ತಿದೆ. ಇದಕ್ಕಾಗಿ ಕೇಂದ್ರ ಸಕಾರದಿಂದ ಉಲ್ಲೇಖ–1ರಲ್ಲಿ ಅನುಮೋದನೆ ದೊರತಿರುತ್ತದೆ ಈ ಹಿನ್ನೆಲೆಯಲ್ಲಿ ಐ.ಇಡಿ.ಎಸ್.ಎಸ್. ಯೋಜನೆಯ ಮಧ್ಯವರ್ತನೆಗಳು ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ಶಾಲಾ ಹಂತದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಲಾಗುತ್ತಿದೆ.

**1. ವಿದ್ಯಾರ್ಥಿಗಳಿಗಾಗಿ ಇರುವ ವಿಶೇಷ ಸೌಲಭ್ಯಗಳು**

ಐ.ಇ.ಡಿ.ಎಸ್.ಎಸ್. ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2013–14ನೇ ಸಾಲಿಗಾಗಿ 10175 ವಿದ್ಯಾರ್ಥಿಗಳಿಗೆ ರೂ.269.96 ಲಕ್ಷ ರೂಗಳ ಯೋಜನೆಯನ್ನು ಅನುಮೋದಿಸಲಾಗಿದೆ. ಆದರಂತೆ ಜಿಲ್ಲಾ ಹಂತಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಪ್ರತಿಯೊಂದು ಯೋಜನೆಗೆ ನಿಗಧಿಪಡಿಸಿದ ಅನುದಾನದ ಮಿತಿಯಲ್ಲಿಯೇ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಕಡ್ಡಾಯವಾಗಿದೆ ಯಾವುದೇ ಕಾರಣಕ್ಕೂ ಒಂದು ಚಟುವಟಿಕೆಯ ಅನುದಾನವನ್ನು ಮತ್ತೊಂದು ಚಟುವಟಿಕೆಗೆ ಬಳಸಲು ಅವಕಾಶವಿರುವುದಿಲ್ಲ ಪ್ರತಿ ತಿಂಗಳು ಆದ ಖರ್ಚು ವೆಚ್ಚದ ವಿವರಗಳನ್ನು ಆರ್.ಎಂ.ಎಸ್.ಎ ಯಲ್ಲಿನ ನಿಯಮದಂತೆ ಕಳುಹಿಸಬೇಕಾಗಿರುತ್ತದೆ.

**ಎ. ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ನ್ಯೂನ್ಯತಾ ಮೌಲ್ಯಾಂಕನ ತಪಾಸಣಾ ಶಿಬಿರ**

ವಿಶೇಷ ಗಣತಿಯ ಮೂಲಕ ಗುರುತಿಸಲ್ಪಟ್ಟಿರುವ ವಿಕಲಚೇತನ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಪೂರಕವಾಗಿ ನ್ಯೂನ್ಯತೆಯ ಪ್ರಮಾಣವನ್ನು ಅರಿಯುವುದು ಆ ಮೂಲಕ ಅಗತ್ಯ ಸಾಧನ ಸಲಕರಣೆಗಳನ್ನು ನೀಡುವುದು ಅತ್ಯಂತ ಅವಶ್ಯ. ಈ ಹಿನ್ನೆಲೆಯಲ್ಲಿ 2013–14ನೇ ಸಾಲಿನಲ್ಲಿ ನಿಗಧಿ ಪಡಿಸಿರುವ ಸರ್ಕಾರ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 5707 ವಿಕಲಚೇತನ ಮಕ್ಕಳ ವೈದ್ಯಕೀಯ ತಪಾಸಣೆ ಮಾಡುವುದು. 2013–14ನೇ ಸಾಲಿಗಾಗಿ ಪ್ರತಿ ಮಗುವಿಗೆ ರೂ.150ರಂತೆ 5707 ವಿದ್ಯಾರ್ಥಿಗಳಿಗೆ ಅನುದಾನ ಬಿಡುಗಡೆ ಮಾಡುವುದಾಗಿ ಎಂ.ಹೆಚ್.ಆರ್.ಡಿ. ಅನುಮೋದನೆ ನೀಡಿರುತ್ತದೆ. ಜಿಲ್ಲಾವಾರು ಪಟ್ಟಿಯನ್ನು ಅನುಬಂಧ–1ರಲ್ಲಿ ಒದಗಿಸಲಾಗಿದ್ದು ಅದರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಬಗ್ಗೆ ದಿನಾಂಕ: 14.08.2013 ರಂದು ಸುತ್ತೋಲೆಯನ್ನು ನೀಡಲಾಗಿದ್ದು ಅದರಂತೆ ಕ್ರಮ ಕೈಗೊಳ್ಳುವುದು.

**ಬಿ. ಸಾಧನ ಸಲಕರಣೆಗಳನ್ನು ಒದಗಿಸುವುದು**

ವಿದ್ಯಾರ್ಥಿಗಳಿಗೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಸಲಹೆಯ ವೈದ್ಯರ ಮೇರೆಗೆ ಪಟ್ಟಿ ಮಾಡುವುದು ಮತ್ತು ಅವುಗಳಿಗೆ ತಗಲುವ ವೆಚ್ಚ ವಿವರಗಳನ್ನು ಕೂಡಲೆ ರಾಜ್ಯ ಕಛೇರಿಗೆ ಮತ್ತು ಈ ಕಛೇರಿಗೆ ಒದಗಿಸುವದು. ರಾಜ್ಯದ ವಿದ್ಯಾರ್ಥಿಗಳಿಗೆ ಅಗತ್ಯ ವಿರುವ ಸಾಧನಸಲಕರಣಗಳು ಮತ್ತು ಅವುಗಳಿಗೆ ತಗಲುವ ವೆಚ್ಚ ವಿವರಗಳನ್ನು ಎಂ.ಹೆಚ್.ಆರ್.ಡಿ.ಗೆ ಸಲ್ಲಿಸಿದ ನಂತರ ಮಾತ್ರವೇ ಅನುದಾನ ಬಿಡುಗಡೆಯಾಗುವುದು. ಈ ಹಿನ್ನೆಲೆಯಲ್ಲಿ ವೈದ್ಯಕೀಯ ತಪಾಸಣೆ ಮತ್ತು ಅದರ ಶಿಫಾರಸ್ಸನ್ನು ಅತೀ ಶೀಘ್ರವಾಗಿ ಒದಗಿಸುವುದು ಸಾಧನ ಸಲಕರಣೆಗಳನ್ನು ಖರೀದಿಸುವ ಸಂಬಂಧ ಈಗಾಗಲೆ ಹೊರಡಿಸಲಾಗಿರುವ ಸುತ್ತೋಲೆಯಂತೆ ಅಗತ್ಯ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವುದು.

**ಸಿ. ಪುಸ್ತಕ ಮತ್ತು ಸ್ಟೇಷನರಿ ವಸ್ತುಗಳ ಖರೀದಿ**

ಈ ಯೋಜನೆಯಲ್ಲಿ ಪ್ರತಿಯೊಬ್ಬ ವಿಶೇಷ ಅಗತ್ಯವುಳ್ಳ ವಿಕಲಚೇತನ ವಿದ್ಯಾರ್ಥಿಗಳಿಗೆ ಅವರ ಕಲಿಕೆಗೆ ಅಗತ್ಯವಿರುವ ಪುಸ್ತಕ ಮತ್ತು ಸ್ಟೇಷನರಿ ವಸ್ತುಗಳನ್ನು ಒದಗಿಸಲು ಅವಕಾಶವಿದೆ. 2013-14ನೇ ಸಾಲಿಗಾಗಿ 10175 ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ.400ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಅನುದಾನದಲ್ಲಿ ಪ್ರತಿ ವಿದ್ಯಾರ್ಥಿಗೆ ಅವರಿಗೆ ಅಗತ್ಯವಿರುವ ಬ್ರೈಲ್ ಪಠ್ಯಪುಸ್ತಕಗಳು, ಆಡಿಯೋ ಟೇಪುಗಳು ಮಾತನಾಡುವ ಪುಸ್ತಕಗಳು, ದೊಡ್ಡ ಅಕ್ಷರಗಳಲ್ಲಿ ಜೆರಾಕ್ಸ್ ಮಾಡಿಸಲ್ಪಟ್ಟಿರುವ ಪಠ್ಯ ಪುಸ್ತಕಗಳು ಇತ್ಯಾದಿ ಬ್ರೈಲ್ ಪುಸ್ತಕಗಳನ್ನು ಖರೀದಿಸುವ ಸಂಬಂಧ ಈ ಕಛೇರಿಯು ಹೆಚ್ಚಿನ ಮಾಹಿತಿಯನ್ನು ಎಸ್,ಎಸ್.ಎ. ಐ.ಡಿ ವಿಭಾಗದಿಂದ ಮತ್ತು ವಿಷಯಗಳ ಬಗ್ಗೆ ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿಯಿಂದ ಪಡೆದು ಮತ್ತೊಮ್ಮೆ ವಿವರವಾಗಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾವಾರು ಅಂಕಿ ಅಂಶಗಳ ಆಧಾರದ ಮೇಲೆ ರಾಜ್ಯ ಕಛೇರಿಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಆರ್.ಎಂ.ಎಸ್.ಎ. ಖರೀದಿ ನಿಯಮಗಳನ್ನು ಅನುಸರಿಸಿ ಪುಸ್ತಕ ಮತ್ತು ಸ್ಟೇಷನರಿಗಳನ್ನು ಜಿಲ್ಲಾವಾರು/ ತಾಲ್ಲೂಕುವಾರು/ಶಾಲಾವಾರು ಖರೀದಿಸುವುದು.

**ಡಿ. ಸಾರಿಗೆ ವೆಚ್ಚ.**

ಶಾಲೆಗೆ ವಾಹನಗಳ ಮೂಲಕ ಬರುವ ವಿಕಲ ಚೇತನ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗುವುದು. ಇದಕ್ಕಗಿ ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ. 50/- ರಂತೆ ಒಟ್ಟು 500 ರೂಗಳನ್ನು ನಿಗಧಿಪಡಿಸಲಾಗಿದೆ. 2013-14ನೇ ಸಾಲಿಗಾಗಿ ಒಟ್ಟು 3029 ವಿದ್ಯಾರ್ಥಿಗಳಿಗೆ ಈ ಅನುದಾನ ಲಭ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ಶಾಲಾವಾರು ವಾಹನಗಳ ಮೂಲಕ ಶಾಲೆಗೆ ಬರುವ ವಿಕಲಚೇತನ ವಿದ್ಯಾರ್ಥಿಗಳ ಮಾಹಿತಿಯನ್ನು ಕ್ರೋಢಿಕರಿಸಿ ಶಾಲಾವಾರು ವಿದ್ಯಾರ್ಥಿ ಮತ್ತು ಶಾಲಾ ಯೂ-ಡೈಸ್ ಸಂಖ್ಯೆಯೊಂದಿಗೆ ಮಾಹಿತಿಯನ್ನು ಒದಗಿಸುವುದು.

**ಇ. ಎಸ್ಕಾರ್ಟ್ ಭತ್ಯೆ.**

ಈ ಅನುದಾನವನ್ನು ತೀವ್ರತರವಾದ ದೇಹದ ಕೆಳಭಾಗದ(ಸೊಂಟ ಮತ್ತು ಕಾಲುಗಳ) ಅಂಗಗಳ ನ್ಯೂನ್ಯತೆಯುಳ್ಳ ವಿದ್ಯಾರ್ಥಿಗಳಿಗೆ ವಿಕಲಚೇತನ ಹೆಣ್ಣು ಮಕ್ಕಳಿಗೆ ಮತ್ತು ಮಾನಸಿಕ ಅಸ್ವಸ್ಥರಾದ ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು. ಇದಕ್ಕಾಗಿ ಪ್ರತಿ ತಿಂಗಳಿಗೆ ರೂ.75/- ರಂತೆ ಒಟ್ಟು 750/- ರೂಗಳನ್ನು ನಿಗಧಿಪಡಿಸಲಾಗಿದ್ದು ರಾಜ್ಯದಲ್ಲಿ ಒಟ್ಟು 2468 ವಿದ್ಯಾರ್ಥಿಗಳಿಗೆ ಈ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆ ದೊರೆತಿರುವುದು.

**ಎಫ್. ರೀಡರ್ ಭತ್ಯೆ.**

ಪೂರ್ಣ ಅಂಧತ್ವವಿರುವ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ/ ನೋಟ್ಸ್‌ಗಳನ್ನ ಓದಿ ಹೇಳುವ ಕಾರ್ಯಕ್ಕಾಗಿ ರೀಡರ್ ಭತ್ಯೆಯನ್ನು ಒದಗಿಸಲಾಗುತ್ತದೆ ಇದಕ್ಕಾಗಿ ಒಬ್ಬ ಓದುಗರಿಗೆ ಪ್ರತಿ ತಿಂಗಳಿಗೆ ರೂ. 50/- ರಂತೆ ಒಟ್ಟು ರೂ. 500/-ಗಳನ್ನು ಒದಗಿಸಲಾಗುವುದು. ಇದಕ್ಕಾಗಿ 2013-14ನೇ ಸಾಲಿಗಾಗಿ 598 ಓದುಗರಿಗೆ ಅನುದಾನ ಬಿಡುಗಡೆ ಮಾಡಲು ಅನುಮೋದನೆ ದೊರೆತಿದೆ. ಓದುವ ಕಾರ್ಯಕ್ಕಾಗಿ ಶಾಲೆಯಲ್ಲಿ ಸ್ಪಷ್ಟವಾಗಿ ಓದಲು ಬರುವ ಹಾಗು ಹಣಕಾಸಿನ ಅವಶ್ಯಕತೆಯಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಈ ಅವಕಾಶವನ್ನು ಒದಗಿಸುವುದು ಅಥವಾ 10ನೇ ತರಗತಿಗಿಂತ ಹೆಚ್ಚು ಓದಿದ್ದು ಸ್ಪಷ್ಟವಾಗಿ ಓದಲು ಬರುವವರನ್ನು ಇದಕ್ಕಾಗಿ ನೇಮಕ ಮಾಡಿಕೊಳ್ಳುವುದು.

**ಜಿ. ಹೆಣ್ಣುಮಕ್ಕಳಿಗೆ ವಿಶೇಷ ಭತ್ಯೆ ಒದಗಿಸುವುದು.**

ವಿಕಲಚೇತನ ಹೆಣ್ಣುಮಕ್ಕಳು ಹೆಚ್ಚಿನ ಬೇಧಭಾವವನ್ನು ಅನುಭವಿಸುವುದರಿಂದ ಮತ್ತು ಹೆಚ್ಚನ ವಿದ್ಯಾರ್ಥಿನಿಯರು ಪ್ರೌಢಶಾಲಾ ಹಂತದಲ್ಲಿ ವ್ಯಾಸಂಗವನ್ನು ಮುಂದುವರೆಸದ ಕಾರಣದಿಂದ ಅವರಿಗೆ ಮೆಲಿನ ಎಲ್ಲಾ ಸೌಲಭ್ಯಗಳೊಂದಿಗೆ ವಿಶೇಷವಾಗಿ ಮಾಸಿಕ ರೂ.200/- ರಂತೆ ಒಟ್ಟು ರೂ.2000/-ಗಳನ್ನು ವಿಶೇಷ ಭತ್ಯೆಯನ್ನು ಒದಗಿಸುವುದು. ಆದುದರಿಂದ ವಿಕಲಚೇತನ ಹೆಣ್ಣು ಮಕ್ಕಳನ್ನು ಗುರುತಿಸಿದ ಕೂಡಲೇ ಅವರ ಮತ್ತು ಶಾಲೆಯ ಯೂಡೈಸ್ ಸಂಖ್ಯೆಯೊಡನೆ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸುವುದು. ಪ್ರತಿಯೊಂದು ವಿದ್ಯಾರ್ಥಿನಿಗೆ ಆಕೆಯ ಶಾಲೆಯ ಉಳಿತಾಯ

ಖಾತೆಯಿರುವ ಬ್ಯಾಂಕಿನಲ್ಲಿ ಠೇವಣಿರಹಿತವಾಗಿ ಉಳಿತಾಯ ಖಾತೆಯನ್ನು ತೆರೆದು ಪ್ರತಿಯೊಬ್ಬ ವಿದ್ಯಾರ್ಥಿನಿಯ ಖಾತೆ ಸಂಖ್ಯೆಯನ್ನು ಸೆಪ್ಟೆಂಬರ್ ಅಂತ್ಯದೊಳಗಾಗಿ ಈ ಕಛೇರಿಗೆ ತಲುಪಿಸುವುದು. ಈ ಅನುದಾನವನ್ನು ಸಾದ್ಯವಾದಲ್ಲಿ ಈ ಕಛೇರಿಯಿಂದಲೇ ಅಥವಾ ಜಿಲ್ಲಾ ಉಪನಿರ್ದೇಶಕರ ಖಾತೆಯಿಂದಲೇ ನೇರವಾಗಿ ಉಳಿತಾಯ ಖಾತೆಗೆ ಹಣ ಜಮಾ ಮಾಡುವ ಕ್ರಮವನ್ನು ಕೈಗೊಳ್ಳಲಾಗುವುದು.

**2. ಇತರೆ ಸೌಲಭ್ಯಗಳು.**

**ಎ. ಹೊಸ ವಿಶೇಷ ಸಂಪನ್ಮೂಲ ಶಿಕ್ಷಕರ ವೇತನ.**

ಪ್ರತಿ 5 ರಿಂದ 10 ವಿಕಲಚೇತನ ವಿದ್ಯಾರ್ಥಿಗಳಿಗೆ ಒಬ್ಬ ವಿಶೇಷ ಸಂಪನ್ಮೂಲ ಶಿಕ್ಷಕರನ್ನು ನೇಮಿಸಿಕೊಳ್ಳಲು ಅವಕಾಶವಿದೆ. ಆದರೆ 2013–14ನೇ ಸಾಲಿಗಾಗಿ ರಾಜ್ಯದಲ್ಲಿ 440 ವಿಶೇಷ ಸಂಪನ್ಮೂಲ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ದೊರೆತಿರುತ್ತದೆ. ಈ ವರ್ಷದಲ್ಲಿ ಅಗತ್ಯವಿರುವ ತಾಲ್ಲೂಕುವಾರು ವಿಶೇಷ ಶಿಕ್ಷಕರ ಸಂಖ್ಯೆಯು ಪಟ್ಟಿಯನ್ನು ಈಗಾಗಲೇ ಒದಗಿಸಲಾಗಿದೆ. ಅದರಂತೆ ಮತ್ತು ದಿನಾಂಕ 12.08.2013ರ ಆದೇಶದಂತೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು. ಒಂದೇ ಶಾಲೆಯಲ್ಲಿ ಅಗತ್ಯವಿರುವ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದೊರೆಯದಿದ್ದಲ್ಲಿ ವಿಶೇಷ ಶಿಕ್ಷಕರನ್ನು ಸಮೀಪದ ಶಾಲೆಗೆ ವಾರಕ್ಕೆ 2–3ದಿನ ನಿಯೋಜನೆ ಮಾಡುವುದು, ಪ್ರತಿಯೊಬ್ಬ ವಿಶೇಷ ಶಿಕ್ಷಕರು, ಮುಖ್ಯ ಶಿಕ್ಷಕರ ಸಹಾಯದಿಂದ ವೇಳಾಪಟ್ಟಿಯನ್ನು ಸಿದ್ದಪಡಿಸಿಕೊಳ್ಳುವುದು ಮತ್ತು ಮುಖ್ಯ ಶಿಕ್ಷಕರು ಅವರ ತರಗತಿಗಳನ್ನು ವೀಕ್ಷಿಸಲು ಸೂಚನೆಗಳನ್ನು ಕೊಡುವುದು. ಪ್ರತಿ ತಿಂಗಳು ಶಿಕ್ಷಕರ ದಿನಚರಿ ಮತ್ತು ಮುಖ್ಯ ಶಿಕ್ಷಕರ ದೃಡೀಕರಣವನ್ನು ಪಡೆದು ವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವುದು.

ವಿಶೇಷ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಅವರ ವಿದ್ಯಾರ್ಹತೆಯನ್ನು ಮತ್ತು ಆರ್.ಸಿ.ಐ. ಸಂಖ್ಯೆಯನ್ನು ವಿಶೇಷವಾಗಿ ಗಮನಿಸುವುದು ಅವರ ಹೆಸರು ವಿದ್ಯಾರ್ಹತೆ ಮತ್ತು ಆರ್.ಸಿ.ಐ. ಸಂಖ್ಯೆಯ ವಿವರಗಳನ್ನು ಈ ಕಛೇರಿಗೆ ಕಳುಹಿಸಿ ಅದನ್ನು ಎಂ.ಹೆಚ್.ಆರ್.ಡಿ.ಗೆ ಒದಗಿಸಿದ ನಂತರವಷ್ಟೇ ಅವರ ವೇತನವು ಬಿಡುಗಡೆಯಾಗುವುದು ಇದನ್ನು ಸದರಿ ಶಿಕ್ಷಕರಿಗೆ ಮತ್ತು ಸಂಸ್ಥೆಯವರಿಗೆ ಸ್ಪಷ್ಟವಾಗಿ ತಿಳಿಸುವುದು.

ಆಯ್ಕೆಯಾದ ವಿಶೇಷ ಸಂಪನ್ಮೂಲ ಶಿಕ್ಷಕರ ವೇತನದಲ್ಲಿ ನಿಯಮಾನುಸಾರ ವೃತ್ತಿತೆರಿಗೆ ಮತ್ತು ಆದಾಯ ತೆರಿಗೆಯನ್ನು ನಿಗಧಿತ ಅವಧಿಯಲ್ಲಿ ಕಟಾಯಿಸುವುದರೊಂದಿಗೆ ತ್ರೈಮಾಸಿಕ ವರದಿಯನ್ನು ನಿಯಮಿತ ದಿನಾಂಕದೊಂದಿಗೆ ಸಂಬಂಧಿಸಿದ ಇಲಾಖೆಗೆ ಸಲ್ಲಿಸುವುದರೊಂದಿಗೆ ತಪಾಸಣಾ ಸಮಯದಲ್ಲಿ ಮಾಹಿತಿಯನ್ನು ಒದಗಿಸುವುದು.

**A. ವಿಶೇಷ ಸಂಪನ್ಮೂಲ ಶಿಕ್ಷಕರಿಗೆ ಗೌರವಭತ್ಯೆ:**

ವಿಶೇಷ ಸಂಪನ್ಮೂಲ ಶಿಕ್ಷಕರಿಗೆ ಪ್ರತಿ ತಿಂಗಳು ರೂ.400ರಂತೆ ಆರು ತಿಂಗಳಿಗೆ ಗೌರವಧನವನ್ನು ವಿತರಿಸಬೇಕಾಗುತ್ತದೆ ಇದನ್ನು ಸಂಬಂಧಿಸಿದ ಸಂಪನ್ಮೂಲ ಶಿಕ್ಷಕರ ಉಳಿತಾಯ ಖಾತೆಗೆ ನೇರವಾಗಿ ಇ.ಸಿ.ಎಸ್ ಮೂಲಕ ಒದಗಿಸುವುದು ಇದಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳು ಅವರ ಕಾರ್ಯ ನಿರ್ವಹಣೆಯ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರಿಂದ ವರದಿಯನ್ನು ತರಸಿಕೊಂಡು ಅವರ ಶಿಫಾರಸ್ಸಿನ ಆಧಾರದ ಮೇಲೆ ಗೌರವ ಧನವನ್ನು ಬಿಡುಗಡೆ ಮಾಡುವುದು.

**B. ತಾಲ್ಲೂಕು ಮಟ್ಟದಲ್ಲಿ ಸಂಪನ್ಮೂಲ ಕೇಂದ್ರಗಳ ಸಲಕರಣೆಗಳ ಖರೀದಿ:**

ಪ್ರಸ್ತುತ ಈಗಾಗಲೇ ಸರ್ವಶಿಕ್ಷಣ ಅಭಿಯಾನ ಯೋಜನೆಯಲ್ಲಿ ನಿರ್ಮಾಣಗೊಂಡು ಕಾರ್ಯ ನಿರ್ವಹಿಸುತ್ತಿರುವ ಸಂಪನ್ಮೂಲ ಕೇಂದ್ರಗಳನ್ನೇ ಐ.ಇಡಿ.ಎಸ್.ಎಸ್. ಯೋಜನೆಗೂ ಬಳಸಿಕೊಳ್ಳುವ ಯೋಜನೆ ಮಾಡಿದ್ದು ಅದರಂತೆ 2013–14 ನೇ ಸಾಲಿನಲ್ಲಿ ಪ್ರತಿ ಸಂಪನ್ಮೂಲ ಕೇಂದ್ರಕ್ಕೆ ರೂ.70000ರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಇದಕ್ಕಾಗಿ ಪ್ರತಿಯೊಂದು ಸಂಪನ್ಮೂಲ ಕೇಂದ್ರದಲ್ಲಿನ ಸಾಧನ ಸಲಕರಣಗಳಲ್ಲಿ 9 ಮತ್ತು 10ನೇ ತರಗತಿಯ ವಿಕಲಚೇತನ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ಪಟ್ಟಿ ಮಾಡುವುದು ಮತ್ತು ಅದನ್ನು ಕೂಡಲೇ ಕೇಂದ್ರ ಕಛೇರಿಗೆ ಒದಗಿಸುವುದು.

2013–14ನೇ ಸಾಲಿಗಾಗಿ CWSN ವಿದ್ಯಾರ್ಥಿಗಳಿರುವ ಪ್ರೌಢಶಾಲೆಗಳಿಗೆ ಹೊಂದಿಕೊಂಡಂತೆ ಇರುವ / ಸಮೀಪದಲ್ಲಿರುವ ಪ್ರೌಢಶಾಲೆಗಳಿಗೆ ಪ್ರಥಮ ಆದ್ಯತೆಯನ್ನು ಕೊಡ ಬೇಕಾಗಿದ್ದು ಅಂತಹಾ ಸಂಪನ್ಮೂಲ ಕೇಂದ್ರಗಳಿಗೆ ಡಿ.ಇ.ಆರ್.ಟಿ ಮತ್ತು ಡಿ.ವೈ.ಪಿ.ಸಿ ಆರ್.ಎಂ.ಎಸ್.ಎ ಇವರು ಖುದ್ದು ಭೇಟಿ ನೀಡಿ ಅಲ್ಲಿ ಲಭ್ಯ ವಿರುವ ಉಪಕರಣಗಳು ಮತ್ತು ಆಗತ್ಯವಿರುವ ಉಪಕರಣಗಳ ಪಟ್ಟಿಯನ್ನು ಸಿದ್ದಪಡಿಸಿ ರಾಜ್ಯ ಕಛೇರಿಗೆ ದಿನಾಂಕ 15.9.2013ರೊಳಗೆ ಕಳುಹಿಸುವುದು ಪಟ್ಟಿಯನ್ನು ಸಂಪನ್ಮೂಲ ವ್ಯಕ್ತಿಗಳ ಸಹಾಯದಿಂದ ಪರಿಶೀಲಿಸಿ ಜಿಲ್ಲಾಹಂತದಲ್ಲಿ

ಖರೀದಿಸಬೇಕಾದ ಸಾಧನ ಸಲಕರಣೆಗಳ ಪಟ್ಟಿಯನ್ನು ಒದಗಿಸಲಾಗುವುದು ನಂತರ ಅವುಗಳನ್ನು ಆರ್.ಎಂ.ಎಸ್.ಎ ಅನುದಾನ ಬಳಕೆ ನಿಯಮಗಳಂತೆ ಖರೀದಿಸಿ ಸಂಪನ್ಮೂಲ ಕೇಂದ್ರಗಳಿಗೆ ಒದಗಿಸಬೇಕಾಗುತ್ತದೆ..

ಅ **ವಿಶೇಷ ಸಂಪನ್ಮೂಲ ಶಿಕ್ಷಕರಿ ತರಬೇತಿ:**

ಇ ಪ್ರಕ್ಯೂರ್ ಮೇಂಟ್ ಮೂಲಕ ಆಯ್ಕೆಯಾದ ವಿಶೇಷ ಸಂಪನ್ಮೂಲ ಶಿಕ್ಷಕರಿಗೆ 5 ದಿನಗಳ ತರಬೇತಿಯನ್ನು ಒದಗಿಸಲು ಯೋಜಿಸಲಾಗಿದೆ ತರಬೇತಿ ವಿಷಯ ಹಾಗೂ ವಿಧಾನದ ವಿವರಗಳನ್ನು ನಂತರದಲ್ಲಿ ಒದಗಿಸಲಾಗುವುದು ಇದಕ್ಕಾಗಿ ಪ್ರತಿ ಶಿಕ್ಷಕರಿಗೆ ತಲಾ ರೂ.1500/– ಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಆ **ಸೇವಾ ನಿರತ ಶಿಕ್ಷಕರಿಗೆ ತರಬೇತಿ:–**

ರಾಜ್ಯದಲ್ಲಿರುವ ಸರ್ಕಾರಿ ಅನ್ಮದಾನಿತ ಸ್ಥಳೀಯ ಸಂಸ್ಥೆಗಳ ಪ್ರೌಢಶಾಲೆಗಳಿಂದ ಪ್ರತಿ ಶಾಲೆಯಿಂದ ಒಬ್ಬರು ಶಿಕ್ಷಕರನ್ನು (ಹಿಂದಿ/ದೈಹಿಕ ಶಿಕ್ಷಣ) ಆಯ್ಕೆ ಮಾಡಿಕೊಂಡು ಅವರಿಗೆ 3 ದಿನಗಳ ಸಮನ್ವಯ ಶಿಕ್ಷಣದ ತರಬೇತಿಯನ್ನು ಆಯೋಜಿಸಲಾಗುವುದು ಸರ್ವ ಶಿಕ್ಷಣ ಅಭಿಯಾನ ಮತ್ತು ಸಂಪನ್ಮೂಲ ಸಂಸ್ಥೆಗಳ ನೆರವಿನಿಂದ ಸಾಹಿತ್ಯವನ್ನು ಸಿದ್ದಪಡಿಸಿದ ನಂತರ ತರಬೇತಿ ದಿನಾಂಕ ಮತ್ತು ವಿವರಗಳನ್ನು ಒದಗಿಸಲಾಗುವುದು 2013–14ನೇ ಸಾಲಿಗಾಗಿ ರಾಜ್ಯದಲ್ಲಿ 8535 ಶಿಕ್ಷಕರಿಗೆ 3 ದಿನಗಳ ತರಬೇತಿಗಾಗಿ ರೂ.900 ರಂತೆ ಒಟ್ಟು ರೂ.76.81 ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು.

ಇ **ಪ್ರಾಂಶುಪಾಲರು/ಶೈಕ್ಷಣಿಕ ಆಡಳಿತಗಾರರು/ ಪೋಷಕರು ಇತರರಿಗೆ ಮಾಹಿತಿ ಒದಗಿಸುವುದು:**

ರಾಜ್ಯದಲ್ಲಿ ನಡೆಸುತ್ತಿರುವ ಐ.ಇಡಿ.ಎಸ್.ಎ ಯೋಜನೆಯ ಬಗ್ಗೆ ಮತ್ತು ಅನುದಾನವನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಜಿಲ್ಲಾ ಮಟ್ಟದ ಅನುಪಾಲನಾ ಅಧಿಕಾರಿಗಳಿಗೆ ಹಾಗೂ ಶೈಕ್ಷಣಿಕ ಆಡಳಿತಗಾರರಿಗೆ ಎರಡು ದಿನಗಳ ತರಬೇತಿಯನ್ನು ಒದಗಿಸಲು ಯೋಜಿಸಲಾಗಿದ್ದು ಈ ಬಗ್ಗೆ ವಿವರವಾಗಿ ಮಾಹಿತಿಯನ್ನು ಒದಗಿಸಲಾಗುವುದು ಇದಕ್ಕಾಗಿ ಒಟ್ಟು 60 ಮಂದಿಗೆ ರೂ.600/–ರಂತೆ ಒಟ್ಟು ರೂ.36000/– ಗಳನ್ನು ಬಿಡುಗಡೆ ಮಾಡಲಾಗುವುದು.

ಉ **ತಾಲ್ಲೂಕು ಮಟ್ಟದಲ್ಲಿ ವಿಕಲಚೇತನ ಮಕ್ಕಳಿಗೆ ಇರುವ ಸೌಲಭ್ಯಗಳ ಬಗ್ಗೆ ಪರಿಸರ ಜಾಗೃತಿ ಮೂಡಿಸುವುದು:**

ಐ.ಇಡಿ.ಎಸ್.ಎಸ್. ಯೋಜನೆಯಲ್ಲಿ ವಿಕಲ ಚೇತನ ಮಕ್ಕಳಿಗೆ ದೊರೆಯುವ ಸೌಲಭ್ಯಗಳು ಅವುಗಳನ್ನು ಪಡೆಯುವ ವಿಲೀನ ಮುಂತಾದುವುಗಳ ಬಗ್ಗೆ ಪೋಷಕರಿಗೆ ತಂದೆ ತಾಯಿಗಳಿಗೆ ಸಮುದಾಯದ ಎಲ್ಲರಿಗೆ ಮಾಹಿತಿ ಒದಗಿಸಲು ಒಂದು ದಿನದ ಶಿಬಿರವನ್ನು ನಡೆಸಲು ಯೋಜಿಸಲಾತದೆ. ಶಿಬಿರದಲ್ಲಿ ಕೈಗೊಳ್ಳಬೇಕಾದ ಚಟುವಟಿಕೆಗಳು ಮತ್ತು ಅನುದಾನ ಬಳಕೆಯ ಬಗ್ಗೆ ಮುಂದಿನ ದಿನಗಳಲ್ಲಿ ಮಾಹಿತಿ ಒದಗಿಸಲಾಗುವುದು ಇದಕ್ಕಾಗಿ ಪ್ರತಿಯೊಂದು ತಾಲ್ಲೂಕಿಗೆ ರೂ.10000ದಂತೆ ಒಟ್ಟು 202 ತಾಲ್ಲೂಕುಗಳಿಗೆ ರೂ.20.20ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು.

ಹೀಗೆ ರಾಜ್ಯದಲ್ಲಿ ಐ.ಇ.ಡಿ.ಎಸ್.ಎಸ್. ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಬೇಕಾಗಿದ್ದು ಅನುಮೋದಿತ ಚಟುವಟಿಕೆಗಳನ್ನು ಪ್ರೌಢಶಾಲೆ ತಾಲ್ಲೂಕು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹಮ್ಮಿಕೊಳ್ಳಬೇಕಾಗಿದ್ದು ಈ ಸುತ್ತೋಲೆಯಲ್ಲಿರುವ ಮಾರ್ಗಸೂಚಿಯಂತೆ ಮತ್ತು ಆಗಿಂದಾಗ್ಗೆ ಒದಗಿಸಲಾಗುವ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

ಪ್ರತಿಜಿಲ್ಲೆ ಮತ್ತು ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನವನ್ನು ಅದೇ ಚಟುವಟಿಕೆಗಳಿಗಾಗಿ ಮಾತ್ರವೇ ವೆಚ್ಚ ಮಾಡುವುದು ಒಂದು ಚಟುವಟಿಕೆಯ ಅನುದಾನವನ್ನು ಮತ್ತೊಂದು ಚಟುವಟಿಕೆಗೆ ಯಾವುದೇ ಕಾರಣಕ್ಕೂ ಬಳಸುವಂತಿಲ್ಲ ಅನುಮೋದಿತ ಮೊತ್ತದೊಳಗೆ ಚಟುವಟಿಕೆಗಳನ್ನು ಪೂರ್ಣಗೋಳಿಸಿ ಪ್ರತಿ ತಿಂಗಳು ನಿಗದಿತ ನಮೂನೆಯೊಂದಿಗೆ ಪ್ರಗತಿ ವಿವರಗಳನ್ನು ತಪ್ಪದೆ ಕಳುಹಿಸುವುದು.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಶಾಲಾ ಭೇಟಿ, ಮಾಹಿತಿ ಸಂಗ್ರಹಣೆ ಶಿಕ್ಷಕರ ತರಬೇತಿ ಮುಂತಾದ ಕಾರ್ಯಗಳಿಗೆ ಎಸ್.ಎಸ್.ಎ ಯಿಂದ ನೇಮಕವಾಗಿರುವ ಐ.ಇ.ಆರ್.ಟಿ ಯವರ ಮತ್ತು ಮಾಹಿತಿ ಕ್ರೋಡಿಕರಣ ಮೇಲ್ ಮೂಲಕ ಮಾಹಿತಿ ಒದಗಿಸುವುದು ಮುಂತಾದ ಕಾರ್ಯಗಳಿಗಾಗಿ ಎಸ್.ಎಸ್.ಎ.ಡಿ.ಟಿ.ಪಿ. ಆಪರೇಟರ್ ಹಾಗು ಅನುದಾನ ಬಳಕೆ ಮತ್ತು ಪ್ರಗತಿ ಪತ್ರ ಕಳುಹಿಸಲು ಲೆಕ್ಕ ಸಹಾಯಕರನ್ನು ಬಳಸುವುದು.

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
(ಮಾಧ್ಯಮಿಕ ಶಿಕ್ಷಾ ಅಭಿಯಾನ ಯೋಜನೆ)
ಬೆಂಗಳೂರು

पढ़े चलो, बढ़े चलो
RASHTRIYA MADHYAMIK SHIKSHA ABHIYAN

ಸಂಖ್ಯೆ: ರಾ.ಮಾ.ಶಿ.ಅ/ವಿ.ಸ್ವರಕ್ಷಣೆ/2013-14 ದಿನಾಂಕ: 29-8-2013

**<u>ಸುತ್ತೋಲೆ</u>**

**ವಿಷಯ:** ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಗೆ ಕರಾಟೆ ಕೌಶಲ ಕಲಿಸುವ ಮೂಲಕ ಸ್ವಯಂ ರಕ್ಷಣಾ ಸಾಮರ್ಥ್ಯ ಬೆಳಸುವ ಬಗ್ಗೆ.

**ಉಲ್ಲೇಖ:** 2013-14ನೇ ಸಾಲಿನ ಆರ್.ಎಂ.ಎಸ್.ಎ ಯೋಜನಾ ಅನುಮೋದನಾ ಮಂಡಳಿ ಸಭೆಯ ನಡವಳಿಗಳು.

*****

**1. <u>ಪ್ರಸ್ತಾವನೆ:</u>**

2013-14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 4,442 ಸರ್ಕಾರಿ ಪ್ರೌಢ ಶಾಲೆಗಳ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ತರಬೇತಿಯನ್ನು ಕರಾಟೆ ಕಲಿಸುವ ಮೂಲಕ ನೀಡಲು ಉಲ್ಲೇಖದನ್ವಯ ಒಟ್ಟು ರೂ. 66.63 ಲಕ್ಷ ಅನುದಾನ ಮಂಜೂರಾಗಿರುತ್ತದೆ. ಅನುಮೋದಿತ ಅನುದಾನವನ್ನು ಈ ಕಛೇರಿಯಿಂದ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುವುದು.

**<u>ಹೆಣ್ಣು ಮಕ್ಕಳು ಪ್ರತಿಕೂಲ ಸನ್ನಿವೇಶಗಳಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡುವುದು ಇಂದಿನ ತುರ್ತು ಅಗತ್ಯ</u>**ವಾಗಿದ್ದು, ಈ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿಯರಿಗೆ ಕರಾಟೆ ಕಲಿಸುವ ಚಟುವಟಿಕೆಯನ್ನು ಆಯೋಜಿಸಲಾಗಿದೆ.

**2. <u>ಕಾರ್ಯತಂತ್ರ:</u>**

ಪ್ರತಿ ಶಾಲೆಗೆ ಹೋಗಿ ಕರಾಟೆ ಕಲಿಸುವಷ್ಟು ತರಬೇತುದಾರರು ಲಭ್ಯವಾಗದ ಹಿನ್ನೆಲೆಯಲ್ಲಿ ಹಾಗೂ ಕರಾಟೆಯನ್ನು ನಿಯಮಿತವಾಗಿ ಶಾಲಾ ಅವಧಿಯಲ್ಲಿ ಕಲಿಸುವ ಮೂಲಕ ಕರಾಟೆಯನ್ನು ದೈಹಿಕ ಶಿಕ್ಷಣದ ಒಂದು ಭಾಗವನ್ನಾಗಿ ಮಾಡಲು **<u>ಪ್ರತಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಿಗೆ ಕರಾಟೆ ತರಬೇತಿ ನೀಡಿ ಅವರ ಮೂಲಕ ವಿದ್ಯಾರ್ಥಿನಿಯರಿಗೆ ಈ ಕೌಶಲವನ್ನು ಕಲಿಸಲು ತೀರ್ಮಾನಿಸಲಾಗಿದೆ.</u>** ಈ ಸಂಬಂಧ 30 ಅವಧಿಗಳ ಕೋರ್ಸ್‌ನ್ನು ಈ ಕಛೇರಿಯಿಂದ ಗುರುತಿಸಲ್ಪಟ್ಟ ಕರಾಟೆ ಸಂಘಟನೆಗಳಿಂದ ತಯಾರಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.

**3. <u>ಚಟುವಟಿಕೆ ಅನುಷ್ಠಾನ:</u>**

**<u>3.1 ದೈಹಿಕ ಶಿಕ್ಷಕರಿಗೆ ತರಬೇತಿ:</u>**

1. ಪ್ರತಿ ಸರ್ಕಾರಿ ಪ್ರೌಢ ಶಾಲೆಯ **<u>ದೈಹಿಕ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರಿಲ್ಲದ ಶಾಲೆಗಳಲ್ಲಿ ಇತರೆ ಉತ್ಸಾಹಿ ವಿಷಯ ಶಿಕ್ಷಕರನ್ನು</u>** ಆಯಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು **<u>ದಿನಾಂಕ: 31-8-2013ರೊಳಗೆ</u>** ಗುರುತಿಸುವುದು.
2. **<u>ಪ್ರತಿ ತಾಲ್ಲೂಕು ಕೇಂದ್ರದಲ್ಲಿ ದಿನಾಂಕ: 16-9-2013 ರಿಂದ 28-9-2013 ರವರೆಗೆ (ಒಟ್ಟು 12 ದಿನಗಳು) ಗುರುತಿಸಿದ ಎಲ್ಲಾ ಶಿಕ್ಷಕರಿಗೆ ತರಬೇತಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬ್ಲಾಕ್ ಹಂತದಲ್ಲಿ ನೀಡುವುದು.</u>**

3. **<u>ತರಬೇತಿ ನೀಡಲು ಇಬ್ಬರು ತರಬೇತುದಾರರನ್ನೊಳಗೊಂಡ ಒಂದು ತಂಡದಂತೆ ಜಿಲ್ಲೆಯಲ್ಲಿರುವ ಬ್ಲಾಕ್‌ಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯ ತರಬೇತುದಾರರ ತಂಡಗಳನ್ನು ಜಿಲ್ಲಾ ಹಂತದಲ್ಲಿ ರಚಿಸುವುದು.</u>** ಒಂದು ವೇಳೆ ಜಿಲ್ಲೆಯಲ್ಲಿ ಬೆಸ ಸಂಖ್ಯೆ ಬ್ಲಾಕ್‌ಗಳಿದ್ದಲ್ಲಿ ಎರಡು ಬ್ಲಾಕ್‌ಗಳಿಗೆ ಒಂದು ತರಬೇತುದಾರ ತಂಡದಂತೆ ಹಂಚಿಕೆ ಮಾಡಿ ಉಳಿಯುವ ಕೊನೆ ಒಂದು ತಂಡವು ಒಂದು ಬ್ಲಾಕ್‌ಗೆ ಮಾತ್ರ ತರಬೇತಿ ನೀಡುವುದು.
4. ತರಬೇತುದಾರರ ಒಂದು ತಂಡವು ಜಿಲ್ಲೆಯ 2 ಬ್ಲಾಕ್‌ಗಳಿಗೆ ತರಬೇತಿಯನ್ನು ನೀಡುವುದು. ಪೂರ್ವಾಹ್ನದ ಅವಧಿಯಲ್ಲಿ ಒಂದು ಬ್ಲಾಕ್‌ನಲ್ಲಿ ತರಬೇತಿ ನೀಡಿ, ಮಧ್ಯಾಹ್ನದ ಅವಧಿಯಲ್ಲಿ ಮತ್ತೊಂದು ಬ್ಲಾಕ್‌ಗೆ ತೆರಳಿ ತರಬೇತಿ ನೀಡುವುದು. ಜಿಲ್ಲೆಗೆ ಅಗತ್ಯವಾದ ಅರ್ಹ ಕರಾಟೆ ತರಬೇತುದಾರ ಆಯ್ಕೆ ಹಾಗೂ ಬ್ಲಾಕ್‌ಗಳಿಗೆ ತರಬೇತುದಾರರ ತಂಡದ ಹಂಚಿಕೆ ಕುರಿತ ಯೋಜನೆಯನ್ನು ಉಪನಿರ್ದೇಶಕರು (ಆಡಳಿತ) ರವರು **<u>ದಿನಾಂಕ: 5–9–2013ರೊಳಗೆ ತಯಾರಿಸುವುದು.</u>**
5. ತರಬೇತಿಯ ಅವಧಿಯಲ್ಲಿ ಕಲಿಸಬೇಕಾದ ವಿಷಯಗಳ ಸೂಚಿ ಹಾಗೂ ಅಗತ್ಯ ಕೌಶಲ ತಂತ್ರಗಳ ಕುರಿತ ಯೋಜನೆಯನ್ನು ಈ ಕಛೇರಿಯಿಂದ ಗುರುತಿಸಲ್ಪಟ್ಟ ಕರಾಟೆ ಸಂಘಟನೆಗಳು ರಚಿಸಿ ಸಲ್ಲಿಸಲಿದ್ದು, ಆ ಮಾಹಿತಿಯನ್ನು ಜಿಲ್ಲೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುವುದು.
6. ಪೂರ್ವಾಹ್ನದ ಅವಧಿಯಲ್ಲಿ ತರಬೇತಿಗೆ ಹಾಜರಾಗುವ ಬ್ಲಾಕ್‌ಗಳ ಶಿಕ್ಷಕರು ಅಪರಾಹ್ನದ ಅವಧಿಗೆ ಶಾಲೆಗೆ ಹಾಜರಾಗುವಂತೆ ಹಾಗೂ ಅಪರಾಹ್ನದ ಅವಧಿಯಲ್ಲಿ ತರಬೇತಿಗೆ ಹಾಜರಾಗುವ ಬ್ಲಾಕ್‌ಗಳ ಶಿಕ್ಷಕರು ಪೂರ್ವಾಹ್ನದ ಅವಧಿಯಲ್ಲಿ **<u>ಶಾಲೆಗಳಿಗೆ ಹಾಜರಾಗಿ ತಮ್ಮ ದೈನಂದಿನ ಬೋಧನಾ ಕಾರ್ಯವನ್ನು ತಪ್ಪದೇ ನಿರ್ವಹಿಸುವಂತೆ</u>** ಅಗತ್ಯ ಕ್ರಮವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೈಗೊಳ್ಳುವುದು.
7. ತರಬೇತಿಗೆ ಹಾಜರಾಗುವ ಶಿಕ್ಷಕರಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ನೈಜ ಕನಿಷ್ಠ ಪ್ರಯಾಣ ದರವನ್ನು ಭರಿಸುವುದು. **<u>ಕಡಿಮೆ ವೆಚ್ಚದಾಯಕ ಸಾರಿಗೆ ವ್ಯವಸ್ಥೆಯನ್ನು</u>** (Cheapest mode of travel) ಉಪಯೋಗಿಸುವಂತೆ ಸೂಚಿಸುವುದು.
8. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವ ಕರಾಟೆ ತರಬೇತುದಾರರಿಗೆ ಮೇಲೆ ವಿವರಿಸಿರುವಂತೆ ನೈಜ ಪ್ರಯಾಣ ದರದ ಜೊತೆ **<u>ಪ್ರತಿ ದಿನಕ್ಕೆ ರೂ. 200/– ರಂತೆ ಗೌರವ ಧನ</u>** ಪಾವತಿಸುವುದು.
9. ತರಬೇತಿಯ ಅವಧಿಯಲ್ಲಿ **<u>ಲಘು ಉಪಹಾರ ಮತ್ತು ಚಹಾ</u>** ನೀಡುವುದು. ಈ ಸಂಬಂಧ **<u>ಪ್ರತಿ ಶಿಕ್ಷಕರಿಗೆ ಪ್ರತಿ ದಿನಕ್ಕೆ ರೂ. 20/– ರಂತೆ</u>** ಅನುದಾನವನ್ನು ಬಳಸುವುದು.
10. ತರಬೇತಿಗಾಗಿ ಗುರುತಿಸಿರುವ ಶಿಕ್ಷಕರ ವಿವರ, ತರಬೇತಿ ನಡೆಸುವ ಸ್ಥಳ, ತರಬೇತುದಾರರ ವಿವರ, ಅಗತ್ಯವಾದ ಅನುದಾನ ಇತ್ಯಾದಿ ವಿವರಗಳನ್ನೊಳಗೊಂಡ **<u>ಕ್ರಿಯಾ ಯೋಜನೆಯನ್ನು</u>** ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಯಾರಿಸಿ ಅನುದಾನಕ್ಕಾಗಿ ಬೇಡಿಕೆಯನ್ನು **<u>ದಿನಾಂಕ: 5–9–2013</u>**ರೊಳಗೆ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸುವುದು. ಕ್ರಿಯಾ ಯೋಜನೆಯ ಪರಿಶೀಲನೆಯ ನಂತರ ಉಪ ನಿರ್ದೇಶಕರು (ಆಡಳಿತ) ರವರು **<u>ದಿನಾಂಕ: 7–9–2013ರೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವುದು.</u>**
11. ಉಪ ನಿರ್ದೇಶಕರು (ಆಡಳಿತ) ರವರು ಜಿಲ್ಲೆಯಲ್ಲಿ ತರಬೇತಿ ಪಡೆದ ಒಟ್ಟು ಶಿಕ್ಷಕರ ಸಂಖ್ಯೆ, ಖರ್ಚು ವೆಚ್ಚ, ತರಬೇತುದಾರರ ವಿವರಗಳು, ತರಬೇತಿಯ ಪರಿಣಾಮದ ಕುರಿತ ಮಾಹಿತಿಯ ಜೊತೆ ಫೋಟೋಗಳನ್ನೊಳಗೊಂಡ ಎರಡು ಪುಟಗಳಷ್ಟು **<u>ದಾಖಲೀಕರಣದ ವರದಿ</u>**ಯನ್ನು ತಯಾರಿಸಿ ರಾಜ್ಯ ಕಛೇರಿಗೆ **<u>ದಿನಾಂಕ: 10–10–2013ರೊಳಗೆ</u>** ಸಲ್ಲಿಸುವುದು.

**3.2 ತರಬೇತಿ ಪಡೆದ ಶಿಕ್ಷಕರಿಂದ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿ:**

1. ತರಬೇತಿ ಪಡೆದ ಶಿಕ್ಷಕರು **ದಿನಾಂಕ: 30–09–2013 ರಿಂದ** ತಮ್ಮ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ **ಕರಾಟೆ ಕಲಿಸುವ ಚಟುವಟಿಕೆ ಆರಂಭಿಸುವುದು**.
2. **ಪ್ರತಿ ವಾರಕ್ಕೆ 2 ಅವಧಿಗಳು** ಕರಾಟೆ ತರಬೇತಿಗೆ ಮೀಸಲಿಡುವುದು. ದೈಹಿಕ ಶಿಕ್ಷಣಕ್ಕೆ ಮೀಸಲಾದ ಒಂದು ಅವಧಿ ಮತ್ತು ಸಂಗೀತ, ಕ್ರಾಫ್ಟ್ ಹಾಗೂ ಚಿತ್ರಕಲೆಯಲ್ಲಿ ಒಂದು ಅವಧಿ ಬಳಸಿ ಕಲಿಸಲು ಶಾಲಾ ವೇಳಾ ಪಟ್ಟಿಯಲ್ಲಿ ಅವಕಾಶ ಕಲ್ಪಿಸುವುದು.
3. ತರಬೇತಿ ಪಡೆದ ಶಿಕ್ಷಕರು ಪ್ರಸ್ತಾಪಿತ 30 ಅವಧಿಗಳ ಕೋರ್ಸ್ ಪೂರೈಸುವವರೆಗೆ ವಿದ್ಯಾರ್ಥಿನಿಯರಿಗೆ ಕರಾಟೆಯನ್ನು ಕ್ರಮ ಸಂಖ್ಯೆ 2 ರಲ್ಲಿ ವಿವರಿಸಿರುವ ಅವಧಿಗಳನ್ನು ಬಳಸಿ, ಕಲಿಸುವುದು.
4. ಕೋರ್ಸ್‌ನ ಸಂಪೂರ್ಣ ಕಲಿಕೆಯಾದ ನಂತರ ಶಾಲೆಯಲ್ಲಿ ಕರಾಟೆ ಚಟುವಟಿಕೆ ಜಾರಿಯಾಗುವ ಪೂರ್ವದಲ್ಲಿ ಜಾರಿಯಲ್ಲಿದ್ದ **ವೇಳಾಪಟ್ಟಿಯಂತೆ ನಿಗಧಿತ ಎಲ್ಲಾ ಶಾಲಾ ವಿಷಯಗಳ ಕಲಿಕೆಯಾಗುವಂತೆ ಗಮನಹರಿಸುವುದು.**
5. ವಿದ್ಯಾರ್ಥಿನಿಯರಿಗೆ ಕ್ರಮ ಸಂಖ್ಯೆ 2 ರಲ್ಲಿ ವಿವರಿಸಿರುವ ಅವಧಿಗಳಲ್ಲಿ ಕರಾಟೆ ತರಬೇತಿ ನೀಡುವಾಗ **ಬಾಲಕರಿಗೆ ವೇಳಾಪಟ್ಟಿಯಲ್ಲಿರುವ ವಿಷಯಗಳ ಬೋಧನೆಗೆ ಭಂಗ ಬಾರದಂತೆ** ಕಲಿಕೆ ಮುಂದುವರೆಸುವಂತೆ ಗಮನ ಹರಿಸುವುದು.

**3.3 ಪುನಶ್ಚೇತನ ತರಬೇತಿ.**

ಕರಾಟೆ ತರಬೇತಿ ಪಡೆದ ಶಿಕ್ಷಕರಿಗೆ **ಡಿಸಂಬರ್ 2013 ಹಾಗೂ ಫೆಬ್ರವರಿ 2014** ರಲ್ಲಿ ಒಂದು ದಿನದ ಪುನಶ್ಚೇತನ ತರಬೇತಿಯನ್ನು ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯೋಜಿಸುವುದು. ಈ ತರಬೇತಿಯಲ್ಲಿ ಹಿಂದೆ ಪಡೆದ ತರಬೇತಿಯ ಕಲಿಕೆಯ ದೃಢೀಕರಣ, ಸಂಶಯಗಳ ನಿವಾರಣೆ, ಹೊಸ ಕೌಶಲಗಳ ಕಲಿಕೆ, ತರಬೇತಿ ಪಡೆದ ಆಯ್ದ ವಿದ್ಯಾರ್ಥಿನಿಯರಿಂದ ಕರಾಟೆ ಕೌಶಲಗಳ ಪ್ರದರ್ಶನ ಇತ್ಯಾದಿ ವಿಷಯಗಳು ಒಳಗೊಂಡಿರಬೇಕು. ಪುನಶ್ಚೇತನ ತರಬೇತಿಗಳಿಗೆ ಅಗತ್ಯ ಅನುದಾನದ ವೆಚ್ಚವನ್ನು 3.1 ರಲ್ಲಿ ತಿಳಿಸಿರುವಂತೆ ಭರಿಸುವುದು.

**3.4 ಸಮಗ್ರ ದಾಖಲೀಕರಣ ಹಾಗೂ ವರದಿ ಸಲ್ಲಿಕೆ:**

ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿನಿಯರಿಂದ ಕರಾಟೆ ಕಲಿಕೆ, ಕಲಿಕೆಯ ಪರಿಣಾಮ ಹಾಗೂ ಅನಿಸಿಕೆಗಳ ಕುರಿತ ಸಂಕ್ಷಿಪ್ತ ಫೋಟೋ ಸಹಿತ ವರದಿಯನ್ನು ಉಪನಿರ್ದೇಶಕರು (ಆಡಳಿತ) ತಯಾರಿಸಿ, **ಮಾರ್ಚ್ 2014ರೊಳಗೆ** ರಾಜ್ಯ ಕಛೇರಿಗೆ ಸಲ್ಲಿಸುವುದು.

ವಿದ್ಯಾರ್ಥಿನಿಯರಿಗೆ ಶಾಲೆಯ ಬಿಡುವಿನ ವೇಳೆಯಲ್ಲಿ **ದೈಹಿಕ/ಇತರೆ ಶಿಕ್ಷಕರು ಕರಾಟೆ ಕಲಿಕೆ ಮತ್ತು ಅಭ್ಯಾಸ ಮಾಡಿಸುವುದು**. ಶಾಲಾವಧಿ ನಂತರ ಬಿಡುವಿನ ವೇಳೆಯಲ್ಲಿ ಮನೆಯಲ್ಲಿ ಕರಾಟೆಯನ್ನು **ನಿಯಮಿತವಾಗಿ ಅಭ್ಯಾಸ** ಮಾಡುವಂತೆ ಸೂಚಿಸುವ ಮೂಲಕ ವಿದ್ಯಾರ್ಥಿನಿಯರು **ಸ್ವಯಂ ರಕ್ಷಣಾ ಕೌಶಲ** ಹೊಂದುವಂತೆ ಪ್ರೇರೇಪಿಸುವುದು. ಈ ಸುತ್ತೋಲೆಯ ಪ್ರತಿಯನ್ನು www.ssakarnataka.gov.in or www.schooleducation.gov.in ವೆಬ್‌ಸೈಟ್‌ನಿಂದ ಪಡೆಯಬಹುದು.

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಕರ್ನಾಟಕ

## National Means cum Merit Scholarship (NMMS) Examination

ಯೋಜನೆಯ ವಿವರ:- ಈ ಯೋಜನೆಯ ಮುಖ್ಯ ಉದ್ದೇಶವು ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಗುಳಿಯದಂತೆ ತಡೆಯುವುದರ ಜೊತೆಗೆ ಅವರ ವಿದ್ಯಾಭ್ಯಾಸದ ಮುಂದುವರಿಕೆಗೆ ಪ್ರೇರೇಪಿಸುವುದೇ ಅಗಿದೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ರಾಜ್ಯಮಟ್ಟದ ಪರೀಕ್ಷೆಯನ್ನು ನಡೆಸುತ್ತದೆ.

**ಅರ್ಹತೆ:** ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳ ಪ್ರೌಢಶಾಲೆಗಳಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಎಸ್.ಎಮ್.ಎಮ್.ಎಸ್. ಪರೀಕ್ಷೆಗೆ ಅರ್ಹರಾಗಿರುತ್ತಾರೆ. (ವಸತಿಸಹಿತ ಸರ್ಕಾರಿ ಶಾಲೆಯ ಮಕ್ಕಳು ಈ ಪರೀಕ್ಷೆಗೆ ಅರ್ಹರಿರುವುದಿಲ್ಲ.)

**ಪೋಷಕರ ವಾರ್ಷಿಕ ವರಮಾನ 1,50,000/- ಮೀರಿರಬಾರದು.**

ಅ) ಸಾಮಾನ್ಯ ಬೌದ್ಧಿಕ ಸಾಮರ್ಥ್ಯ ಪರೀಕ್ಷೆ (GMAT) ಈ ಪ್ರಶ್ನೆಪತ್ರಿಕೆಯು 90 ಅಂಕಗಳ 90 ವಸ್ತುನಿಷ್ಠ ಕಡ್ಡಾಯ ಪ್ರಶ್ನೆಗಳನ್ನೊಳಗೊಂಡಿರುತ್ತದೆ.

**ಆ)** ವ್ಯಾಸಂಗಿಕ ಪ್ರವೃತ್ತಿ ಪರೀಕ್ಷೆ (SIT)

90 ಪ್ರಶ್ನೆಗಳಿರುವ ಈ ಪತ್ರಿಕೆಯಲ್ಲಿ 35 ಪ್ರಶ್ನೆಗಳು ಸಾಮಾನ್ಯ ವಿಜ್ಞಾನ 35 ಪ್ರಶ್ನೆಗಳು ಸಮಾಜ ವಿಜ್ಞಾನ ಮತ್ತು 20 ಪ್ರಶ್ನೆಗಳು ಗಣಿತ ಈ ಮೂರು ವಿಷಯಗಳಿಂದ ಆಯ್ದ ಪ್ರಶ್ನೆಗಳಿರುತ್ತವೆ.

**ಮಾನವ ಸಂಪನ್ಮೂಲ: ಅಭಿವೃದ್ಧಿ ಸಚಿವಾಲಯ ಪತಿಯಿಂದ ವಿಶೇಷ ಪ್ರೋತ್ಸಾಹ**

ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಪ್ರತಿಭಾವಂತ 8ನೇ ತರಗತಿ ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದ ಪ್ರಾರಂಭಿಸಿ ದ್ವಿತೀಯ ಪಿ.ಯು.ಸಿ. ಹಂತದವರೆಗೆ ಪ್ರತಿ ಮಾಹೆ 500/- ರೂ.ಗಳನ್ನು ವಿದ್ಯಾರ್ಥಿವೇತನವಾಗಿ ನೀಡುತ್ತದೆ.

**ವಿದ್ಯಾರ್ಥಿ ವೇತನದ ಮುಂದುವರಿಕೆ:**

ಮಾನವ ಸಂಪನ್ಮೂಲ ಅಭಿವೃದ್ಧಿ ಸಚವಾಲಯದಿಂದ ನೀಡುವ ವಿದ್ಯಾರ್ಥಿ ವೇತನದ ಮುಂದುವರಿಕೆ ಶೈಕ್ಷಣಿಕ ಹಿರಿಮೆಯನ್ನು ಕಾಯ್ದುಕೊಳ್ಳುವ ದೃಷ್ಠಿಯಿಂದ ಕೆಳಗಿನ ನಿಬಂಧನೆಗಳನ್ನು ಆಧರಿಸಿರುತ್ತದೆ.

ವಿದ್ಯಾರ್ಥಿ ವೇತನ ಪಡೆಯಲು ಕನಿಷ್ಠ ಶೇ: 55 ಅಂಕಗಳನ್ನು 9, 11, 12ನೇ ತರಗತಿಯಲ್ಲಿ ಮತ್ತು ಶೇ: 60 ಅಂಕಗಳನ್ನು 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಪಡೆದಿರಬೇಕು.

- ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡ ಹಾಗೂ ವಿಕಲಚೇತನ ಅಭ್ಯರ್ಥಿಗಳಿಗೆ ಶೇ. 5ರಷ್ಟು ವಿನಾಯಿತಿ ನೀಡಲಾಗುವುದು.

**2013-14ನೇ ಸಾಲಿನ ವೇಳಾಪಟ್ಟಿ**

1. NMMS ಪರೀಕ್ಷೆಗೆ ಅರ್ಜಿ ವಿತರಣೆ- ಜುಲೈ ಹಾಗೂ ಆಗಸ್ಟ್-2013. (ಎಲ್ಲಾ ಬಿ.ಇ.ಓ. ಕಛೇರಿಗಳಲ್ಲಿ ಲಭ್ಯ)
2. ಭರ್ತಿ ಮಾಡಿದ ಅರ್ಜಿಗಳನ್ನು ಬಿ.ಇ.ಓ ಕಛೇರಿಗೆ ತಲುಪಿಸಲು ಕೊನೆಯ ದಿನಾಂಕ - ಆಗಸ್ಟ್ 31. 2013.
3. ಅರ್ಜಿ ಹಾಕಿದ ವಿದ್ಯಾರ್ಥಿಗಳಿಗೆ ಪರೀಕ್ಷೆ - ನವೆಂಬರ್-2013.

(ಹೆಚ್ಚಿನ ಮಾಹಿತಿಗಾಗಿ ಡಿ.ಎಸ್.ಇ.ಆರ್.ಟಿ. ಪ್ರಕಟಿಸಿರುವ NTSE/NMMS ಪರೀಕ್ಷೆಗಳ ಕೈಪಿಡಿ ನೋಡುವುದು. ಪ್ರತಿ ಶಾಲೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು NMMS ಪರೀಕ್ಷೆ ಬರೆಯಲು ಕ್ರಮ ಕೈಗೊಳ್ಳುವುದು,)

## ಎನ್.ವಿ.ಇ.ಕ್ಯೂ.ಎಫ್. ಯೋಜನೆಯ ವಿವರಗಳು

**ಪೀಠಿಕೆ:**

ಪ್ರೌಢಶಿಕ್ಷಣದಿಂದ ಉನ್ನತ ಶಿಕ್ಷಣದವರೆವಿಗೂ ಇರುವ ವಿವಿಧ ಶೈಕ್ಷಣಿಕ ರಹದಾರಿಗಳ ಬಗ್ಗೆ ನಿರ್ಧಿಷ್ಟ ಪದ್ಧತಿಯನ್ನು ಜಾರಿಗೆ ತರಲು ಹಾಲಿ ವೃತ್ತಿಶಿಕ್ಷಣ ಪದ್ಧತಿಯನ್ನು ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು ಪರಿಷ್ಕರಿಸಿದೆ. ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಡಿಯಲ್ಲಿ **"ಪ್ರೌಢಶಿಕ್ಷಣ ವೃತ್ತೀಕರಣ"** ಗೊಳಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ವೃತ್ತಿ ಶಿಕ್ಷಣ ಅರ್ಹತಾ ಚೌಕಟ್ಟು, National Vocational Education Qualification Frame Work (NVEQF) ಎಂಬ ನೂತನ ಯೋಜನೆಯನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಿದೆ.

ಪರಿಷ್ಕೃತಗೊಂಡ ಈ ಯೋಜನೆಯಲ್ಲಿ ವಿದ್ಯಾರ್ಥಿಯ ಅಭಿರುಚಿ, ಬುದ್ಧಿ ಸಾಮರ್ಥ್ಯ, ಮನೋವೃತ್ತಿ ಹಾಗೂ ಆರ್ಥಿಕ ಅಗತ್ಯದ ಅನುಗುಣಕ್ಕೆ ತಕ್ಕಂತೆ ಶೈಕ್ಷಣಿಕ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕಾರ್ಯಕ್ಷಮತೆಯ ಮಾದರಿ ಪದ್ಧತಿ ಇಂದಿನ ಶಿಕ್ಷಣದ ತಳಹದಿಯಾಗಿದೆ. ಆದುದರಿಂದ, ಎನ್.ವಿ.ಇ.ಕ್ಯೂ.ಎಫ್. ಯೋಜನೆಯು ಪ್ರೌಢಶಿಕ್ಷಣದ ವೃತ್ತೀಕರಣಕ್ಕೆ ಆಧಾರ ಸ್ತಂಭವಾಗಿದೆ.

ಜಾಗತಿಕ ಮಾರುಕಟ್ಟೆ ಹಾಗೂ ದೇಶದ ವಿವಿಧ ಕ್ಷೇತ್ರಗಳ ವೃತ್ತಿಗೆ ಅಗತ್ಯವಿರುವ ಕೌಶಲ್ಯ ಹಾಗೂ ಸಾಮರ್ಥ್ಯವನ್ನು ಬೆಳೆಸುವಂತಹ ಶಿಕ್ಷಣವನ್ನು ಅಳವಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

**ಉದ್ದೇಶಗಳು:**

- **ಗುಣಾತ್ಮಕ ಕೌಶಲ್ಯಗಳ ವೃತ್ತಿಶಿಕ್ಷಣವನ್ನು ಯುವಕರಿಗೆ ನೀಡುವುದರ ಮೂಲಕ ಹೆಚ್ಚು ಉದ್ಯೋಗ ಅವಕಾಶ ಕಲ್ಪಿಸಿದಂತಾಗುತ್ತದೆ.**
- **ಬಹುಪ್ರಕಾರ ಪ್ರವೇಶ / ನಿರ್ಗಮನಕ್ಕೆ** (multi entry – multi exit) **ಅವಕಾಶ ಕಲ್ಪಿಸಿದೆ.**
- **ಶಿಕ್ಷಣವನ್ನು ಮುಂದುವರೆಸಲು ವಿದ್ಯಾರ್ಥಿಗೆ ಲಂಭ/ಅಡ್ಡ** (Vertical/Horizantal Mobility) **ಬದಲಾವಣೆಗೆ ಅವಕಾಶವಿರುತ್ತದೆ.**
- **ಉನ್ನತ ಶಿಕ್ಷಣದ ಮೇಲಿನ ಒತ್ತಡ, ಹಾಗೂ ಉದ್ಯೋಗಾಕಾಂಕ್ಷಿಗಳ ಮತ್ತು ವಿದ್ಯಾವಂತರ ನಡುವಿನ ಅಂತರವನ್ನು ಕಡಿಮೆಗೊಳಿಸಬಹುದು.**
- **ಬಹುಕೌಶಲ್ಯಗಳ ಕಲಿಕೆಗೆ ಅವಕಾಶ.**
- **ಉದ್ಯೋಗಶೀಲತೆ ಹಾಗೂ ಉದ್ಯೋಗ ಅರ್ಹತೆಯನ್ನು ಹೊಂದುವಂತೆ ಮಾಡುವುದು.**
- **ವಿದ್ಯಾರ್ಥಿಗಳಲ್ಲಿ ಇರುವ ಅಂತರ್ಗತ ಕೌಶಲ್ಯಗಳನ್ನು ಪ್ರೌಢಿಮೆಗೊಳಿಸುವ ಪರಿಸರ ಕಲ್ಪಿಸುವುದು.**
- **ನಾಯಕತ್ವ ಹಾಗೂ ಸಕಾರಾತ್ಮಕ ಮನೋಭಾವನೆಯನ್ನು ಬೆಳೆಸುವುದು.**
- **ವಿದ್ಯುಕ್ತವಾಗಲ್ಲದೆ ಗಳಿಸಿದ ಕೌಶಲ್ಯಗಳನ್ನು ಪ್ರಮಾಣೀಕರಿಸುವುದು.**

ಕಾರ್ಖಾನೆ/ವಾಣಿಜ್ಯ/ಸೇವೆ/ಉದ್ದಿಮೆಗಳ, ಸಂಘಟಿತ / ಅಸಂಘಟಿತ ವಲಯಗಳ ಬೇಡಿಕೆಗೆ ಅನುಗುಣವಾಗಿ, ಕೌಶಲ್ಯ ಹೊಂದಿರುವ ಮಾನವ ಸಂಪನ್ಮೂಲವನ್ನು ಒದಗಿಸುವುದರ ಮೂಲಕ, ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯವನ್ನು ಹಾಗೂ ಕಾರ್ಯಕ್ಷಮತೆಯ ಮಟ್ಟವನ್ನು ಒಂದರಿಂದ ಹತ್ತು ಹಂತಗಳಲ್ಲಿ ಗುರುತಿಸಲಾಗುವುದು.

**ಎನ್.ವಿ.ಇ.ಕ್ಯೂ.ಎಫ್. ಪ್ರಾಯೋಗಿಕ:**

ಕೇಂದ್ರ ಸರ್ಕಾರವು ಹರಿಯಾಣ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ ಎನ್.ವಿ.ಇ.ಕ್ಯೂ.ಎಫ್. ಪೈಲೆಟ್ ಯೋಜನೆಯನ್ನು 11ನೇ ಯೋಜನೆಯಡಿಯಲ್ಲಿ ಅನುಷ್ಠಾನ ಮಾಡಲು ತೀರ್ಮಾನಿಸಿದೆ. ಈ ಯೋಜನೆಯನ್ನು ಪ್ರೌಢಶಾಲೆಯ 9ನೇ ತರಗತಿಯಿಂದ (ಮೊದಲನೆ ಹಂತ) ಪ್ರಾರಂಭಿಸಲಾಗುವುದು. ಈ ಪೈಲೆಟ್ ಯೋಜನೆಯಿಂದ ಪಡೆಯುವ ಅನುಭವದಿಂದ, ವಿವಿಧ ಕೋರ್ಸುಗಳನ್ನು ಅಭಿವೃದ್ಧಿಪಡಿಸಿ ರಾಷ್ಟ್ರದಲ್ಲಿ ಅನುಷ್ಠಾನ ಮಾಡಲಾಗುವುದು.

**ಕರ್ನಾಟಕದ ಮೊದಲ ಹೆಜ್ಜೆ:**

ರಾಜ್ಯವು ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಭದ್ರವಾದ ಹಾಗೂ ಬಲವಾದ ತಳಹದಿಯನ್ನು ಹೊಂದಿದ್ದು, ಔದ್ಯಮಿಕ ಕ್ಷೇತ್ರದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ರಾಜ್ಯವಾಗಿದೆ. ಪ್ರಧಾನ ಮಂತ್ರಿಗಳ ಕೌಶಲ್ಯ ಅಭಿವೃದ್ಧಿ ಯೋಜನೆಯಲ್ಲೂ ಕೂಡ ಉಳಿದ ಎಲ್ಲಾ ರಾಜ್ಯಗಳಿಗಿಂತಲೂ ಮುಂಚೂಣಿಯಲ್ಲಿದೆ.

ಕೇಂದ್ರ ಸರ್ಕಾರದ ನೂತನ ಎನ್.ವಿ.ಇ.ಕ್ಯೂ.ಎಫ್. ಯೋಜನೆಯನ್ನು ರಾಜ್ಯ ಸರ್ಕಾರವು ಒಪ್ಪಿ, 2012–13 ನೇ ಸಾಲಿನಿಂದ ಈ ಯೋಜನೆಯನ್ನು ಮಾರ್ಗದರ್ಶಿ ಯೋಜನೆಯಾಗಿ ರಾಜ್ಯದಲ್ಲಿ ಅನುಷ್ಠಾನ ಮಾಡಲು ತೀರ್ಮಾನಿಸಿದೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಮಾರ್ಗಸೂಚಿ ಹಾಗೂ ಆದೇಶದನ್ವಯ ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿ ಮಾಡಲಾಗುವುದು.

**ಎನ್.ವಿ.ಇ.ಕ್ಯೂ.ಎಫ್. ರಾಜ್ಯ ಸಮಿತಿ**

ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದ ಸಲಹೆಗಾರರು ಹಾಗೂ ಕರ್ನಾಟಕ ಸರ್ಕಾರದ ಕೌಶಲ್ಯ ಆಯೋಗದ ಸದಸ್ಯರು ಆದ ಡಾ: ವಿಷ್ಣುಕಾಂತ್. ಎಸ್. ಚಟ್‌ಪಲ್ಲಿ, ರವರನ್ನು ಎನ್.ವಿ.ಇ.ಕ್ಯೂ.ಎಫ್. ರಾಜ್ಯ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಸದರಿ ಸಮಿತಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಈ ಸಮಿತಿಯ ಸಲಹೆ ಹಾಗೂ ಮಾರ್ಗದರ್ಶನದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕ ಮಾರ್ಗದರ್ಶಿ ಯೋಜನೆಯಾಗಿ ರಾಜ್ಯದ ಆಯ್ದ 10 ಜಿಲ್ಲೆಗಳ 100 ಸರ್ಕಾರಿ ಪ್ರೌಢಶಾಲೆಗಳ 9ನೇ ತರಗತಿಯ 10,000 ವಿದ್ಯಾರ್ಥಿಗಳಿಗೆ ಅನುಷ್ಠಾನ ಮಾಡಲಾಗುವುದು.

**ಈ ಯೋಜನೆಯ ರೂಪ–ರೇಷಗಳು:**

**1. 100 ಸರ್ಕಾರಿ ಪ್ರೌಢಶಾಲೆಗಳು:** 2012–13 ನೇ ಸಾಲಿನಿಂದ ಈ ಯೋಜನೆಯನ್ನು ರಾಜ್ಯದ ಆಯ್ದ 10 ಜಿಲ್ಲೆಗಳ 100 ಸರ್ಕಾರಿ ಪ್ರೌಢಶಾಲೆಗಳ 9ನೇ ತರಗತಿಯ 10,000 ವಿದ್ಯಾರ್ಥಿಗಳಿಗೆ ಅನುಷ್ಠಾನ ಮಾಡಲಾಗುವುದು.
**2. ಶಾಲೆಗಳ ಆಯ್ಕೆ:** ಕೈಗಾರಿಕೆ, ಉದ್ಯಮ, ವಾಣಿಜ್ಯ ಹಾಗೂ ಸೇವಾ ಕ್ಷೇತ್ರಗಳ ಸಮೀಪವಿರುವ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**3. 4 ಸೆಕ್ಟಾರ್‌ಗಳು:** ಈ ಕೆಳಕಂಡ 4 ಸೆಕ್ಟಾರ್‌ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.
**1. ಇನ್ಫರ್‌ಮೇಷನ್ ಟೆಕ್ನಾಲಜಿ, 2. ಆಟೋಮೊಬೈಲ್. 3. ರೀಟೈಲ್. 4 ಸೆಕ್ಯೂರಿಟಿ.**

**4. ಪ್ರತಿ ಶಾಲೆಗೆ 2 ಸೆಕ್ಟಾರ್:** ಪ್ರತಿ ಶಾಲೆಯಲ್ಲಿ ಲಭ್ಯವಿರುವ ಮೂಲ ಸೌಲಭ್ಯಗಳ ಆಧಾರದ ಮೇಲೆ ಹಾಗೂ ಸ್ಥಳೀಯ ಉದ್ಯಮದ ಬೇಡಿಕೆಯ ಅನುಗುಣವಾಗಿ, ಲಭ್ಯವಿರುವ 4 ಸೆಕ್ಟಾರ್‌ಗಳಲ್ಲಿ, ಪ್ರತಿ ಶಾಲೆಯಲ್ಲಿ 2 ಸೆಕ್ಟಾರ್‌ಗಳನ್ನು ಪ್ರಾರಂಭಿಸಲಾಗುವುದು.

**5. ವಿದ್ಯಾರ್ಥಿಯ ಸೆಕ್ಟಾರ್ ಆಯ್ಕೆ:** ಶಾಲೆಯಲ್ಲಿ ಲಭ್ಯವಿರುವ 2 ಸೆಕ್ಟಾರ್‌ಗಳಲ್ಲಿ ಒಂದು ಸೆಕ್ಟಾರ್‌ನ್ನು ಮಾತ್ರ ವಿದ್ಯಾರ್ಥಿಯು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.
**6. ವಿದ್ಯಾರ್ಥಿಗಳ ಸಂಖ್ಯೆ:** ಪ್ರತಿ ಸೆಕ್ಟಾರ್‌ಗೆ ಕನಿಷ್ಠ 25 ಗರಿಷ್ಠ 50 ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಳ್ಳಬಹುದು.
**7.ಬಹುಕೌಶಲ್ಯ:_** ವಿದ್ಯಾರ್ಥಿಗೆ ಸಂಬಂಧಪಟ್ಟ ಸೆಕ್ಟಾರ್ ಪಠ್ಯ ವಿಷಯಗಳ ಜೊತೆಗೆ, ಮೃದು ಕೌಶಲ್ಯ ಮತ್ತು ಜೀವಕೌಶಲ್ಯಗಳ ಪಠ್ಯ ವಿಷಯಗಳನ್ನು ಸಹ ಬೋಧಿಸಲಾಗುವುದು.
**8. ಬೋಧನಾ ಪದ್ಧತಿ:** ತಾತ್ವಿಕ, ಪ್ರಾಯೋಗಿಕ, ಔದ್ಯಮಿಕ ಕ್ಷೇತ್ರಗಳಿಗೆ ಸಂದರ್ಶನ, ಪರಿಣಿತರಿಂದ ಉಪನ್ಯಾಸ, ಪ್ರಾಜೆಕ್ಟ್ ವರ್ಕ್ ಒಳಗೊಂಡ ಬೋಧನಾ ಪದ್ಧತಿಯನ್ನು ಅನುಸರಿಸಲಾಗುವುದು.
**9. ಮೌಲ್ಯಮಾಪನ:** ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ ಪದ್ಧತಿ ಮೂಲಕ ವಿದ್ಯಾರ್ಥಿಗಳ ಪ್ರಗತಿಯನ್ನು ವಿಮರ್ಶಿಸಲಾಗುವುದು.
**10. ಸೆಕ್ಟಾರ್ ಅಳವಡಿಕೆ:** 9ನೇ ತರಗತಿಯ ಹಾಲಿ ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆ, ಮಾಡದೆ ಕಾರ್ಯಾನುಭವ / ಕಲೆ ಮತ್ತು ಸೃಜನಾತ್ಮಕ ವಿಷಯಗಳ ಬದಲಾಗಿ ಎನ್.ವಿ.ಇ.ಕ್ಯೂ.ಎಫ್. ಸೆಕ್ಟಾರ್‌ನ ಪಠ್ಯವನ್ನು ಅಳವಡಿಸಲಾಗಿದೆ.
**11.ಬೋಧನಾ ಅವಧಿ:** ಎನ್.ವಿ.ಇ.ಕ್ಯೂ.ಎಫ್. ವಿಷಯಕ್ಕೆ ವಾರದಲ್ಲಿ ಹಾಲಿ ಲಭ್ಯವಿರುವ 45 ನಿಮಿಷಗಳ 3 ಬೋಧನಾ ಅವಧಿಗಳ ಜೊತೆಗೆ, ವಿಶೇಷ ತರಗತಿಗಳನ್ನು ಅಗತ್ಯಕ್ಕೆ ತಕ್ಕಂತೆ ನಡೆಸಲಾಗುವುದು. ಪ್ರತಿ ಸೆಕ್ಟಾರ್‌ಗೆ ಒಟ್ಟು 200 ಗಂಟೆಗಳ ಬೋಧನಾ ಅವಧಿ ಅವಶ್ಯವಿರುತ್ತದೆ.
**12.ಪ್ರಮಾಣ ಪತ್ರ:** 9ನೇ ತರಗತಿಯಲ್ಲಿ ಎನ್.ವಿ.ಇ.ಕ್ಯೂ.ಎಫ್. ಪೂರ್ಣಗೊಳಿಸಿದಂತಹ ವಿದ್ಯಾರ್ಥಿಗಳಿಗೆ Sector Skill Council ಮತ್ತು ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ, National Certificate for Work Preparation (NCWP-1) ಪ್ರಮಾಣ ಪತ್ರವನ್ನು ನೀಡಲಾಗುವುದು.
**13. ಸಲಹಾ ಕೇಂದ್ರ:** ಪ್ರತಿ ಶಾಲೆಯಲ್ಲಿ ಈ ಯೋಜನೆಯ ರೂಪ–ರೇಷಗಳು, ವ್ಯಾಪ್ತಿ, ಅನುಕೂಲಗಳ ಬಗ್ಗೆ ವೃತ್ತಿ ಸಲಹೆಯನ್ನು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ, ನೀಡಲಾಗುವುದು.
**14 .ಶಿಕ್ಷಕರ ಆಯ್ಕೆ:** ಈ ಯೋಜನೆಯನ್ನು ಅನುಷ್ಠಾನ ಮಾಡಲು ಶಿಕ್ಷಕರ ಸೇವೆಯನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುವುದು.

1. ಮೃದು ಕೌಶಲ್ಯ ಮತ್ತು ಜೀವನ ಕೌಶಲ್ಯಗಳ ವಿಷಯಗಳನ್ನು ಬೋಧಿಸಲು ಹಾಲಿ ಶಾಲೆಗಳಲ್ಲಿ ಆಂಗ್ಲ ವಿಷಯವನ್ನು ಬೋಧಿಸುತ್ತಿರುವ ಶಿಕ್ಷಕರ ಸೇವೆಯನ್ನು ಪಡೆಯಲಾಗುವುದು.
2. ಮಾಹಿತಿ ತಂತ್ರಜ್ಞಾನದ ಸೆಕ್ಟಾರ್‌ಗೆ ಸಂಬಂಧಪಟ್ಟ ವಿಷಯಗಳನ್ನು ಬೋಧಿಸಲು, ಹಾಲಿ ಶಾಲೆಗಳಲ್ಲಿ **ವಿಜ್ಞಾನ/ಗಣಿತ/ಕಂಪ್ಯೂಟರ್** ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರ ಸೇವೆಯನ್ನು ಪಡೆಯಲಾಗುವುದು.
3. ಉದ್ಯೋಗ ಮತ್ತು ತರಬೇತಿ ಇಲಾಖೆಯ ಸಹಯೋಗದೊಂದಿಗೆ ಆಟೋಮೊಬೈಲ್ ಸೆಕ್ಟಾರ್‌ನ್ನು ಅನುಷ್ಠಾನ ಮಾಡಲಾಗುವುದು.
4. ರೀಟೈಲ್ ಸೆಕ್ಟಾರ್ ವಿಷಯಗಳನ್ನು ಬೋಧಿಸುವ ಶಿಕ್ಷಕರನ್ನು ಅಲ್ಪಾವಧಿ ಟೆಂಡರ್ ಮೂಲಕ, ಸಂಬಂಧಪಟ್ಟ ಉದ್ದಿಮೆದಾರರನ್ನು ಆಯ್ಕೆ ಮಾಡಿ ಅವರ ಮೂಲಕ ಅನುಷ್ಠಾನ ಮಾಡಲಾಗುವುದು.

**15. ಶಿಕ್ಷಕರಿಗೆ ತರಬೇತಿ._** ಆಯ್ಕೆಯಾದಂತಹ ಶಿಕ್ಷಕರಿಗೆ ಸಂಬಂಧಪಟ್ಟ ವಿಷಯಗಳಲ್ಲಿ 5 ದಿನಗಳ ಕಾಲ ತರಬೇತಿ ಕಾರ್ಯಗಾರವನ್ನು ನಡೆಸಲಾಗುವುದು.
**16. ಪಠ್ಯ ವಿಷಯಗಳು:** 1. ಸೆಕ್ಟಾರ್‌ಗೆ ಸಂಬಂಧಪಟ್ಟ ಪಠ್ಯ ವಿಷಯಗಳನ್ನು ಪ್ರತಿ ವಿದ್ಯಾರ್ಥಿಗೆ ನೀಡಲಾಗುವುದು.

2. ಬೋಧನೆಗೆ ಅನುಕೂಲವಾಗುವಂತಹ ಶಿಕ್ಷಕರ ಕೈಪಿಡಿಯನ್ನು ಒದಗಿಸಲಾಗುವುದು.

**17. ಶಾಲಾ ಸಂಯೋಜಕರು:** ಈ ಯೋಜನೆಯ ಅನುಷ್ಠಾನ / ಮೇಲ್ವಿಚಾರಣೆಗೆ ಪ್ರತಿ ಶಾಲೆಯಲ್ಲಿ ಆಸಕ್ತಿ ಹೊಂದಿರುವ ಹಿರಿಯ ಶಿಕ್ಷಕರನ್ನು ಸಂಯೋಜಕರನ್ನಾಗಿ ನಿಯೋಜಿಸಲಾಗುವುದು.

**18. ಸಂಭಾವನೆ:** ಈ ಯೋಜನೆಯ ಅಡಿಯಲ್ಲಿ ಬೋಧನಾ ಕಾರ್ಯನಿರ್ವಹಿಸುವ ಹಾಗೂ ಸಂಯೋಜಕರಾಗಿ ಸೇವೆ ನಿರ್ವಹಿಸುವವರಿಗೆ ಸಂಭಾವನೆಯನ್ನು ನೀಡಲಾಗುವುದು.

**19. ಕಾಲಾವಕಾಶ:** ಈ ಯೋಜನೆಯ ಅನುಷ್ಟಾನಕ್ಕೆ ಕಾಲಾವಕಾಶ ಹೆಚ್ಚು ಇಲ್ಲದೆ ಇರುವುದರಿಂದ, ನಿಗದಿಪಡಿಸಲಾದ ಕಾರ್ಯಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸುವುದು.

**20. ಆಡಳಿತ ಪದ್ಧತಿ:**

ರಾಜ್ಯ ಎನ್.ವಿ.ಇ.ಕ್ಯೂ.ಎಫ್. ರಾಜ್ಯ ಸಮಿತಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಉಪನಿರ್ದೇಶಕರ ಮೂಲಕ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಈ ಮಾರ್ಗದರ್ಶಿ ಯೋಜನೆಯಿಂದ ಗಳಿಸಿದ ಅನುಭವ, ಕಲಿಕೆ, ಫಲಿತಾಂಶ ಹಾಗೂ ಪ್ರತಿಕ್ರಿಯೆಯನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿರುವ ಹರಿಯಾಣ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಫಲಿತಾಂಶದ ಜೊತೆ ಪರಾಮರ್ಶಿಸಿ ಈ ಯೋಜನೆಯನ್ನು 2013–14 ರಲ್ಲಿ ರಾಜ್ಯದ ಇತರೆ ಶಾಲೆಗಳಲ್ಲಿ ವಿಸ್ತರಿಸುವ ಬಗ್ಗೆ ನಿರ್ಧರಿಸಲಾಗುವುದು.

## ವಿಷಯ ಶಿಕ್ಷಕರ ವೇದಿಕೆ

ಶಿಕ್ಷಕನೆಂದರೆ ನಿರಂತರ ವಿದ್ಯಾರ್ಥಿಯೆಂಬ ಮಾತಿದೆ. ಅದರಲ್ಲೂ ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಶಿಕ್ಷಕನು ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ತಂತ್ರಜ್ಞಾನದ ಬಳಕೆಯಲ್ಲೂ ಪರಿಣತಿ ಹೊಂದಬೇಕಾದ ಅವಶ್ಯಕತೆ ಎದುರಾಗಿದೆ. ಇಂದಿನ ವಿದ್ಯಾರ್ಥಿ ಪೀಳಿಗೆಯು ಆಧುನಿಕ ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ದಾಪುಗಾಲನ್ನು ಹಾಕಬೇಕಾಗಿದೆ. ಆಧುನಿಕ ತಂತ್ರಜ್ಞಾನವು ಬರೀ ಮನರಂಜನೆ ಅಂತರ್ಜಾಲ, ಅದರಲ್ಲಿನ ಸಂಪನ್ಮೂಲಗಳು, ಅವುಗಳ ಸದ್ಬಳಕೆ, ಶೈಕ್ಷಣಿಕ ತಂತ್ರಾಂಶಗಳ ಅನುಕೂಲಗಳು ಮುಂತಾದವುಗಳನ್ನು ಶಿಕ್ಷಣದಲ್ಲಿ ಅಳವಡಿಸಿಕೊಳ್ಳುವ ಅನಿವಾರ್ಯತೆಯಿದೆ. ಮೌಲ್ಯಗಳು ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶಿಕ್ಷಕರಿಗೆ ಹೆಜ್ಜೆ ಹೆಜ್ಜೆಗೂ ಸವಾಲುಗಳು ಎದುರಾಗುತ್ತಿವೆ. ಹೊಸ ಪಠ್ಯಕ್ರಮ, ವಿಷಯಗಳು, ಮೌಲ್ಯಮಾಪನ ಪದ್ಧತಿಗಳು ಶಿಕ್ಷಕರಲ್ಲಿ ಗೊಂದಲಗಳು, ಅನುಮಾನಗಳು, ಸಮಸ್ಯೆಗಳನ್ನು ಸೃಷ್ಟಿಸಿವೆ. ಈ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಾಗುವುದರ ಜೊತೆಗೆ ಅವುಗಳನ್ನು ಹಂಚಿಕೊಳ್ಳುವ ಮತ್ತು ಪರಿಹಾರಗಳನ್ನು ಕಂಡುಕೊಳ್ಳುವ ಸೂಕ್ತವಾದ ವೇದಿಕೆಯ ಅವಶ್ಯಕತೆ ಇದ್ದು, ಸಾಂಪ್ರದಾಯಿಕ ಕಾರ್ಯಾಗಾರಗಳಲ್ಲಿ ಈ ಎಲ್ಲಾ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣಗಳು ಹಲವಾರು. ಸಮಯದ ಅಭಾವ, ಭೌತಿಕವಾಗಿ ಶಿಕ್ಷಕರೆಲ್ಲರೂ ಒಮ್ಮೆಲೆ ಒಂದೆಡೆ ಸೇರಲು ಕಷ್ಟವಾಗುವುದು, ಮುಂತಾದುವು. ಇಂತಹ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದ ಮೊದಲ ಹೆಜ್ಜೆಯೇ **ವಿಷಯ ಶಿಕ್ಷಕರ ವೇದಿಕೆ**. RMSA ಮತ್ತು DSERT ಯ ಸಹಯೋಗದೊಂದಿಗೆ IT for Change ಸಂಸ್ಥೆಯು ಈ ವಿಷಯ ಶಿಕ್ಷಕರ ವೇದಿಕೆಯನ್ನು ಹುಟ್ಟುಹಾಕಿದೆ. ಕರ್ನಾಟಕ ರಾಜ್ಯದ ವಿಷಯ ಶಿಕ್ಷಕರೆಲ್ಲರೂ ಒಟ್ಟಾಗಿ ಸುಲಭ ಹಾಗು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಇದು ನಾಂದಿಯಾಗಿದೆ.

STF ಎಂಬುದು ಒಂದು google group ಆಗಿದ್ದು ಶಿಕ್ಷಕರು ತಮ್ಮ e-mail id ಗಳನ್ನು ನೊಂದಾಯಿಸಿಕೊಳ್ಳಬೇಕು. ಈಗಾಗಲೇ ಇದರಲ್ಲಿ ಸಾವಿರಾರು ಶಿಕ್ಷಕರು ಸೇರಿರುತ್ತಾರೆ. ಇದರ ಮುಖ್ಯ ಉದ್ದೇಶಗಳೆಂದರೆ

1. ವಿಷಯಜ್ಞಾನವನ್ನು ಶಿಕ್ಷಕರು ಬಲಪಡಿಸಿಕೊಳ್ಳುವುದು.
2. ಪಠ್ಯವಿಷಯಕ್ಕೆ ಬೇಕಾದ ಸಂಪನ್ಮೂಲವನ್ನು ಹೆಚ್ಚಿಸಿ ಶಿಕ್ಷಕರ ಬೋಧನಾ/ಕಲಿಕಾ ಪ್ರಕ್ರಿಯೆಯಲ್ಲಿ ಅನುಕೂಲವನ್ನು ಮಾಡಿಕೊಡುವುದು.
3. ಶಿಕ್ಷಕರುಗಳ ಕಲಿಕಾ ಸಮುದಾಯವನ್ನು ರಚಿಸುವುದು.

**STF ಕಾರ್ಯಾಗಾರಗಳು**

RMSA ವತಿಯಿಂದ ನಡೆಯುತ್ತಿರುವ ಈ ಕಾರ್ಯಾಗಾರದಲ್ಲಿ ICT ಶಾಲೆಗಳ ಶಿಕ್ಷಕರುಗಳು ಶಾಲೆಗಳ ಶಿಕ್ಷಕರು ಈಗಾಗಲೇ STF ಬಳಕೆಯ ತರಬೇತಿ ಪಡೆದಿರುತ್ತಾರೆ. ಈ ಕಾರ್ಯಾಗಾರದಲ್ಲಿ

- ಶಿಕ್ಷಕರುಗಳು ಕನಿಷ್ಠ ಕಂಪ್ಯೂಟರ್ ಜ್ಞಾನ ಪಡೆಯುವಂತೆ ಮಾಡುವುದು.
- ಶೈಕ್ಷಣಿಕ ತಂತ್ರಾಂಶಗಳ ಬಳಕೆ/ಉಪಯೋಗಗಳು
- ಸಾರ್ವಜನಿಕ ತಂತ್ರಾಂಶಗಳ ಪ್ರಯೋಜನಗಳನ್ನು ತಿಳಿಸುವುದು.
- ಮುಕ್ತವಾದ/ಉಚಿತವಾದ ಶೈಕ್ಷಣಿಕ ಸಂಪನ್ಮೂಲಗಳನ್ನು ತಯಾರಿಸುವುದು.
- ಶಿಕ್ಷಕರು ತಮ್ಮ ವಿಷಯ ಪ್ರಾವೀಣ್ಯತೆಯನ್ನು online/offline ಮೂಲಕ ಹಂಚಿಕೊಳ್ಳುವುದು.

ಇತ್ಯಾದಿಗಳ ಬಗ್ಗೆ ತರಬೇತಿ ಹೊಂದಿರುತ್ತಾರೆ. ಈಗಾಗಲೇ 34 ಜಿಲ್ಲೆಗಳಲ್ಲಿ ಹಂತ ಹಂತಗಳಲ್ಲಿ ಈ ತರಬೇತಿ ನಡೆದಿದ್ದು, ಈ ಯೋಜನೆಯಡಿಯಲ್ಲಿ ಮೊದಲು ಕ್ರಮವಾಗಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ

ಹಾಗೂ ಇಂಗ್ಲಿಷ್ ಭಾಷಾ ಶಿಕ್ಷಕರುಗಳಿಗೆ ತರಬೇತಿ ನೀಡಲಾಗಿದೆ. ಮುಂದಿನ ಹಂತಗಳಲ್ಲಿ ಹಿಂದಿ ಮತ್ತು ಕನ್ನಡ ವಿಷಯಗಳಲ್ಲೂ ಈ ತರಬೇತಿ ನಡೆಯಲಿದೆ.

ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿಯೇ ಶಿಕ್ಷಕರಿಗೆ ಮುಕ್ತ ಸಂಪನ್ಮೂಲಗಳು ದೊರೆಯುವಂತೆ ಮಾಡುವುದು. Web portal ಬಳಕೆ, e-mail ಮುಖಾಂತರ ಹಂಚಿಕೆ. ಹೀಗೆ ಇತರೆ ಇವೆಲ್ಲವೂ ಪ್ರಮುಖ ಉದ್ದೇಶದಿಂದ, KOER(Karnataka Open Educational resource) ಎಂಬ educational wiki ಈಗಾಗಲೇ ಕಾರ್ಯರೂಪಕ್ಕೆ ಬಂದಿದ್ದು ಶಿಕ್ಷಕರು ಬರೆದಿರುವ, ಪಠ್ಯವಿಷಯಕ್ಕೆ ಸಂಬಂಧಿಸಿದ ಸಂಪನ್ಮೂಲಗಳು ಈಗಾಗಲೇ http://karnatakaeducation.org.in/KOER ನಲ್ಲಿ ಲಭ್ಯವಿರುತ್ತದೆ.

**2013–14 ಅವಧಿಯಲ್ಲಿನ STF ಯೋಜನೆಗಳು:**

1. 2013–14 ನೇ ಸಾಲಿನಲ್ಲಿ ಇಂಗ್ಲೀಷ್ ಶಿಕ್ಷಕರುಗಳು ಎರಡನೇ ಹಂತದ ತರಬೇತಿ ಪಡೆಯಲಿದ್ದಾರೆ.
2. 15 ಜಿಲ್ಲೆಗಳಲ್ಲಿ ಕನ್ನಡ ಮತ್ತು ಹಿಂದಿ STF ತರಬೇತಿ ನೀಡುವುದು.
3. ಉಳಿದ 19 ಜಿಲ್ಲೆಗಳಿಂದ ಆಯ್ದ 4 ವಿಭಾಗಗಳ, 8 ವಲಯಗಳಲ್ಲಿ ಇಂಗ್ಲಿಷ್ STF ಜೊತೆಗೆ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯದ ಮೇಲೆ KOER ಮಾದರಿಯನ್ನು ಉತ್ತಮಪಡಿಸುವುದು.
4. ಶಾಲಾಹಂತದ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಕನ್ನಡ ವಿಕಿಪೀಡಿಯ ಅಭಿವೃದ್ಧಿಪಡಿಸುವುದು.
5. ಸಂಪನ್ಮೂಲ ಸೃಷ್ಟಿಗೆ 9ನೇ ತರಗತಿಯ ಹೊಸ ಪಠ್ಯಪುಸ್ತಕಗಳ ಬಗ್ಗೆ ಹೆಚ್ಚು ಗಮನ ಕೊಡುವುದು.

ಬಾಲ್ಯಾವಸ್ಥೆಯಲ್ಲಿರುವ STF ನ್ನು ಉಳಿಸುವ ಮತ್ತು ಬೆಳೆಸುವ ಹೊಣೆ ಶಿಕ್ಷಕರಾದ ನಮ್ಮೆಲ್ಲರ ಜವಾಬ್ದಾರಿಯಾಗಿದೆ. STF ನಲ್ಲಿ ಸೇರಬಯಸುವ ಶಿಕ್ಷಕರು ದಯಮಾಡಿ KOER@ karnatakaeducation.org.in ವಿಳಾಸಕ್ಕೆ ತಮ್ಮ e-mail id ಕಳುಹಿಸಿ

## ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ–ಕರ್ನಾಟಕ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಆಭಿಯಾನ ಕಾರ್ಯಕ್ರಮ 2009–10 ರಿಂದ ರಾಜ್ಯದಲ್ಲಿ ಅನುಷ್ಠಾನಗೊಂಡಿರುತ್ತದೆ. 2014–15ರಲ್ಲಿ 66 ಹಿರಿಯ ಪ್ರಾಥಮಿಕ ಶಾಲೆಗಳು ಪ್ರೌಢಶಾಲೆಗಳಾಗಿ ಉನ್ನತೀಕರಣಗೊಂಡಿರುತ್ತದೆ.

- ಈ ಶಾಲೆಗಳಿಗೆ ಮುಖ್ಯಶಿಕ್ಷಕರು ಮತ್ತು 6 ಸಹಶಿಕ್ಷಕರ ಹುದ್ದೆಗಳು ಮಂಜೂರಾಗಿರುತ್ತವೆ.
- ಈ ಶಾಲೆಗಳಲ್ಲಿ ಪ್ರತಿ ತರಗತಿಗೆ ಕನಿಷ್ಠ 70 ವಿದ್ಯಾರ್ಥಿಗಳು ದಾಖಲಾಗುವಂತೆ ಕ್ರಮವಹಿಸಬೇಕು
- ಮುಖ್ಯಶಿಕ್ಷಕರು ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ, ಈ ಯೋಜನೆಯಲ್ಲಿ ಗುರುತಿಸಿರುವ ಚಟುವಟಿಕೆಗಳಿಗೆ ರಾಜ್ಯ ಕಛೇರಿಯ ಮಾರ್ಗಸೂಚಿಯಂತೆ ವೆಚ್ಚಗಳನ್ನು ಭರಿಸಬೇಕು.
- ಈ ವೆಚ್ಚಗಳಿಗೆ ಸಂಬಂಧಿಸಿದಂತೆ SDMC ಸಭೆಯಲ್ಲಿ ಚಟುವಟಿಕೆಗಳನ್ನು ಮಂಡಿಸಿ ಅನುಮೋದನೆ ಪಡೆದು Financial Management and Procurement ನಿಯಮಾನುಸಾರ ವೆಚ್ಚಗಳನ್ನು ಮಾಡಬೇಕು.
- ಈ ಅನುದಾನವನ್ನು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಚಟುವಟಿಕೆಗಳಿಗೆ ಮಾತ್ರ ಬಳಸಲು ಅವಕಾಶ ಇರುತ್ತದೆ. ಯಾವುದೇ ಕಾರಣಕ್ಕೆ ಮುಖ್ಯಶಿಕ್ಷಕರ ಹಾಗೂ ಶಿಕ್ಷಕರ ವೈಭವಯುತ ಪೀಠೋಪಕರಣಗಳು ಹಾಗೂ ಸಾಮಗ್ರಿಗಳನ್ನು ಖರೀದಿಸಲು ಅವಕಾಶ ಇರುವುದಿಲ್ಲ.

**ಸಣ್ಣ ಪ್ರಮಾಣದ ದುರಸ್ತಿ ಅನುದಾನ:**

- ಸ್ವಂತ ಕಟ್ಟಡ ಹೊಂದಿರುವ ಸರ್ಕಾರಿ ಪ್ರೌಢಶಾಲೆಗಳಿಗೆ 2009–10 ರಿಂದ ರೂ.25000/– ಸಣ್ಣ ಪ್ರಮಾಣದ ದುರಸ್ತಿ ಅನುದಾನ ಬಿಡುಗಡೆಯಾಗಿದ್ದು ಇದನ್ನು ಶಾಲೆಗಳಲ್ಲಿ ಅಕರ್ಷಣೆಯ ಕಲಿಕಾ ವಾತಾವರಣ ನಿರ್ಮಾಣ ಮಾಡಲು ಶಾಲೆಗಳ ಸುಣ್ಣ–ಬಣ್ಣ, ಶೌಚಾಲಯ ನಿರ್ವಹಣೆ, ವಿದ್ಯುತ್ ಶುಲ್ಕ ಮುಂತಾದ ಶಾಲಾ ಕಟ್ಟಡ ನಿರ್ವಹಣೆಗೆ ಪೂರಕ ಚಟುವಟಿಕೆಗಳಿಗೆ ರಾಜ್ಯ ಕಛೇರಿ ನೀಡಿರುವ ಮಾರ್ಗಸೂಚಿಯನ್ನು ಅನುಸರಿಸಿ ವೆಚ್ಚ ಮಾಡುವುದು.
- ಈ ಎಲ್ಲಾ ವೆಚ್ಚಗಳು ಸಾಮಾಜಿಕ ಲೆಕ್ಕ ಪರಿಶೋಧನೆಗೆ (Social Auditing) ಗೆ ಲಭ್ಯವಾಗಬೇಕು. ಶಾಲೆಯ ಪ್ರಕಟಣಾ ಫಲಕದಲ್ಲಿ ಬಿಡುಗಡೆ ವೆಚ್ಚಗಳನ್ನು ಕಡ್ಡಾಯವಾಗಿ ದಾಖಲಿಸಬೇಕು.

**ಹೆಣ್ಣುಮಕ್ಕಳ ಪ್ರೋತ್ಸಾಹಧನ**

ಕೇಂದ್ರ ಸರ್ಕಾರವು ಹೆಣ್ಣುಮಕ್ಕಳ ಪ್ರೌಢಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸರ್ಕಾರಿ, ಅನುದಾನಿತ ಪ್ರೌಢಶಾಲೆಗಳಲ್ಲಿ 9ನೇ ತರಗತಿಯಲ್ಲಿ ಓದುತ್ತಿರುವ 16 ವರ್ಷದ ಒಳಗಿರುವ SC, ST ಹೆಣ್ಣುಮಕ್ಕಳು ಮತ್ತು

ಕೆ.ಜಿ.ಬಿ.ವಿ.ಶಾಲೆಯಲ್ಲಿ 8ನೇ ತರಗತಿ ಉತ್ತೀರ್ಣ ಹೊಂದಿ 9ನೇ ತರಗತಿಗೆ ದಾಖಲಾಗಿರುವ ಎಲ್ಲಾ ಹೆಣ್ಣುಮಕ್ಕಳಿಗೆ ರೂ 3000/ – ಪ್ರೋತ್ಸಾಹಧನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಈ ಹಣವನ್ನು ಅವರಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ ವಯಸ್ಸು 18 ವರ್ಷ ತುಂಬಿದ ನಂತರ ನೀಡಲಾಗುತ್ತದೆ.

ಈ ಕುರಿತಂತೆ ಈಗಾಗಲೆ ನಮೂನೆಯನ್ನು ನೀಡಲಾಗಿದೆ, ಮುಖ್ಯಶಿಕ್ಷಕರು 9ನೇ ತರಗತಿಯಲ್ಲಿ ಓದುತ್ತಿರುವ ಹೆಣ್ಣುಮಕ್ಕಳ ವಿವರಗಳನ್ನು ರಾಜ್ಯ ಕಛೇರಿಯು ನೀಡಿರುವ ನಮೂನೆಯಲ್ಲಿ ರಾಷ್ಟ್ರೀಕೃತ ಹಾಗೂ IFSC ಕೋಡ್ ಹೊಂದಿರುವ ಬ್ಯಾಂಕ್ ಖಾತೆ ಸಂಖ್ಯೆಯೊಂದಿಗೆ ಉಪನಿರ್ದೇಶಕರಿಗೆ ಸಲ್ಲಿಸಬೇಕು.

## ಸಂಗೀತ, ನೃತ್ಯ, ನಾಟಕ ವಿಭಾಗ

2016–17ನೇ ಸಾಲಿನ ಪ್ರತಿಭಾ ಕಾರಂಜಿ ಸ್ಪರ್ಧಾ ಕಾರ್ಯಕ್ರಮವನ್ನು ಶಾಲಾ ಹಂತ, ಕ್ಲಸ್ಟರ್ ಹಂತ, ತಾಲ್ಲೂಕು ಹಂತ, ಜಿಲ್ಲಾ ಹಂತ, ಹಾಗೂ ರಾಜ್ಯ ಹಂತದ ಕಾರ್ಯಕ್ರಮವನ್ನು ಈ ಕೆಳಕಂಡ ದಿನಾಂಕವನ್ನು ತಾತ್ಕಲಿಕವಾಗಿ ಗುರುತಿಸಿದೆ.

1. ಶಾಲಾ ಹಂತ –ದಿನಾಂಕ:21.07.2016 ಮತ್ತು 22.07.2016
2. ಕ್ಲಸ್ಟರ ಹಂತ –ದಿನಾಂಕ:09.08.2016 ಮತ್ತು 10.08.2016
3. ಬ್ಲಾಕ್ ಹಂತ –ದಿನಾಂಕ:26.08.2016 ಮತ್ತು 27.08.2016
4. ಜಿಲ್ಲಾ ಹಂತ –ದಿನಾಂಕ:25.11.2016 ಮತ್ತು 26.11.2016
5. ರಾಜ್ಯ ಹಂತ –ಡಿಸೆಂಬರ್ 2016ರ ಮಾಹೆಯಲ್ಲಿ ನಡೆಸಬಹುದಾಗಿದೆ ದಿನಾಂಕ ಮತ್ತು ಜಿಲ್ಲಾ ಕೇಂದ್ರವನ್ನು ಮಾನ್ಯ ಶಿಕ್ಷಣ ಸಚಿವರು ಅನುಮೋದಿಸಿದ ನಂತರ ಪ್ರಕಟಿಸಲಾಗುವುದು.

## ಚಿತ್ರಕಲಾ ವಿಭಾಗ

ಪ್ರೌಢಶಾಲೆಗೆ ದಾಖಲಾದ ವಿದ್ಯಾರ್ಥಿಗಳಲ್ಲಿ ರೂ.10/– ಗಳನ್ನು ಚಿತ್ರಕಲಾ ಶುಲ್ಕವನ್ನು ಪಡೆದಂತಹ ಶಾಲಾ ಮುಖ್ಯೋಪಾಧ್ಯಾಯರು ಸರ್ಕಾರಿ ಆದೇಶ ಸಂಖ್ಯೆ: ಇಡಿ 185 ಎಸ್.ಇಎಸ್ 96, ಬೆಂಗಳೂರು ದಿನಾಂಕ:29.11.1996ರ ಆದೇಶದಲ್ಲಿ ತಿಳಿಸಿರುವಂತೆ ಶೇಕಡ 20 ರಂತೆ ಅಂದರೆ ಪ್ರತಿ ವಿದ್ಯಾರ್ಥಿಯಿಂದ (ರೂ.2/–) ಎರಡು ರೂಪಾಯಿಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸುವ ಸಲುವಾಗಿ ನೋಂದಣಿ ಶುಲ್ಕವನ್ನು ಆಯುಕ್ತರ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ.

1.ಬೆಂಗಳೂರು ಮತ್ತು ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ರವರು **"ಸಹಾಯಕ ನಿರ್ದೇಶಕರು, ಚಿತ್ರಕಲೆ, ಬೆಂಗಳೂರು" ಇವರ ಹೆಸರಿಗೆ** ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ಪಡೆದು ಸಹಾಯ ನಿರ್ದೇಶಕರು, ಚಿತ್ರಕಲೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರ ವಿಳಾಸಕ್ಕೆ ಸಲ್ಲಿಸುವಂತೆ ತಿಳಿಸಿದೆ.

2.ಕಲಬುರ್ಗಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ರವರು **"ಆಯುಕ್ತರು ಮತ್ತು ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು, ಕಲಬುರ್ಗಿ"** ರವರ ಹೆಸರಿಗೆ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ಪಡೆದು ಅಪ ಆಯುಕ್ತರು ಕಲಬುರ್ಗಿ ರವರ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ.

3.ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ರವರು **"ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ"** ರವರ ಹೆಸರಿಗೆ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ಪಡೆದು ಅಪರ ಆಯುಕ್ತರು ಧಾರವಾಡ ರವರ ಕಛೇರಿಗೆ ಸಲ್ಲಿಸುವಂತೆ ತಿಳಿಸಿದೆ.

# 2016–17ನೇ ಸಾಲಿನ ಸ್ಪರ್ಧೆ ನಡೆಯುವ ಅಂದಾಜು ವೇಳಾ ಪಟ್ಟಿ

| ಕ್ರ.ಸಂ | ತಿಂಗಳು | ವಿವರ | ಸ್ಪರ್ಧೆಯ ಕಾಲಮಿತಿ |
|---|---|---|---|
| 01 | ನವೆಂಬರ್ 01 ರಿಂದ 15 | ಶಾಲಾ ಹಂತದ ಸ್ಪರ್ಧೆಗಳು ನಡೆಸುವುದು | 2 ಘಂಟೆ 30 ನಿಮಿಷ |
| 02 | ನವೆಂಬರ್ 25 | ವಿಭಾಗ ಮಟ್ಟದ ನೋಡಲ್ ಅಧಿಕಾರಿಗಳಗೆ ಕಲಾಕೃತಿಗಳನ್ನು ಕಳುಹಿಸುವುದು. | – |
| 03 | ಡಿಸೆಂಬರ್ 05 | ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಕಲಾ ಕೃತಿಗಳನ್ನು ರಾಜ್ಯದ ನೋಡಲ್ ಅಧಿಕಾರಿಗಳಿಗೆ ಕಳುಹಿಸುವುದು. | – |
| 04 | ಜನವರಿ –2017 ದಿನಾಂಕ:1.01.2017 ರಿಂದ 05.01.2017 | ರಾಜ್ಯ ಮಟ್ಟದ ಸ್ಪರ್ಧೆ ನಡೆಸುವುದು. | 2 ಘಂಟೆ 30 ನಿಮಿಷ |

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು -೫೬೦೦೦೧.**

ಸಂಖ್ಯೆ:ಆರ್.ಎಂ.ಎಸ್.ಎ/ಐ.ಇ.ಡಿ.ಎಸ್.ಎಸ್/ಮಾ.ಸೂ/01/2015–16 ದಿನಾಂಕ:19.08.2015

**<u>ಮಾರ್ಗಸೂಚಿ</u>**

ವಿಷಯ: 2015–16 ಸಾಲಿನ ವಿಶೇಷ ಅಗತ್ಯವುಳ್ಳ ಪ್ರೌಢಶಾಲಾ ಮಕ್ಕಳ "ಸಮನ್ವಯ ಶಿಕ್ಷಣ" ಮದ್ಯವರ್ತನೆ ಕಾರ್ಯಚಟುವಟಿಕೆಗಳ ಅನುಷ್ಠಾನಕ್ಕಾಗಿ ಮಾರ್ಗಸೂಚಿ.

ಉಲ್ಲೇಖ: ಎಂ.ಹೆಚ್.ಆರ್.ಡಿ ನವದೆಹಲಿ ಇವರ ನಡಾವಳಿ ದಿನಾಂಕ:05.02.2015 ಹಾಗೂ 17.04.2015.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಲ್ಲಿ 9 ಮತ್ತು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯವುಳ್ಳ ಮಕ್ಕಳ ಸಮನ್ವಯ ಶಿಕ್ಷಣ ಚಟುವಟಿಕೆಗಳನ್ನು 2013–14ನೇ ಸಾಲಿನಿಂದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮೂಲಕ ಇಲಾಖೆಯ ಒಂದು ಕಾರ್ಯಕ್ರಮವನ್ನಾಗಿ ಹಮ್ಮಿಕೊಳ್ಳಲಾಗುತ್ತಿದೆ. ಈ ಹಿನ್ನಲೆಯಲ್ಲಿ 2015–16ನೇ ಸಾಲಿನಲ್ಲಿ ಮಂಜೂರಾಗಿರುವ ಐ.ಇ.ಡಿ.ಎಸ್.ಎಸ್ ಯೋಜನೆಯ ಮದ್ಯವರ್ತನೆಗಳು ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ವಲಯ ಹಂತದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಲಾಗಿದೆ.

**ವಿದ್ಯಾರ್ಥಿಗಳಿಗಾಗಿ ಇರುವ ವಿಶೇಷ ಸೌಲಭ್ಯಗಳು (Student Oriented Component)**

ಐ.ಇ.ಡಿ.ಎಸ್.ಎಸ್ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2015–16ನೇ ಸಾಲಿಗಾಗಿ 10156 ವಿದ್ಯಾರ್ಥಿಗಳಿಗೆ ರೂ.3000/– ರಂತೆ, ಒಟ್ಟು **304.8** ಲಕ್ಷ ರೂಗಳ ಅನುದಾನವನ್ನು ಅನುಮೋದಿಸಲಾಗಿದೆ. ಅದರಂತೆ ಜಿಲ್ಲಾ ಹಂತಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಪ್ರತಿಯೊಂದು ಯೋಜನೆಗೆ ನಿಗಧಿ ಪಡಿಸಿದ ಅನುದಾನದ ಮಿತಿಯಲ್ಲೇ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಕಡ್ಡಾಯವಾಗಿದೆ. ಯಾವುದೇ ಕಾರಣಕ್ಕೂ ಒಂದು ಚಟುವಟಿಕೆಯ ಅನುದಾನವನ್ನು ಮತ್ತೊಂದು ಚಟುವಟಿಕೆಗೆ ಬಳಸಲು ಅವಕಾಶವಿರುವುದಿಲ್ಲ. ಪ್ರತೀ ತಿಂಗಳು ಪ್ರಗತಿ ವಿವರವನ್ನು ಆರ್.ಎಂ.ಎಸ್.ಎ ನಿಯಮದಂತೆ ಕಳುಹಿಸಬೇಕಾಗಿರುತ್ತದೆ.

**ವೈದ್ಯಕೀಯ ಮೌಲ್ಯಾಂಕನ ಶಿಬಿರ: (Assessment and Measurement camps)**

2015–16ನೇ ಸಾಲಿಗೆ ಗುರುತಿಸಲಾಗಿರುವ 9 ನೇ ತರಗತಿಯ ವಿಕಲಚೇತನ ಮಕ್ಕಳಿಗೆ ವೈದ್ಯಕೀಯ ಮೌಲ್ಯಾಂಕನ ಶಿಬಿರಗಳನ್ನು ವಲಯ ಹಂತದಲ್ಲಿ ಎಸ್.ಎಸ್.ಎ ಜೊತೆಯಲ್ಲಿ ಈಗಾಗಲೇ ನೀಡಿರುವ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಶಿಬಿರ ಆಯೋಜಿಸಿರುವ ಬಗ್ಗೆ ಮಾಹಿತಿಯನ್ನು ಸಲ್ಲಿಸುವುದು.

**ಸಾಧನ ಸಲಕರಣೆಗಳ ವಿತರಣೆ :(Provision of Aids and Appliances)**

ಸಾಧನ ಸಲಕರಣೆಗಳು ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು 2015–16 ನೇ ಸಾಲಿಗೆ 3124 ವಿಶೇಷ ಅಗತ್ಯವುಳ್ಳ ಮಕ್ಕಳಿಗೆ, ಒಂದು ಮಗುವಿಗೆ ರೂ.3000/– ರಂತೆ ಒಟ್ಟು ರೂ.93.72 ಲಕ್ಷ ಅನುದಾನ ಅನುಮೋದನೆಯಾಗಿದ್ದು, ಸದರಿ ಅನುದಾನದಲ್ಲಿ ವೈದ್ಯಕೀಯ

ಮೌಲ್ಯಾಂಕನ ಶಿಬಿರದಲ್ಲಿ ವೈದ್ಯರು ಶಿಫಾರಸ್ಸು ಮಾಡಿರುವ ಸಾಧನ ಸಲಕರಣೆಗಳನ್ನು ಸಕಾಲದಲ್ಲಿ ಎಸ್.ಎಸ್.ಎ ನಿಯಮದಂತೆ ದರಪಟ್ಟಿಯನ್ನು ಕರೆದು ಖರೀದಿಸಲು ಕ್ರಮವಹಿಸುವುದು.

**ಎಸ್ಕಾರ್ಟ್ ಭತ್ಯೆ :(Escort Allowance)**

ತೀವ್ರ ನ್ಯೂನ್ಯತೆಯ ಕಾರಣದಿಂದ ವಿದ್ಯಾರ್ಥಿಗಳು ತಾವೇ ಶಾಲೆಗೆ ಬರದೆ ಮನೆಯಲ್ಲಿ ಉಳಿದು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ ರಾಜ್ಯದಾದ್ಯಂತ 503 ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಮಾಸಿಕ ರೂ.100/– ರಂತೆ 10 ತಿಂಗಳಿಗೆ ರೂ.1000/–ರಂತೆ ಒಟ್ಟು ರೂ. 50.03 ಲಕ್ಷ ಅನುದಾನ ಅನುಮೋದನೆ ನೀಡಿದ್ದು ಸದರಿ ಅನುದಾನದಲ್ಲಿ ತೀವ್ರ ನ್ಯೂನ್ಯತೆಯ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಿ ಶಾಲೆಗೆ ಕರೆತರುವ ಸಹಾಯಕರಿಗೆ **ಎಸ್ಕಾರ್ಟ್ ಭತ್ಯೆ** ನೀಡಿ ಮಕ್ಕಳು ಶಾಲೆಗೆ ಬರಲು ಸಹಾಯವಾಗುವಂತೆ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಖಾತೆಗೆ ಜಮೆ ಮಾಡಿ ಫಲಾನುಭವಿಗಳಿಗೆ ತಲುಪುವಂತೆ ಸೂಕ್ತ ಕ್ರಮ ವಹಿಸುವುದು.

**ಸಾರಿಗೆ ವೆಚ್ಚ :(Transport Allowance)**

ನ್ಯೂನ್ಯತೆ ಹಾಗೂ ಶಾಲೆಗಳು ದೂರವಿರುವ ಕಾರಣ ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಗಳಿಗೆ ಬರದೆ ಮನೆಯಲ್ಲೇ ಉಳಿದು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ 2015–16ನೇ ಸಾಲಿಗೆ 8000 ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ರೂ.660/– ರಂತೆ 52.80 ಲಕ್ಷ ಅನುದಾನವನ್ನು ಅನುಮೋದಿಸಿದ್ದು. ಸದರಿ ಅನುದಾನದಲ್ಲಿ ಶಾಲೆಗಳಿಗೆ ಬರುವ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಖಾತೆಗೆ ಜಮಾ ಮಾಡಿ, ಫಲಾನುಭವಿಗಳಿಗೆ ತಲುಪುವಂತೆ ಹಾಗೂ ವಿದ್ಯಾರ್ಥಿಗಳು ಸಕಾಲದಲ್ಲಿ ಶಾಲೆಗೆ ಬರಲು ಸೂಕ್ತ ಕ್ರಮ ವಹಿಸುವುದು.

**ರೀಡರ್ ಭತ್ಯೆ. (Reader Allowance)**

ಪೂರ್ಣ ಅಂಧತ್ವದಿಂದ, ಮಕ್ಕಳು ಮುದ್ರಣವನ್ನು ಓದಲು ಕಷ್ಟವಾಗುವುದರಿಂದ ಪಠ್ಯ ಪುಸ್ತಕ/ ನೋಟ್ ಪುಸ್ತಕ ಗಳನ್ನು ಓದಿ ಹೇಳುವ ಕಾರ್ಯಕ್ಕಾಗಿ ರೀಡರ್ ಭತ್ಯೆಯನ್ನು ರಾಜ್ಯದಾದ್ಯಂತ 435 ಮಕ್ಕಳಿಗೆ ರೂ 21.75 ಲಕ್ಷ ಅನುದಾನವನ್ನು ಅನುಮೋದನೆ ನೀಡಿದ್ದು, ಸದರಿ ಅನುದಾನದಲ್ಲಿ ಪೂರ್ಣ ಅಂಧತ್ವವಿರುವ ಮಕ್ಕಳನ್ನು ಗುರುತಿಸಿ ಪ್ರತಿ ಅಂಧ ವಿದ್ಯಾರ್ಥಿಗೆ ಒಬ್ಬರಂತೆ ಸೇವಾ ಮನೋಭಾವವಿರುವವರನ್ನು ನೇಮಿಸಿ, ಮಾಹೆ ರೂ. 50 ರಂತೆ 10 ತಿಂಗಳಿಗೆ ರೂ. 500/– ಗಳನ್ನು ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಖಾತೆಗೆ ಜಮಾ ಮಾಡಿ ಮಕ್ಕಳಿಗೆ ಸಹಾಯ ಮಾಡಲು ಸೂಕ್ತ ಕ್ರಮ ವಹಿಸುವುದು.

**ಪುಸ್ತಕ ಮತ್ತು ಸ್ಟೇಷನರಿ ವಸ್ತುಗಳ ಖರೀದಿ : (Books and Stationery)**

ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಐ.ಇ.ಡಿ.ಎಸ್.ಎಸ್ ಯೋಜನೆಯಡಿಯಲ್ಲಿ 2015–16 ನೇ ಸಾಲಿಗೆ 10156 ವಿದ್ಯಾರ್ಥಿಗಳಿಗೆ ರೂ. 400/– ರಂತೆ ರೂ.406.24 ಲಕ್ಷ ಅನುದಾನ ಅನುಮೋದನೆಯಾಗಿದ್ದು, ಸದರಿ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಗೊಳಿಸಲಾಗುತ್ತಿದ್ದು, ಅನುದಾನದಲ್ಲಿ ಪುಸ್ತಕ ಮತ್ತು ಸ್ಟೇಷನರಿ ವಸ್ತುಗಳ ಖರೀದಿ ಮಾಡಿ ಅವಶ್ಯ ವಿದ್ಯಾರ್ಥಿಗಳಿಗೆ ವಿತರಿಸಲು ಸೂಕ್ತ ಕ್ರಮವಹಿಸುವುದು ಹಾಗೂ ಫಲಾನುಭವಿಗಳಿಗೆ ತಲುಪಿರುವ ಬಗ್ಗೆ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರುಗಳಿಂದ ಧೃಢೀಕರಣ ಪಡೆದು ಪುಸ್ತಕ ಮತ್ತು ಸ್ಟೇಷನರಿ ವಸ್ತುಗಳ ಖರೀದಿ ಮಾಡಿರುವುದರ ಬಗ್ಗೆ ದಾಖಲೆಗಳನ್ನು ತಪ್ಪದೇ ನಿರ್ವಹಿಸುವುದು.

**ಹೆಣ್ಣು ಮಕ್ಕಳಿಗೆ ವಿಶೇಷ ಭತ್ಯೆ. : (Stipend for girls student)**

ವಿಶೇಷ ಅಗತ್ಯವುಳ್ಳ ಹೆಣ್ಣು ಮಕ್ಕಳು ಹೆಚ್ಚಿನ ಬೇಧಭಾವವನ್ನು ಅನುಭವಿಸುವುದರಿಂದ ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸುವುದಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯದಾದ್ಯಂತ 4359 ಹೆಣ್ಣು ಮಕ್ಕಳಿಗೆ ರೂ.2000/– ರಂತೆ 87.180 ಲಕ್ಷ ಅನುದಾನ ಅನುಮೋದನೆಯಾಗಿದ್ದು, ಸದರಿ ಅನುದಾನವನ್ನು 9 ಮತ್ತು 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳನ್ನು ಗುರುತಿಸಿ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಖಾತೆಗೆ ಜಮಾ ಮಾಡಿ ಹೆಣ್ಣು ಮಕ್ಕಳಿಗೆ ತಲುಪಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

**ಅಂಧ ಮಕ್ಕಳಿಗೆ ಬ್ರೈಲ್ ಪುಸ್ತಕಗಳ ವಿತರಣೆ :(Distribution of Braille Books)**

ಪೂರ್ಣ ಅಂಧತ್ವದ ಕಾರಣ ಅಂಧ ಮಕ್ಕಳು ಮುದ್ರಣವನ್ನು ಓದಲು ಮತ್ತು ಬರೆಯಲು ಕಷ್ಟವಾಗುವುದರಿಂದ ಅದರ ಪರ್ಯಾಯವಾಗಿ ಬ್ರೈಲ್ ಲಿಪಿಯಲ್ಲಿ ಮುದ್ರಿತಗೊಂಡ ಪುಸ್ತಕಗಳ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯಾದ್ಯಂತ 435 ಅಂಧ ಮಕ್ಕಳಿಗೆ ತಲಾ ರೂ.2500/–ರಂತೆ 10.875 ಲಕ್ಷ ಅನುದಾನವನ್ನು ಅನುಮೋಧಿಸಿದ್ದು ಸದರಿ ಅನುದಾನದಲ್ಲಿ ಸರ್ವ ಶಿಕ್ಷಣ ಅಭೀಯಾನದ ಸಹಕಾರದೊಂದಿಗೆ ಬ್ರೈಲ್ ಲಿಪಿಯಲ್ಲಿ ಮುದ್ರಿತಗೊಂಡ ಪುಸ್ತಕಗಳನ್ನು ಸರಬರಾಜು ಮಾಡಲಾಗುವುದು. ಸರಬರಾಜಾದ ಪುಸ್ತಕಗಳನ್ನು ಅರ್ಹ ಅಂಧ ವಿದ್ಯಾರ್ಥಿಗಳಿಗೆ ವಿತರಿಸಿ ಅವರ ಶೈಕ್ಷಣಿಕ ಅಭಿವೃದ್ಧಿಗೆ ಸೂಕ್ತ ಕ್ರಮ ವಹಿಸುವುದು.

**ವಿಶೇಷ ಶಿಕ್ಷಕರ ನೇಮಕಾತಿ: (Appointment of Special Resource Teacher)**

ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ವಿಶೇಷ ಶಿಕ್ಷಕರ ಪಾತ್ರ ಪ್ರಮುಖವಾಗಿದ್ದು, ಅವರ ಸೇವೆಯನ್ನು ಪಡೆಯಲು ರಾಜ್ಯದಾದ್ಯಂತ 80 ಶಿಕ್ಷಕರಿಗೆ ಪ್ರತೀ ತಿಂಗಳು ತಲಾ 20 ಸಾವಿರ ದಂತೆ 192.00 ಲಕ್ಷ ಅನುದಾನ ಅನುಮೋದನೆಯಾಗಿದ್ದು ಅದರಂತೆ ಜಿಲ್ಲೆಯಲ್ಲಿ ಅನುಬಂಧ–2 ರಲ್ಲಿ ಸೂಚಿಸಿರುವಂತೆ ಜಿಲ್ಲಾ ಹಂತದಲ್ಲಿ ಸಮನ್ವಯ ಶಿಕ್ಷಣದಲ್ಲಿ ಅನುಭವವಿರುವ ಸಂಸ್ಥೆಗಳಿಂದ ದರಪಟ್ಟಿಯನ್ನು ಕರೆದು ಹೊರಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ನೇಮಕ ಮಾಡಿಕೊಳ್ಳುವುದು. ವಿಶೇಷ ಶಿಕ್ಷಕರನ್ನು ನೇಮಕ ಮಾಡುವಾಗ ಈಗಾಗಲೇ ಸೇವೆ ಸಲ್ಲಿಸಿರುವ ಶಿಕ್ಷಕರಿಗೆ ಪ್ರಥಮ ಆದ್ಯತೆ ನೀಡುವುದು, ಹಾಗೂ ವಿದ್ಯಾರ್ಹತೆ, ಆರ್.ಸಿ.ಐ ನೊಂದಣಿ ಸಂಖ್ಯೆ ಇರುವುದರ ಬಗ್ಗೆ ಕಡ್ಡಾಯಾವಾಗಿ ಖಾತ್ರಿ ಪಡಿಸಿಕೊಳ್ಳುವುದು. ವಿಶೇಷ ಶಿಕ್ಷಕರ ಹಾಜರಾತಿಯನ್ನು ವಲಯಗಳ ಬಿ.ಆರ್.ಸಿ ಹಂತದಲ್ಲಿ ನಿರ್ವಹಿಸುವುದು. ವಿಶೇಷ ಶಿಕ್ಷಕರ ವೇತನವನ್ನು ಪ್ರತಿ ತಿಂಗಳು ಅವರ ಖಾತೆಗೆ ಜಮಾ ಆಗಿರುವುದರ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಈ ಸುತ್ತೋಲೆ ತಲುಪಿದ ಕೂಡಲೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.

**ವಿಶೇಷ ಭತ್ಯೆ :(Special pay)**

2015–16 ನೇ ಸಾಲಿನ ಐ.ಇ.ಡಿ.ಎಸ್.ಎಸ್ ಕಾರ್ಯಕ್ರಮದ ಅನುಷ್ಟಾನಕ್ಕಾಗಿ ಕಾರ್ಯಕ್ರಮಗಳನ್ನು ಸಕಾಲಕ್ಕೆ ಅನುಷ್ಠಾನಗೊಳಿಸಲು, ಶಾಲಾ ಭೇಟಿ, , ಮಾಹಿತಿ ಸಂಗ್ರಹಣೆ ಮುಂತಾದ ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರತೀ ಮಾಹೆ ರೂ.400/–ಗಳಂತೆ, 3.84 ಲಕ್ಷ ಅನುಮೋದನೆಯಾಗಿದ್ದು ಸದರಿ ಅನುದಾನದಲ್ಲಿ ಭರಿಸುವುದು.

**ಆಡಳಿತ ಹಾಗೂ ಮೇಲುಸ್ತುವಾರಿ ಅಧಿಕಾರಿಗಳಿಗೆ, ಶಿಕ್ಷಕರಿಗೆ ಹಾಗೂ ಪೋಷಕರಿಗೆ ತರಬೇತಿ. (Orientation of Principals Educational Administrators, Parents/ Guardians etc )**

ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಆಡಳಿತ ಹಾಗೂ ಮೇಲುಸ್ತುವಾರಿ ಅಧಿಕಾರಿಗಳ, ಪೋಷಕರ ಪಾತ್ರ ಪ್ರಮುಖವಾಗಿದ್ದು ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು 4538 ಜನ ಅಧಿಕಾರಿಗಳಿಗೆ ರೂ.600/– ರಂತೆ

27.23 ಲಕ್ಷ ಅನುದಾನವನ್ನು ಅನುಮೋದನೆ ನೀಡಿದ್ದು ಸದರಿ ಕಾರ್ಯಕ್ರಮದ ಬಗ್ಗೆ ಪ್ರತ್ಯೇಕ ಸುತ್ತೋಲೆಯನ್ನು ನೀಡಿದ ನಂತರ ಅನುಷ್ಠಾನಗೊಳಿಸಲು ಸೂಚಿಸಿದೆ.

**ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಬಲವರ್ಧನೆ :(Strengthening of Resource Rooms)**

ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹಾಗೂ ವಿಶೇಷ ಕೌಶಲ್ಯಗಳ ಅಭಿವೃದ್ಧಿಯಲ್ಲಿ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಅನಿವಾರ್ಯವಾಗಿದ್ದು, ಈಗಾಗಲೇ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ನಿರ್ವಹಿಸಲಾಗುತ್ತಿರುವ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಬಲವರ್ಧನೆಗೆ ರಾಜ್ಯದಾದ್ಯಂತ 202 ಕೇಂದ್ರಗಳಿಗೆ ತಲಾ ರೂ. 70 ಸಾವಿರ ರಂತೆ 141.40 ಲಕ್ಷ ಅನುದಾನವನ್ನು ಅನುಮೋದಿಸಿದ್ದು, ಸದರಿ ಅನುದಾನದಲ್ಲಿ ಈಗಾಗಲೇ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ನಿರ್ವಹಿಸಲಾಗುತ್ತಿರುವ ಸಮನ್ವಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಗೆ ಅವಶ್ಯ ಸಾಮಗ್ರಿಗಳನ್ನು ನಿಯಮನುಸಾರ ಖರೀದಿ ಮಾಡಿ ಸಂಪನ್ಮೂಲ ಕೇಂದ್ರಗಳನ್ನು ಬಲವರ್ಧನೆಗೊಳಿಸಿ ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹಾಗೂ ವಿಶೇಷ ಕೌಶಲ್ಯಗಳ ಅಭಿವೃದ್ದಿಗೆ ಸೂಕ್ತ ಕ್ರಮ ವಹಿಸುವುದು.

ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಸಕಾಲಕ್ಕೆ ಅನುಷ್ಠಾನಗೊಳಿಸಲು, ಶಾಲಾ ಭೇಟಿ, ಮೇಲುಸ್ತುವಾರಿ, ಮಾಹಿತಿ ಸಂಗ್ರಹಣೆ ಮುಂತಾದ ಯೋಜನೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಎಸ್.ಎಸ್.ಎ ಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಡಿ.ಐ.ಇ.ಆರ್.ಟಿ ರವರು ಈಗಾಗಲೇ ಇಲಾಖೆ ಯಿಂದ ಹಲವಾರು ರೀತಿಯ ವಿಕಲಚೇತನ ಮಕ್ಕಳ ಶೈಕ್ಷಣಿಕ ನಿರ್ವಹಣೆಗೆ ಸಂಬಂಧಿಸಿದಂತೆ ದೀರ್ಘ ಮತ್ತು ಅಲ್ಪ ಕಾಲದ ತರಬೇತಿಯನ್ನು ಪಡೆದಿರುವುದರಿಂದ ಸದರಿಯವರ ಸೇವೆಯನ್ನೇ ಬಳಸಿಕೊಳ್ಳುವುದು. **ಅನುಬಂಧ–1** ರಲ್ಲಿ ಸೂಚಿಸಿರುವಂತೆ ಅನುದಾನವನ್ನು ನಿಗದಿತ ಚಟುವಟಿಕೆಗಳಿಗೆ ಖರ್ಚು ಭರಿಸಿ ಕಾರ್ಯಕ್ರಮ ಅನುಷ್ಠಾನದ ಮಾಹೆವಾರು ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ವಲಯಗಳಿಂದ ಪಡೆದು ಪ್ರತೀ ತಿಂಗಳು 05ನೇ ತಾರೀಖಿನೊಳಗೆ ತಪ್ಪದೇ ಕಡ್ಡಾಯವಾಗಿ **dpiminority2010@gmail.com** ಗೆ ಇದರೊಂದಿಗೆ ಲಗತ್ತಿಸಿರುವ **ಅನುಬಂಧ–2** ನಮೂನೆಯಲ್ಲಿ ಸಲ್ಲಿಸುವುದು. ಹಾಗೂ ಐ.ಇ.ಡಿ.ಎಸ್.ಎಸ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದಲ್ಲಿ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ದೂರವಾಣಿ ಸಂಖ್ಯೆ **080–22213766/9480695474** ರವರನ್ನು ಸಂಪರ್ಕಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

**ಪ್ರತಿಯನ್ನು ಸೂಕ್ತ ಕ್ರಮಕ್ಕೆ,**

1. ರಾಜ್ಯದ ಎಲ್ಲಾ ಡಿ.ಡಿ.ಪಿ.ಐ ಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಡಿ.ವೈ.ಪಿ.ಸಿ ಆರ್.ಎಂ.ಎಸ್.ಎ ರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಿ.ಐ.ಇ.ಆರ್.ಟಿ ಗಳವರಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಬಿ.ಇ.ಓ ರವರಿಗೆ ಮುಂದಿನ ಸೂಕ್ತಕ್ರಮಕ್ಕೆ ಕಳುಹಿಸುತ್ತಾ ನಿಮ್ಮ ವ್ಯಾಪ್ತಿಯ ಬಿ.ಆರ್.ಸಿ, ಬಿ.ಆರ್.ಪಿ, ವಿಶೇಷ ಶಿಕ್ಷಕರು ಮತ್ತು ಎಲ್ಲಾ ಮಾರ್ಗದರ್ಶಕರುಗಳಿಗೆ ಪ್ರತಿಯನ್ನು ವಿತರಿಸುವುದು.
6. ಈ ಕಛೇರಿಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ.

**ಇವರಿಗೆ ಅವಗಾಹನೆ  ಹಾಗೂ ಮಾಹಿತಿಗಾಗಿ ವಂದನಾ ಪೂರ್ವಕವಾಗಿ.**

1. ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ ಡಾ॥ಅಂಬೇಡ್ಕರ್ ರಸ್ತೆ ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಕಾರ್ಯ ನಿರ್ವಹಣಾಧಿಕಾರಿಯವರಿಗೆ.

# I.D.M.I. (Infrastructure Development in Minority Institutions)

## ಯೋಜನೆಯ ವಿವರಗಳು

ಈ ಯೋಜನೆಯು ಒಂದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, 2009–10 ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ.

ಯೋಜನೆಯ ಧ್ಯೇಯೋದ್ದೇಶಗಳು :

ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಶಾಲೆಗಳ ಮೂಲಭೂತ ಸೌಕರ್ಯಾಭಿವೃದ್ಧಿಗೆ ಅನುದಾನ ನೀಡಿ, ಈ ಮೂಲಕ ಆಧುನಿಕ ವಿದ್ಯಾಭ್ಯಾಸದಿಂದ ವಂಚಿತರಾಗಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಿ, ಅವರನ್ನು ಮುಖ್ಯ ವಾಹಿನಿಗೆ ತರುವುದು ಈ ಯೋಜನೆಯ ಮುಖ್ಯ ಉದ್ದೇಶ. ವಿಶೇಷವಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಗುರಿಯನ್ನೂ ಸಹ ಈ ಕೇಂದ್ರ ಪುರಸ್ಕೃತ ಯೋಜನೆಯು ಹೊಂದಿದೆ.

ಯೋಜನೆಯಡಿಯಲ್ಲಿ ಪರಿಗಣಿಸಲಾಗುವ ಮೂಲಭೂತ ಸೌಲಭ್ಯಗಳು :

ಈ ಯೋಜನೆಯಡಿಯಲ್ಲಿ ಮತೀಯ ಅಲ್ಪಸಂಖ್ಯಾತ ಶಾಲೆಗಳಲ್ಲಿ ಕಟ್ಟಡ ನಿರ್ಮಾಣ, ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣ, ಶೌಚಾಲಯಗಳ ನಿರ್ಮಾಣ, ವಸತಿ ನಿಲಯಗಳು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿನಿಯರ ವಸತಿ ನಿಲಯಗಳ ನಿರ್ಮಾಣ, ವಿಜ್ಞಾನ ಪ್ರಯೋಗಾಲಯ/ಗ್ರಂಥಾಲಯ/ಗಣಕ ಯಂತ್ರ ಪ್ರಯೋಗಾಲಯ ಇತ್ಯಾದಿಗಳ ನಿರ್ಮಾಣ, ಕುಡಿಯುವ ನೀರು ಪೂರೈಕೆ/ವಿಜ್ಞಾನ ಉಪಕರಣಗಳು/ಗ್ರಂಥಾಲಯ ಪುಸ್ತಕಗಳು/ಪೀಠೋಪಕರಣಗಳು/ ಗಣಕ ಯಂತ್ರಗಳು ಇತ್ಯಾದಿ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿಕೆಯಂತಹ ಮೂಲಭೂತ ಸೌಕರ್ಯಾಭಿವೃದ್ಧಿಗಳನ್ನು ಪರಿಗಣಿಸಲಾಗುತ್ತದೆ. ಇವುಗಳ ಹೊರತಾಗಿ ಕರ್ನಾಟಕ ರಾಜ್ಯ ಗ್ರಾಂಟ್–ಇನ್–ಏಡ್ ಕಮಿಟಿ ಶಿಫಾರಸ್ಸು ಮಾಡುವ ಇತರೆ ಮೂಲಭೂತ ಸೌಕರ್ಯಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಯೋಜನೆಯ ಅರ್ಹತಾ ನಿಬಂಧನೆಗಳು ;

- ಶಾಲೆಗಳನ್ನು ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು/ಸೊಸೈಟಿಗಳು/ಟ್ರಸ್ಟ್‌ಗಳು ನೋಂದಣಿಯಾಗಿರಬೇಕು.
- ಶಾಲೆಗಳು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದಿರಬೇಕು.
- ಯೋಜನೆಯ ಲಾಭ ಪಡೆಯಲಿಚ್ಛಿಸುವ ಶಾಲೆಗಳು "ಮತೀಯ ಅಲ್ಪಸಂಖ್ಯಾತ ಶಾಲೆಗಳು" ಎಂದು ಸರ್ಕಾರ/ಇಲಾಖೆಯಿಂದ ಘೋಷಿಸಲ್ಪಟ್ಟಿರಬೇಕು.
- ಶಾಲೆಗಳು ಪ್ರಾರಂಭಗೊಂಡು, ಕನಿಷ್ಠ ಪಕ್ಷ 3 ವರ್ಷಗಳಿಂದ ಅಸ್ತಿತ್ವದಲ್ಲಿರಬೇಕು ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.

**ಯೋಜನೆಯ ಆರ್ಥಿಕ ಪರಿಮಿತಿ ;**

**ಸರ್ಕಾರೇತರ ಸಂಸ್ಥೆಗಳು/ಸೊಸೈಟಿಗಳು/ಟ್ರಸ್ಟ್‌ಗಳು ಸಲ್ಲಿಸುವ ಅನುದಾನದ ಪ್ರಸ್ತಾವನೆಯಲ್ಲಿನ ಅಗತ್ಯತೆಗಳನ್ನು ಆಧರಿಸಿ, ರಾಜ್ಯ ಗ್ರಾಂಟ್–ಇನ್–ಏಡ್ ಸಮಿತಿಯು ಶಿಫಾರಸ್ಸು ಮಾಡುವ ಪ್ರಸ್ತಾವಿಕ ಆಯವ್ಯಯದ ಶೇಕಡಾ 75 ರಷ್ಟು ಅನುದಾನವನ್ನು (ಗರಿಷ್ಠ ಮಿತಿ ರೂ.50.00 ಲಕ್ಷಗಳಿಗೆ ಒಳಪಟ್ಟು) ಕೇಂದ್ರ ಸರ್ಕಾರವು ಭರಿಸುತ್ತದೆ. ಉಳಿದ ಶೇಕಡಾ 25 ರಷ್ಟು ಮೊತ್ತವನ್ನು ಸರ್ಕಾರೇತರ ಸಂಸ್ಥೆಗಳು/ಸೊಸೈಟಿಗಳು/ಟ್ರಸ್ಟ್‌ಗಳು ಭರಿಸಿ ಪೂರ್ಣ ಪ್ರಮಾಣದ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗುತ್ತದೆ. ಈ ಯೋಜನೆಯಡಿಯಲ್ಲಿ ಒಂದು ಶಿಕ್ಷಣ ಸಂಸ್ಥೆಗೆ ಒಮ್ಮೆ ಮಾತ್ರ ಅನುದಾನವನ್ನು ನೀಡಲಾಗುತ್ತದೆ. ಈ ಅನುದಾನವನ್ನು ಎರಡು ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಪ್ರಥಮ ಹಂತದಲ್ಲಿ ಕೇಂದ್ರ ಸರ್ಕಾರವು ಮಂಜೂರು ಮಾಡಲಾಗುವ ಮೊತ್ತದ ಶೇಕಡಾ 50 ರಷ್ಟು ಅನುದಾನವನ್ನು ಪ್ರಥಮ ಕಂತಿನ ಅನುದಾನವಾಗಿ ಬಿಡುಗಡೆ ಮಾಡುತ್ತದೆ. ಈ ಮೊತ್ತದೊಂದಿಗೆ ಸಂಸ್ಥೆಯವರು ತಮ್ಮ ಪಾಲಿನ ಶೇಕಡಾ 25 ರಷ್ಟು ಮೊತ್ತವನ್ನು ಭರಿಸಿ ಪ್ರಥಮ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸಿ, ಒಂದು ವರ್ಷದೊಳಗಾಗಿ ಬಳಕೆ ಪ್ರಮಾಣ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕು. ನಂತರ 2ನೇ ಕಂತಿನ ಅನುದಾನ ಬಿಡುಗಡೆ ಮಾಡಲಾಗುತ್ತದೆ.**

## ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ವಿವಿಧ ಸೌಲಭ್ಯಗಳು

1. **ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆ/ಪದವಿಪೂರ್ವ ಕಾಲೇಜುಗಳಿಗೆ ಪ್ರೋತ್ಸಾಹಧನ:-**

ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಂತಹ 30 ಕ್ಕಿಂತ ಹೆಚ್ಚು ಮಕ್ಕಳು ಅಭ್ಯಸಿಸುತ್ತಿರುವ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಸ್ಮರಣಫಲಕ ಹಾಗೂ 10,000 ರೂಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅಭಿನಂದನಾ ಫಲಕ ನೀಡಿ ಜಿಲ್ಲಾ ಮಟ್ಟದಲ್ಲಿ ಗೌರವಿಸಲಾಗುತ್ತದೆ.

2. **ಎನ್. ಟಿ. ಎಸ್. ವಿದ್ಯಾರ್ಥಿ ವೇತನ:**

ರಾಜ್ಯ ಮಟ್ಟದ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ (ಎನ್. ಟಿ. ಎಸ್) ಉತ್ತೀರ್ಣರಾಗಿ ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ನಿಧಿಗಳಿಂದ ವಾರ್ಷಿಕ ರೂ.2,000/- ರಂತೆ ಎರಡು ವರ್ಷಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಇಂತಹ ವಿದ್ಯಾರ್ಥಿಗಳ ಪಟ್ಟಿಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ವತಿಯಿಂದ ಪಡೆಯಲಾಗುತ್ತದೆ.

3. **ಅರ್ಹ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:**

ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.50 ಭಾಗವನ್ನು ಮತ್ತು ಪದವಿ ಪೂರ್ವ ಕಾಲೇಜು (ಪಿಯುಸಿ), ಪ್ರಥಮ ದರ್ಜೆ ಹಾಗೂ ಇನ್ನಿತರೆ ಕಾಲೇಜುಗಳಿಂದ ಸಂಗ್ರಹಿಸಿದ ವಂತಿಗೆಯ ಶೇ.60 ಭಾಗವನ್ನು ಆಯಾ ಕಾಲೇಜುಗಳಲ್ಲಿ ಉಳಿಸಿಕೊಂಡು ಅರ್ಹ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳಲು ಸಂಬಂಧಿಸಿದ ಶಾಲಾ/ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ.

4. **ಶೌರ್ಯ ಪ್ರಶಸ್ತಿ:**

ಅಪಾಯ ಸನ್ನಿವೇಶಗಳಲ್ಲಿ ಅಸಾಧಾರಣ ಧೈರ್ಯ, ಸಮಯ ಪ್ರಜ್ಞೆ ಮತ್ತು ಸಾಹಸ ಪ್ರದರ್ಶಿಸಿ ಜನರ ಪ್ರಾಣ ಉಳಿಸಲು ನೆರವಾದ ವಿದ್ಯಾರ್ಥಿಗಳಿಗೆ ಮೆಚ್ಚುಗೆ ಪತ್ರ ಮತ್ತು ರೂ.2,500/-ಗಳ ನಗದನ್ನು ಒಳಗೊಂಡ ಶೌರ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ. ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಶಿಫಾರಸ್ಸುಗೊಂಡ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಗುವುದು.

5. **ಕ್ರೀಡಾ ಪ್ರಶಸ್ತಿ:**

ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಲಾಗುವ ಕ್ರೀಡೆಗಳಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಮೂರು ಪ್ರಶಸ್ತಿಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ.3,000/- , ರೂ.2,500/- ಹಾಗೂ ರೂ.2,000/- ಗಳನ್ನು ವೈಯಕ್ತಿಕ ಬಹುಮಾನವಾಗಿ ಹಾಗೂ ಪ್ರಥಮ ಮೂರು ಪ್ರಶಸ್ತಿಗಳನ್ನು ಗೆದ್ದ ತಂಡಗಳಿಗೆ ಕ್ರಮವಾಗಿ ರೂ.2,000/-, ರೂ.1500/- ಹಾಗೂ ರೂ.1000/- ಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ.

6. **ವಿದ್ಯಾರ್ಥಿಗಳಿಗೆ ಸುರಕ್ಷಾ ಪರಿಹಾರ ಯೋಜನೆ:**

ಆಕಸ್ಮಿಕವಾಗಿ ಶಾಲಾ ವಿದ್ಯಾರ್ಥಿಗಳಿಗೆ ಅಪಘಾತ / ಅನಾಹುತಗಳಾದಲ್ಲಿ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ "ವಿದ್ಯಾರ್ಥಿ ಸುರಕ್ಷಾ ಪರಿಹಾರ ಯೋಜನೆ" ಯಡಿ ಪ್ರಸ್ತುತ 50000/-ರೂ.ಗಳ ಪರಿಹಾರಧನವನ್ನು ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ನೀಡಲಾಗುತ್ತಿದೆ. ಈ ಯೋಜನೆಯ ಸೌಲಭ್ಯಗಳು (ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆ/ ಕಾಲೇಜುಗಳಲ್ಲಿ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ವಯವಾಗುತ್ತದೆ. ಅಪಘಾತ ಪ್ರಕರಣವಲ್ಲದ ಸಹಜ ಮರಣ ಹೊಂದಿದ ಸಂದರ್ಭದಲ್ಲಿ ರೂ. 10,000/- ಪರಿಹಾರ ಧನ ಸಹಾಯ ನೀಡಲಾಗುತ್ತದೆ.

7. **ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನಸಹಾಯ:**

ಶಿಕ್ಷಕರಿಗೆ ನೀಡುತ್ತಿರುವಂತೆ ವಿದ್ಯಾರ್ಥಿಗಳಿಗೂ ಸಹ ಖಾಯಿಲೆಯ ತೀವ್ರತೆಯನ್ನು ಆಧರಿಸಿ ಗರಿಷ್ಠ ರೂ.50,000/-ಗಳ ಮಿತಿಗೊಳಪಟ್ಟು ವೈದ್ಯಕೀಯ ಧನಸಹಾಯವನ್ನು ನೀಡಲಾಗುತ್ತಿದೆ.

8. **ಜಿಲ್ಲಾ ಮಟ್ಟದಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ**

ಜಿಲ್ಲಾ ಮಟ್ಟದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ನಗದು ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಎಸ್.ಎಸ್.ಎಲ್.ಸಿ – ಪ್ರತಿ ಜಿಲ್ಲೆಗೆ ರೂ.2,000/- ದಂತೆ 10 ಪ್ರಶಸ್ತಿ
ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ – 05 ಪ್ರಶಸ್ತಿ
ಇತರೆ ಮಾಧ್ಯಮಗಳ ವಿದ್ಯಾರ್ಥಿಗಳಿಗೆ – 05 ಪ್ರಶಸ್ತಿ

ಪಿ.ಯು.ಸಿ – ಪ್ರತಿ ಜಿಲ್ಲೆಗೆ ರೂ.3.000/- ದಂತೆ 6 ಪ್ರಶಸ್ತಿ
(ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ – 02 ಪ್ರಶಸ್ತಿ
ಕಲಾ ವಿಷಯದ ವಿದ್ಯಾರ್ಥಿಗಳಿಗೆ – 02 ಪ್ರಶಸ್ತಿ
ವಾಣಿಜ್ಯ ವಿಷಯದ ವಿದ್ಯಾರ್ಥಿಗಳಿಗೆ – 02 ಪ್ರಶಸ್ತಿ)

ಅಂತಿಮ ಬಿ.ಎ/ಬಿ.ಎಸ್.ಸಿ.,/ಬಿ.ಕಾಂ/ಬಿ.ಸಿ.ಎ/ಬಿ.ಬಿ.ಎಂ/ಬಿ.ಹೆಚ್.ಎಂ ಮುಂತಾದ ಪದವಿಗೆ ಸಂಬಂಧಿಸಿದ ತತ್ಸಮಾನ ಕೋರ್ಸ್‌ಗಳು ಮತ್ತು ಬಿ.ಇ, ಎಂ.ಬಿ.ಬಿ.ಎಸ್, ಎಂ.ಎ, ಎಂಎಸ್‌ಸಿ, ಎಂಕಾಂ, ಎಂಎಡ್, ಎಲ್‌ಎಲ್‌ಬಿ ಹಾಗೂ ಎಲ್ಲಾ ರೀತಿಯ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿಶ್ವವಿದ್ಯಾನಿಲಯದ ಹಂತದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

9. **ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಸಹ-ಪಠ್ಯ ಚಟುವಟಿಕೆಗಳು:**

ರಾಜ್ಯದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸಹ-ಪಠ್ಯ ಚಟುವಟಿಕೆಗಳ ಆಯೋಜನೆಗೆ ನಿಧಿಗಳಿಂದ ಧನಸಹಾಯ ಬಿಡುಗಡೆ ಮಾಡಲಾಗುತ್ತದೆ.

## ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಡಿಯಲ್ಲಿ ಅಜೀವ ಸದಸ್ಯತ್ವ ಹೊಂದಿರುವ ಶಿಕ್ಷಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳು

1. **ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯ**:

   ಶಿಕ್ಷಕರಿಗೆ / ನಿವೃತ್ತ ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ಖಾಯಿಲೆಯ ತೀವ್ರತೆಯನ್ನು ಆಧರಿಸಿ ಗರಿಷ್ಠ ರೂ.50,000/-ಗಳ ಮಿತಿಗೊಳಪಟ್ಟು ವೈದ್ಯಕೀಯ ಧನ ಸಹಾಯವನ್ನು ನೀಡಲಾಗುತ್ತಿದೆ. ಎ, ಬಿ, ಸಿ ಎಂದು ಖಾಯಿಲೆಗಳನ್ನು ವರ್ಗೀಕರಿಸಲಾಗಿದ್ದು, ಪ್ರತಿ ಶಿಕ್ಷಕರಿಗೆ ಪ್ರತಿ ವರ್ಷಕ್ಕೆ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಮಂಜೂರು ಮಾಡಲಾಗುತ್ತದೆ. ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಹಾಗೂ ಪಾಲಿಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದ ಶಿಕ್ಷಕರು ಈ ಧನಸಹಾಯಕ್ಕೆ ಅರ್ಹರಿರುತ್ತಾರೆ. ನಿಗದಿತ ಅರ್ಜಿ ಜೊತೆ ಮೂಲ ಬಿಲ್ಲುಗಳು, ಡಿಸ್ಚಾರ್ಜ್ ಸಮ್ಮರಿ, ವೈದ್ಯರ ದೃಢೀಕರಣ, ಗೆಜೆಟೆಡ್ ಅಧಿಕಾರಿಗಳ ದೃಢೀಕೃತ ಅಜೀವ ಸದಸ್ಯತ್ವದ ಗುರುತಿನ ಚೀಟಿ ಹಾಗೂ ಐಎಫ್‌ಎಸ್‌ಸಿ ಕೋಡ್ ಹೊಂದಿರುವ ಬ್ಯಾಂಕ್‌ಪಾಸ್ ಪುಸ್ತಕದ ಪ್ರತಿಯನ್ನು ಸಲ್ಲಿಸಬೇಕು.

2. **ಸೇವೆಯಲ್ಲಿರುವಾಗ ಹಾಗೂ ನಿವೃತ್ತಿಯ ನಂತರ ಮೃತಹೊಂದಿದ ಶಿಕ್ಷಕರ ಕುಟುಂಬಗಳಿಗೆ ಕುಟುಂಬ ನಿರ್ವಹಣೆಗಾಗಿ ಧನ ಸಹಾಯ**:

   ಸೇವೆಯಲ್ಲಿರುವಾಗಲೇ ಮೃತಪಟ್ಟಿದ್ದು ಕುಟುಂಬ ಪಿಂಚಣಿ ಮಂಜೂರಾಗದೇ ಇರುವ ಸರ್ಕಾರಿ/ಅನುದಾನಿತ ಶಾಲಾ ಶಿಕ್ಷಕರ ಕುಟುಂಬಕ್ಕೆ ರೂ.10,000/-ಗಳನ್ನು, ನಿವೃತ್ತಿಯ ನಂತರ ಮೃತಪಟ್ಟ ಶಿಕ್ಷಕರ ಕುಟುಂಬದವರಿಗೆ ರೂ.5,000/-ಗಳ ಕುಟುಂಬ ನಿರ್ವಹಣೆಗಾಗಿ ಧನ ಸಹಾಯ ನೀಡಲಾಗುವುದು. ನಿವೃತ್ತ ಶಿಕ್ಷಕರು ಮರಣ ಹೊಂದಿದ 180 ದಿನಗಳೊಳಗೆ ಅವರ ಅವಲಂಬಿತರು ನಿವೃತ್ತ ಶಿಕ್ಷಕರ ಮರಣ ಪ್ರಮಾಣ ಪತ್ರ, ಮತ್ತು ಅಜೀವ ಸದಸ್ಯತ್ವದ ಗುರುತಿನ ಚೀಟಿಯ ದೃಢೀಕೃತ ಪ್ರತಿ, ವಾರಸುದಾರರ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

3. **ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ**:

   ಶಿಕ್ಷಕರಿಗೆ ಹಾಗೂ ನಿವೃತ್ತ ಶಿಕ್ಷಕರಿಗೆ ಪಿ.ಯು.ಸಿ.ಯಿಂದ ಪದವಿ ತರಗತಿಗಳಲ್ಲಿ (ಡಿಪ್ಲೊಮಾ ಸೇರಿದಂತೆ) ವ್ಯಾಸಂಗ ಮಾಡುತ್ತಿರುವ ಅವರ ಮಕ್ಕಳ ವ್ಯಾಸಂಗಕ್ಕಾಗಿ ಕೋರ್ಸುಗಳನ್ನು ಆಧರಿಸಿ ಕನಿಷ್ಠ ರೂ.1000/- ರಿಂದ ಗರಿಷ್ಠ ರೂ.3000/-ಗಳ ಧನಸಹಾಯವನ್ನು ನೀಡಲಾಗುತ್ತಿದೆ. ಶಿಕ್ಷಕರ ಒಂದು ವಿದ್ಯಾರ್ಥಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ. ತಂದೆ ಮತ್ತು ತಾಯಿ ಇಬ್ಬರೂ ಶಿಕ್ಷಕರಾಗಿದ್ದ ಸಂದರ್ಭದಲ್ಲಿ ಓರ್ವ ವಿದ್ಯಾರ್ಥಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ.

4. **ಶಿಕ್ಷಕರ / ನಿವೃತ್ತ ಶಿಕ್ಷಕರ ಮಕ್ಕಳಿಗೆ ಪ್ರತಿಭಾ ವಿದ್ಯಾರ್ಥಿ ವೇತನ**:

   ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಜಿಲ್ಲೆಗೆ ಹೆಚ್ಚು ಅಂಕ ಗಳಿಸಿದಂತಹ ಮತ್ತು ಅಂತಿಮ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಸಿ.ಎ, ಬಿಬಿಎಂ, ಬಿ.ಹೆಚ್.ಎಂ ಮುಂತಾದ ಪದವಿಗೆ ಸಂಬಂಧಿಸಿದ ತತ್ಸಮಾನ ಕೋರ್ಸ್‌ಗಳು ಮತ್ತು 6ನೇ ಸೆಮಿಸ್ಟರ್ ಬಿ.ಇ, ಎರಡನೇ ಫೇಸ್ ಎಂ.ಬಿ.ಬಿ.ಎಸ್ ಹಾಗೂ ಪ್ರಥಮ ವರ್ಷದ ಎಂ.ಎ, ಎಂ.ಎಸ್ಸಿ, ಎಂ.ಕಾಂ, ಎಂ.ಎಡ್, ಎಲ್.ಎಲ್.ಬಿ ಪರೀಕ್ಷೆಗಳಲ್ಲಿ ವಿಶ್ವವಿದ್ಯಾನಿಲಯದ ಹಂತದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ (ಶಿಕ್ಷಕರ ಮಕ್ಕಳಿಗೆ) ಪ್ರತಿಭಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

5. **ಗುರುಭವನಗಳ ಹಾಗೂ ಅತಿಥಿ ಗೃಹಗಳ ನಿರ್ಮಾಣಕ್ಕೆ ಅನುದಾನ:**

ಶಿಕ್ಷಕರ ಸಭೆ, ಸಮಾರಂಭ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ತಾಲ್ಲೂಕು/ ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸುವ ಗುರುಭವನಕ್ಕೆ ಸಭಾಂಗಣದ ವಿಸ್ತೀರ್ಣವನ್ನಾಧರಿಸಿ ಗರಿಷ್ಠ 25 ಲಕ್ಷ ರೂ.ಗಳ ಅನುದಾನವನ್ನು ಹಾಗೂ ಅತಿಥಿಗೃಹಗಳ ನಿರ್ಮಾಣಕ್ಕೆ (ತಲಾ ಕೊಠಡಿಗೆ ರೂ.1,10,000/- ರಂತೆ) ಗರಿಷ್ಠ 11 ಲಕ್ಷ ರೂ.ಗಳ ಅನುದಾನವನ್ನು ನೀಡಲಾಗುತ್ತದೆ. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಹೆಚ್ಚುವರಿ ಅನುದಾನವನ್ನು ಆಯಾ ಗುರುಭವನ ಸಮಿತಿಯು ಹಾಗೂ ಶಿಕ್ಷಕರ ಸಂಘದ ವತಿಯಿಂದ ಕ್ರೋಢೀಕರಿಸಬೇಕಾಗುತ್ತದೆ.

**ಶಿಕ್ಷಕರಿಗೆ ಪ್ರಶಸ್ತಿ.**

**ಅ. ಜಿಲ್ಲಾ ಮಟ್ಟದ ಪ್ರಶಸ್ತಿ**

ಶ್ಲಾಘನೀಯ ಸೇವೆ ಸಲ್ಲಿಸಿದ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರನ್ನು ಗುರುತಿಸಿ ಜಿಲ್ಲಾ ಮಟ್ಟದ ಪ್ರಶಸ್ತಿ (ರೂ.3,000/- ಗಳ ನಗದು ಬಹುಮಾನ) 366 ಶಿಕ್ಷಕರಿಗೆ ಪ್ರತಿ ವರ್ಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಜಿಲ್ಲಾ ಹಂತದ ಸಮಿತಿಗಳಿಂದ ಈ ಶಿಕ್ಷಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು.

**ಆ. ವಿಶೇಷ ಪ್ರಶಸ್ತಿ:**

ರಾಜ್ಯಮಟ್ಟದಲ್ಲಿ ವೈಜ್ಞಾನಿಕ ಹಾಗೂ ವಿನೂತನ ಕಾರ್ಯಗಳನ್ನು ಮಾಡಿದ ಎಂಟು ಜನ ಶಿಕ್ಷಕರಿಗೆ ರೂ.12000/- ರೂಗಳ ನಗದು ಬಹುಮಾನ ಹೊಂದಿದ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ. ಪ್ರತಿ ವರ್ಷ ಅರ್ಹ ಶಿಕ್ಷಕರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಈ ಪ್ರಕ್ರಿಯೆಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ.

**ಇ. ರಾಜೀವ್‌ಗಾಂಧಿ ಸ್ಮಾರಕ ಪ್ರಶಸ್ತಿ:**

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಉತ್ತಮ ಸೇವೆ ಸಲ್ಲಿಸಿದ ತಲಾ ಒಬ್ಬರಂತೆ ಪ್ರತಿಭಾನ್ವಿತ ವಿಜ್ಞಾನ ವಿಷಯದ ಶಿಕ್ಷಕರಿಗೆ ರಾಜ್ಯಮಟ್ಟದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರತಿ ವರ್ಷ ಅರ್ಹ ಶಿಕ್ಷಕರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಈ ಪ್ರಕ್ರಿಯೆಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಪ್ರಶಸ್ತಿಯ ಮೊತ್ತ ತಲಾ ರೂ.12,000/-.

6. **ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಗಾಗಿ ಶಿಕ್ಷಕರಿಗೆ ಪ್ರಶಸ್ತಿ ಹಾಗೂ ಧನಸಹಾಯ.**

ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆ ಮಾಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಮೊದಲ ಮೂರು ಪ್ರಶಸ್ತಿ ಪಡೆದ ಶಿಕ್ಷಕರಿಗೆ ತಲಾ ರೂ.5,000/-, ರೂ.3,000/- ಹಾಗೂ ರೂ.2,000/-ಗಳನ್ನು ನಗದು ರೂಪದಲ್ಲಿ ನೀಡಲಾಗುತ್ತದೆ. ಕಲಿಕಾ ವಸ್ತುಗಳ ತಯಾರಿಕೆ ಸ್ಪರ್ಧೆಯಲ್ಲಿ ಭಾಗವಹಿಸಿದ ಶಿಕ್ಷಕರಿಗೆ ತಯಾರಿ ವೆಚ್ಚವಾಗಿ ರೂ.500/-ರ ಮೊತ್ತವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

7. **<u>ಶಿಕ್ಷಕರಿಗೆ ಸುರಕ್ಷಾ ಪರಿಹಾರ ಯೋಜನೆ:</u>**

ಅಪಘಾತಗಳಿಂದಾಗಿ ಮೃತ ಹೊಂದಿದ ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಹಂತದಿಂದ ವಿಶ್ವವಿದ್ಯಾಲಯ ಹಂತದವರೆಗಿನ ಶಿಕ್ಷಕರುಗಳಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಸುರಕ್ಷಾ ಪರಿಹಾರ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಶಿಕ್ಷಕರ ಕುಟುಂಬದವರಿಗೆ ರೂ.50,000/–ವರೆಗೆ ಪರಿಹಾರ ಧನ ನೀಡಲಾಗುತ್ತದೆ.

೮. **<u>"ಶಿಕ್ಷಕರ ದಿನಾಚರಣೆ" ಸಮಾರಂಭ ಆಯೋಜನೆಗೆ ಧನಸಹಾಯ:</u>**

ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ "ಶಿಕ್ಷಕರ ದಿನಾಚರಣೆ" ಸಮಾರಂಭ ಆಯೋಜನೆಗಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗೆ ರೂ.10,000/– ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳಿಗೆ ರೂ.15,000/–ಗಳ ಧನಸಹಾಯ ನೀಡಲಾಗುತ್ತದೆ.

೯. **<u>ಲ್ಯಾಪ್‌ಟಾಪ್ ಖರೀದಿಗಾಗಿ ಬಡ್ಡಿರಹಿತ ಸಾಲ :</u>**

ಲ್ಯಾಪ್‌ಟಾಪ್ ಖರೀದಿಗಾಗಿ 2014–15ನೇ ಸಾಲಿನಿಂದ ಅನ್ವಯಿಸುವಂತೆ ನೂತನ ಯೋಜನೆಯೊಂದನ್ನು ಜಾರಿಗೆ ತರಲಾಗಿದ್ದು, ಡಿಎಸ್‌ಇಆರ್‌ಟಿ/ಡಯಟ್/ಸಿಟಿಇಗಳಲ್ಲಿ ಕಾರ್ಯ ನಿರ್ವಹಿಸುವ ಒಟ್ಟು 15 ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ರೂ.30,000/– ಮುಂಗಡ/ಟ್ಯಾಬ್ಲೆಟ್ ಖರೀದಿಗೆ ತಲಾ ರೂ.10,000/– ಮುಂಗಡ ನೀಡಲಾಗುತ್ತದೆ. ರಾಜ್ಯದ ಇತರೆ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಒಟ್ಟು 05 ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ರೂ.30,000/– ಮುಂಗಡ/ಟ್ಯಾಬ್ಲೆಟ್ ಖರೀದಿಗೆ ತಲಾ ರೂ.10,000/– ಮುಂಗಡ ನೀಡಲಾಗುತ್ತದೆ.

ಅಲ್ಲದೇ, ಪ್ರತಿ ತಾಲ್ಲೂಕಿನ 10 ಶಿಕ್ಷಕರುಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ತಲಾ ರೂ.30,000/– ಮುಂಗಡ/ ಟ್ಯಾಬ್ಲೆಟ್ ಖರೀದಿಗೆ ತಲಾ ರೂ.10,000/– ಮುಂಗಡವನ್ನೂ ನೀಡಲಾಗುತ್ತದೆ. ಮುಂದಿನ 10 ತಿಂಗಳಲ್ಲಿ ಸಮಾನ ಕಂತುಗಳಲ್ಲಿ ಮುಂಗಡವನ್ನು ವೇತನದಲ್ಲಿ ಕಟಾಯಿಸಿ ಬಡ್ಡಿರಹಿತವಾಗಿ ಹಿಂಪಡೆಯಲಾಗುವುದು.

**ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ನವದೆಹಲಿಯಿಂದ ಶಿಕ್ಷಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳು**

1. **ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಚಿಕಿತ್ಸೆಗೆ ಧನ ಸಹಾಯ:**

   ಅಜೀವ ಸದಸ್ಯತ್ವ ಹೊಂದಿರುವ ಸರ್ಕಾರಿ ಪ್ರಾಥಮಿಕ / ಪ್ರೌಢಶಾಲಾ ಶಿಕ್ಷಕರಿಗೆ / ನಿವೃತ್ತ ಶಿಕ್ಷಕರಿಗೆ ಹಾಗೂ ಅವರ ಅವಲಂಬಿತರಿಗೆ ತೀವ್ರತರವಾದ ಮಾರಕರೋಗಗಳಿಗೆ ತಲಾ ರೂ.20,000/-ಗಳ ವೈದ್ಯಕೀಯ ಧನಸಹಾಯವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

2. **ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ:**
   ಅಜೀವ ಸದಸ್ಯತ್ವ ಹೊಂಧಿರುವ ಶಿಕ್ಷಕರಿಗೆ ಹಾಗೂ ನಿವೃತ್ತ ಶಿಕ್ಷಕರಿಗೆ ವೃತ್ತಿಶಿಕ್ಷಣ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ರೂ.15,000/- ಗಳ ಧನಸಹಾಯವನ್ನು ನೀಡಲಾಗುತ್ತದೆ. ಶಿಕ್ಷಕರ ಓರ್ವ ವಿದ್ಯಾರ್ಥಿಗೆ ಈ ಧನಸಹಾಯ ಸೀಮಿತವಾಗಿರುತ್ತದೆ. ಅರ್ಜಿ ಸಲ್ಲಿಸುವಾಗ ಮೂಲ ಶುಲ್ಕ ರಸೀದಿಯನ್ನು ಲಗತ್ತಿಸಿರಬೇಕು.

3. **ಗುರುಭವನಗಳ ನಿರ್ಮಾಣಕ್ಕೆ ನವದೆಹಲಿಯಿಂದ ಅನುದಾನ:**
   ಐತಿಹಾಸಿಕ ಜಿಲ್ಲಾ ಕೇಂದ್ರಗಳಲ್ಲಿ ಗುರುಭವನ ನಿರ್ಮಾಣಕ್ಕೆ ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ರಾಷ್ಟ್ರೀಯ ಕಲ್ಯಾಣ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ನವದೆಹಲಿಯ ವತಿಯಿಂದ ರೂ.20 ಲಕ್ಷಗಳವರೆಗೆ ಅನುದಾನ ಬಿಡುಗಡೆ ಮಾಡಲಾಗುವುದು.

**ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಶಿಕ್ಷಕರ ಕಲ್ಯಾಣ ನಿಧಿ ಹಾಗೂ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಗಳಿಗೆ ಸರ್ಕಾರಿ / ಅನುದಾನಿತ/ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಂದ ಪಾವತಿಸಬೇಕಾದ ವಂತಿಗೆಯ ವಿವರ**

| ವಂತಿಗೆಯ ವಿವರ | 8,9,10 ನೇ ತರಗತಿ (ರೂ.) |
|---|---|
| ಶಿಕ್ಷಕರು ಪಾವತಿಸಬೇಕಾದ ಶಿಕ್ಷಕರ ದಿನಾಚರಣೆ ಬಾವುಟ ಶುಲ್ಕ | 30/- |
| ವಿದ್ಯಾರ್ಥಿಗಳು ಪಾವತಿಸಬೇಕಾದ ಶಿಕ್ಷಕರ ದಿನಾಚರಣೆ ಬಾವುಟ ಶುಲ್ಕ | 8/- |
| ಶಿಕ್ಷಕರ ಕಲ್ಯಾಣ ನಿಧಿಗೆ ವಾರ್ಷಿಕ ಶುಲ್ಕ (ವಿದ್ಯಾರ್ಥಿಗಳಿಂದ) | 15/- |
| ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಯ ವಾರ್ಷಿಕ ಶುಲ್ಕ (ವಿದ್ಯಾರ್ಥಿಗಳಿಂದ) | 15/- |

**ಶಿಕ್ಷಕರ ಅಜೀವ ಸದಸ್ಯತ್ವ**

ನಿಗದಿತ ಚಲನ್ ಮುಖಾಂತರ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್‌ಗಳಲ್ಲಿ ಶಿಕ್ಷಕರ ಕಲ್ಯಾಣ ನಿಧಿಗಳ ಖಾತೆಗೆ ರೂ.1500/-ಗಳ ಹಣವನ್ನು ಪಾವತಿಸತಕ್ಕದ್ದು. ಪಾವತಿಸಿದ ಬ್ಯಾಂಕ್ ಚಲನ್‌ನ್ನು ಸಂಪೂರ್ಣವಾಗಿ ಭರ್ತಿ ಮಾಡಿದ ಅಜೀವ ಸದಸ್ಯತ್ವ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು. ಅರ್ಜಿಯ ಮೇಲೆ ಒಂದು ಪಾಸ್‌ಪೋರ್ಟ್ ಭಾವಚಿತ್ರ ಅಂಟಿಸುವುದು. ಜೊತೆಗೆ ಪ್ರತ್ಯೇಕವಾಗಿ ಎರಡು ಸ್ಟ್ಯಾಂಪ್ ಸೈಜಿನ ಭಾವಚಿತ್ರಗಳನ್ನು ಲಗತ್ತಿಸಬೇಕು. ಸಂಬಂಧಿತ ಶಾಲಾ ಮುಖ್ಯಸ್ಥರ ದೃಢೀಕರಣದೊಂದಿಗೆ ನಿಯಂತ್ರಣಾಧಿಕಾರಿಗಳ ಸಹಿ ಮತ್ತು ಮೊಹರಿನೊಂದಿಗೆ ಈ ಕಛೇರಿಗೆ ಸಲ್ಲಿಸಬೇಕು. ಅನುದಾನಿತ ಶಾಲಾ ಶಿಕ್ಷಕರು ನೇಮಕಾತಿ ಅನುಮೋದನೆಯ ದೃಢೀಕೃತ ಪ್ರತಿ/ ಹೆಚ್‌ಆರ್‌ಎಂಎಸ್ ವೇತನ ಪ್ರತಿಯನ್ನು

ಲಗತ್ತಿಸಬೇಕು. ಅಜೀವ ಸದಸ್ಯತ್ವದ ಕಾರ್ಡ್‌ನ್ನು ನಿಧಿಗಳ ಕಛೇರಿಯಿಂದ ಮಾತ್ರ ವಿತರಿಸಲಾಗುತ್ತಿದ್ದು, ಯಾವುದೇ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ವಿತರಿಸಲಾಗುವುದಿಲ್ಲ.

## ಶಿಕ್ಷಕರ ಸದನ

ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯಲ್ಲಿ ಶಿಕ್ಷಕರ ಕಲ್ಯಾಣ ನಿಧಿ ಕಛೇರಿಯು ಶಿಕ್ಷಕರ ಸದನ ಕಟ್ಟಡದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ಕಟ್ಟಡದಲ್ಲಿ 33 ಕೊಠಡಿಗಳು ಇದ್ದು, ಇವುಗಳನ್ನು ರಾಜ್ಯದ, ಇತರೆಡೆಗಳಿಂದ ವಿವಿಧ ಕಾರ್ಯಗಳಿಗಾಗಿ ಬೆಂಗಳೂರು ನಗರಕ್ಕೆ ಆಗಮಿಸುವ ಶಿಕ್ಷಕರಿಗೆ ಕನಿಷ್ಠ ನಿರ್ವಹಣಾ ವಂತಿಗೆಯ ರೂಪದಲ್ಲಿ ಹಣವನ್ನು ಸ್ವೀಕರಿಸಿ ವಾಸ್ತವ್ಯಕ್ಕೆ ನೀಡಲಾಗುತ್ತಿದೆ.

ಈ ಸದನದ ಕಟ್ಟಡದಲ್ಲಿ 1000 ಆಸನಗಳ ಸಾಮರ್ಥ್ಯವುಳ್ಳ ಒಂದು ಹವಾ ನಿಯಂತ್ರಿತ ಸಭಾಂಗಣ ಹಾಗೂ 50 ಆಸನಗಳ ಸಾಮರ್ಥ್ಯವುಳ್ಳ ಇನ್ನೊಂದು ಹವಾ ನಿಯಂತ್ರಿತ ಸಭಾಕೊಠಡಿ ಇರುತ್ತದೆ. ಇವುಗಳನ್ನು ಆದ್ಯತೆಯ ಮೇರೆಗೆ ಕನಿಷ್ಠ ನಿರ್ವಹಣಾ ವೆಚ್ಚವನ್ನು ಸ್ವೀಕರಿಸಿ ಶಿಕ್ಷಣ ಇಲಾಖೆಯ ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಂಘ ಸಂಸ್ಥೆಗಳ ಕಾರ್ಯಕ್ರಮಗಳಿಗೆ ನೀಡಲಾಗುತ್ತಿದೆ.

ಅಲ್ಲದೇ 60 ಹಾಸಿಗೆಯನ್ನೊಳಗೊಂಡ ಮಹಿಳಾ ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ತಂಗುದಾಣವಿದ್ದು, ಇದನ್ನೂ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಕನಿಷ್ಠ ನಿರ್ವಹಣಾ ವೆಚ್ಚವನ್ನು ಸ್ವೀಕರಿಸಿ ತಂಗಲು ನೀಡಲಾಗುತ್ತಿದೆ.

**ಸಂಪರ್ಕಕ್ಕಾಗಿ**

ದೂರವಾಣಿ: +91 80 22483434

ಫ್ಯಾಕ್ಸ್: + 91 80 22483860

ಇಮೇಲ್: **kstbf63@gmail.com**

ವೆಬ್‌ಸೈಟ್ : **www.schooleducation.kar.nic.in**

# 2016-17ನೇ ಸಾಲಿನಲ್ಲಿ ನಡೆಸುವ ಕ್ರೀಡಾಕೂಟಗಳ ಮಾಹಿತಿ

## 2016-17ನೇ ಸಾಲಿನ ಸಂಭವನೀಯ ಕ್ರೀಡಾ ಕ್ಯಾಲೆಂಡರ್

1. ದಿನಾಂಕ: 16.06.2016 ರಿಂದ 30.06.2016 ಶಾಲಾ ತಂಡಗಳ ಆಯ್ಕೆ
2. ದಿನಾಂಕ: 01.07.2016 ರಿಂದ 30.07.2016 ಕ್ಲಸ್ಟರ್ ಮಟ್ಟದ ಸಂಘಟನೆ
3. ದಿನಾಂಕ: 01.08.2016 ರಿಂದ 30.08.2016 ತಾಲ್ಲೂಕು ಮಟ್ಟದ ಸಂಘಟನೆ
4. ದಿನಾಂಕ: 01.09.2016 ರಿಂದ 30.09.2016 ಜಿಲ್ಲಾ ಮಟ್ಟದ ಸಂಘಟನೆ
5. ದಿನಾಂಕ: 01.10.2016 ರಿಂದ 30.11. 2016 ವಿಭಾಗ/ರಾಜ್ಯ ಮಟ್ಟದ ಸಂಘಟನೆ

**ಹೋಬಳಿ/ಕ್ಲಷ್ಟರ್‌ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು**

1] ಅಥ್ಲೆಟಿಕ್ಸ್ 2] ಕಬಡ್ಡಿ 3] ವಾಲಿಬಾಲ್ 4] ಖೋ-ಖೋ 5] ಥ್ರೋಬಾಲ್ 6] ಯೋಗ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ] 7] ಫುಟ್‌ಬಾಲ್ [ಹೆಚ್ಚು ತಂಡಗಳಿದ್ದಲ್ಲಿ]

**ಆಯ್ಕೆ ವಿಧಾನ:**

- ಹೋಬಳಿ/ಕ್ಲಷ್ಟರ್‌ಮಟ್ಟದಲ್ಲಿ ಯಾವುದೇ ಕ್ರೀಡೆಗಳಲ್ಲಿ ಆಯ್ಕೆ ಪ್ರಕ್ರಿಯೆ ಇರುವುದಿಲ್ಲ.
- ಗುಂಪು ಆಟಗಳಲ್ಲಿ ವಿಜೇತರಾಗಿ ಪ್ರಥಮ ಸ್ಥಾನ ಗಳಿಸಿದ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು
- ಮೇಲಾಟ[ಅಥ್ಲೆಟಿಕ್ಸ್]ಗಳಲ್ಲಿ ಪ್ರಥಮ/ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾಪಟುಗಳಿಗೆ ಮುಂದಿನ ಹಂತಕ್ಕೆ ಕಳುಹಿಸುವುದು

**ತಾಲ್ಲೂಕು ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು ಮತ್ತು ಆಯ್ಕೆ ವಿಧಾನ**

1] ಅಥ್ಲೆಟಿಕ್ಸ್ 2] ಕಬಡ್ಡಿ 3] ವಾಲಿಬಾಲ್ 4] ಖೋಖೋ 5] ಥ್ರೋಬಾಲ್ 6] ಯೋಗ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ] 7] ಬ್ಯಾಡ್ಮಿಂಟನ್ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ] 8] ಬಾಲ್ ಬ್ಯಾಡ್ಮಿಂಟನ್ [ಹೆಚ್ಚು ತಂಡಗಳಿದ್ದಲ್ಲಿ ಮಾತ್ರ]

**ಆಯ್ಕೆ ವಿಧಾನ:**

- 14 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರಿಗೆ: 6 ಮತ್ತು 7ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗುಂಪು ಆಟಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದು. ಅಂತಿಮವಾಗಿ ಪ್ರಥಮ ಸ್ಥಾನ ಗಳಿಸಿದ ತಂಡದಿಂದ ಗರಿಷ್ಟ ಶೇಕಡ 70 ರಷ್ಟು ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಆಯ್ಕೆ ಮಾಡಿಕೊಳ್ಳುವುದು. ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿನ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಪ್ರೌಢಶಾಲೆಗಳಲ್ಲಿನ [ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳು] 14 ವರ್ಷ ವಯೋಮಿತಿಯೊಳಗಿನ ಬಾಲಕ/ಬಾಲಕಿಯರಿಗೆ ಪ್ರತಿ ಶಾಲೆಯಿಂದ ಎರಡು ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಿ ತಂಡ ರಚನೆಗೆ ಅಗತ್ಯವಿರುವ ಗರಿಷ್ಟ ಶೇಕಡ 30 ರಷ್ಟು ಉತ್ತಮ ಕೌಶಲ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ಮೂಲಕ ತಂಡಗಳನ್ನು ರಚನೆ ಮಾಡಿ ಜಿಲ್ಲಾಮಟ್ಟಕ್ಕೆ ಕಳುಹಿಸುವುದು.
- 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯರಿಗೆ: ಗುಂಪು ಆಟಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ವಿಜೇತರಾಗಿ ಪ್ರಥಮ ಸ್ಥಾನ ಪಡೆದ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು. ಯಾವುದೇ ಆಯ್ಕೆ ಇರುವುದಿಲ್ಲ. ಮೇಲಾಟ[ಅಥ್ಲೆಟಿಕ್ಸ್]ಗಳಲ್ಲಿ ಪ್ರಥಮ/ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾಪಟುಗಳಿಗೆ ಮುಂದಿನ ಹಂತಕ್ಕೆ ಕಳುಹಿಸುವುದು

  ವಿಶೇಷ ಸೂಚನೆ:

  8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಗುಂಪು ಆಟಗಳಲ್ಲಿ ಆಯ್ಕೆ ಮಾಡುವಾಗ ಕ್ರೀಡಾಪಟುಗಳು 5 ರಿಂದ 7ನೇ ತರಗತಿಯ ವಿದ್ಯಾರ್ಥಿ (ಕ್ರೀಡಾಪಟು) ಗಳಿಗಿಂತ ಹೆಚ್ಚು ಕೌಶಲ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದು. ಸದರಿ ವಿದ್ಯಾರ್ಥಿಗಳು 14 ವರ್ಷ ವಯೋಮಿತಿ ಅಥವಾ 17 ವರ್ಷ ವಯೋಮಿತಿಯ ಯಾವುದಾದರೂ ಒಂದು ವಿಭಾಗದಲ್ಲಿ ಮಾತ್ರ ಭಾಗವಹಿಸಲು ಅವಕಾಶ ನೀಡುವುದು.

- 5,6 ಮತ್ತು 7ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೇಲಾಟ[ಅಥ್ಲೆಟಿಕ್ಸ್]ಗಳಲ್ಲಿ ಅವಕಾಶ ನೀಡಿ ಪ್ರಥಮ/ದ್ವಿತೀಯ ಸ್ಥಾನ ಗಳಿಸಿದ ಕ್ರೀಡಾಪಟುಗಳಿಗೆ ಮುಂದಿನ ಹಂತಕ್ಕೆ ಕಳುಹಿಸುವುದು
- ತಾಲ್ಲೂಕು ಮಟ್ಟದಲ್ಲಿ ನಡೆಸುವ ಆಟಗಳಾದ ಕಬಡ್ಡಿ , ಖೋ-ಖೋ, ವಾಲಿಬಾಲ್, ಥ್ರೋಬಾಲ್ ಆಟಗಳಲ್ಲಿ ಮಾತ್ರ 70:30 ರ ಅನುಪಾತದಲ್ಲಿ ಆಯ್ಕೆ ಮಾಡಿ ಜಿಲ್ಲಾಮಟ್ಟಕ್ಕೆ ತಂಡವನ್ನು ಕಳುಹಿಸುವುದು

- ಬ್ಯಾಡ್ಮಿಂಟನ್/ಬಾಲ್‌ಬ್ಯಾಡ್ಮಿಂಟನ್ /ಯೋಗ ಮತ್ತು ಫುಟ್‌ಬಾಲ್ ಆಟಗಳಲ್ಲಿ ಹೆಚ್ಚು ತಂಡಗಳು ಇದ್ದಲ್ಲಿ ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರಥಮ ಸ್ಥಾನ ಪಡೆದ ತಂಡವನ್ನು ಜಿಲ್ಲಾಮಟ್ಟಕ್ಕೆ ಕಳಹಿಸುವುದು. [14 ಮತ್ತು 17 ವರ್ಷ ವಯೋಮಿತಿಯ ಬಾಲಕರ ತಂಡಗಳಿಗೆ ಸ್ಪರ್ಧೆ ನಡೆಸುವುದು ಮತ್ತು 17 ವರ್ಷ ವಯೋಮಿತಿಯ ಬಾಲಕಿಯರ ಫುಟ್‌ಬಾಲ್ ತಂಡವನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆ ಮೂಲಕ ರಚಿಸುವುದು]

## ಜಿಲ್ಲಾ ಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು ಮತ್ತು ಆಯ್ಕೆ ವಿಧಾನ

1] ಅಥ್ಲೆಟಿಕ್ಸ್ 2] ಥ್ರೋಬಾಲ್ 3] ಖೋ-ಖೋ 4] ಕಬಡ್ಡಿ 5] ಯೋಗ 6] ಬಾಲ್‌ಬ್ಯಾಡ್ಮಿಂಟನ್
7] ವಾಲಿಬಾಲ್ 8] ಷಟಲ್ ಬ್ಯಾಡ್ಮಿಟನ್

## ನೇರವಾಗಿ ಜಿಲ್ಲಾಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು

1] ಫುಟ್‌ಬಾಲ್ 2] ಹಾಕಿ 3] ಕುಸ್ತಿ [ಫ್ರೀಸ್ಟೈಲ್ ಮತ್ತು ಗ್ರೀಕೋರೋಮನ್] 4] ಈಜು ಮತ್ತು ಡೈವಿಂಗ್
5] ಹ್ಯಾಂಡ್‌ಬಾಲ್ 6] ಬ್ಯಾಸ್ಕೆಟ್‌ಬಾಲ್ 7] ನೆಟ್‌ಬಾಲ್ 8] ಕ್ರಿಕೆಟ್ 9] ಜಿಮ್ನಾಸ್ಟಿಕ್ 10] ಕರಾಟೆ 11] ಜೂಡೋ
12] ಟೇಬಲ್ ಟೆನಿಸ್ 13] ಲಾನ್‌ಟೆನಿಸ್ 14] ಚೆಸ್ 15] ಜಂಪ್ ರೋಪ್

ಆಯ್ಕೆ ವಿಧಾನ: ಜಿಲ್ಲಾಮಟ್ಟದ ಹಂತದಲ್ಲಿ ಗುಂಪು ಆಟಗಳಲ್ಲಿ ಮೊದಲ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಂದ ಕೆಳಕಂಡಂತೆ ತಂಡಗಳನ್ನು ಆಯ್ಕೆ ಮಾಡಿ ಮುಂದಿನ ಹಂತಕ್ಕೆ ಕಳುಹಿಸುವುದು.

| ಕ್ರ.ಸಂ | ಕ್ರೀಡೆಗಳ ವಿವರ | ಮೊದಲ ಸ್ಥಾನ | ಎರಡನೆಯ ಸ್ಥಾನ | ಒಟ್ಟು | |
|---|---|---|---|---|---|
| 1 | ಕಬಡ್ಡಿ | 7 | 5 | 12 | |
| 2 | ಖೋ-ಖೋ | 9 | 3 | 12 | |
| 3 | ವಾಲಿಬಾಲ್ | 7 | 5 | 12 | |
| 4 | ಥ್ರೋ ಬಾಲ್ | 9 | 3 | 12 | |
| 5 | ಬಾಸ್ಕೆಟ್ ಬಾಲ್ | 7 | 5 | 12 | |
| 6 | ನೆಟ್ ಬಾಲ್ | 7 | 5 | 12 | |
| 7 | ಬಾಲ್ ಬ್ಯಾಡ್ಮಿಟನ್ | 5 | 3 | 8 | |
| 8 | ಲಾನ್ ಟೆನ್ನಿಸ್ | 3 | 2 | 5 | ರ್ಯಾಂಕಿಂಗ್ ಆಟಗಾರರು ಸೇರ್ಪಡೆ ಬಗ್ಗೆ ವಿಶೇಷ ಸೂಚನೆಯಲ್ಲಿ ತಿಳಿಸಿದೆ |
| 9 | ಟೇಬಲ್ ಟೆನ್ನಿಸ್ | 3 | 2 | 5 | |
| 10 | ಬ್ಯಾಡ್ಮಿಂಟನ್ [ಷಟ್ಲ್] | 3 | 2 | 5 | |
| 11 | ಹ್ಯಾಂಡ್ ಬಾಲ್ | 7 | 5 | 12 | |
| 12 | ಫುಟ್‌ಬಾಲ್ | 11 | 5 | 16 | |
| 13 | ಹಾಕಿ | 11 | 5 | 16 | |
| 14 | ಜಂಪ್ ರೋಪ್ | | | | |
| 14 | ಯೋಗ | ಅಂಕಗಳ ಆಧಾರದ ಮೇಲೆ [7 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು] | | | |
| 15 | ಚೆಸ್ | ಅಂಕಗಳ ಆಧಾರದ ಮೇಲೆ | | | |
| 16 | ಕುಸ್ತಿ[ಫ್ರೀ ಸ್ಟೈಲ್/ಗ್ರಿಕೋರೋಮನ್] | ತೂಕದ ಆಧಾರದ ಮೇಲೆ ನಡೆಯುವ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದು | | | |
| 17 | ಕರಾಟೆ | | | | |
| 18 | ಜೂಡೋ | | | | |
| 19 | ಜಿಮ್ನಾಸ್ಟಿಕ್ | | | | |
| 20 | ಈಜು ಮತ್ತು ಡೈವಿಂಗ್ | ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಿರುವ ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಕಳುಹಿಸುವುದು | | | |
| 21 | ಕ್ರಿಕೆಟ್ | ವಿಶೇಷ ಸೂಚನೆಯಲ್ಲಿ ನೀಡಿರುವ ಮಾಹಿತಿಯಂತೆ ಆಯ್ಕೆ ಮಾಡಿ ತಂಡ ರಚಿಸುವುದು. | | | |
| 22 | ಅಥ್ಲೆಟಿಕ್ಸ್ | 14 ಮತ್ತು 17 ವಯೋಮಿತಿಯೊಳಗಿನ ವಿಭಾಗಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು. 14 ವರ್ಷ ವಯೋಮಿತಿಯ 8ನೇ ತರಗತಿಯ ವಿದ್ಯಾರ್ಥಿಗಳು ಬಂದಲ್ಲಿ ಪ್ರತ್ಯೇಕವಾಗಿ ಅವರನ್ನು ಆಯ್ಕೆ ಮಾಡಿ 6 ರಿಂದ 7ನೇ ತರಗತಿಯ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳಿಗಿಂತ ಉತ್ತಮ ಪ್ರದರ್ಶನ ನೀಡುವಂತವರಿಗೆ 3ನೇ ಆಟಗಾರರಾಗಿ ಜಿಲ್ಲಾಮಟ್ಟದಿಂದ ರಾಜ್ಯ ಮಟ್ಟಕ್ಕೆ ಕಳುಹಿಸಬಹುದು. | | | |

**ವಿಶೇಷ ಸೂಚನೆ**:1] 14 ವರ್ಷ ವಯೋಮಿತಿಯೊಳಗಿನ ವಿಭಾಗದಲ್ಲಿ ಜಿಲ್ಲಾಮಟ್ಟದಲ್ಲಿ ನೇರವಾಗಿ ನಡೆಸುವ ಆಟಗಳಿಗೆ ತಾಲ್ಲೂಕು ಹಂತದಲ್ಲಿ ಕಬಡ್ಡಿ, ಖೋ-ಖೋ, ಥ್ರೋಬಾಲ್ ಮತ್ತು ವಾಲಿಬಾಲ್ ಆಟಗಳಿಗೆ ನಡೆಸುವ ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸುವ ಕ್ರಮದಂತೆ 70:30 ರ ಅನುಪಾತದಲ್ಲಿ ಆಯ್ಕೆ ಮಾಡಿ ತಂಡ ರಚಿಸುವುದು.

2] 14 ಮತ್ತು 17 ವರ್ಷ ವಯೋಮಿತಿಯ ಬಾಲಕರ ತಂಡಗಳಿಗೆ ಸ್ಪರ್ಧೆ ನಡೆಸುವುದು ಮತ್ತು 17 ವರ್ಷ ವಯೋಮಿತಿಯ ಬಾಲಕಿಯರ ಘುಟ್‌ಬಾಲ್ ತಂಡವನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆ ಮೂಲಕ ರಚಿಸುವುದು.

- **<u>ಲಾನ್ ಟೆನ್ನಿಸ್, ಬ್ಯಾಡ್ಮಿಂಟನ್[ಷಟ್ಲ್] ಮತ್ತು ಟೇಬಲ್ ಟೆನ್ನಿಸ್:</u>** ಈ ಪಂದ್ಯಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿರುವ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿರುವ ತಂಡಗಳ ಕ್ರೀಡಾಪಟುಗಳೊಂದಿಗೆ ಸಂಬಂಧಿಸಿದ ರಾಜ್ಯ ಮತ್ತು ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳಿಂದ 01 ರಿಂದ 6ನೇ ರ್‍ಯಾಂಕಿಂಗ್ ಸ್ಥಾನವನ್ನು ಪಡೆದಿದ್ದರೆ ಸದರಿ ಕ್ರೀಡಾಪಟುಗಳನ್ನು ಜಿಲ್ಲಾಮಟ್ಟದಲ್ಲಿ ವಿಜೇತರಾಗಿ ಆಯ್ಕೆಯಾದ 5 ಕ್ರೀಡಾಪಟುಗಳೊಂದಿಗೆ ನೇರವಾಗಿ ರ್‍ಯಾಂಕಿಂಗ್ ಪಡೆದ ಆಟಗಾರರನ್ನು ಸೇರ್ಪಡಿಸಿ ಶ್ರೇಯಾಂಕ ಆಧಾರದಲ್ಲಿ 5 ಜನ ಆಟಗಾರರನ್ನು ಮಾತ್ರ ಆಯ್ಕೆ ಮಾಡಿ ಜಿಲ್ಲಾ ತಂಡವನ್ನು ಮುಂದಿನ ಹಂತಕ್ಕೆ ಕಳುಹಿಸುವುದು. [1 ರಿಂದ 6 ರ್‍ಯಾಂಕಿಂಗ್ ಪಡೆದ ಕ್ರೀಡಾಪಟುಗಳು ರ್‍ಯಾಂಕಿಂಗ್ ಪಡೆದಿರುವ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾಮಟ್ಟದಲ್ಲಿ ನೇರವಾಗಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆದರೂ ಕ್ರೀಡಾಪಟುಗಳು ಸ್ವಇಚ್ಛೆಯಿಂದ ತಾಲ್ಲೂಕು ಹಂತದಲ್ಲಿ ಶಾಲಾ ತಂಡದಿಂದ ಭಾಗವಹಿಸಿ ವಿಜೇತರಾದಲ್ಲಿ ಮಾತ್ರ ಮುಂದಿನ ಹಂತಕ್ಕೆ ಕಳುಹಿಸುವುದು. ಒಂದು ವೇಳೆ ಪರಾಭವಗೊಂಡಲ್ಲಿ ಇಂತಹ ಕ್ರೀಡಾಪಟುಗಳನ್ನು ಮುಂದಿನ ಹಂತಕ್ಕೆ ಪರಿಗಣಿಸುವಂತಿಲ್ಲ]. 8ನೇ ತರಗತಿಯಲ್ಲಿನ 14 ವರ್ಷ ವಯೋಮಿತಿಯೊಳಗಿನ 2 [ಎರಡು] ಕ್ರೀಡಾಪಟುಗಳಿಗೆ ಮಾತ್ರ ಅವಕಾಶ ನೀಡುವುದು. [2ನೇ ಸ್ಥಾನದಲ್ಲಿರುವವರಾಗಲಿ ಅಥವಾ 8ನೇ ತರಗತಿಯಿಂದ ನೇರವಾಗಿ ಆಯ್ಕೆಗೆ ಬರುವವರಾಗಿರಬಹುದು] ಜಿಲ್ಲಾಮಟ್ಟದಿಂದ ವಿಭಾಗಮಟ್ಟಕ್ಕೆ ಕಳುಹಿಸುವ ತಂಡದಲ್ಲಿ 8ನೇ ತರಗತಿಯ ಎರಡು ಕ್ರೀಡಾಪಟುಗಳಿಗೆ ಮಾತ್ರ ಅವಕಾಶ ನೀಡುವುದು.
- **<u>ಯೋಗ</u>** : ಈ ಸ್ಪರ್ಧೆಗಳಿಗೆ ಎಸ್.ಜಿ.ಎಫ್.ಐ.ನಿಯಮಗಳಲ್ಲಿ ರಾಷ್ಟ್ರಮಟ್ಟಕ್ಕೆ ರಿದಮಿಕ್ ಮತ್ತು ಆರ್ಟಿಸ್ಟಿಕ್ ಸೇರಿದಂತೆ ಒಟ್ಟು 7 ಕ್ರೀಡಾಪಟುಗಳ ತಂಡವನ್ನು ಆಯ್ಕೆ ಮಾಡಲು ಅವಕಾಶವಿರುವ ಹಿನ್ನೆಲೆಯಲ್ಲಿ, ಕಳೆದ ವರ್ಷದಂತೆ ಈ ಬಾರಿಯೂ ನಿಯಮಾನುಸಾರ 7 ಕ್ರೀಡಾಪಟುಗಳನ್ನು ಆಯ್ಕೆ ಮಾಡುವುದು.
- **<u>ಜೂಡೋ</u>** : 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯ ತಂಡಕ್ಕೆ ಎಸ್.ಜಿ.ಎಫ್.ಐ ನಿಯಮದಂತೆ 8 ತೂಕಗಳಲ್ಲಿ ಅಯ್ಕೆ ಮಾಡುವುದು. [8ನೇ ತೂಕದಲ್ಲಿ ಬಾಲಕರಿಗೆ +71 ಕೆ.ಜಿ ಮತ್ತು ಬಾಲಕಿಯರಿಗೆ +61 ಕೆ.ಜಿ.ತೂಕಗಳಲ್ಲಿ ಆಯ್ಕೆ ಮಾಡುವುದು]
- **<u>ಕ್ರಿಕೆಟ್:</u>** 14 ವರ್ಷ ವಯೋಮಿತಿಯ ಬಾಲಕರನ್ನು ಜಿಲ್ಲಾಮಟ್ಟದಲ್ಲಿ ಆಯ್ಕೆಮಾಡುವಾಗ 6 ರಿಂದ 7ನೇ ತರಗತಿಯವರೆಗೆ ಪ್ರತಿ ಶಾಲೆಯಿಂದ 4 ಆಟಗಾರರಿಗೆ ಭಾಗವಹಿಸಲು ಅವಕಾಶ ನೀಡುವುದು. [ಉನ್ನತೀಕರಿಸಿದ ಶಾಲೆಗಳಿದ್ದಲ್ಲಿ ಅಂತಹ ಶಾಲೆಗಳಿಂದ 6 ರಿಂದ 8ನೇ ತರಗತಿಯಿಂದ ಒಬ್ಬರಂತೆ ಒಟ್ಟು 4 ಆಟಗಾರರಿಗೆ ಅವಕಾಶ ನೀಡುವುದು]. ಪ್ರೌಢಶಾಲೆಯ 8ನೇ ತರಗತಿಯಿಂದ 14 ವರ್ಷ ವಯೋಮಿತಿಯೊಳಗಿನ ಒಬ್ಬರನ್ನು ಆಯ್ಕೆಗೆ ಕಳುಹಿಸಬಹುದು. ಆಯ್ಕೆ ಪ್ರಕ್ರಿಯೆಯ ನಂತರ ಕೆಳಕಂಡಂತೆ ತಂಡವನ್ನು ರಚನೆ ಮಾಡುವುದು.

| ಕ್ರ.ಸಂ | ಸ್ಥಾನಗಳ ವಿವರ [POSITION] | 6 ರಿಂದ 7ನೇ ತರಗತಿಗಳಿಂದ ಆಯ್ಕೆ | 8ನೇ ತರಗತಿಯಿಂದ ಆಯ್ಕೆ |
|---|---|---|---|
| 1 | ಆರಂಭಿಕ ಆಟಗಾರರು [OPENING BATSMAN] | 3 | 1 |
| 2 | ಆಲ್ ರೌಂಡರ್ [ALL ROUNDER] | 3 | 1 |
| 3 | ಮೀಡಿಯಂ ಪೇಸ್ ಬೌಲರ್ [MEDIUM PACE BOWLER] | 3 | 1 |
| 4 | ಸ್ಪಿನ್ನರ್ಸ್ [SPINNER] | 1 | 1 |
| 5 | ವಿಕೆಟ್ ಕೀಪರ್ [WICKET KEEPER] | 1 | 1 |
| | ಒಟ್ಟು | 11 | 5 |

16 ವರ್ಷ ವಯೋಮಿತಿಯ ಕ್ರೀಡಾಪಟುಗಳನ್ನು ಆಯ್ಕೆ ಮಾಡುವಾಗ ಪ್ರತಿ ಪ್ರೌಢಶಾಲೆಯಿಂದ 8 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ 4 ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಜಿಲ್ಲಾಮಟ್ಟದ ಆಯ್ಕೆಗೆ ಕಳುಹಿಸುವುದು. ಜಿಲ್ಲಾಮಟ್ಟದಲ್ಲಿ ಸಂಘಟನಾಕಾರರು ಕ್ರೀಡಾಪಟುಗಳ ನೋಂದಣಿಯ ನಂತರ ಸದರಿ ಕ್ರೀಡಾಪಟುಗಳು ಯಾವ ಸ್ಥಾನಗಳಲ್ಲಿ [POSITION] ಪರಿಣಿತಿ ಹೊಂದಿರುತ್ತಾರೊ, ಆ ಸ್ಥಾನಗಳಿಗೆ ಪ್ರತಿಭೆಯನ್ನಾಧಿರಿಸಿ ನಿಯಮಾನುಸಾರ ಆಯ್ಕೆ ಮಾಡಿ ಕೆಳಕಂಡಂತೆ ತಂಡವನ್ನು ರಚನೆ ಮಾಡುವುದು.

| ಕ್ರ.ಸಂ | ಸ್ಥಾನಗಳ ವಿವರ [POSITION] | ೮ ರಿಂದ 10ನೇ ತರಗತಿಗಳಿಂದ 16 ವರ್ಷ ವಯೋಮಿತಿಯ ಕ್ರೀಡಾಪಟುಗಳ ಆಯ್ಕೆ |
|---|---|---|
| 1 | ಆರಂಭಿಕ ಆಟಗಾರರು [OPENING BATSMAN] | 4 |
| 2 | ಆಲ್ ರೌಂಡರ್ [ALL ROUNDER] | 4 |
| 3 | ಮೀಡಿಯಂ ಪೇಸ್ ಬೌಲರ್ [MEDIUM PACE BOWLER] | 4 |
| 4 | ಸ್ಪಿನ್ನರ್ಸ್ [SPINNER] | 2 |
| 5 | ವಿಕೆಟ್ ಕೀಪರ್ [WICKET KEEPER] | 2 |
| | ಒಟ್ಟು | 16 |

## ಕ್ರಿಕೆಟ್ ಕ್ರೀಡಾಪಟುಗಳ ಆಯ್ಕೆ:– [ವಿಭಾಗ ಮತ್ತು ರಾಜ್ಯಮಟ್ಟದ ಆಯ್ಕೆ]

ಕ್ರಿಕೆಟ್ ತಂಡವನ್ನು ರಚನೆ ಮಾಡುವಾಗ ಕೆಳಕಂಡಂತೆ ಆಯ್ಕೆ ಮಾಡುವುದು.

| ಕ್ರ.ಸಂ | ಆಟಗಾರರು | ಪ್ರಥಮ ಸ್ಥಾನದಿಂದ | ದ್ವಿತೀಯ ಸ್ಥಾನದಿಂದ |
|---|---|---|---|
| 1 | ಆರಂಭಿಕ ಆಟಗಾರರು | 3 | 1 |
| 2 | ಆಲ್ ರೌಂಡರ್ | 3 | 1 |
| 3 | ಮೀಡಿಯಂ ಪೇಸ್ ಬೌಲರ್ | 3 | 1 |
| 4 | ಸ್ಪಿನ್ನರ್ಸ್ | 1 | 1 |
| 5 | ವಿಕೆಟ್ ಕೀಪರ್ | 1 | 1 |
| | ಒಟ್ಟು | 11 | 5 |

- ಪ್ರಾರಂಭಿಕ ಬ್ಯಾಟ್ಸ್‌ಮನ್ ಆಯ್ಕೆ ಮಾಡುವಾಗ ಪೂರ್ಣ ಕೌಶಲ್ಯ ಹೊಂದಿರುವ ಇಬ್ಬರು ಆಟಗಾರರನ್ನು ಆಯ್ಕೆ ಮಾಡುವುದು. ಎಡಗೈ ಬ್ಯಾಟ್ಸ್‌ಮನ್ ಇದ್ದಲ್ಲಿ ಆದ್ಯತೆ ನೀಡುವುದು)
- ಹೆಚ್ಚುವರಿ ಇಬ್ಬರನ್ನು ಆಯ್ಕೆ ಮಾಡುವಾಗ ವಿಕೆಟ್ ಕೀಪರ್ ಅಥವಾ ಬೌಲರ್‌ಗಳನ್ನು ಪರಿಗಣಿಸುವುದು.
- ಸ್ಪಿನ್ ಬೌಲರ್‌ಗಳಲ್ಲಿ ಒಬ್ಬರು ಲೆಗ್‌ಸ್ಪಿನ್ನರ್ ಮತ್ತು ಒಬ್ಬರು ಆಫ್‌ಸ್ಪಿನ್ನರ್‌ಗಳನ್ನು ಆಯ್ಕೆ ಮಾಡುವುದು. ಎಡಗೈ ಆಟಗಾರರಿದ್ದಲ್ಲಿ ಹೆಚ್ಚಿನ ಕೌಶಲ್ಯ ಹೊಂದಿದಲ್ಲಿ ಮಾತ್ರ ಪರಿಗಣಿಸುವುದು.
- **ಕ್ರಿಕೆಟ್ ಆಯ್ಕೆ ವಿಧಾನ:–** ವಿಭಾಗಮಟ್ಟದಲ್ಲಿ "ನಾಕ್‌ಔಟ್' ಮಾದರಿಯಲ್ಲಿ ಪಂದ್ಯಾಟವನ್ನು ನಡೆಸಿ ತಂಡವನ್ನು ಆಯ್ಕೆ ಮಾಡಲು ಶಿಫಾರಸ್ಸು ಮಾಡಲಾಗಿದೆ. ಜಿಲ್ಲೆಯಲ್ಲಿ ಸಾಕಷ್ಟು ತಂಡಗಳು ಲಭ್ಯವಿಲ್ಲದಿದ್ದಲ್ಲಿ ಆಯ್ಕೆ ಟ್ರಯಲ್ಸ್ ಮಾಡಿ ಮುಂದಿನ ಹಂತಕ್ಕೆ ಕಳುಹಿಸುವುದು.
- **ಕ್ರಿಕೆಟ್ ಸ್ಪರ್ಧೆ ನಡೆಸುವ ಬಗ್ಗೆ:–** ವಿಭಾಗ/ರಾಜ್ಯಮಟ್ಟದಲ್ಲಿ ಕನಿಷ್ಟ 15 ಓವರ್ಸ್‌ಗಳು ಗರಿಷ್ಟ 20 ಓವರ್‌ಗಳ ಪಂದ್ಯಾಟವನ್ನು ನಡೆಸುವಂತೆ ತೀರ್ಮಾನಿಸಲಾಯಿತು. ಒಬ್ಬ ಬೌಲರ್‌ಗೆ 1/5 ಓವರ್‌ಗಳ ಬೌಲಿಂಗ್ ಮಾಡಲು ಅವಕಾಶ ಕಲ್ಪಿಸಬಹುದು. [Total numbers of overs devided by 5]

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ [K.S.C.A] ಸಂಸ್ಥೆಯು ಅಳವಡಿಸಿಕೊಂಡಿರುವ ನಿಯಮಗಳನ್ನು ಅನುಸರಿಸುವಂತೆ [One day International Rules] ಹಾಗೂ ಸದರಿ ಸಂಸ್ಥೆಯು ಮನ್ನಣೆ ಮಾಡಿರುವ ಸ್ಕೋರ್‌ಶೀಟನ್ನು ಉಪಯೋಗಿಸುವುದು.

## • ಆಯ್ಕೆ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು

1. ಪ್ರತಿ ಹಂತದಲ್ಲಿ ಪ್ರತ್ಯೇಕವಾದ ಆಯ್ಕೆ ಸಮಿತಿಯನ್ನು ರಚಿಸಿ ಸದರಿ ಆಯ್ಕೆ ಸಮಿತಿಯು ಪಂದ್ಯಗಳನ್ನು ವೀಕ್ಷಿಸಿ ಆಟಗಾರರನ್ನು ಆಯ್ಕೆ ಮಾಡುವುದು.
2. ಆಯ್ಕೆಗೆ ಕ್ರೀಡಾಪಟುಗಳ ಕೌಶಲ್ಯ ಮತ್ತು ಪ್ರತಿಭೆಯನ್ನು ಮಾನದಂಡವಾಗಿ ಇಟ್ಟುಕೊಂಡು ಆಯ್ಕೆ ಟ್ರಯಲ್ಸ್‌ನ್ನು ನಡೆಸುವುದು.
3. ಒಬ್ಬ ಕ್ರೀಡಾಪಟುವು ಎರಡು ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶ ನೀಡುವುದು.
4. ಕ್ರೀಡಾಪಟುಗಳನ್ನು ಆಯ್ಕೆ ಮಾಡುವಾಗ ಆಯಾ ಆಟಗಳಿಗೆ ಬೇಕಾಗುವ ಪೊಜಿಷನ್ ಗಳಿಗೆ ತಕ್ಕಂತೆ ಆಯ್ಕೆ ಮಾಡುವುದು [ಉದಾ: ಖೋ–ಖೋ, ಡಾಡ್ಜರ್, ಚೇಜರ್, ಆಲ್ ರೌಂಡರ್, ಹಾಕಿ/ಪುಟ್‌ಬಾಲ್:– ಫಾರ್ವರ್ಡ್,ಹಾಫ್‌ಬ್ಯಾಕ್,ಫುಲ್ ಬ್ಯಾಕ್, ಗೋಲ್ ಕೀಪರ್ ಇತ್ಯಾದಿ]
5. ಈ ರೀತಿ ಆಯ್ಕೆಯಾದ ತಂಡಗಳಿಗೆ ಆಯಾ ಹಂತದಲ್ಲಿ ಕಡ್ಡಾಯವಾಗಿ ತರಬೇತಿ ಶಿಬಿರಗಳನ್ನು ಸಡೆಸುವುದು.

6. ಆಯ್ಕೆ ಪಟ್ಟಿಯನ್ನು ಆಯ್ಕೆದಾರರು ರ್‍ಯಾಂಕಿಂಗ್ ಆಧಾರವಾಗಿಟ್ಟುಕೊಂಡು ಆಟವಾಡುವ ಆಟಗಾರರ ಕ್ರಮಾಂಕ ನೀಡಿ ಧೃಡೀಕರಿಸುವುದು.
7. ಅಥ್ಲೆಟಿಕ್ಸ್ ವಿಭಾಗದಲ್ಲಿ ಒಬ್ಬ ಕ್ರೀಡಾಪಟುವು ರಿಲೆ ಹೊರತುಪಡಿಸಿ ಮೂರು ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

**ರಾಜ್ಯಮಟ್ಟದಲ್ಲಿ ಸಂಘಟಿಸುವ ಕ್ರೀಡೆಗಳು**

1] ಕಬಡ್ಡಿ 2] ಖೋ-ಖೋ 3] ವಾಲಿಬಾಲ್ 4] ಥ್ರೋಬಾಲ್ 5] ಬ್ಯಾಸ್ಕೆಟ್ ಬಾಲ್ 6] ನೆಟ್‌ಬಾಲ್ 7] ಬಾಲ್‌ಬ್ಯಾಡ್ಮಿಂಟನ್ 8] ಲಾನ್‌ಟೆನಿಸ್ 9] ಟೇಬಲ್ ಟೆನಿಸ್ 10] ಬ್ಯಾಂಡ್ಮಿಂಟನ್ [ಷಟ್ಲ್] 11] ಹ್ಯಾಂಡ್‌ಬಾಲ್ 12] ಫುಟ್‌ಬಾಲ್ 13] ಹಾಕಿ 14] ಜಂಪ್‌ರೋಪ್ 15] ಯೋಗ 16] ಚೆಸ್ 17] ಕುಸ್ತಿ [ಫ್ರೀಸ್ಟೈಲ್ ಮತ್ತು ಗ್ರೀಕೋರೋಮನ್] 18] ಕರಾಟೆ 19] ಜೂಡೋ 20] ಜಿಮ್ನಾಸ್ಟಿಕ್ 21] ಈಜು ಮತ್ತು ಡೈವಿಂಗ್ 22] ಕ್ರಿಕೆಟ್ 23] ಅಥ್ಲೆಟಿಕ್ಸ್ 25] ಸ್ಕೇಟಿಂಗ್ 26] ವಿಶೇಷ ಚೇತನ ಶಾಲಾಮಕ್ಕಳಿಗೆ ರಾಜ್ಯಮಟ್ಟದಲ್ಲಿ ಅಥ್ಲೆಟಿಕ್ಸ್ ಕ್ರೀಡಾಕೂಟ ನಡೆಸಲಾಗುವುದು.

**ಸ್ಕೂಲ್ ಗೇಮ್ ಫೆಡರೇಶನ್ ಆಫ್ ಇಂಡಿಯಾ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ನಡೆಸುವ ಕ್ರೀಡಾಕೂಟಗಳಿಗೆ ರಾಜ್ಯದಿಂದ ಕೆಳಕಂಡ ಕ್ರೀಡೆಗಳಿಗೆ ತಂಡಗಳನ್ನು ಕಳುಹಿಸಲಾಗುತ್ತದೆ.**

1] ಕಬಡ್ಡಿ 2] ಖೋ-ಖೋ 3] ವಾಲಿಬಾಲ್ 4] ಥ್ರೋಬಾಲ್ 5] ಬ್ಯಾಸ್ಕೆಟ್ ಬಾಲ್ 6] ನೆಟ್‌ಬಾಲ್ 7] ಬಾಲ್‌ಬ್ಯಾಡ್ಮಿಂಟನ್ 8] ಲಾನ್‌ಟೆನಿಸ್ 9] ಟೇಬಲ್ ಟೆನಿಸ್ 10] ಬ್ಯಾಂಡ್ಮಿಂಟನ್ [ಷಟ್ಲ್] 11] ಹ್ಯಾಂಡ್‌ಬಾಲ್ 12] ಫುಟ್‌ಬಾಲ್ [14 ವರ್ಷ ವಯೋಮಿತಿಯ ಬಾಲಕರಿಗೆ ಮತ್ತು 17 ವರ್ಷ ವಯೋಮಿತಿಯ ಬಾಲಕ/ ಬಾಲಕಿಯರಿಗೆ] 13] ಹಾಕಿ 14] ಯೋಗ 15] ಚೆಸ್ 16] ಕುಸ್ತಿ [ಫ್ರೀಸ್ಟೈಲ್] 17] ಜೂಡೋ 18] ಜಿಮ್ನಾಸ್ಟಿಕ್ 19] ಈಜು ಮತ್ತು ಡೈವಿಂಗ್ 20] ಕ್ರಿಕೆಟ್ 21] ಅಥ್ಲೆಟಿಕ್ಸ್ 22] ಸ್ಕೇಟಿಂಗ್ 23] ಕರಾಟೆ

ದೇಶದ ವಿವಿಧ ರಾಜ್ಯಗಳಲ್ಲಿ ನಡೆಯುವ ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ ಮೇಲಿನ 23 ಕ್ರೀಡೆಗಳಿಗೆ ರಾಜ್ಯದಿಂದ ಸುಮಾರು 800ಕ್ರೀಡಾಪಟುಗಳನ್ನು [14 ಮತ್ತು 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯರು] ಕಳುಹಿಸಲಾಗುತ್ತದೆ. ಹಾಗೂ ತಂಡಗಳ ಮೇಲ್ವಿಚಾರಣೆಗಾಗಿ ಮತ್ತು ತರಬೇತಿಗಾಗಿ ಸುಮಾರು 150 ಅಧಿಕಾರಿಗಳನ್ನು ಮತ್ತು ತರಬೇತುದಾರರು/ದೈಹಿಕ ಶಿಕ್ಷಣ ಶಿಕ್ಷಕರನ್ನು ಕಳುಹಿಸಲಾಗುತ್ತದೆ.

## ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಕ್ರೀಡಾಪಟುಗಳಿಗೆ ತರಬೇತಿ ಶಿಬಿರಗಳನ್ನು ನಡೆಸುವ ಬಗ್ಗೆ.

ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಸೂಕ್ತ ಮೂಲಭೂತ ಸೌಕರ್ಯಗಳಿರುವ ಸ್ಥಳಗಳಲ್ಲಿ ಸನಿವಾಸ ತರಬೇತಿಯನ್ನು ನಡೆಸಲು ಅನುಮತಿ ನೀಡಲಾಗುವುದು. ತರಬೇತಿ ನಡೆಸಲು ಕೆಳಕಂಡ ಮೂಲಭೂತ ಸೌಲಭ್ಯಗಳು ಇರಬೇಕಿರುತ್ತದೆ.

- ಪ್ರಥಮ ಸ್ಥಾನ[WINNERS TEAM] ಪಡೆದ ಜಿಲ್ಲೆಯ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿರುವ ಮತ್ತು ವಸತಿಯುತ ಶಿಬಿರ ನಡೆಸಲು ಸೂಕ್ತ ಮೂಲಭೂತ ಸೌಕರ್ಯಗಳಿದ್ದಲ್ಲಿ ಆ ಜಿಲ್ಲೆಗೆ ತರಬೇತಿ ಶಿಬಿರ ನಡೆಸಲು ಮೊದಲ ಆದ್ಯತೆ ನೀಡುವುದು.
- ತರಬೇತಿಯನ್ನು ನಡೆಸುವ ಮುನ್ನ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ ಪೂರ್ವಾನುಮತಿಯನ್ನು ಪಡೆಯುವುದು. ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಸಂಬಂಧಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ತರಬೇತಿ ಶಿಬಿರವನ್ನು ನಡೆಸಲು ಅಗತ್ಯ ಮೂಲಭೂತ ಸೌಕರ್ಯಗಳಿರುವ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡುವುದು.
- ತರಬೇತಿ ನಡೆಸುವಂತಹ ಸಂದರ್ಭದಲ್ಲಿ ಮಕ್ಕಳ ವಾಸ್ತವ್ಯಕ್ಕೆ ಕೊಠಡಿಗಳು, ನೀರು, ವಿದ್ಯುತ್ ಸೌಕರ್ಯ, ಶೌಚಾಲಯದ ವ್ಯವಸ್ಥೆ , ಸುರಕ್ಷತೆ ಬಗ್ಗೆ ವ್ಯವಸ್ಥೆ ಒಳಗೊಂಡಿರಬೇಕು
- ಕ್ರೀಡಾಪಟುಗಳಿಗೆ ಉತ್ತಮ ಮತ್ತು ಕ್ರೀಡಾಕೌಶಲ್ಯಗಳನ್ನು ಕಲಿಸಲು ತರಬೇತಿ ಶಿಬಿರಗಳಿಗೆ ಸಂಬಂಧಿಸಿದ ಕ್ರೀಡೆಗಳಲ್ಲಿ ಎನ್.ಐ.ಎಸ್ ತರಬೇತಿ ಹೊಂದಿರುವ ಉತ್ತಮ ತರಬೇತುದಾರರನ್ನು ನೇಮಕ ಮಾಡಿಕೊಳ್ಳುವುದು ಹಾಗೂ ತರಬೇತುದಾರರ ವಿದ್ಯಾರ್ಹತೆ ಬಗ್ಗೆ ದಾಖಲೆಗಳನ್ನು ಪಡೆಯುವುದು.
- ತರಬೇತಿ ನಡೆಸುವ ಕ್ರೀಡಾಂಗಣವು ವಸತಿ ಪ್ರದೇಶ ಹತ್ತಿರದಲ್ಲಿರಬೇಕು. ಹಾಗೂ ಬಾಲಕ ಬಾಲಕಿಯರಿಗೆ ಪ್ರತ್ಯೇಕವಾದಂತಹ ವಸತಿ ಕಲ್ಪಿಸುವುದು.
- ತರಬೇತಿಗೆ ಅಗತ್ಯವಿರುವ ಖರ್ಚು ವೆಚ್ಚದ ಬಗ್ಗೆ ಆಯವ್ಯಯವನ್ನು ತಯಾರಿಸಿಕೊಳ್ಳಬೇಕು
- ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು/ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷರು ತರಬೇತಿ ಶಿಬಿರದ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುವುದು.
- ತರಬೇತಿ ಶಿಬಿರದಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಕಡ್ಡಾಯವಾಗಿ ಇಡತಕ್ಕದ್ದು.

- ಕ್ರೀಡಾಪಟುಗಳಿಗೆ ತರಬೇತಿ ಸಂದರ್ಭದಲ್ಲಿ ಅವಘಡಗಳು ಸಂಭವಿಸಿದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ಸಮೀಪದಲ್ಲಿರುವ ವೈದ್ಯರು/ಆಸ್ಪತ್ರೆ/ನರ್ಸಿಂಗ್ ಹೋಂ/ಆಂಬುಲೆನ್ಸ್ ವಾಹನ ಇವುಗಳ ದೂರವಾಣಿ ಸಂಖ್ಯೆಗಳೊಂದಿಗೆ ಮಾಹಿತಿಯನ್ನು ಕಡ್ಡಾಯವಾಗಿ ಹೊಂದಿರುವುದು.
- ಸಮೀಪದ ಪೊಲೀಸ್ ಠಾಣೆಯ ಬಗ್ಗೆ ಮಾಹಿತಿಯನ್ನು ಹೊಂದಿರುವುದು.
- ತರಬೇತಿಯನ್ನು ನೀಡುವಂತಹ ಸಂದರ್ಭದಲ್ಲಿ ಎರಡು ತಂಡಗಳಿದ್ದಲ್ಲಿ ಒಬ್ಬರು ತರಬೇತುದಾರರನ್ನು ಹಾಗೂ ನಾಲ್ಕು ತಂಡಗಳಿದ್ದಲ್ಲಿ ಇಬ್ಬರು ತರಬೇತುದಾರರನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ. ಜೊತೆಗೆ ತಂಡದ ಮೇಲ್ವಿಚಾರಕರಾಗಿ ಬಾಲಕಿಯರ ತಂಡಕ್ಕೆ ಕಡ್ಡಾಯವಾಗಿ ಒಬ್ಬ ಮಹಿಳಾ ಶಿಕ್ಷಕಿಯರನ್ನೇ ನೇಮಿಸಬೇಕು.
- ತರಬೇತಿಯನ್ನು ನಡೆಸಿದ ಬಗ್ಗೆ ಎಲ್ಲಾ ದಾಖಲೆಗಳಿಟ್ಟಿರಬೇಕು.[ತರಬೇತಿ ಸಂದರ್ಭದಲ್ಲಿ ತೆಗೆದ ಭಾವಚಿತ್ರಗಳೊಂದಿಗೆ [ACTION PHOTOS]

**ನಗದು ಬಹುಮಾನದ ಮೊತ್ತ ಕೆಳಕಂಡಂತಿದೆ.**

**ಅ] ಜಿಲ್ಲಾ ಮಟ್ಟ**

| ಸ್ಥಾನ | ವೈಯಕ್ತಿಕ ಆಟಗಳು | ಗುಂಪು ಆಟಗಳು |
|---|---|---|
| ಪ್ರಥಮ | 300 | 300 |
| ದ್ವಿತೀಯ | 250 | 250 |
| ತೃತೀಯ | 200 | -- |

ಮಕ್ಕಳಿಗೆ ಕ್ರೀಡೆಗಳಲ್ಲಿ ಆಸಕ್ತಿ ಉಂಟಾಗಲು ಪ್ರೋತ್ಸಾಹದಾಯಕವಾಗಿ ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಮಕ್ಕಳಿಗೆ ಸರ್ಕಾರದಿಂದ ಒದಗಿಸುವ ಅನುದಾನದಿಂದ ನಗದು ಬಹುಮಾನ ನೀಡಲಾಗುತ್ತದೆ.

**ಆ] ರಾಜ್ಯಮಟ್ಟದ ನಗದು ಬಹುಮಾನ**

| ಸ್ಥಾನ | ವೈಯಕ್ತಿಕ ಆಟಗಳು | ಗುಂಪು ಆಟಗಳು |
|---|---|---|
| ಪ್ರಥಮ | 3000 | 2000 |
| ದ್ವಿತೀಯ | 2500 | 1500 |
| ತೃತೀಯ | 2000 | 1000 |

ರಾಜ್ಯಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಬಹುಮಾನಗಳನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ನೀಡಲಾಗುತ್ತಿದೆ.

**ಇ] ರಾಷ್ಟ್ರಮಟ್ಟದ ನಗದು ಬಹುಮಾನ**

| ಸ್ಥಾನ | ವೈಯಕ್ತಿಕ ಆಟಗಳು ಮತ್ತು ಗುಂಪು ಆಟಗಳು | |
|---|---|---|
| | ಹಾಲಿ ದರ | ಪರಿಷ್ಕೃತ ದರ |
| ಪ್ರಥಮ | 5000 | 10000 |
| ದ್ವಿತೀಯ | 4000 | 7000 |
| ತೃತೀಯ | 3000 | 5000 |

ರಾಷ್ಟ್ರಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿಯಿಂದ ನಗದು ಬಹುಮಾನವನ್ನು ನೀಡಲಾಗುತ್ತಿದೆ.

ಸಹಿ/
ಸಹ ನಿರ್ದೇಶಕರು (ದೈಹಿಕ ಶಿಕ್ಷಣ)
ಆಯುಕ್ತರ ಕಛೇರಿ

# ಡಿ.ಎಸ್.ಇ.ಆರ್.ಟಿ ಯಿಂದ ನಡೆಸುವ ವಿವಿಧ ಕಾರ್ಯಕ್ರಮಗಳು

ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧ್ಯಯನ ಅಂಗವಾಗಿದ್ದು ಶಾಲಾ ಶಿಕ್ಷಣದಲ್ಲಿ ಶೈಕ್ಷಣಿಕ ನಾಯಕತ್ವ ಒದಗಿಸುವುದು ಹಾಗೂ ಡಯಟ್, ಸಿ.ಟಿ.ಇ ಗಳ ಮೂಲಕ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಬೋಧನಾ ಮತ್ತು ಕಲಿಕಾ ಗುಣಮಟ್ಟವನ್ನು ಸುಧಾರಣೆ ಮಾಡುವುದು ಈ ಸಂಸ್ಥೆಯ ಗುರಿಯಾಗಿದೆ.

1. **ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ ಸ್ಪರ್ಧೆ:** ಶಾಲಾ, ತಾಲ್ಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿಶ್ವೇಶ್ವರಯ್ಯ ಕೈಗಾರಿಕಾ ಹಾಗೂ ತಾಮತ್ರಿಕ ವಸ್ತು ಸಂಗ್ರಹಾಲಯ(ವಿ.ಐ.ಟಿ.ಎಂ.)ದ ಸಹಯೋಗದೊಂದಿಗೆ ಪ್ರತಿ ವರ್ಷ ನಡೆಸಲಾಗುತ್ತದೆ. ನಿತ್ಯ ಜೀವನದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ವಿಷಯಗಳಲ್ಲಿ **ವಿಜ್ಞಾನ ವಿಚಾರ** ಗೋಷ್ಠಿ ಸ್ಪರ್ಧೆ ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರು ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ.
2. **ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ:** ಪ್ರೌಢ ಶಾಲಾ ವಿದ್ಯಾರ್ಥಿಗಳು ತಯಾರಿಸಿದ ಅತ್ಯುತ್ತಮ ವಿಜ್ಞಾನ ಮಾದರಿಗಳ ಪ್ರದರ್ಶನ ಮಾಡುವ ಮೂಲಕ ಮೂಲ ವಿಜ್ಞಾನದೆಡೆಗೆ ಮಕ್ಕಳನ್ನು ಆಕರ್ಷಿಸಲು ತಾಲ್ಲೂಕು, ಜಿಲ್ಲಾ, ರಾಜ್ಯ ವಿಭಾಗ ಮತ್ತು ರಾಷ್ಟ್ರ ಮಟ್ಟದಲ್ಲಿನ ಸ್ಪರ್ಧೆಗಳಲ್ಲಿ ಬಹುಮಾನ ಮತ್ತು ಪ್ರಶಸ್ತಿ ಪಡೆಯಲು ಅವಕಾಶವಿದೆ.
3. **ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ನಾಟಕ ಸ್ಪರ್ಧೆ:** ತಾಲ್ಲೂಕು, ಜಿಲ್ಲಾ, ವಿಭಾಗ, ರಾಜ್ಯ, ವಲಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದ 8 ವಿದ್ಯಾರ್ಥಿಗಳು ಮತ್ತು ಒಬ್ಬ ಮಾರ್ಗದರ್ಶಿ ಶಿಕ್ಷಕರ ಒಂದು ತಂಡವು ವಿಭಾಗ ಮಟ್ಟದಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದ ತಂಡ ರಾಜ್ಯ ಮಟ್ಟ, ವಲಯ ಮಟ್ಟ, ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಬಹುಮಾನ ಮತ್ತು ಪ್ರಶಸ್ತಿ ಪಡೆಯಲು ಅವಕಾಶವಿದೆ.
4. **ವಿಜ್ಞಾನ ಕೇಂದ್ರಗಳ ನಿರ್ವಹಣೆ:** ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ, ರಾಜ್ಯದ 224 ಪ್ರೌಢಶಾಲೆಗಳಲ್ಲಿ ವಿಜ್ಞಾನ ಕೇಂದ್ರಗಳಿದ್ದು, ಪ್ರೌಢ ಶಾಲಾ ಮಕ್ಕಳಿಗೆ ಹಾಗೂ ಸುತ್ತಲಿನ ಪ್ರಾಥಮಿಕ ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಕೇಂದ್ರಗಳ ಶಾಲಾ ಮುಖ್ಯಸ್ಥರ ನೇತೃತ್ವದಲ್ಲಿ ನಡೆಸಲಾಗುತ್ತಿದೆ.
5. **ಇನ್‌ಸ್ಪೈರ್ ಅವಾರ್ಡ್ :** ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿ ಉನ್ನತ ಶಿಕ್ಷಣದಲ್ಲಿ ವಿಜ್ಞಾನವನ್ನು ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇರಣೆ ನೀಡಿ, ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಗತಿಗೆ ಕೊಡುಗೆ ನೀಡುವ ಸಲುವಾಗಿ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಪ್ರಾರಂಭಿಸಿರುವ INSPIRE award ಕಾರ್ಯಕ್ರಮವನ್ನು. ರಾಜ್ಯದಲ್ಲಿ ಡಿ.ಎಸ್.ಇ.ಆರ್.ಟಿ. ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. INSPIRE ಅವಾರ್ಡ್ ಪಡೆದ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಮಾದರಿ/ಪ್ರಾಜೆಕ್ಟ್ ಗಳನ್ನು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಹಂತಗಳಲ್ಲಿ ಆಯೋಜನೆಯಾಗುವ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸುತ್ತಾರೆ ಹಾಗೂ ಉತ್ತಮ ಮಾದರಿಗಳನ್ನು ಪುರಸ್ಕರಿಸಲಾಗುತ್ತದೆ.
6. **ವಿಜ್ಞಾನ ಪಾರ್ಕ್ ಸ್ಥಾಪನೆ :** ವಿದ್ಯಾರ್ಥಿ ಹಾಗೂ ಶಿಕ್ಷಕರ ಸಮುದಾಯಕ್ಕೆ ವೈಜ್ಞಾನಿಕ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ. ಸ್ವಕಲಿಕೆ, ಅನುಭವದಿಂದ ಕಲಿಕೆ ಹಾಗೂ ವಿಜ್ಞಾನದ ತತ್ವ ಪ್ರಮೇಯ, ಸಿದ್ಧಾಂತಗಳನ್ನು ಅನ್ವಯಿಸಲು ವಿಜ್ಞಾನ ಪಾರ್ಕ್ ಸಹಾಯಕವಾಗಿದೆ. ಪ್ರಾಯೋಗಿಕವಾಗಿ ಡಯಟ್ ಗದಗ ಹಾಗೂ ಮೈಸೂರುಗಳಲ್ಲಿ ಸ್ಥಾಪಿಸಿದೆ.
7. **ಐ.ಸಿ.ಟಿ. ಯೋಜನೆ : ಐ.ಸಿ.ಟಿ. ಯೋಜನೆ ಫೇಸ್– 1 ರಲ್ಲಿ** 480 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗಣಕ ಶಿಕ್ಷಣವನ್ನು ಜಾರಿಗೊಳಿಸಲಾಗಿದೆ. **ಐ.ಸಿ.ಟಿ. ಯೋಜನೆ ಫೇಸ್– 2** ಯೋಜನೆಯಡಿಯಲ್ಲಿ 1571 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಹಾಗೂ **ಐ.ಸಿ.ಟಿ. ಯೋಜನೆ ಫೇಸ್– 3** ಯೋಜನೆಯಡಿಯಲ್ಲಿ 1763 ಸರ್ಕಾರಿ ಪ್ರೌಢ ಶಾಲೆ ಹಾಗೂ 2633 ಸರ್ಕಾರಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಜಾರಿಗೊಳಿಸಲಾಗಿದೆ.
8. **ಎಜುಸ್ಯಾಟ್ ಕಾರ್ಯಕ್ರಮ :** ಡಿ.ಎಸ್.ಇ.ಆರ್.ಟಿ. ಸ್ಟುಡಿಯೋ ಮೂಲಕ ಚಾಮರಾಜನಗರ, ಗುಲ್ಬರ್ಗ, ಯಾದಗಿರಿ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿನ 2603 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಎಜುಸ್ಯಾಟ್ ಕಾರ್ಯಕ್ರಮದ ಅಡಿಯಲ್ಲಿ ಪಾಠಗಳನ್ನು ಪ್ರಸಾರಮಾಡಲಾಗುತ್ತಿದೆ. ಉಳಿದ

ಜಿಲ್ಲೆಗಳಲ್ಲಿ ಶಾಲೆಯಲ್ಲಿರುವ ಸಂಚಿತ ನಿಧಿ/ ದಾನಿಗಳ ಸಹಾಯ ಪಡೆದು ಈ ಕಾರ್ಯಕ್ರಮವನ್ನು ಶಾಲೆಗಳಲ್ಲಿ ಅಳವಡಿಸಿಕೊಳ್ಳಲು ಪ್ರಾಥಮಿಕ/ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ಎಸ್.ಡಿ.ಎಮ್.ಸಿಯವರು ಆಸಕ್ತಿ ಹೊಂದಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯಬಹುದಾಗಿದೆ.

9. **ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮ** : ಡಿ.ಎಸ್.ಇ.ಆರ್.ಟಿ.ಯ ಸ್ಟುಡಿಯೋ ಮೂಲಕ ಶಾಲಾ ಶಿಕ್ಷಕರು ಸಿ.ಆರ್.ಸಿ., ಬಿ.ಆರ್.ಸಿ.ಹಾಗೂ ಇಲಾಖಾ ಅಧಿಕಾರಿಗಳಿಗೆ ಟೆಲಿಕಾನ್ಫರೆನ್ಸಿಂಗ್ ಮೂಲಕ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ರಾಜ್ಯದ 204 ಬಿ.ಆರ್.ಸಿ.ಗಳಲ್ಲಿ ಮತ್ತು ಎಲ್ಲಾ ಡಯಟ್‌ಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ತೆರೆಯಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿನ ಅಧಿಕಾರಿಗಳೊಂದಿಗೆ ದ್ವಿಮುಖ ಸಂವಹನ ಮೂಲಕ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧ ಸ್ತರದ ಶೈಕ್ಷಣಿಕ ಭಾಗೀದಾರರೊಂದಿಗೆ ಸಂವಹನಗೊಳಿಸಲಾಗುತ್ತಿದೆ.

10. **ಬಾನುಲಿ ಕಾರ್ಯಕ್ರಮ** : ರಾಜ್ಯದ 13 ಆಕಾಶವಾಣಿ ಕೇಂದ್ರಗಳಿಂದ ಪಠ್ಯಾಧಾರಿತ ಚಿನ್ನರ ಚುಕ್ಕಿ, ಚುಕ್ಕಿ ಚಿನ್ನ ಮತ್ತು ಕೇಳಿ ಕಲಿ ಎಂಬ ರೇಡಿಯೋ ಪಾಠಗಳನ್ನು 1ನೇ ತರಗತಿಯಿಂದ 8ನೇ ತರಗತಿಯವರೆಗೆ ಪ್ರತಿ ದಿನ 3 ಅವಧಿಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ. ಶೈಕ್ಷಣಿಕ ವರ್ಷದ ಆರಂಭದಲ್ಲೇ ವಿಷಯಗಳೊಂದಿಗಿನ ವೇಳಾಪಟ್ಟಿಯನ್ನು ಸಿದ್ದಪಡಿಸಿ ಎಲ್ಲಾ ಶಾಲೆಗಳಿಗೂ ನೀಡಿ ಆಯಾ ವಿಷಯ ಶಿಕ್ಷಕರು ಪ್ರಸಾರದ ವೇಳೆ ಜೊತೆಗಿದ್ದು ವಿದ್ಯಾರ್ಥಿಗಳಿಗೆ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತಾರೆ. ರಾಜ್ಯದ ಎಲ್ಲಾ ಶಾಲೆಗಳಿಗೆ ಈಗಾಗಲೇ ರೇಡಿಯೋ ಕೊಂಡುಕೊಳ್ಳಲು ಅನುಮತಿ ನೀಡಿದ್ದು, ಹಾಳಾಗಿದ್ದಲ್ಲಿ ಹೊಸದಾಗಿ ಖರೀದಿಸಲು, ದುರಸ್ತಿ ಮಾಡಿಸಲು, ಎಸ್ ಡಿ.ಎಂ.ಸಿ. ಸಭೆಯಲ್ಲಿ ನಿರ್ಣಯಿಸಿ ಶಾಲಾ ಸಂಚಿತ ಅಥವಾ ಶಾಲಾ ಅನುದಾನ ಬಳಸಲು ಮುಖ್ಯ ಶಿಕ್ಷಕರಿಗೆ ಅನುಮತಿ ನೀಡಲಾಗಿದೆ.

## ಮೀನಾ ರೇಡಿಯೋ ಕಾರ್ಯಕ್ರಮ

ಶಾಲೆಯಲ್ಲಿ ಕಲಿಯುತ್ತಿರುವ ಹೆಣ್ಣುಮಕ್ಕಳಲ್ಲಿ ಪೌಷ್ಠಿಕ ಆಹಾರ, ಆರೋಗ್ಯ, ಲಿಂಗ ಸಮಾನತೆ, ಮಕ್ಕಳ ಹಕ್ಕು ಹಾಗೂ ಸ್ವಚ್ಚತೆ ಬಗ್ಗೆ ಅರಿವು ಮೂಡಿಸಲು ವಿಶೇಷವಾದ 'ಮೀನಾ' ರೇಡಿಯೋ ಕಾರ್ಯಕ್ರಮವನ್ನು ಶಾಲಾ ಅವಧಿಯಲ್ಲಿ ಪ್ರಸಾರ ಮಾಡಲಾಗುತ್ತಿದೆ.

11. **ರಾಜ್ಯ ಪಠ್ಯಕ್ರಮ ಮತ್ತು ಪಠ್ಯ ವಸ್ತು ಪರಿಷ್ಕರಣೆ:** ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ಆಧರಿಸಿ ಕಾಲಕಾಲಕ್ಕೆ 1 ರಿಂದ 10 ನೇ ತರಗತಿಗಳ ಹಾಗೂ ಡಿ.ಇಡಿ ಪಠ್ಯಕ್ರಮ ಹಾಗೂ ಪಠ್ಯವಸ್ತುವನ್ನು ಹಾಗೂ ಸಹಪಠ್ಯವಸ್ತುವನ್ನು ಪರಿಷ್ಕರಣೆ ಮಾಡಲಾಗುತ್ತದೆ. ವಿಶೇಷ ಸಂಗೀತ, ನೃತ್ಯ, ತಾಳವಾದ್ಯ ವಿಷಯಗಳಲ್ಲೂ ಪಠ್ಯಕ್ರಮ ಹಾಗೂ ಪಠ್ಯವಸ್ತುವನ್ನು ಪರಿಷ್ಕರಿಸಲಾಗುತ್ತದೆ.

12. **ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಮತ್ತು ಆಪ್ತ ಸಲಹಾ ಕೇಂದ್ರ** : ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳು, ಡಯಟ್, ಸಿಟಿಇಗಳಲ್ಲಿ ಕೇಂದ್ರಗಳನ್ನು ತೆರೆದಿದ್ದು, ಶಿಕ್ಷಕರಿಗೆ ತರಬೇತಿ ನೀಡಿದ್ದು ವಿದ್ಯಾರ್ಥಿಗಳು ತಮ್ಮ ಆಸಕ್ತಿ, ಅಭಿರುಚಿ ಹಾಗೂ ಸಾಮರ್ಥ್ಯಗಳಿಗೆ ಅನುಗುಣವಾಗಿ ಜೀವನ ರೂಪಿಸಿಕೊಳ್ಳಲು ಹಾಗೂ ಉನ್ನತ ವ್ಯಾಸಂಗದ ಕೋರ್ಸ್‌ಗಳ ಬಗ್ಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡಲಾಗುತ್ತಿದೆ.

13. **ಮನೋವಿಜ್ಞಾನ ಪ್ರಯೋಗಾಲಯ** : ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಂತೆ ಒಟ್ಟು 92 ಆಯ್ದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮನೋವಿಜ್ಞಾನ ಪ್ರಯೋಗಾಲಯವನ್ನು ಸ್ಥಾಪಿಸಿ ವಿದ್ಯಾರ್ಥಿಗಳ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುವ ವಿನೂತನ ಯೋಜನೆಯನ್ನು ಆರಂಭಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮಾನಸಿಕ ಮತ್ತು ವರ್ತನಾ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮತ್ತು ಭಾವನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಈ ಪ್ರಯೋಗಾಲಯಗಳು ನೆರವಾಗುತ್ತಿವೆ. ಈ ಬಗ್ಗೆ ಶಿಕ್ಷಕರು ತರಬೇತಿ ಪಡೆದಿದ್ದು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಮಾಡುತ್ತಾರೆ.

14. **ಸಿ.ಸಿ.ಆರ್.ಟಿ ತರಬೇತಿಗಳು** : ಸಿ.ಸಿ.ಆರ್.ಟಿ., ನವದೆಹಲಿ ಇವರು ಪ್ರತಿ ವರ್ಷವೂ ಆಯೋಜಿಸುವ 7 ರಿಂದ 30 ದಿನಗಳವರೆಗೆ ಹೊರ ರಾಜ್ಯಗಳಲ್ಲಿ ನಡೆಯುವ ಕಲೆ ಸಾಂಸ್ಕೃತಿಕ ಅಧ್ಯಯನ ಕುರಿತಾದ ತರಬೇತಿಗಳಿಗೆ ರಾಜ್ಯದ ಸರ್ಕಾರಿ, ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರನ್ನು ನಿಯೋಜನೆ ಮಾಡಲಾಗುತ್ತಿದೆ. ಆಸಕ್ತಿ ಇರುವ ಅರ್ಹ ಶಿಕ್ಷಕರು ಡಿ.ಎಸ್.ಇ.ಆರ್.ಟಿ. ವೆಬ್ ಸೈಟ್‌ನಲ್ಲಿ ನೊಂದಣಿ ಮಾಡಬಹುದಾಗಿದೆ.

15. **RIESI ತರಬೇತಿಗಳು:** RIESI, ಜ್ಞಾನಭಾರತಿ, ಬೆಂಗಳೂರು ಸಂಸ್ಥೆಯು ನಡೆಸುವ Certificate of English Language Teaching (CLT) ಹಾಗೂ Diploma in Communication (DiE) ತರಬೇತಿಗಳಲ್ಲಿ ಭಾಗವಹಿಸಲು ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಅರ್ಹ, ಆಸಕ್ತ ಶಿಕ್ಷಕರು ಡಿ.ಎಸ್.ಇ.ಆರ್.ಟಿ. ಗೆ ಪ್ರಸ್ತಾವನೆ ಸಲ್ಲಿಸುವುದು. DiE ಗೆ ತಗಲುವ ಶುಲ್ಕದ ಬಾಬ್ತು ರೂ.2500 ಗಳನ್ನು ಸರ್ಕಾರದಿಂದ ಭರಿಸಲಾಗುತ್ತದೆ.

16. **ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ(NTSE)** : ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅನಾವರಣಗೊಳಿಸಿ ಪೋಷಿಸಲು ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿವೇತನ ನೀಡುವ ಮೂಲಕ ಉತ್ತೇಜಿಸಲು ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳನ್ನು 2 ಹಂತದಲ್ಲಿ ನಡೆಸಲಾಗುತ್ತದೆ. ಮೊದಲ ಹಂತ ರಾಜ್ಯ ಮಟ್ಟದ ಪರೀಕ್ಷೆಯಾಗಿದ್ದು, 2 ನೇ ಹಂತವು ಕೇಂದ್ರ ಮಟ್ಟದ ಪರೀಕ್ಷೆ ಯಾಗಿರುತ್ತದೆ. ಸರ್ಕಾರಿ ಅನುದಾನಿತ, ಅನುದಾನರಹಿತ ರಾಜ್ಯ ಹಾಗೂ ಕೇಂದ್ರೀಯ ಶಾಲೆಗಳಲ್ಲಿ 10 ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಪರೀಕ್ಷೆಗೆ ಅರ್ಹರು. ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅವರ ಕಲಿಕೆಯ ಕೊನೆಯ ಹಂತದವರೆಗೆ ಮಾಸಿಕ ರೂ. 500/–ರಂತೆ ಹಾಗೂ ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಎರಡು ವರ್ಷಗಳಿಗೆ ರೂ. 2000/– ರಂತೆ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸಲಾಗುವುದು. ಜಿಲ್ಲಾ ಪಂಚಾಯತಿಗಳು, ಉಪನಿರ್ದೇಶಕರುಗಳ, ಡಯಟ್ ಪ್ರಾಂಶುಪಾಲರುಗಳ ಸ್ಥಳೀಯ ವಿಜ್ಞಾನ ಕೇಂದ್ರಗಳ ಮತ್ತು ಬಿಇಒ ಗಳ ಹೆಚ್ಚಿನ ಸಹಕಾರದಿಂದ ವರ್ಷದಿಂದ ವರ್ಷಕ್ಕೆ ಈ ಪರೀಕ್ಷೆ ತೆಗೆದುಕೊಳ್ಳವ ಮಕ್ಕಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದ್ದು ಪ್ರತಿಭಾವಂತ ಮಕ್ಕಳಿಗೆ ಅನುಕೂಲವಾಗಿದೆ.

17. **ನ್ಯಾಶನಲ್ ಮೀನ್ಸ್–ಕಮ್–ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆ(NMMS)** : ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಗಳ ಪ್ರೌಢ ಶಾಲೆಗಳಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾಸಿಕ ರೂ.500/– ರಂತೆ 4 ವರ್ಷಗಳ ಕಾಲ ವಿದ್ಯಾರ್ಥಿವೇತನ ನೀಡುವ ಯೋಜನೆ. ಈ ಯೋಜನೆಗೆ ಅರ್ಹರಾಗಲು ಪೋಷಕರ ವಾರ್ಷಿಕ ವರಮಾನ ರೂ.1,50,000ಗಳ ಮಿತಿಯೊಳಗಿದ್ದು ಎನ್.ಟಿ.ಎಸ್.ಇ. ಮಾದರಿಯಲ್ಲಿ ಜರುಗುವ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆಯನ್ನು ಗಳಿಸಬೇಕು. ಜಿಲ್ಲಾ ಪಂಚಾಯತಿಗಳು, ಉಪನಿರ್ದೇಶಕರುಗಳು, ಡಯಟ್ ಪ್ರಾಂಶುಪಾಲರುಗಳು, ಸ್ಥಳೀಯ ವಿಜ್ಞಾನ ಕೇಂದ್ರಗಳ ಮತ್ತು ಬಿಇಒ ಗಳ ಹೆಚ್ಚಿನ ಸಹಕಾರದಿಂದ ವರ್ಷದಿಂದ ವರ್ಷಕ್ಕೆ ಈ ಪರೀಕ್ಷೆ ತೆಗೆದುಕೊಳ್ಳುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದ್ದು ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

18. **ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆ (ಎನ್.ಪಿ.ಇ.ಪಿ.)** : ಹದಿ ಹರೆಯ ವಯಸ್ಸಿನ ವಿದ್ಯಾರ್ಥಿಗಳು ದುಶ್ಚಟಗಳಿಗೆ ಒಳಪಡದಂತೆ ಹಾಗೂ ಅಂಥವುಗಳಿಂದ ಹೊರಬಂದು ಬೌದ್ಧಿಕ, ಭಾವನಾತ್ಮಕ ಹಾಗೂ ಮಾನಸಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ದಿಕ್ಕಿನಲ್ಲಿ ಶಾಲಾ ಮಟ್ಟ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಈ ವಿಷಯಗಳ ಕುರಿತಾದ ಸ್ಥಳೀಯ ಕಲಾ ಪ್ರಕಾರಗಳಲ್ಲಿ ಪಾತ್ರಾಭಿನಯ ಮತ್ತು ಜನಪದ ಕಾರ್ಯಕ್ರಮಗಳ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಹದಿ ಹರೆಯದ ಮಕ್ಕಳಿಗೆ ಅವರ ವಯಸ್ಸಿಗನುಗುಣವಾದ ತಿಳುವಳಿಕೆ ಮೂಡಿಸುವ ಕಾರ್ಯಗಳನ್ನು ಈ ಯೋಜನೆಯಡಿ ಮಾಡಲಾಗುತ್ತಿದೆ.

19. **ನಲಿ–ಕಲಿ ವಿಧಾನದ ಅನುಷ್ಠಾನ** : ನಲಿ–ಕಲಿ ವಿಧಾನವು ಮಕ್ಕಳಿಗೆ ಸಂತಸದಾಯಕ ಹಾಗೂ ಚಟುವಟಿಕೆ ಆಧಾರಿತ ಕಲಿಕಾ ವಿಧಾನವಾಗಿದ್ದು, ಸ್ವ ಕಲಿಕೆ ಹಾಗೂ ಸ್ವ ವೇಗದ ಕಲಿಕೆಗೆ ಸಹಾಯಕವಾಗಿರುತ್ತದೆ. ನಲಿಕಲಿ ವಿಧಾನವನ್ನು ರಾಜ್ಯದ ಎಲ್ಲಾ ಕನ್ನಡ ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1, 2 ಮತ್ತು 3 ನೇ ತರಗತಿಯಲ್ಲಿ ಹಾಗೂ ಉರ್ದು ಮಾಧ್ಯಮದ ಸರ್ಕಾರಿ ಶಾಲೆಗಳ 1 ಮತ್ತು 2 ನೇ ತರಗತಿಗಳಲ್ಲಿ ಅನುಷ್ಠಾನಗೊಳಿಸಿದೆ. ನಲಿಕಲಿ ತರಗತಿಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ ಹಾಗೂ ವಿಶೇಷ ತರಬೇತಿಗಳನ್ನು ನೀಡಲಾಗುತ್ತಿದೆ. ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ಒದಗಿಸಿದ್ದು ಮಕ್ಕಳಿಗೆ ಸಂತಸದಾಯಕ ಕಲಿಕೆಗೆ ವಾತಾವರಣ ರೂಪಿಸಲಾಗಿದೆ.

20. **ಸರ್ವಶಿಕ್ಷಣ ಅಭಿಯಾನ: (ಎಸ್.ಎಸ್.ಎ)** : ಸರ್ವಶಿಕ್ಷಣ ಅಭಿಯಾನದ ಮೂಲಕ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಬಲವರ್ಧನೆಗೆ ತರಬೇತಿಗಳನ್ನು ನೀಡುವುದರ ಮೂಲಕ ತರಗತಿಯೊಳಗೆ ಗುಣಮಟ್ಟದ ಶಿಕ್ಷಣ ನೀಡಲು ಪ್ರಯತ್ನಿಸಲಾಗುತ್ತಿದೆ.

a. **ನಲಿಕಲಿ ತರಬೇತಿ:** ರಾಜ್ಯದಲ್ಲಿ ಸರ್ಕಾರಿ ಕನ್ನಡ ಮತ್ತು ಉರ್ದು ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿನ ನಲಿ-ಕಲಿ ಶಿಕ್ಷಕರಿಗೆ ನಲಿ-ಕಲಿ ತರಬೇತಿ ನೀಡಲಾಗುತ್ತಿದೆ.

b. **ವಿಷಯಾಧಾರಿತ ತರಬೇತಿ:** 4 ರಿಂದ 8 ನೇ ತರಗತಿ ವಿಷಯ ಬೋಧಿಸುವ ಶಿಕ್ಷಕರಿಗೆ ಸಿ.ಸಿ.ಇಯನ್ನು ಒಳಗೊಂಡಂತೆ ಹೊಸ ಪಠ್ಯಪುಸ್ತಕ ಆಧಾರಿತ ತರಬೇತಿ ನೀಡಲಾಗುತ್ತಿದೆ.

c. **ಸಮಾಲೋಚನಾ ಸಭೆಗಳು:** ಶಿಕ್ಷಕರ ದೈನಂದಿನ ಬೋಧನೆಯಲ್ಲಿ ಉಂಟಾಗಬಹುದಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕ್ಲಸ್ಟರ್ ಹಂತದಲ್ಲಿ ಸಮಾಲೋಚನಾ ಸಭೆಗಳನ್ನು ಆಯೋಜಿಸಲಾಗುತ್ತಿದೆ.

d. **ಶೈಕ್ಷಣಿಕ ಆಡಳಿತಾಧಿಕಾರಿಗಳಿಗೆ ತರಬೇತಿ:** ಸಿ.ಆರ್.ಪಿ ಯಿಂದ ಜಿಲ್ಲಾ ಉಪನಿರ್ದೇಶಕರ ವರೆಗಿನ ಶೈಕ್ಷಣಿಕ ಆಡಳಿತಾಧಿಕಾರಿಗಳಿಗೆ ಅವರ ಶೈಕ್ಷಣಿಕ ಬಲವರ್ಧನೆಗಾಗಿ ತರಬೇತಿಗಳನ್ನು ನೀಡಲಾಗುತ್ತಿದೆ.

e. **ಎಸ್.ಡಿ.ಎಮ್.ಸಿ ಸದಸ್ಯರಿಗೆ ತರಬೇತಿ:** ಸಮುದಾಯದ ಸಹಭಾಗಿತ್ವವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಎಸ್.ಡಿ.ಎಮ್.ಸಿ ಸದಸ್ಯರಿಗೆ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

21. **ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ: (ಆರ್.ಎಂ.ಎಸ್.ಎ)** : ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (**ಆರ್.ಎಂ.ಎಸ್.ಎ**) ಕಾರ್ಯಕ್ರಮವು 14 ರಿಂದ 18 ವರ್ಷ ವಯೋಮಿತಿಯಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪ್ರೌಢ ಶಾಲಾ ಶಿಕ್ಷಣ ಲಭ್ಯವಾಗುವಂತೆ ಅವಶ್ಯ ಸೌಲಭ್ಯಗಳನ್ನು ಕಲ್ಪಿಸಲು ರೂಪಿಸಿರುವ ಕಾರ್ಯಕ್ರಮವಾಗಿದ್ದು, ಇದರಡಿಯಲ್ಲಿ ಅಗತ್ಯ ಆಧಾರಿತ ವಿವಿಧ ತರಬೇತಿಗಳನ್ನು ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ನಡೆಸಲಾಗುತ್ತಿದೆ.

a) **ಮುಖ್ಯ ಶಿಕ್ಷಕರ ತರಬೇತಿ:** ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಆಡಳಿತಾತ್ಮಕ ತರಬೇತಿಯನ್ನು ಸಿ.ಟಿ.ಇ. ಮತ್ತು ಡಯಟ್ ಗಳ ಮೂಲಕ ನೀಡಲಾಗುತ್ತಿದೆ. ಆಸಕ್ತ ಮುಖ್ಯ ಶಿಕ್ಷಕರು ಆಡಳಿತಕ್ಕೆ ಅಗತ್ಯವಾದ ಹೆಚ್ಚಿನ ತರಬೇತಿ ಪಡೆಯಲು ಡಿ.ಎಸ್.ಇ.ಆರ್.ಟಿ. ವೆಬ್‌ಸೈಟ್‌ನಲ್ಲಿ ಅವರ ಹೆಸರು ಮತ್ತು ಅವರು ಪಡೆಯಲು ಇಚ್ಛಿಸುವ ತರಬೇತಿ ವಿವರಗಳನ್ನು ನೊಂದಾಯಿಸಲು ಅವಕಾಶ ಕಲ್ಪಿಸಿದೆ.

b) **ಸೇವಾ ನಿರತ ಶಿಕ್ಷಕರ ತರಬೇತಿ:** ಎನ್.ಸಿ.ಎಫ್ 2005 ಆಧರಿಸಿ ತಯಾರಿಸಲಾಗಿರುವ ಕನ್ನಡ, ಇಂಗ್ಲೀಷ್, ಹಿಂದಿ, ಗಣಿತ, ವಿಜ್ಞಾನ ಸಮಾಜ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ಪಠ್ಯ ಪುಸ್ತಕಗಳ ಬಳಕೆ ಬಗ್ಗೆ ಪ್ರೌಢ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ಸಿ.ಟಿ.ಇ. ಮತ್ತು ಡಯಟ್ ಗಳ ಮೂಲಕ ನೀಡಲಾಗುತ್ತಿದೆ. ಶಿಕ್ಷಕರು ಬೋಧನೆಗೆ ಅಗತ್ಯವಾದ ಹೆಚ್ಚಿನ ತರಬೇತಿ ಪಡೆಯಲು ಡಿ.ಎಸ್.ಇ.ಆರ್.ಟಿ. ವೆಬ್‌ಸೈಟ್‌ನಲ್ಲಿ ಅವರ ಹೆಸರು ಮತ್ತು ಅವರು ಪಡೆಯಲು ಇಚ್ಛಿಸುವ ತರಬೇತಿ ವಿವರಗಳನ್ನು ನೊಂದಾಯಿಸಲು ಅವಕಾಶ ಕಲ್ಪಿಸಿದೆ.

c) **ಬುನಾದಿ ತರಬೇತಿ:** ಹೊಸದಾಗಿ ನೇಮಕಗೊಂಡ ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಇಲಾಖೆಯ ಮೂಲ ಕೆಲಸಗಳ ಬಗ್ಗೆ ಶಿಕ್ಷಕರಿಗೆ ಅಗತ್ಯವಾದ ವಿವರಗಳನ್ನು ಒಳಗೊಂಡ ವಿಷಯಗಳಿರುವ ಬುನಾದಿ ತರಬೇತಿಯನ್ನು ಸಿ.ಟಿ.ಇ. ಮತ್ತು ಡಯಟ್ ಗಳ ಮೂಲಕ ನೀಡಲಾಗುತ್ತಿದೆ.

d) **ಎಸ್.ಡಿ.ಎಮ್.ಸಿ ಸದಸ್ಯರಿಗೆ ತರಬೇತಿ:** ಸಮುದಾಯದ ಸಹಭಾಗಿತ್ವವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪ್ರೌಢಶಾಲಾ ಎಸ್.ಡಿ.ಎಮ್.ಸಿ ಸದಸ್ಯರಿಗೆ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

22. **ಉನ್ನತ ಶಿಕ್ಷಣಕ್ಕೆ ನಿಯೋಜನೆ:** ಪ್ರಾಥಮಿಕ ಶಾಲಾ ಶಿಕ್ಷಕರು ಬಿ.ಎ (ಇಂಗ್ಲಿಷ್) ಹಾಗೂ ಬಿ.ಎಸ್‌ಸಿ ಪದವಿ (ಆಂಗ್ಲ/ವಿಜ್ಞಾನ/ಗಣಿತ ವಿಷಯಗಳಲ್ಲಿ) ಪಡೆಯಲು ಅವರನ್ನು ಉನ್ನತ ವ್ಯಾಸಂಗಕ್ಕೆ ವೇತನಸಹಿತ ನಿಯೋಜನೆಗೆ ಅವಕಾಶ ಕಲ್ಪಿಸಲಾಗಿದ್ದು, ಇದಕ್ಕೆ ಸಮಬಂಧಿಸಿದ ಶುಲ್ಕವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ. ಡಿ.ಎಸ್.ಇ.ಆರ್.ಟಿ. ವೆಬ್‌ಸೈಟ್‌ನಲ್ಲಿ ಆಸಕ್ತ/ಅರ್ಹ ಶಿಕ್ಷಕರು ನೊಂದಾಯಿಸಲು ಅವಕಾಶ ಕಲ್ಪಿಸಿದೆ.

23. **ಮೌಲ್ಯ ಶಿಕ್ಷಣ ತರಬೇತಿಗಳು:** ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಮೌಲ್ಯ ಹಾಗು ಯೋಗ ಶಿಕ್ಷಣ ನೀಡುವ ಮೂಲಕ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಅನುವು ಮಾಡುವುದು, ಏಕಾಗ್ರತೆ ಮೂಡಿಸುವಂತಹ ಆಧ್ಯಾತ್ಮಿಕ ಮೌಲ್ಯ ಶಿಕ್ಷಣ ತರಬೇತಿಗಳನ್ನು ನೀಡಲಾಗುತ್ತಿದೆ.

24. **ವಿಷಯ ಶಿಕ್ಷಕರ ಫೋರಂ: (ಎಸ್.ಟಿ.ಎಫ್) :** ಪಠ್ಯಕ್ರಮ, ಬೋಧನೆ ಹಾಗೂ ಕಲಿಕೆಗೆ ಸಂಬಂಧಿಸಿದ ವಿಷಯಗಳನ್ನು ವಿನಿಮಯ ಮಾಡಿಕೊಳ್ಳಲು ಡಿಜಿಟಲ್ ತಂತ್ರಜ್ಞಾನವನ್ನು ಬಳಸಿ ಶಿಕ್ಷಕರ ವೃತ್ತಿ ಬೆಳವಣಿಗೆಗೆ ಅನುಕೂಲವಾಗುವಂತಹ ಈ ವೇದಿಕೆಗಳನ್ನು ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಇಂಗ್ಲಿಷ್ ಮತ್ತು ಕನ್ನಡ ವಿಷಯಗಳಲ್ಲಿ ಪ್ರಾರಂಭಿಸಿದ್ದು ಎಲ್ಲಾ ಶಿಕ್ಷಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಹಾಗೆಯೇ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ Head Teacher Forum (HTF)ಗಳು ಸಹಾಯಕವಾಗಿವೆ. ಪ್ರಶಿಕ್ಷಕರಿಗೆ ಶಿಕ್ಷಣದ ಮುಖ್ಯವಾಹಿನಿಯೊಂದಿಗೆ ಸಂಪರ್ಕ ಕಲ್ಪಿಸಲು Karnataka Teacher Educators Forum(KTEF) ನ್ನು ಪ್ರಾರಂಭಿಸಿದೆ.

25. **ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು (ಒ.ಇ.ಆರ್) :** ಶಿಕ್ಷಕರಿಗೆ ಹಾಗೂ ಪ್ರಶಿಕ್ಷಕರಿಗೆ ಸಹಾಯ ಹಸ್ತ ನೀಡಲು ಶಿಕ್ಷಕರನ್ನು ವಿದ್ಯಾರ್ಥಿಗಳೆಂದು ಪರಿಗಣಿಸಿ ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ ಮಾಡಲು ಮುಕ್ತ ಶೈಕ್ಷಣಿಕ ಸಂಪನ್ಮೂಲ (OER) ತಯಾರಿಸಿದೆ. OERನ ಮುಖ್ಯ ಲಕ್ಷಣವೆಂದರೆ ಶಿಕ್ಷಕರು ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು. ಘಟಕಗಳು ಪ್ರಾಯೋಗಿಕವಾಗಿದ್ದು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರೊಂದಿಗೆ ಶಾಲೆಯಲ್ಲಿ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿವೆ. ಇವುಗಳು ಉತ್ತಮ ಶಾಲೆಗಳ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಯನ್ನು ಆಧರಿಸಿದೆ.

**ಕರ್ನಾಟಕ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು (ಕೆ.ಒ.ಇ.ಆರ್) :** ಕರ್ನಾಟಕ ಮುಕ್ತ ಶೈಕ್ಷಣಿಕ ಸಂಪನ್ಮೂಲಗಳ ಮೂಲಕ ಡಿಜಿಟಲ್ ಸಂಪನ್ಮೂಲಗಳನ್ನು ಸೃಷ್ಟಿಸುವುದೇ KOER ಆಗಿದೆ. ಇದನ್ನು STFನಲ್ಲಿ ಅಂತರ್ಗತಗೊಳಿಸಿದ್ದು ಶಿಕ್ಷಕರು ತಾವು ತಯಾರಿಸಿದ ಶ್ರವ್ಯ – ದೃಶ್ಯ ಸಂಪನ್ಮೂಲಗಳನ್ನು, ವೆಬ್ ಸಂಪನ್ಮೂಲಗಳನ್ನು ಅಥವಾ ಪಠ್ಯಗಳನ್ನು ನೇರವಾಗಿ ಹಂಚಿಕೊಳ್ಳಬಹುದಾಗಿದೆ. ತಾವು ತಯಾರಿಸಿದ ಸಂಪನ್ಮೂಲಗಳ ಬಗ್ಗೆ ಇತರ ಶಿಕ್ಷಕರು ವಿಮರ್ಶೆ ಮಾಡಲು ಅವಕಾಶವಿರುವುದರಿಂದ ಕಲಿಕೆಗೆ ಸಹಾಯಕವಾಗಿದ್ದು, ಶಿಕ್ಷಕರು ಹಾಗೂ ಪ್ರಶಿಕ್ಷಕರು ಈ ವೇದಿಕೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದೆ.

26. **TTMS Software :** ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು ಹಾಗೂ ಡಯಟ್ ಮತ್ತು ಸಿಟಿಇ ಅಧಿಕಾರಿಗಳಿಗೆ ನೀಡುವ ತರಬೇತಿಗಳ ಮಾಹಿತಿಯನ್ನು ಸಂಗ್ರಹಿಸುವ ಸಾಫ್ಟ್‌ವೇರ್ ಅಳವಡಿಸುವ ಕಾರ್ಯಕ್ರಮವನ್ನು 2015–16 ರಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

27. **ವೆಬ್ ಬುನಾದಿ ತರಬೇತಿ:** ಇ–ಮೀಡಿಯಾ, ಸಂಶೋಧನೆ, ಕೌಶಲಗಳು, ಡಯಟ್/ಸಿಟಿಇ ರೋಲ್, ಯೋಜನೆ ಹಾಗೂ ಸಾಮಾನ್ಯ ವಿಷಯಗಳನ್ನೊಳಗೊಂಡ ವಿಷಯಗಳಲ್ಲಿ ಡಯಟ್ ಮತ್ತು ಸಿಟಿಇ ಅಧಿಕಾರಿಗಳಿಗೆ ಬಲವರ್ಧನೆ ತರಬೇತಿ ನೀಡಲಾಗುತ್ತಿದೆ.

28. **ಜ್ಞಾನಧಾರಾ:** ತಿಂಗಳ ಮೊದಲ ಹಾಗೂ ಮೂರನೇ ಶನಿವಾರಗಳಂದು ರಾಜ್ಯಾದಂತ 10 ರಿಂದ 11 ಗಂಟೆಯವರೆಗೆ ಡಿ.ಎಸ್.ಇ.ಆರ್.ಟಿ. ಸ್ಟುಡಿಯೋ ದಿಂದ ಬಿತ್ತರಗೊಳ್ಳುವ **ಜ್ಞಾನಧಾರಾ** ಕಾರ್ಯಕ್ರಮದಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಶೈಕ್ಷಣಿಕ ವಿಚಾರಗಳ ಕುರಿತು ಮಾಹಿತಿ ನೀಡಲಾಗುವುದು.

29. **ಶೈಕ್ಷಣಿಕ ಅದಾಲತ್:** ಪ್ರಾಥಮಿಕ ಶಾಲಾ ಶಿಕ್ಷಕರು ನೇರವಾಗಿ ವಿವಿಧ ಬೋಧನಾ ವಿಷಯ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ, ಅವರ ಬೋಧನಾ ವಿಷಯಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವಕಾಶ ಕಲ್ಪಿಸಲು ರಾಜ್ಯದ ಎಲ್ಲಾ ಬ್ಲಾಕುಗಳಲ್ಲಿ ವರ್ಷದಲ್ಲಿ 4 (ತ್ರೈಮಾಸಿಕಕ್ಕೆ ಒಂದರಂತೆ) ಶೈಕ್ಷಣಿಕ ಅದಾಲತ್‌ಗಳನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಪೋಷಕರು ಸಹಾ ಭಾಗವಹಿಸಿ ಶೈಕ್ಷಣಿಕ ಯೋಜನೆಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

30. **ಶೈಕ್ಷಣಿಕ ಸ್ಪಂದನ:** ಡಿ.ಎಸ್.ಇ.ಆರ್.ಟಿ.ಯ ನಿರ್ದೇಶಕರು ಹಾಗೂ ಅಧಿಕಾರಿ ವೃಂದದವರು ಪ್ರತಿ ತಿಂಗಳು 2 ಸೋಮವಾರಗಳಂದು ಒಂದೊಂದು ಜಿಲ್ಲೆಯ ಶಾಲೆಗಳಿಗೆ ಭೇಟಿ ನೀಡಿ ಡಿ.ಎಸ್.ಇ.ಆರ್.ಟಿ.ಯ ಕಾರ್ಯಕ್ರಮಗಳ ಅನುಷ್ಠಾನವನ್ನು ಪರಿಶೀಲಿಸಿ, ಅನುಷ್ಠಾನ ಅಧಿಕಾರಿಗಳೊಡನೆ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಕುಂದು ಕೊರತೆಗಳನ್ನು ಖುದ್ದಾಗಿ ಪರಿಹರಿಸುವ **ಶೈಕ್ಷಣಿಕ ಸ್ಪಂದನ** ಎಂಬ ವಿನೂತನ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

31. **ಕ್ರಿಯಾ ಸಂಶೋಧನೆ:** ತರಗತಿ ಪ್ರಕ್ರಿಯೆಯಲ್ಲಿ ಶಿಕ್ಷಕರಿಗೆ ಎದುರಾಗುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಕ್ರಿಯಾಸಂಶೋಧನೆಯನ್ನು ನಡೆಸಲು ಡಯಟ್ ಮತ್ತು ಸಿಟಿಇ ಗಳ ಮೂಲಕ ಶೈಕ್ಷಣಿಕ ನೆರವನ್ನು ಒದಗಿಸಲಾಗುತ್ತಿದೆ. ಶಿಕ್ಷಕರು ಹಾಗೂ ಕಾರ್ಯನಿರತರು ಈ ಕ್ರಿಯಾಸಂಶೋಧನೆಯನ್ನು ಕೈಗೊಳ್ಳುವುದು.

32. **ಟೆಲಿ ಎಜುಕೇಷನ್ (Satellite Advanced Multimedia Education)** : ಡಿ.ಎಸ್.ಇ.ಆರ್.ಟಿ. ಸ್ಟುಡಿಯೋದಿಂದ ದ್ವಿಮುಖ ಸಂವಹನವಿರುವ ದೂರ ಶಿಕ್ಷಣ ವ್ಯವಸ್ಥೆಯ ಮೂಲಕ ರಾಜ್ಯದಲ್ಲಿ ಶೈಕ್ಷಣಿಕವಾಗಿ ಅತಿ ಹಿಂದುಳಿದ (EBB) 36 ತಾಲ್ಲೂಕುಗಳ ಕನ್ನಡ ಮಾಧ್ಯಮದ 1000 ಶಾಲೆಗಳ 5 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ನುರಿತ ಶಿಕ್ಷಕರ ಮೂಲಕ ಬೋಧನಾ ಸೇವೆ ಒದಗಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ಅನುಕೂಲ ಕಲ್ಪಿಸಲಾಗುತ್ತಿದ್ದು, ಈ ಸಾಲಿನಲ್ಲಿ ಇನ್ನೂ ಒಂದು ಸಾವಿರ ಶಾಲೆಗಳಿಗೆ ವಿಸ್ತರಿಸಲಾಗುತ್ತಿದೆ.

33. **ಇ–ವಿದ್ಯಾ ಅಕಾಡೆಮಿ** : ವಿವಿಧ ಸ್ತರದ ಎಲ್ಲಾ ಮೇಲುಸ್ತುವಾರಿ ಅಧಿಕಾರಿಗಳಿಗೆ ಕಂಪ್ಯೂಟರ್ ಆಧಾರಿತ ಇಂಟರ್‌ನೆಟ್ ಒಳಗೊಂಡ ತರಬೇತಿಯನ್ನು ರಾಜ್ಯದ ಕಲ್ಬುರ್ಗಿ, ಧಾರವಾಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿರುವ ಇ–ವಿದ್ಯಾ ಅಕಾಡೆಮಿ ಕೇಂದ್ರಗಳ ಮೂಲಕ ನೀಡಲಾಗುತ್ತಿದೆ.

34. **ಶಾಲೆಗಳಲ್ಲಿ ಹತ್ತು ಅಂಶದ ಕಾರ್ಯಕ್ರಮ** : ಶಾಲೆಗಳಲ್ಲಿ ಬೋಧನಾ ಮತ್ತು ಕಲಿಕಾ ಗುಣಮಟ್ಟ ಹೆಚ್ಚಿಸುವ ಹಿನ್ನೆಲೆಯಲ್ಲಿ (1)ಸೇತುಬಂಧ, 2)ಶಾಲಾ ಶೈಕ್ಷಣಿಕ ಯೋಜನೆ, 3)ಭಾಷಾ ಮಾಸಾಚರಣೆ, 4)ಸ್ಪಷ್ಟ ಓದು, ಶುದ್ಧ ಬರಹ, ಸರಳಗಣಿತ, 5)ವಿಷಯ ವೇದಿಕೆ, 6)ವಾರದ ವಿಜ್ಞಾನ ಪ್ರಯೋಗ, 7)ವಿಶೇಷ ಅವಧಿ ಹಾಗು ಸತತ ಪರಿಶ್ರಮ, 8)ಸಹೋದ್ಯೋಗಿಗಳ ಪಾಠ ಅವಲೋಕನ, 9)ಪುಸ್ತಕದ ಪರಿಚಯ 10)ರಸಪ್ರಶ್ನೆ ಕಾರ್ಯಕ್ರಮಗಳನ್ನು ಒಳಗೊಂಡ ಹತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

35. **ವಿವಿಧ ಸಂಘ ಸಂಸ್ಥೆಗಳೊಂದಿಗೆ ಸಹಯೋಗ** : NCERT, NUEPA, UNICEF, IIM(B), The open university(TESS INDIA), RIESI, RIE, SISLEP, MICROSOFT, INTEL, AIFT, APF, ಬ್ರಿಟಿಷ್ ಕೌನ್ಸಿಲ್, ರಾಜ್ಯದ ವಿಶ್ವವಿದ್ಯಾನಿಲಯಗಳು ಮುಂತಾದ ಸಂಘ ಸಂಸ್ಥೆಗಳು.

36. **ಕಲಾ ಸಂಶೋಧನಾ ಕೇಂದ್ರ** : ಪ್ರೌಢಶಾಲಾ ವಿದ್ಯಾರ್ಥಿಗಳಿಗೆ/ಶಿಕ್ಷಕರಿಗೆ ಚಿತ್ರಕಲಾ ಶಿಕ್ಷಣದಲ್ಲಿ ಆಸಕ್ತಿ ಮೂಡಿಸಲು ಕಲೆಯ ಅನ್ವಯಗಳು, ಹೊಸ ಆವಿಷ್ಕಾರ, ಕ್ರಿಯಾ ಸಂಶೋಧನೆಗಳು ಕುರಿತು ಪ್ರದರ್ಶನ/ಗೋಷ್ಠಿ/ಪ್ರತಿಭೆಗಳಿಗೆ ವೇದಿಕೆ ನಿರ್ಮಿಸಲಾಗಿದೆ. ಚಿತ್ರಕಲಾ ಶಿಕ್ಷಕರಿಗೆ ವಿನೂತನ ಕಾರ್ಯಕ್ರಮವಾದ (ಪೇಂಟಿಂಗ್ ಕ್ಯಾಂಪ್) ಕಲಾ ಶಿಬಿರಗಳನ್ನು ಹಾಗೂ ವಿಭಾಗ ಮಟ್ಟದಲ್ಲಿ ಕಲಾ ವಿಚಾರ ಗೋಷ್ಠಿಗಳು, ಉಪನ್ಯಾಸ, ಪ್ರದರ್ಶನ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ತಮ್ಮನ್ನು ತಾವೇ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ರೂಪಿಸುವ ನಿಟ್ಟಿನಲ್ಲಿ ಎಲ್ಲಾ ಸಾಧ್ಯತೆಗಳಿಗೆ ಪುಷ್ಟಿ ನೀಡಿ, ಶಿಕ್ಷಕರ ಮೌಲ್ಯಯುತ ಜ್ಞಾನಾರ್ಜನೆಗೆ ಅವಕಾಶವನ್ನು ನೀಡಲಾಗುತ್ತಿದೆ.

37. **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ** : ಪ್ರಾಥಮಿಕ ಹಂತದ 1 ನೇ ತರಗತಿಯಿಂದ 9ನೇ ತರಗತಿಯವರೆಗೆ 2012–13ರ ಶೈಕ್ಷಣಿಕ ಸಾಲಿನಿಂದ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು (Continuous and Comprehensive Evaluation – CCE) ರಾಜ್ಯಾದ್ಯಂತ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಆರ್.ಟಿ.ಇ ಸೆಕ್ಷನ್ 29 (ಎಚ್) ಅನ್ವಯ ಅನುಷ್ಠಾನಕ್ಕೆ ತರಲಾಗಿದೆ. ದಕ್ಷಿಣ ಭಾರತ ಪ್ರಾದೇಶಿಕ ಆಂಗ್ಲ ಭಾಷಾ ಸಂಸ್ಥೆ(ಆರ್.ಐ.ಇ) ಬೆಂಗಳೂರಿನ ಸಹಯೋಗದೊಂದಿಗೆ ರಾಜ್ಯ ಮಟ್ಟದಲ್ಲಿ (ಪ್ರಧಾನ ಸಂಪನ್ಮೂಲ ವ್ಯಕ್ತಿಗಳು) ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು, ಮುಖ್ಯಶಿಕ್ಷಕರು, ಪ್ರಶಿಕ್ಷಕರು ಹಾಗೂ ವಿಷಯ ಪರಿವೀಕ್ಷಕರಿಗೆ, ಡಯಟ್ ಮತ್ತು ಸಿ.ಟಿ.ಇಗಳ ಉಪನ್ಯಾಸಕರಿಗೆ ಮೌಲ್ಯಮಾಪನದ ಸಾಧನ ಮತ್ತು ತಂತ್ರಗಳನ್ನು ಕುರಿತು ವಿಷಯವಾರು ತರಬೇತಿಯನ್ನು ನೀಡಲಾಗುತ್ತಿದೆ. ಎನ್.ಸಿ.ಇ.ಆರ್.ಟಿ ಸಹಯೋಗದೊಂದಿಗೆ 3, 5 ಮತ್ತು 8ನೇ ತರಗತಿಗಳಿಗೆ ರಾಷ್ಟ್ರೀಯ ಸಾಧನ ಸಮೀಕ್ಷೆ (ಪರೀಕ್ಷೆ)ಗಳನ್ನು ಸಿದ್ದಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

38. **ಲ್ಯಾಪ್‌ಟಾಪ್ ಮತ್ತು ಟ್ಯಾಬ್ ಸೌಲಭ್ಯ** : ಶಿಕ್ಷಣ ಇಲಾಖೆಯಲ್ಲಿನ ಅಧಿಕಾರಿಗಳು ಮತ್ತು ಶಿಕ್ಷಕರು ಅವರ ದಿನನಿತ್ಯದ ವ್ಯವಹಾರಗಳಲ್ಲಿ ಶೈಕ್ಷಣಿಕ ತಂತ್ರಜ್ಞಾನ ಬಳಸಿಕೊಳ್ಳಲು ಅನುಕೂಲವಾಗುವಂತೆ ಲ್ಯಾಪ್‌ಟಾಪ್ ಮತ್ತು ಟ್ಯಾಬ್ ಖರೀದಿಸಲು ಶಿಕ್ಷಕರ ಕಲ್ಯಾಣ ನಿಧಿಯಿಂದ ರೂ. 30000 ಮತ್ತು 10000.00 ಗಳ ಮುಂಗಡ ನೀಡುವ ಸೌಲಭ್ಯವನ್ನು ಒದಗಿಸಲಾಗಿದ್ದು, ಡಿ.ಎಸ್.ಇ.ಆರ್.ಟಿ. ಗೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ನಂ.4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3 ನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು-560085
ದೂರವಾಣಿ: 080-26422372, 26422373, 26422375
ಫ್ಯಾಕ್ಸ್ : 080-26422377
ಇಮೇಲ್: dsertkar@gmail.com
Website: dsert.kar.nic.in

## ಶಿಕ್ಷಣ ಗುಣವರ್ಧನ ವರ್ಷ 14-15

**Quality Enhancement Year 14-15**

### ಹತ್ತು ಅಂಶಗಳ ಕಾರ್ಯಕ್ರಮ

- ಚಟುವಟಿಕೆ (1) – ಸೇತುಬಂಧ.
- ಚಟುವಟಿಕೆ (2) – ಶಾಲಾ ಶೈಕ್ಷಣಿಕ ಯೋಜನೆ.
- ಚಟುವಟಿಕೆ (3) – ಭಾಷಾ ಮಾಸಾಚರಣೆ.
- ಚಟುವಟಿಕೆ (4) – ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ.
- ಚಟುವಟಿಕೆ (5) – ವಿಷಯ ವೇದಿಕೆ.
- ಚಟುವಟಿಕೆ (6) – ವಾರದ ವಿಜ್ಞಾನ ಪ್ರಯೋಗ.
- ಚಟುವಟಿಕೆ (7) – ವಿಶೇಷ ಅವಧಿ ಹಾಗೂ ಸತತ ಪರಿಶ್ರಮ.
- ಚಟುವಟಿಕೆ (8) – ಸಹೋದ್ಯೋಗಿಗಳ ಅವಲೋಕನ ಪಾಠ.
- ಚಟುವಟಿಕೆ (9) – ಪುಸ್ತಕದ ಪರಿಚಯ.
- ಚಟುವಟಿಕೆ (10) – ರಸ ಪ್ರಶ್ನೆ ಕಾರ್ಯಕ್ರಮ.

## ಶಿಕ್ಷಣ ಗುಣವರ್ಧನ ವರ್ಷ 14–15

## Quality Enhancement Year 14–15

### ಚಟುವಟಿಕೆ (1) – ಸೇತುಬಂಧ

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಜೂನ್ ಮಾಹೆಯಲ್ಲಿ ಮಕ್ಕಳ ಕಲಿಕಾ ಅಂತರಗಳನ್ನು (Learning gaps) ಗುರುತಿಸಿ ಕೊರತೆ ನೀಗಿಸಿ, ಮಗುವಿನ ಕಲಿಕಾ ಅಂತರಕ್ಕೆ ಸೇತುವೆ ನಿರ್ಮಿಸುವ ಚಟುವಟಿಕೆಯೇ ಸೇತುಬಂಧ.

- ಸೇತುಬಂಧಕ್ಕೆ ಮೂಲ ನೈದಾನಿಕ ಪರೀಕ್ಷೆ. ಈ ನೈದಾನಿಕ ಪರೀಕ್ಷೆ ಈಗಾಗಲೇ ಮಕ್ಕಳಲ್ಲಿ ಗುರುತಿಸಿದ ಅಂತರವೆನಿಸುವ/ನ್ಯೂನತೆ ಎನಿಸಿದ ಕಲಿಕಾಂಶಗಳನ್ನು ಖಚಿತಪಡಿಸಿಕೊಳ್ಳುವುದು. ಅರ್ಥಾತ್ ನೈದಾನಿಕ ಪರೀಕ್ಷೆ ಹೊಸದಾಗಿ ತಯಾರಿಸಿದ ಪ್ರಶ್ನೆ ಪತ್ರಿಕೆ ಎನಿಸದೇ ಮಕ್ಕಳಲ್ಲಿ ಇಂತಹಾ ಕೊರತೆ ಇದೆ. ಅವು ಎಷ್ಟರಮಟ್ಟಿಗೆ ಕೊರತೆಯಾಗಿವೆ ಎಂಬ ಪೂರ್ವ ಸಿದ್ಧತಾ ಯೋಚನೆಯೊಂದಿಗೆ ಆರಂಭವಾಗುವುದು ಅಗತ್ಯ.
- ಸೇತುಬಂಧ ಜೂನ್ ಮಾಹೆಗೆ ಸೀಮಿತ ಎಂಬ ತಪ್ಪು ಕಲ್ಪನೆಯಿದೆ. ಮಕ್ಕಳ ಕಲಿಕಾ ಅಂತರಗಳನ್ನು ಗುರುತಿಸಿ ಅಲ್ಲಲ್ಲಿಯೇ ಖಚಿತಪಡಿಸಿಕೊಂಡು ಅವುಗಳ ಬಗ್ಗೆ ಚರ್ಚಿಸಬೇಕು. ನ್ಯೂನತೆ ಸರಿಯಾಗುವ ಹಿಮ್ಮಾಹಿತಿ ಮಕ್ಕಳಿಗೆ ನೀಡಿ, ಇದು ಕಲಿಕಾ ಪ್ರಕ್ರಿಯೆಯ ಭಾಗವಾಗಬೇಕು.
- ಸೇತುಬಂಧದ ನೈದಾನಿಕ ಪರೀಕ್ಷೆ ಮಾಡುವಾಗ ಹಿಂದಿನ ತರಗತಿಯ ಪಾಠಗಳನ್ನಾಧರಿಸಿದ ಪ್ರಶ್ನೆಪತ್ರಿಕೆ ತಯಾರಿಸುವ ಪದ್ಧತಿ ನಮ್ಮಲ್ಲಿದೆ. ಅದು ಹಾಗಾಗದೇ ಮಕ್ಕಳಲ್ಲಿ ನ್ಯೂನತೆ ಎಂದು ಶಿಕ್ಷಕರು ಅನುಮಾನಿಸಿದ ಅಂಶಗಳಿಗೆ ಪ್ರಶ್ನೆಗಳನ್ನು (ಅದಕ್ಕೆ ಪ್ರಶ್ನೆ ಪತ್ರಿಕೆಯೊಂದೇ ಸಾಧನವಲ್ಲ) ತಾವೇ ಕೇಳಿಕೊಂಡು, ಯೋಚಿಸಿ ನಂತರ ಮಕ್ಕಳನ್ನು ಪರೀಕ್ಷಿಸಬೇಕು. ಏಳನೆಯ ತರಗತಿಯ ಮಗುವೊಂದಕ್ಕೆ ಅಕ್ಷರಗಳ ಪರಿಚಯವೇ ಇಲ್ಲದಾಗ ಅದಕ್ಕೆ ಆರನೇ ತರಗತಿಯ ವಿಜ್ಞಾನದ ಪರಿಕಲ್ಪನೆಯ ನೈದಾನಿಕ ಪರೀಕ್ಷಾ ಪ್ರಶ್ನೆ ಪತ್ರಿಕೆ ನೀಡುವುದು ಅನುಪಯುಕ್ತ. ಇಂತಹಾ ಮಕ್ಕಳ ಪರಿಚಯ ಹಲವು ವರ್ಷ ಕಲಿಸಿದ ಶಿಕ್ಷಕರಿಗೆ ಇರುತ್ತದೆ. ಇವರಿಗೆ ಭಾಷೆ ಮತ್ತು ಗಣಿತದ ಮೂಲ ಕೌಶಲಗಳ ತರಗತಿಯನ್ನೇ ಜೂನ್, ಜುಲೈ ಇನ್ನೂ ಮುಂದುವರಿದ ಮಾಹೆಗಳಲ್ಲಿ ಕಲಿಸುವುದು ಸೂಕ್ತ.
- ಸೇತುಬಂಧದ ನಂತರ ಸಾಫಲ್ಯಪರೀಕ್ಷೆಗೆ ಬೇರೆಯದೇ ಆದ ಪ್ರಶ್ನೆ ಪತ್ರಿಕೆ ತೆಗೆಯುವ ತಪ್ಪು ಮಾಡುತ್ತೇವೆ. ನೈದಾನಿಕ ಪರೀಕ್ಷಾ ಪ್ರಶ್ನೆಪತ್ರಿಕೆಯ ಆಳ, ಹರವು ಆಧರಿಸಿದ ಅದೇ ಮೌಲ್ಯದ ಸಾಫಲ್ಯ ಪರೀಕ್ಷಾ ಪ್ರಶ್ನೆಗಳನ್ನು ಕೇಳಬೇಕು ಅಥವಾ ಅದೇ ಹಿಂದಿನ ಪ್ರಶ್ನೆ ಪತ್ರಿಕೆ ಬಳಸಿಕೊಳ್ಳಲೂಬಹುದು.
- ಸೇತುಬಂಧ ಸಾಫಲ್ಯ ಪರೀಕ್ಷೆಯ ನಂತರ ವಿಶ್ಲೇಷಣೆಯಾಗಿ ಮಕ್ಕಳ ಪ್ರಗತಿ ಗುರುತಿಸಬೇಕು. ಇದಾದ ನಂತರವೂ ಸೇತುಬಂಧ ಮುಕ್ತಾಯವಾಗದೇ ಕಲಿಕೆ ಹಿಮ್ಮಾಹಿತಿ ಪ್ರಕ್ರಿಯೆಯು ಭಾಗವಾಗಿ ವರ್ಷಪೂರ್ತಿ ಮುಂದುವರೆಯುತ್ತದೆ.

### <u>ಚಟುವಟಿಕೆ (2) ಶಾಲಾ ಶೈಕ್ಷಣಿಕ ಯೋಜನೆ</u>

- ಶಾಲಾ ಶೈಕ್ಷಣಿಕ ಯೋಜನೆ (SAP) ಮಕ್ಕಳ ಕಲಿಕಾ ಪ್ರಗತಿ ಮತ್ತು ಗತಿ ಗುರುತಿಸಲು ಸಹಾಯ ಮಾಡುವ ಹಾಗೂ ಅದಕ್ಕೆ ಪೂರಕ ಸೂಚಕಗಳನ್ನು ತಯಾರಿಸಿಕೊಳ್ಳುವ ಯೋಜನೆ.
- ಈ ಯೋಜನೆ ತಯಾರಿಸಿಕೊಳ್ಳುವ ಪ್ರಕ್ರಿಯೆಯ 1 ರಿಂದ 6 ನಮೂನೆಗಳನ್ನು ತುಂಬುವ ಮತ್ತು ಗೋಡೆಗೆ ನೇತುಹಾಕುವ ಒಂದು ಸಮಯದ ಚಟುವಟಿಕೆ (One time activity) ಯಾಗಿರುವುದು ವಿಷಾದನೀಯ.
- ಶಾಲಾ ಶೈಕ್ಷಣಿಕ ಯೋಜನೆಯನ್ನು 2014–15ನೇ ಸಾಲಿಗೆ ತಯಾರಿಸಿಕೊಳ್ಳುವಾಗ ಈ ಕೆಳಕಂಡಂತೆ ತಯಾರಿಸಿಕೊಳ್ಳುವುದು.
- ಶಾಲಾ ಅವಶ್ಯಕತೆಗಳು ಶಾಲೆಯಿಂದ ಶಾಲೆಗೆ ಬದಲಾಗುತ್ತದೆ. ಆದ್ದರಿಂದ ಶಾಲಾ ಅವಶ್ಯಕತೆಗಳನ್ನು ಮಕ್ಕಳ ಪ್ರಗತಿಯನ್ನು ಶಿಕ್ಷಕರು, ಮಕ್ಕಳು SDMC ಯವರು ಚರ್ಚಿಸಿ ಗುರುತಿಸಿಕೊಳ್ಳುವುದು.
- SAP ನಮೂನೆಗಳನ್ನು ತುಂಬುವುದಕ್ಕೂ ಮುನ್ನ ಶಾಲಾ ವಾರ್ಷಿಕ ಶೈಕ್ಷಣಿಕ ಗುರಿಗಳನ್ನು ನಿಗಧಿಪಡಿಸಿಕೊಳ್ಳುವುದು.
- ಬುನಾದಿ ಸಾಮರ್ಥ್ಯಗಳು NCF–05 ರ ಆಧಾರಿತ ಹೊಸ ಪಠ್ಯ ಪುಸ್ತಕಗಳಲ್ಲಿಲ್ಲ. ಆದ್ದರಿಂದ KSQAAC ತಯಾರಿತ ಕಲಿಕಾ ಮಾನಕಗಳ ಕನಿಷ್ಠ ಮಟ್ಟವನ್ನೇ ಆರಂಭ ಬಿಂದು ಎಂದು ಗುರುತಿಸಿಕೊಳ್ಳುವುದು.

- SAPನ ನಮೂನೆ 06 ಮುಖ್ಯವೆನಿಸುತ್ತದೆ. ಉಳಿದ ಇತರೆ ನಮೂನೆಗಳನ್ನು ಅಗತ್ಯವೆನಿಸಿದಲ್ಲಿ ಬಳಸಿಕೊಳ್ಳುವುದು.
- ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ತಾವು ಶಾಲೆಗಾಗಿ ಹಮ್ಮಿಕೊಂಡ ಕನಸು, ಕಾಣಿಕೆ ಮತ್ತು ಪ್ರಗತಿಯನ್ನು SAPನಲ್ಲಿ ನಮೂದಿಸುವುದು.

**ಚಟುವಟಿಕೆ (3) – ಭಾಷಾ ಮಾಸಾಚರಣೆ**

- ಜುಲೈ ತಿಂಗಳಿನಾದ್ಯಂತ ಭಾಷಾ ಮಾಸಾಚರಣೆ ನಡೆಸುವುದು.
- ಪ್ರಥಮ ಭಾಷೆ, ದ್ವಿತೀಯ ಭಾಷೆ ಮತ್ತು ತೃತೀಯ ಭಾಷೆಗಳಲ್ಲಿ ಚಟುವಟಿಕೆಯಾಧಾರಿತ ಬೋಧನೆ ಮತ್ತು ಕಲಿಕೆಯಾಗಬೇಕು.
- **ಪ್ರಥಮ ಭಾಷೆ:–** ಸಂಭಾಷಣೆ, ಕೌಶಲ್ಯ ವೃದ್ಧಿಸುವುದು, ಹಾಡು, ರಸಪ್ರಶ್ನೆ, ಚರ್ಚಾಸ್ಪರ್ಧೆ, ಕಥೆ ಹೇಳುವುದು, ನಾಟಕ ಪ್ರಬಂಧ ಸ್ಪರ್ಧೆ ಇತ್ಯಾದಿ ಚಟುವಟಿಕೆಗಳನ್ನು ಏರ್ಪಡಿಸುವುದು.
- **ದ್ವಿತೀಯ ಭಾಷೆ:–**(1) ಆಂಗ್ಲಭಾಷಾ ಪತ್ರಿಕೆ – ಪ್ರಾರ್ಥನಾ ಸಮಯದಲ್ಲಿ ಓದಿಸಬಹುದು.

(2) Story Telling Method – ಅನುಸರಿಸುವುದು.
(3) Skits, Drama ಮಾಡಿಸುವುದು.
(4) ಆಂಗ್ಲ ಭಾಷಾ ವಿಷಯದಲ್ಲಿ ಚರ್ಚಾಸ್ಪರ್ಧೆ & ಪ್ರಬಂಧ ಸ್ಪರ್ಧೆ ಏರ್ಪಡಿಸುವುದು.
(5) Conversation, Rhymes ಹೇಳಿಸುವುದು.
(6) ರಾಗಬದ್ಧರಾಗಿ Poems ಹೇಳುವ ಪ್ರಯತ್ನವಾಗಬೇಕು.
(7) ರೇಡಿಯೋ ಮತ್ತು ಟಿ.ವಿ ಮುಖಾಂತರ ಆಂಗ್ಲಭಾಷಾ ವಿಷಯದ ಬಗ್ಗೆ ಇರುವ, ಮಕ್ಕಳಲ್ಲಿ ಆಸಕ್ತಿ ಸಂಗತಿಗಳನ್ನು ಕೇಳಿಸುವುದು ಮತ್ತು ನೋಡುವಂತೆ ನಿರ್ದೇಶಿಸುವುದು.

**ಚಟುವಟಿಕೆ (4) – ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ**

ತಂದೆ ತಾಯಿಗಳು ತಮ್ಮ ಮಗುವನ್ನು ಮೂಲ ಕೌಶಲಗಳಾದ ಓದು, ಬರಹ, ಗಣಿತವನ್ನು ಕಲಿತು ಸತ್ಪ್ರಜೆಯಾಗಿ ರೂಪುಗೊಳ್ಳಲಿ ಎಂಬ ಸದುದ್ದೇಶದಿಂದ ಶಾಲೆಗೆ ದಾಖಲು ಮಾಡುತ್ತಾರೆ. ಕಲಿತ ವಿದ್ಯೆಯನ್ನು ಜೀವನ ರೂಪಿಸಿಕೊಳ್ಳಲು ಬಳಸಿಕೊಂಡು ಉತ್ತಮ ಜೀವನ ನಿರ್ವಹಿಸಬೇಕೆಂಬುದು ಆಶಯವಾಗಿದೆ. ಈ ಸಾಧನೆ ಸಾಧ್ಯವಾಬೇಕಾದರೆ ಮಗು ಮೂಲ ಕೌಶಲಗಳಾದ ಆಲಿಸುವಿಕೆ, ಸ್ಪಷ್ಟವಾಗಿ ಮಾತಾಡುವುದು ತಪ್ಪಿಲ್ಲದಂತೆ ಓದುವುದು, ಶುದ್ಧವಾಗಿ ಸ್ಪುಟವಾಗಿ ಬರೆಯುವುದರಲ್ಲಿ ಕರತಗವಾಗಬೇಕು. ಗಣಿತದ ಮೂಲಕ್ರಿಯೆಗಳಾದ ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದು (ಭಿನ್ನರಾಶಿಗಳನ್ನು) ಉದಾಹರಣೆಗಳ ಮುಖಾಂತರ ಭಿನ್ನರಾಶಿ ಲೆಕ್ಕಗಳನ್ನು ಮಾಡಿಸುವುದು.

ಈ ನಿಟ್ಟಿನಲ್ಲಿ ಶಿಕ್ಷಕರಾದ ನಿಮ್ಮ ಪಾತ್ರ ಮಹತ್ತರವಾದುದು. ಶಿಕ್ಷಕರು ತಮ್ಮ ಪಾತ್ರವನ್ನು ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿದಲ್ಲಿ ಸಾಧನೆ ಕಷ್ಟಸಾಧ್ಯವಲ್ಲ. ಆದರೆ ಸದರಿ ಪ್ರಗತಿಯನ್ನು ಪರಿಶೀಲಿಸಿದಾಗ ವಿದ್ಯಾರ್ಥಿಗಳ ಸಾಧನೆ ವಿಷಾಧನೀಯ. ಈ ಪ್ರಗತಿಯನ್ನು ಉತ್ತಮಪಡಿಸಬೇಕಾದುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಶುದ್ಧ ಭಾಷೆಯ ಕಲಿಯುವಿಕೆ, ಸರಳ ಲೆಕ್ಕಾಚಾರ ಕುರಿತು ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನುಂಟು ಮಾಡುವಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಇಲ್ಲಿ ನೀಡಲಾಗಿದೆ. ಇವುಗಳ ಜೊತೆ ಜೊತೆಗೆ ಇನ್ನು ಕ್ರಿಯಾಶೀಲವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ.

**1. ಸ್ಪಷ್ಟ ಓದು**

ಅ) ದಿನಕ್ಕೊಂದು ಪುಸ್ತಕ ಪರಿಚಯ ಕಾರ್ಯಕ್ರಮ ಸಾಮೂಹಿಕ ಪ್ರಾರ್ಥನಾ ಸಮಯದಲ್ಲಿ ಶಾಲಾ ಗ್ರಂಥಾಲಯದಲ್ಲಿರುವ ಚಿಕ್ಕ–ಚಿಕ್ಕ ಪುಸ್ತಕಗಳ ಪರಿಚಯ ಮಾಡಿಸುವುದು.
ಆ) ವಿದ್ಯಾರ್ಥಿ ತನ್ನ ಅನುಭವವನ್ನು ತರಗತಿಯಲ್ಲಿ ಸಹಪಾಠಿಗಳೊಂದಿಗೆ ಹಂಚಿಕೊಳ್ಳುವುದು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಆಲಿಸುವುದು.
ಇ) ಗ್ರಂಥಾಲಯದಲ್ಲಿ ವಾರಕ್ಕೊಮ್ಮೆ ತನ್ನ ಆಸಕ್ತಿಯ ಪುಸ್ತಕವನ್ನು ತೆಗೆದುಕೊಂಡು ಓದಿ ಅದರಲ್ಲಿರುವ ಪ್ರಮುಖಾಂಶಗಳ ಕುರಿತು ಚರ್ಚೆ ನಡೆಸುವುದು.

ಈ) ಪ್ರಾರ್ಥನಾ ಸಮಯದಲ್ಲಿ ಪ್ರತಿದಿನ ಒಬ್ಬ ವಿದ್ಯಾರ್ಥಿಗೆ ದಿನಪತ್ರಿಕೆಯ ಮುಖ್ಯಾಂಶಗಳನ್ನು ಓದಲು ಅಣಿಗೊಳಿಸುವುದು. ಪ್ರಾರ್ಥನಾ ಸಮಯದಲ್ಲಿ ಓದುವ ಮುಂಚಿತವಾಗಿ ಶಿಕ್ಷಕರು ಪೂರ್ವಸಿದ್ಧತೆ ಮಾಡಿಸುವುದು.

ಉ) ತರಗತಿಗಳ ಕಲಿಕಾಂಶಗಳಿಗನುಗುಣವಾಗಿ ದಿನಕ್ಕೆ ಕನಿಷ್ಠ ಐದು ಹೊಸ ಪದಗಳ ಪರಿಚಯ ಮಾಡಿಸಿ ಓದಲು ಅಭ್ಯಾಸ ಮಾಡಬೇಕು.

ಊ) ಆಟದ ಮೂಲಕ Passing the work, Passing the Sentence through reading (Group activity in a circle), ಬ್ಯಾಕ್ ಚೈನ್ Effect, EX ಅಂಬಿಗ ನಾ ನಿನ್ನ ನಂಬಿದೆ

1. ನಂಬಿದೆ
2. ನಿನ್ನ ನಂಬಿದೆ
3. ನಾ ನಿನ್ನ ನಂಬಿದೆ.
4. ಅಂಬಿಗ ನಾ ನಿನ್ನ ನಂಬಿದೆ.

**2. ಶುದ್ಧ ಬರಹ :-**

ಅ) ವಿದ್ಯಾರ್ಥಿ ಪ್ರತಿದಿನ ತನ್ನ ಅನುಭವವನ್ನು ಬರಹ ರೂಪದಲ್ಲಿ (ಸರಳ ವಾಕ್ಯಗಳಲ್ಲಿ) ದಾಖಲಿಸುವುದು. ಶಿಕ್ಷಕರು ಬರಹವನ್ನು ತಿದ್ದಿ ಸರಿಪಡಿಸಿ ವಿದ್ಯಾರ್ಥಿಗಳಿಗೆ ತಿಳಿಸುವುದು ಕಡ್ಡಾಯ.

ಆ) ಪ್ರತಿವಾರ ಗ್ರಂಥಾಲಯದಲ್ಲಿ ತಾನು ತೆಗೆದುಕೊಂಡ, ವಾಚನ ಮಾಡಿದ, ಪುಸ್ತಕದ ಪ್ರಮುಖಾಂಶಗಳನ್ನು ಪಟ್ಟಿ ಮಾಡುವುದು.

ಇ) ಶಿಕ್ಷಕರು ಪ್ರತಿದಿನ ಐದು ಪದ ಉಕ್ತಲೇಖನ ನೀಡುವುದು. ಇದನ್ನು ಶಿಕ್ಷಕರು ನಂತರ ಕಪ್ಪುಹಲಗೆ ಮೇಲೆ ಬರೆದು ವಿದ್ಯಾರ್ಥಿಗಳಿಗೆ ತಿದ್ದುವಿಕೆಗೆ ಅವಕಾಶ ಕಲ್ಪಿಸಿ ಪರಿಶೀಲಿಸುವುದು.

ಈ) ಪ್ರತಿದಿನ ವಿದ್ಯಾರ್ಥಿಗಳು ಈಗಾಗಲೇ ಪೂರ್ಣಗೊಂಡಿರುವ ಪಾಠದ ಎರಡು ವಾಕ್ಯಗಳನ್ನು ತಪ್ಪಿಲ್ಲದಂತೆ ಶುದ್ಧವಾಗಿ, ಸ್ಫುಟವಾಗಿ ಬರೆಯುವಂತೆ ಸೂಚಿಸಿ ಪರಿಶೀಲಿಸುವುದು.

**3. ಸರಳ ಲೆಕ್ಕಾಚಾರ :-**

ಅ) ಮೌಖಿಕವಾಗಿ ಸರಳವಾಗಿ ಕೂಡುವುದು, ಕಳೆಯುವುದನ್ನು ತರಗತಿ ವಿದ್ಯಾರ್ಥಿಗಳನ್ನು ಬಳಸಿ ಪ್ರತಿ ವಿದ್ಯಾರ್ಥಿಯಿಂದ ಮಾಡಿಸುವುದು.

ಆ) ಪ್ರತಿದಿನ ವಿನೋದ ಗಣಿತದ ಮೂಲಕ ಕಲಿಕೆಯನ್ನು ಸರಳೀಕರಿಸುವುದು.

ಇ) ಪ್ರತಿದಿನ ಕನಿಷ್ಠ ಒಂದು ಮಗ್ಗಿಯನ್ನು ವಿದ್ಯಾರ್ಥಿಗಳು ಗುಂಪಾಗಿ ಹೇಳುವುದು. ಇದನ್ನು ಉಲ್ಟಾ ಕೂಡ ಕಲಿಸುವುದು. ಇದಕ್ಕೂ ಮುಂಚಿತವಾಗಿ 2x2=4 2x3=6 --- - - -ಹೇಗೆ ಬಂತೆಂಬುದನ್ನು ತಿಳಿಸುವುದು.

ಈ) ಸ್ಥಳೀಯವಾಗಿ ತರಗತಿ ಕೋಣೆಯ ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಭಾಗಾಕಾರವನ್ನು ಕಲಿಸಿ ಅಭ್ಯಾಸ ಮಾಡಿಸುವುದು.

ಇದೇರೀತಿ ಎಲ್ಲಾ ಮೂಲ ಕ್ರಿಯೆಗಳನ್ನು ವಿವಿಧ ಚಟುವಟಿಕೆಗಳ ಮೂಲಕ ಗಣಿತ ವಿಷಯವನ್ನು ಆಸಕ್ತಿದಾಯಕವಾಗಿ, ಸುಲಭವಾಗಿ ಕಲಿಸಬಹುದಾಗಿದೆ.

## ಚಟುವಟಿಕೆ (5) – ವಿಷಯ ವೇದಿಕೆ

### ವಿಷಯವಾರು ಶಿಕ್ಷಕರ ಗುಂಪು ಚಟುವಟಿಕೆ:-

- **ವಿಷಯ ವೇದಿಕೆ:-** ಕ್ಲಸ್ಟರ್ ಹಂತದಲ್ಲಿ ಆಯಾ ವಿಷಯವಾರು ಶಿಕ್ಷಕರು ತಿಂಗಳಿಗೊಮ್ಮೆ ಸೇರಿಕೊಂಡು ತಿಂಗಳಲ್ಲಿ ಬೋಧಿಸಿರುವ ವಿಷಯದಲ್ಲಿ ಬಂದ ಕ್ಲಿಷ್ಟ ಪರಿಕಲ್ಪನೆಗಳ ಬಗ್ಗೆ ಚರ್ಚಿಸಿ ಒಬ್ಬರಿಗೊಬ್ಬರು ಅನುಭವ ಹಂಚಿಕೆ ಮಾಡಿಕೊಂಡು ತೀರ್ಮಾನಕ್ಕೆ ಬರುವುದು. ಪ್ರತಿ ತಿಂಗಳು ತಮ್ಮ ಕ್ಲಸ್ಟರಿನ ಬೇರೆ ಬೇರೆ ಶಾಲೆಗಳಲ್ಲಿ ಸೇರಿದರೆ ಸೂಕ್ತ.
- **ಭಾಷಾಶಾಸ್ತ್ರ ಶಿಕ್ಷಕರು:-** ಪದಗಳ ಸಂಗ್ರಹ, ಎನ್.ಸಿ.ಎಫ್-2005 ಆಧಾರದ ಮೇಲೆ ವರ್ಗವಾರು ವಾಕ್ಯರಚನೆ, ಸ್ಪಷ್ಟಓದು, ಶುದ್ಧಬರಹ, ಪದ್ಯಶೋಧನೆ, ವ್ಯಾಕರಣ, ದೃಢೀಕರಣ, ರೇಡಿಯೋ ಪಾಠ, ಸಂಭಾಷಣೆ, ಇತ್ಯಾದಿ ಕುರಿತು ಚರ್ಚೆ.

- **ಗಣಿತ ಶಾಸ್ತ್ರ ಶಿಕ್ಷಕರು:–** ಮೂಲಕ್ರಿಯೆ, ವ್ಯವಹಾರ ಜ್ಞಾನ, ಗಣಿತಶಾಸ್ತ್ರ ವಿಷಯ ಬೋಧನೆಯ ಉದ್ದೇಶ, ಗುರಿ ತಿಳಿದಿರಲಿ. ಕ್ಷಿಷ್ಟಾಂಶಗಳ ಚರ್ಚೆ, ಗಣಿತ ಕಿಟ್ ಬಳಕೆ, ಪ್ರತಿ ಶಾಲೆಯೂ ಗಣಿತ ಕಿಟ್ ಹೊಂದಿರಬೇಕು.
- **ವಿಜ್ಞಾನ ಶಾಸ್ತ್ರ:–** ಸರಳ ಪ್ರಯೋಗಗಳು , ಮಕ್ಕಳಲ್ಲಿ ವೈಜ್ಞಾನಿಕ ಬೆಳವಣಿಗೆ ಮೂಢನಂಬಿಕೆಗಳ ಹೋಗಲಾಡಿಸುವಿಕೆ, ತನ್ಮೂಲಕ ಸಮಾಜದಲ್ಲಿ ಅಥವಾ ತನ್ನ ಜೀವನದಲ್ಲಿ ವಿದ್ಯಾರ್ಥಿ ವಿಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ಚಿಂತನೆ, ವಾಸ್ತವಕ್ಕೆ ಒತ್ತು ನೀಡಿ ಸತ್ಯ ಶೋಧನೆಯಲ್ಲಿ ಮಗ್ನನಾಗುವ ಬಗ್ಗೆ ಒತ್ತು ನೀಡುವುದು.
- **ಸಮಾಜ ವಿಜ್ಞಾನ:–** ಗತಕಾಲದ ವೈಭವದೊಂದಿಗೆ ಪ್ರಸ್ತುತ ವ್ಯವಸ್ಥೆ ತಿಳಿಸುವಂತಿರಲಿ. ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ರಾಜನೀತಿ (ಪೌರನೀತಿ), ಇತಿಹಾಸ, ಎನ್.ಸಿ.ಎಫ್ ಆಶಯದಂತೆ ಸಾಮಾಜಿಕ ಕಳಕಳಿಹೊಂದುವ ನಾಗರೀಕನಾಗುವತ್ತ ಸಾಗಲಿ.

  ಕ್ಲಸ್ಟರ್ ನಲ್ಲಿ ತಿಂಗಳಿಗೊಮ್ಮೆ ಸೇರಬೇಕು, ಪ್ರತ್ಯೇಕವಾಗಿ ವಿಷಯವಾರು ಗುಂಪುಗಳಿಂದ ಹೊಸ ಆಲೋಚನೆಗಳು, ಹೊರಬರುವಂತಾಗಬೇಕು. ತರಗತಿ ಕ್ರಿಯೆಗೆ ಪೂರಕವಾಗಿರಬೇಕು.

**ಚಟುವಟಿಕೆ (6) – ವಾರದ ವಿಜ್ಞಾನ ಪ್ರಯೋಗ**

1. 5 ರಿಂದ 10ನೇ ತರಗತಿಗಳ NCF–2005 ಹಾಗೂ KCF–2007 ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ ಸರಳ ಪ್ರಯೋಗಗಳ ಪಟ್ಟಿಯನ್ನು ತಯಾರಿಸುವುದು.
2. ಪ್ರತಿ ಬುಧವಾರ ಮಧ್ಯಾಹ್ನದ ಕೊನೆಯ ಅವಧಿಯಲ್ಲಿ ಪ್ರಯೋಗವನ್ನು ಮಕ್ಕಳಿಗೆ ಹಮ್ಮಿಕೊಳ್ಳುವುದು.
3. ಶಾಲೆಯಲ್ಲಿನ ತರಗತಿಯ ಎಲ್ಲ ವಿದ್ಯಾರ್ಥಿಗಳು ಪ್ರಯೋಗವನ್ನು ವಿಕ್ಷೀಸಲು ಅನುವು ಮಾಡಿಕೊಡುವುದು.
4. ಪ್ರತಿ ಬಾರಿಯು ಮಾಡಿದ ಪ್ರಯೋಗದ ಬಗ್ಗೆ ದಾಖಲೆಯನ್ನು ಇಡುವುದು.
5. ಹಿರಿಯ ವರ್ಗದ/ತರಗತಿಗಳ ವಿದ್ಯಾರ್ಥಿಗಳನ್ನು ಪ್ರಯೋಗದ ಸಮಯದಲ್ಲಿ ಸಹಾಯಕ್ಕೆ ಬಳಸಿಕೊಂಡು ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಆದ್ಯತೆ ನೀಡುವುದು.

## ಚಟುವಟಿಕೆ (7) ವಿಶೇಷ ಅವಧಿ ಹಾಗೂ ಸತತ ಪರಿಶ್ರಮ

1. RTE–2009 ರ ಅನುಬಂಧದಲ್ಲಿ ಶಿಕ್ಷಕರ ಕೆಲಸದ ಅವಧಿಗಳನ್ನು ವಾರಕ್ಕೆ 45 ಗಂಟೆಗಳಾಗಿ ನಿಗಧಿ ಪಡಿಸಿದೆ. ಪ್ರಸ್ತುತ ನಾವು 45 ಅವಧಿಗಳ ಕಾಲ ಕಾರ್ಯನಿರ್ವಹಿಸುತ್ತಿದ್ದೇವೆ.
2. ಶಾಲಾ ಅವಧಿಯ ಹೊರತಾದ ಸಮಯದಲ್ಲಿಯೂ ಶಿಕ್ಷಕರು ಶಾಲಾ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾರೆ ಎನ್ನುವುದನ್ನು ಗಮನಿಸಿದೆ. ಶಾಲಾ ಅವಧಿಗೆ ಮುನ್ನ ಹಾಗೂ ಶಾಲಾ ಅವಧಿಯ ನಂತರ ಕೆಲವು ಅವಧಿ ಶಾಲೆಯಲ್ಲಿದ್ದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಸಂವಹನ, ಚರ್ಚೆಗೆ ಅವಕಾಶ ಮಾಡಿಕೊಡುವುದು.
3. ವಿದ್ಯಾರ್ಥಿಗಳಿಗೆ ಭಾರವಿರದ ರೀತಿಯಲ್ಲಿ ಕೊಟ್ಟ ಮನೆಗೆಲಸಗಳನ್ನು ನಿವಾಂತವಾಗಿ ಪರಿಶೀಲಿಸುವುದು ಹಾಗೂ ಅವಶ್ಯಕ ಸೂಚನೆಗಳನ್ನು ನೀಡುವುದು.
4. ವಿದ್ಯಾರ್ಥಿಗಳು ಪರಿಶ್ರಮಪಟ್ಟು ಮಾಡಿದ ಯೋಜನಾ ಕಾರ್ಯಗಳನ್ನು ಮಕ್ಕಳ ವ್ಯಕ್ತಿತ್ವ ವಿಕಾಸದ ಹಿನ್ನೆಲೆಯಲ್ಲಿ ಅವರ ಬರಹ, ಚಿಂತನ, ಶೋಧನೆ, ಅಭಿವ್ಯಕ್ತಿ ರೀತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರಿಯಾದ ಸೂಚನೆ/Remarks ಗಳನ್ನು ನೀಡುವುದು.
5. ಪಠ್ಯಾಧಾರಿತ ವಿಷಯವಾಗಿ "ಗ್ರಾಮ/ನಗರ ದರ್ಶನವೆಂದು" ಸ್ಥಳೀಯವಾಗಿರುವ ಗ್ರಾಮ ಪಂಚಾಯಿತಿ, ಬ್ಯಾಂಕ್, ವ್ಯವಸಾಯ, ಸೇವಾಸಂಸ್ಥೆ, ಯುವಮಂಡಳಿ, ಅಂಚೆಕಛೇರಿ, ಲೈಬ್ರರಿ, ಮ್ಯುಸಿಯಂ, ಆಸ್ಪತ್ರೆ, ಇತ್ಯಾದಿ ನಾಗರೀಕ ಸೇವಾ ಸಂಬಂಧದ ಸಂಸ್ಥೆಗಳಿಗೆ ಭೇಟಿ ನೀಡಿ ಸ್ವಾನುಭವ ಪಡೆಯಲು ಅವಕಾಶ ನೀಡುವುದು.

**ಚಟುವಟಿಕೆ (8) – ಸಹೋದ್ಯೋಗಿಗಳ ಅವಲೋಕನ ಪಾಠ**

ಶಾಲೆಗಳಲ್ಲಿ ಶಿಕ್ಷಕರ ನಡುವೆ ವೃತ್ತಿಪರ ಚರ್ಚೆಗಳು ನಡೆಯುವುದು ಶಿಕ್ಷಕರ ಗುಣಾತ್ಮಕತೆಯ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಶಿಕ್ಷಕರು ತಮ್ಮ ವೃತ್ತಿಪರತೆ ಹೆಚ್ಚಿಸಿಕೊಳ್ಳಲು ಚಿಂತನ ಶೀಲ ಆಚರಣೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ತಮ್ಮ ತರಗತಿಗಳನ್ನು ಇತರೆ ಶಿಕ್ಷಕರು ಅವಲೋಕಿಸಲು ಅವಕಾಶ ಮಾಡಿಕೊಟ್ಟು ಅವರ ಹಿಮ್ಮಾಹಿತಿ ಪಡೆದುಕೊಳ್ಳುವುದು ಹಾಗೂ ತಾವು ತಮ್ಮ ಸಹೋದ್ಯೋಗಿಗಳ ತರಗತಿಗಳನ್ನು ಅವಲೋಕಿಸಿ

ಅವರಿಗೆ ಹಿಮ್ಮಾಹಿತಿ ನೀಡುವುದು ಒಂದು ಚಿಂತನಶೀಲ ಆಚರಣೆ ಈ ಚಟುವಟಿಕೆಗಳು ನೀಡುವ ಒಳನೋಟಗಳನ್ನು ಶಿಕ್ಷಕರು ತಮ್ಮ ವೃತ್ತಿಪರ ಆಚರಣೆಗಳ ಉತ್ತಮೀಕರಣಕ್ಕಾಗಿ ಬಳಸಿಕೊಳ್ಳಬಹುದಾಗಿದೆ.

**ಈ ಕುರಿತು ಕೆಳಗಿನ ಸೂಚನೆಗಳನ್ನು ನೀಡಿದೆ.**

1. ಪ್ರತಿಯೊಬ್ಬ ಶಿಕ್ಷಕರೂ ವಾರದಲ್ಲಿ ಒಂದು ದಿನ ತಮ್ಮ ಸಹೋದ್ಯೋಗಿಗಳ ಒಂದು ಪಾಠ ಅವಲೋಕನ ಮಾಡುವುದು.
2. ಪಾಠದ ಎಲ್ಲ ಅಂಶಗಳನ್ನು ಗಮನಿಸಿ ಟಿಪ್ಪಣಿ ಮಾಡಿಕೊಳ್ಳುವುದು. ಈ ಪಾಠದ ಕುರಿತಂತೆ ಬೋಧನಾ ಅವಧಿಗಳು ಮುಗಿದ ನಂತರ ಎಲ್ಲ ಶಿಕ್ಷಕರೂ ಸಭೆ ಸೇರಿ ಅವಲೋಕಿಸಿದ ಪಾಠದ ಕುರಿತಂತೆ ಚರ್ಚಿಸುವುದು.
3. ಶಾಲೆಯ ಮುಖ್ಯ ಶಿಕ್ಷಕರು ಕೂಡಾ ತಮ್ಮ ಸಹೋದ್ಯೋಗಿಗಳೊಂದಿಗೆ ಪಾಠವೀಕ್ಷಣೆ ಮಾಡುವುದು.
4. ಪಾಠ ವೀಕ್ಷಣೆ ಹಾಗೂ ಚರ್ಚೆಯಾದ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡು ದಾಖಲಿಸಿಕೊಳ್ಳುವುದು. ಇದಕ್ಕಾಗಿ ಒಂದು ಪ್ರತ್ಯೇಕ ಕಡತ ನಿರ್ವಹಿಸುವುದು.
5. ಪಾಠ ವೀಕ್ಷಣೆಯಲ್ಲಿ TLM ಬಳಕೆ, ಕಲಿಕೆಯ ಅನುಭವಗಳನ್ನು ಸಂಘಟಿಸಿದ ರೀತಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನದ ಅಂಶಗಳನ್ನು ಅಳವಡಿಸಿಕೊಂಡ ಬಗ್ಗೆ ಮಕ್ಕಳು ತೊಡಗಿಸಿಕೊಳ್ಳುವಿಕೆಗಳನ್ನು ವಿಶೇಷವಾಗಿ ಗಮನಿಸುವುದು.

**ಚಟುವಟಿಕೆ (9) – ಪುಸ್ತಕದ ಪರಿಚಯ**

1. ಪ್ರತಿದಿನ ಬೆಳಿಗ್ಗೆ ಪ್ರಾರ್ಥನಾ ಅವಧಿಯಲ್ಲಿ ಒಂದು ಪುಸ್ತಕವನ್ನು ಪರಿಚಯಿಸುವುದು.
2. ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಶಿಕ್ಷಕರು ಪುಸ್ತಕವನ್ನು ಪರಿಚಯಿಸುವುದು (5 ರಿಂದ 7 ನಿಮಿಷಗಳಕಾಲ).
3. ಆಗಸ್ಟ್ ತಿಂಗಳಿನಿಂದ ಹಿರಿಯ ವರ್ಗದ ವಿದ್ಯಾರ್ಥಿಗಳಿಂದ ಪರಿಚಯಿಸುತ್ತ ಕೆಳಗಿನ ವರ್ಗದವರೆಗೂ ವಿಸ್ತರಿಸುತ್ತಾ ಹೋಗುವುದು.
4. ವಿದ್ಯಾರ್ಥಿಗಳಿಗೆ ಪುಸ್ತಕವನ್ನು ಪರಿಚಯಿಸುವಾಗ ಪುಸ್ತಕದ ಶೀರ್ಷಿಕೆ/ತಲೆಬರಹ, ಲೇಖಕರ ಹೆಸರು, ಪುಸ್ತಕದಲ್ಲಿನ ಪ್ರಮುಖಾಂಶಗಳು ಹಾಗೂ ಪುಸ್ತಕದ ಮುಖ್ಯ ವಿಷಯ ವಸ್ತುವಿನ ಬಗ್ಗೆ ಅದ್ಯತೆ ನೀಡಿ ವಿದ್ಯಾರ್ಥಿಗಳ ಆಸಕ್ತಿಯನ್ನು ಸೆಳೆದು ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದು.
5. ಮಕ್ಕಳನ್ನು ಈ ದಿಸೆಯಲ್ಲಿ ಪೂರ್ವಭಾವಿಯಾಗಿ ಶಿಕ್ಷಕರು ಸಜ್ಜುಗೊಳಿಸುವುದು.
6. ವಿದ್ಯಾರ್ಥಿಗಳಿಂದ ಪರಿಚಯವಾದ ಪುಸ್ತಕದ ಕುರಿತು ಒಂದು ಬರಹ ಸಿದ್ಧಪಡಿಸಿ ಸೂಚನಾ ಫಲಕದಲ್ಲಿ ಎಲ್ಲರಿಗೂ ಕಾಣುವಂತೆ ಬರೆದು ಹಾಕುವುದು.
7. ಈ ಬಗ್ಗೆ ಆಲ್ಬಂ ತಯಾರಿಸಿ ಗ್ರಂಥಾಲಯದಲ್ಲಿರಿಸಿ ದಾಖಲಿಸುವುದು.
8. ವಿದ್ಯಾರ್ಥಿಗಳ ಮನಃಸ್ಥಿತಿಗೆ ಅನುಗುಣವಾಗಿ, ಗ್ರಂಥಾಲಯದಲ್ಲಿ ಲಭ್ಯವಿರುವ ಪುಸ್ತಕಗಳಲ್ಲಿ ಯಾವ ಪುಸ್ತಕವು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಹೆಚ್ಚಿನ ಸಕಾರಾತ್ಮಕ ಹಾಗೂ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಅಂಶಗಳನ್ನೊಳಗೊಂಡ ಪುಸ್ತಕಕ್ಕೆ ಮೊದಲನೆಯ ಆದ್ಯತೆ ನೀಡುವುದು.
9. ಪ್ರಾರ್ಥನಾ ಸಮಯದಲ್ಲಿ ವಿದ್ಯಾರ್ಥಿಯು ಪುಸ್ತಕದ ಬಗ್ಗೆ ಮಂಡಿಸುವಾಗ ಯಾವ ರೀತಿ ಮಂಡಿಸಬೇಕು, ಉಚ್ಚಾರಣೆ ಹಾಗೂ ಇನ್ನಿತರೆ ಅಂಶಗಳ ಅಗತ್ಯ ಮಾರ್ಗದರ್ಶನ ನೀಡತಕ್ಕದ್ದು.

**ಚಟುವಟಿಕೆ (10) – ರಸ ಪ್ರಶ್ನೆ ಕಾರ್ಯಕ್ರಮ**

1. ಪ್ರತಿ ಶನಿವಾರ ಕೊನೆಯ ಅವಧಿಯಲ್ಲಿ ಪ್ರಚಲಿತ ವಿದ್ಯಮಾನಗಳು/ಪಠ್ಯಾಧಾರಿತ ವಿಷಯಗಳಿಗೆ (ಒಂದು ವಿಷಯಕ್ಕೆ) ಸಂಬಂಧಿಸಿದಂತೆ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸುವುದು.
2. ರಚಿಸಿದ ಪ್ರಶ್ನಾವಳಿಗಳನ್ನು ಪ್ರತೀ ವಾರವೂ ಕ್ರೋಢೀಕರಣಗೊಳಿಸಿ ದಾಖಲಿಸುವುದು.
3. ಪ್ರತಿಯೊಬ್ಬ ವಿದ್ಯಾರ್ಥಿಯು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿರುತ್ತದೆ.
4. ಕಾರ್ಯಕ್ರಮ ಏರ್ಪಡಿಸುವ ಮೊದಲು ವಿದ್ಯಾರ್ಥಿಗಳಿಗೆ ಯಾವ ವಿಷಯಕ್ಕೆ ಅನುಗುಣವಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಗುತ್ತದೆ ಎಂಬುದರ ಬಗ್ಗೆ ಪೂರ್ವಭಾವಿಯಾಗಿ ವಿದ್ಯಾರ್ಥಿಗಳಿಗೆ ತಿಳಿಸತಕ್ಕದ್ದು.

ಮೇಲಿನ ಎಲ್ಲಾ ಚಟುವಟಿಕೆಗಳನ್ನು ಶಾಲೆಗಳಲ್ಲಿ ಹಮ್ಮಿಕೊಂಡು ಇದರ ಬಗ್ಗೆ ಉಸ್ತುವಾರಿ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲಿಸುವಾಗ ಮಾಹಿತಿಯನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ.

## ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಕರ್ತವ್ಯ / ಹಾಗೂ ಅಧಿಕಾರಗಳು

### ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಎಂದರೇನು?

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಮ್‌ಸಿ) ಎಂದರೆ ಪ್ರತಿ ಶಾಲೆಯಲ್ಲಿ ಶಾಲೆಯ ಸರ್ವಾಂಗೀಣ ಅಭಿವೃದ್ಧಿ ಮತ್ತು ಗುಣಾತ್ಮಕ ಶಿಕ್ಷಣವನ್ನು ಖಾತರಿಗೊಳಿಸಲು ರಚನೆಯಾಗಿರುವ ಶಾಲಾ ಮಟ್ಟದ ಸಮಿತಿ, ಕರ್ನಾಟಕ ರಾಜ್ಯ ಸರ್ಕಾರವು 2000 ದಲ್ಲಿ ಶಿಕ್ಷಣ ಹಕ್ಕು ಕಾರ್ಯಪಡೆ ಶಿಫಾರಸ್ಸಿನ ಆಧಾರದ ಮೇಲೆ ಎಸ್‌ಡಿಎಮ್‌ಸಿ ರಚಿಸುವ ತೀರ್ಮಾನ ಕೈಗೊಂಡಿತು. ಈ ಸಮಿತಿಯ ಮೊದಲಿಗೆ ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲಿ ದಿನಾಂಕ:- 28.04.2001ರ ಸರ್ಕಾರದ ಮೂಲ ಕಾರ್ಯಕಾರಿ ಆದೇಶದ ಅನ್ವಯ ರಚನೆಯಾಗಿ ಕೆಲಸ ನಿರ್ವಹಿಸುತ್ತಿದೆ.

**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಉದ್ದೇಶಗಳೇನು?**

- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ನೀತಿಯ ಅನ್ವಯ ಶಿಕ್ಷಣದ ಸಾರ್ವತ್ರೀಕರಣ.
- ಶಾಲಾ ದಾಖಲಾತಿ, ಹಾಜರಾತಿ ಮತ್ತು ಪೂರ್ಣಗೊಳಿಸುವಿಕೆಯನ್ನು ಉತ್ತಮ ಪಡಿಸುವುದು.
- ತರಗತಿಯ ಒಳಗೆ ಕಲಿಕಾ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ಶಿಕ್ಷಕರಿಗೆ ನೆರವಾಗುವುದು.
- ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲ ಕ್ರೋಢೀಕರಿಸುವುದು.
- ಶಿಕ್ಷಕರನ್ನು ಪ್ರೇರೇಪಿಸಿ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಗೊಳಿಸುವುದು.
- ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡುವುದು.

**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ಯಾರ್‍ಯಾರು ಇರುತ್ತಾರೆ?**

- ಚುನಾಯಿತ ಸದಸ್ಯರಾಗಿ ತಂದೆ – ತಾಯಂದಿರು ಪರಿಷತ್ತಿನಿಂದ ಆಯ್ಕೆಯಾದ 9 ಜನ ಪಾಲಕ ಪ್ರತಿನಿಧಿಗಳು. ಈ ಒಂಭತ್ತು ಜನರಲ್ಲಿ ಕನಿಷ್ಟ ಮೂವರು ಮಹಿಳೆಯರು, ಕನಿಷ್ಟ ಇಬ್ಬರು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರು. ಒಬ್ಬರು ಅಲ್ಪ ಸಂಖ್ಯಾತ ವರ್ಗದವರು, ಯಾವುದೇ ಪೋಷಕರು ಏಕ ಕಾಲಕ್ಕೆ ಒಂದಕ್ಕಿಂತ ಹೆಚ್ಚು ಎಸ್‌ಡಿಎಮ್‌ಸಿಗಳಲ್ಲಿ ಸದಸ್ಯರಾಗಿರಕೂಡದು.
- ಪದನಿಮಿತ್ತ ಸದಸ್ಯರಾಗಿ ಶಾಲೆಯಿರುವ ಕ್ಷೇತ್ರವನ್ನು ಪ್ರತಿನಿಧಿಸುವ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರು, ಅಂಗನವಾಡಿ ಕಾರ್ಯಕರ್ತೆ, ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು ಮತ್ತು ಕಾಲೇಜು ಮುಖ್ಯಗುರುಗಳು.

| |
|---|
| ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಎಂದರೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ–ತಾಯಿಯ ಪರಿಷತ್ತಿನಿಂದ ಚುನಾಯಿತರಾದ ಪಾಲಕರ ಪ್ರತಿನಿಧಿಗಳು, ವಿದ್ಯಾರ್ಥಿ ಪ್ರತಿನಿಧಿಗಳು, ವಿವಿಧ ಇಲಾಖೆಯ ಪ್ರತಿನಿಧಿಗಳು, ಸಂಘ–ಸಂಸ್ಥೆ ಮತ್ತು ಶಿಕ್ಷಣ ತಜ್ಞರನ್ನು ಒಳಗೊಂಡಿರುವ ಶಾಲಾ ಮಟ್ಟದ ಸಮಿತಿ. |

- ನಾಮನಿರ್ದೇಶಿತ ಸದಸ್ಯರಾಗಿ ಶಾಲೆಯನ್ನು ದತ್ತು ತೆಗೆದುಕೊಂಡ ಮಹನೀಯರು, ಶಾಲೆ ಕಟ್ಟಲು ಭೂಮಿ ದಾನ ಮಾಡಿದ ದಾನಿಗಳು, ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟ, ಶೈಕ್ಷಣಿಕ ಉಪಕರಣಗಳನ್ನು ಕೊಡಿಸಿದ ಮಹನೀಯರು ಅಥವಾ ರೂ. 10,000/- ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ದಾನ ಮಾಡಿದ ದಾನಿಗಳು, ಶಾಲಾ ವ್ಯಾಪ್ತಿಯಲ್ಲಿ ವಾಸಿಸುವ ಒಬ್ಬ ಶಿಕ್ಷಣ ತಜ್ಞರು ಅಥವಾ ನಿವೃತ್ತ ಶಿಕ್ಷರು, ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಇಬ್ಬರು ಸದಸ್ಯರು, ಯುವಕ ಸಂಘ ಅಥವಾ ಯುವತಿ ಸಂಘದ ಒಬ್ಬ ಪದಾಧಿಕಾರಿಗಳು, ಹತ್ತನೇ ವರ್ಗದ ಒಬ್ಬ ವಿದ್ಯಾರ್ಥಿನಿ.

## ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕರ್ತವ್ಯಗಳೇನು?

- ಪ್ರಾಥಮಿಕ ಶಿಕ್ಷಣವನ್ನ ಮುಗಿಸಿದ ಎಲ್ಲಾ ಮಕ್ಕಳು ಪ್ರೌಢ ಶಿಕ್ಷಣಕ್ಕೆ ದಾಖಲಾಗುವಂತೆ ಕ್ರಮ ವಹಿಸುವುದು.
- ಈ ರೀತಿ ದಾಖಲಾದ ಎಲ್ಲಾ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುವಂತೆ ಮಾಡುವುದು.
- ಮಕ್ಕಳು ಪ್ರಾಥಮಿಕ ಶಿಕ್ಷಣದ 8ನೇ ತರಗತಿಯನ್ನು ಪೂರ್ಣಗೊಳಿಸಿ ಪ್ರೌಢಶಿಕ್ಷಣದ 9ನೇ ತರಗತಿಗೆ ದಾಖಲಾಗುವ ಸಂದರ್ಭದಲ್ಲಿ (ಅವಶ್ಯಕವಿದ್ದಲ್ಲಿ) ಬುನಾದಿ ಸಾಮರ್ಥ್ಯಗಳನ್ನು ಗಳಿಸಲು ಸೇತುಬಂಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ಎಲ್ಲಾ ರೀತಿಯ ಸಹಕಾರ ನೀಡುವುದು.
- ಶಾಲೆಯಲ್ಲಿ ಓದುವ ಎಲ್ಲಾ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.
- ಶಾಲೆಯ ಆವರಣವನ್ನು ಹಾಗೂ ಕಟ್ಟಡವನ್ನು ಅತಿಕ್ರಮಣ ಹಾಗೂ ವಿನಾಶಗಳಿಂದ ಕಾಪಾಡುವುದು.
- ಶೈಕ್ಷಣಿಕ ವರ್ಷದಲ್ಲಿ 237 ಕಲಿಕಾ ದಿನಗಳು ಮತ್ತು ಪ್ರತಿದಿನ ಐದೂವರೆ ಗಂಟೆಗಳು ಶಾಲೆ ನಡೆಯುವುದನ್ನು ಖಾತರಿ ಪಡಿಸಿ ಕೊಳ್ಳುವುದು.
- ಶಾಲೆಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೆ ಸರ್ಕಾರದಿಂದ ನಿಯಮಾನುಸಾರ ಸಿಗಬೇಕಾದ ಉತ್ತೇಜನಗಳನ್ನು ಸಕಾಲಕ್ಕೆ ಒದಗಿಸಲು ಅಗತ್ಯ ಕ್ರಮವನ್ನು ವಹಿಸುವುದು. (ಉದಾ : ಬೈಸಿಕಲ್/ಬಿಸಿಯೂಟ/ಸಮವಸ್ತ್ರ/ಪಠ್ಯಪುಸ್ತಕ/ ನೋಟ್‌ಬುಕ್/ವಿದ್ಯಾರ್ಥಿವೇತನ ಇತ್ಯಾದಿ........)
- ಶಾಲಾಭಿವೃದ್ಧಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.
- ವರ್ಷದಲ್ಲಿ ಮೂರು ಸಲ ಅಂದರೆ ಜುಲೈ, ನವೆಂಬರ್ ಹಾಗೂ ಫೆಬ್ರವರಿ ಈ ತಿಂಗಳುಗಳಲ್ಲಿ ಪೋಷಕರ ಸಭೆಗಳನ್ನು ಆಯೋಜಿಸುವುದು.
- ಶಾಲೆಗೆ ಮಂಜೂರಾದ ಅನ್ನದಾನಗಳನ್ನು ನಿಯಮಾನುಸಾರ ಬಳಸಲು ಕಾಲಕಾಲಕ್ಕೆ ಅನುಮೋದನೆ ನೀಡಿ ಸಮರ್ಪಕವಾಗಿ ಬಳಕೆಯಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳುವುದು.
- ಶಾಲಾ ಶಿಕ್ಷಣನಿಧಿ ಸ್ಥಾಪಿಸುವುದು. ಶಾಲಾ ಅಭಿವೃದ್ಧಿಗಾಗಿ ಎಸ್.ಡಿ.ಎಮ್.ಸಿ.ಯು ಸಾರ್ವಜನಿಕರಿಂದ ವಂತಿಗೆಗಳನ್ನು ಸ್ವೀಕರಿಸಬಹುದು.
- ಶಾಲೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿ ಕಾರ್ಯಗಳ ಮೇಲುಸ್ತುವಾರಿಯನ್ನು ನಿರ್ವಹಿಸುವುದು.

# ಶಾಲಾ ಸಂದರ್ಶನ ನಮೂನೆ

ದಿನಾಂಕ:

| | |
|---|---|
| 1. ಶಾಲೆಯ ಹೆಸರು ಮತ್ತು ವಿಳಾಸ & ಡೈಸ್ ಸಂಖ್ಯೆ | ಕ್ಲಸ್ಟರ್:<br>ಬೋಧನಾ ಮಾಧ್ಯಮ : |
| 2. ಮುಖ್ಯೋಪಾಧ್ಯಾಯರ ಹೆಸರು & ದೂರವಾಣಿ ಸಂಖ್ಯೆ | |
| 3. ಸಂದರ್ಶಕರ ಹೆಸರು, ಹುದ್ದೆ & ವಿಳಾಸ | |
| 4. ಶಿಕ್ಷಕರ ವಿವರ | ಮಂಜೂರಾದ ಹುದ್ದೆ : ಕಾರ್ಯನಿರ್ವಹಿಸುತ್ತಿರುವವರು :<br>ನಿಯೋಜನೆ – ಹೋದವರು : ಬಂದವರು : |

| 5. ಮಕ್ಕಳ ವಿವರ | ತರಗತಿ | 1 | 2 | 3 | 4 | 5 | 6 | 7 | 8 | 9 | 10 | ಒಟ್ಟು |
|---|---|---|---|---|---|---|---|---|---|---|---|---|
| | ಹಾಜರಾತಿ | | | | | | | | | | | |
| | ದಾಖಲಾತಿ | | | | | | | | | | | |
| | CWSN | | | | | | | | | | | |

| 6 | ಶಾಲೆಯ ಭೌತಿಕ ಅಂಶಗಳು: | ಇದೆ/ಇಲ್ಲ | 7. | ಶಾಲೆಯ ಸಾಮಾನ್ಯ ಅಂಶಗಳು: | ಇದೆ/ ಇಲ್ಲ |
|---|---|---|---|---|---|
| 6.1 | ಅವಶ್ಯಕತೆಗೆ ತಕ್ಕಷ್ಟು ಕೊಠಡಿಗಳು | | 7.1 | ಶಾಲಾಭಿವೃದ್ಧಿ ಯೋಜನೆ | |
| 6.2 | ಶುದ್ಧ ಕುಡಿಯುವ ನೀರಿನ ಸೌಲಭ್ಯ | | 7.2 | ನಿಯಮಾನುಸಾರ ರಚನೆಯಾಗಿರುವ ಎಸ್.ಡಿ.ಎಂ.ಸಿ. | |
| 6.3 | ಅಗತ್ಯಕ್ಕೆ ಅನುಗುಣವಾಗಿ ಶೌಚಾಲಯ ಸೌಲಭ್ಯ | | 7.3 | ಶಾಲಾ ಕೈತೋಟ | |
| 6.4 | ಗಂಡು & ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ | | 7.4 | ಶಾಲೆಯ ವಿವಿಧ ಸಂಘಗಳು | |
| 6.5 | ಆಟದ ಮೈದಾನ | | 7.5 | ವ್ಯವಸ್ಥಿತವಾದ ಶಾಲಾ ಆಸ್ತಿ ದಾಖಲೆ | |
| 6.6 | ಆಹಾರ ಸಾಮಗ್ರಿಗಳ ದಾಸ್ತಾನಿಗೆ ವ್ಯವಸ್ಥೆ | | 7.6 | ತಂಬಾಕು ನಿಷೇಧಿತ ಪ್ರದೇಶ ಘೋಷಣಾ ಫಲಕ | |

| ವಿವರಣೆ | ಅತ್ಯುತ್ತಮ (ಶೇ 90–100) | ಉತ್ತಮ (ಶೇ 70–89) | ಸಮಾಧಾನಕರ (ಶೇ50–69) | ಕಡಿಮೆ (ಶೇ 30–49) | ಅತೀಕಡಿಮೆ (ಶೇ 30ಕ್ಕಿಂತ ಕಡಿಮೆ) |
|---|---|---|---|---|---|
| ಗುಣಾಂಕ | 5 | 4 | 3 | 2 | 1 |

| 8. ಶಾಲಾ ಸ್ವಚ್ಛತೆ | ಹಿಂದಿನ ಸಂದರ್ಶನದ ಗುಣಾಂಕ | ಪ್ರಸ್ತುತ ಗುಣಾಂಕ | | ಹಿಂದಿನ ಸಂದರ್ಶನದ ಗುಣಾಂಕ | ಪ್ರಸ್ತುತ ಗುಣಾಂಕ |
|---|---|---|---|---|---|
| 8.1. ಶಾಲಾ ಪರಿಸರ (ಕೊಠಡಿ, ಶಾಲಾ ಆವರಣ) | | | 8.2. ಕುಡಿಯುವ ನೀರು &.ಶೌಚಾಲಯ ನಿರ್ವಹಣೆ | | |
| **9 ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯ.** | | | | | |
| 9.1. ಆಹಾರ ಸಾಮಗ್ರಿಗಳ ದಾಸ್ತಾನು & ನಿರ್ವಹಣೆ | | | 9.3. ಕ್ಷೀರಭಾಗ್ಯ ಯೋಜನೆ ಅನುಷ್ಠಾನ & ಮಾತ್ರೆಗಳ ವಿತರಣೆ | | |
| 9.2. ಅಡುಗೆ ಕೋಣೆ ನಿರ್ವಹಣೆ, ಅಡುಗೆಯವರ ಸ್ವಚ್ಛತೆ & ಆಹಾರ ವಿತರಣೆ | | | | | |

| | | | | | |
|---|---|---|---|---|---|
| **10. ರೇಡಿಯೋ/ಎಜುಸ್ಯಾಟ್ ಕಾರ್ಯಕ್ರಮ ನಿರ್ವಹಣೆ;** | | | | | |
| **11. ಶಾಲಾ ಅಭಿವೃದ್ಧಿ ಯೋಜನೆ ತಯಾರಿಕೆ & ಅನುಷ್ಠಾನ** | | | | | |
| **12. ಎಸ್ ಡಿ ಎಂ ಸಿ.** | | | | | |
| 12.1 ಎಸ್ ಡಿ ಎಂ ಸಿ ಕಾರ್ಯನಿರ್ವಹಣೆ | | | 12.2. ಎಸ್ ಡಿ ಎಂ ಸಿ ನಿರ್ಣಯಗಳ ಅನುಷ್ಠಾನ | | |
| **13. ಮುಖ್ಯ ಶಿಕ್ಷಕರ ನಾಯಕತ್ವ** | | | | | |
| 13.1. ಸಹಶಿಕ್ಷಕರ ಶೈಕ್ಷಣಿಕ ಕಾರ್ಯಗಳ ಮೇಲ್ವಿಚಾರಣೆ | | | 13.3. ದಾಖಲೆಗಳು & ನಗದು ಪುಸ್ತಕದ ನಿರ್ವಹಣೆ | | |
| 13.2. ತರಗತಿ ಬೋಧನೆಯಲ್ಲಿ ಪಾಲ್ಗೊಳ್ಳುವಿಕೆ | | | 13.4. ಸಹ ಸಂಬಂಧ (ಸಹೋದ್ಯೋಗಿಗಳು & ಸಮುದಾಯ) | | |
| **14. ಕಲಿಕೆಯನ್ನು ಉತ್ತೇಜಿಸುವ ಕಾರ್ಯಕ್ರಮಗಳು:** | | | | | |
| 14.1 ಸಮನ್ವಯ ಶಿಕ್ಷಣದ ಅನುಷ್ಠಾನ | | | 14.4 ಶಾಲೆಯ ವಿವಿಧ ಸಂಘಗಳ ನಿರ್ವಹಣೆ & ಸಹಪಠ್ಯ ಚಟುವಟಿಕೆಗಳ ಆಯೋಜನೆ | | |
| 14.2 ಫ್ಲಾನಲ್ ಬೋರ್ಡ್, ರೀಡಿಂಗ್ ಕಾರ್ನರ್, ಗ್ರಂಥಾಲಯ, ಪ್ರಯೋಗಾಲಯಗಳ ನಿರ್ವಹಣೆ | | | 14.5 ಹತ್ತು ಅಂಶಗಳ ಕಾರ್ಯಕ್ರಮಗಳ ಅನುಷ್ಠಾನ | | |
| 14.3.ಸರ್ಕಾರಿ ಮತ್ತು ಇತರೆ ಸೌಲಭ್ಯಗಳ ಸಮರ್ಪಕ ಬಳಕೆ | | | | | |
| **15 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ.** | | | | | |
| 15.1. ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ಚಟುವಟಿಕೆಗಳ ಆಯೋಜನೆ | | | 15.2. ಪಾಠಯೋಜನೆ, ಮಗುವಿನ ಪ್ರೊಫೈಲ್, ವೈಯಕ್ತಿಕ, ಕ್ರೋಡೀಕೃತ ಅಂಕವಹಿ ನಿರ್ವಹಣೆ: | | |
| | | | ಪಡೆದ ಒಟ್ಟು ಗುಣಾಂಕಗಳು(ಗರಿಷ್ಠ 100) | | |

| **ಸಂದರ್ಶನದ ಸಂದರ್ಭದಲ್ಲಿ ಗಮನಿಸಿದ ಧನಾತ್ಮಕ ಅಂಶಗಳು** | **ಸಂದರ್ಶನದ ಸಂದರ್ಭದಲ್ಲಿ ಗಮನಿಸಿದ ಋಣಾತ್ಮಕ ಅಂಶಗಳು** | **ನೀಡಿದ ಸಲಹೆಗಳು** |
|---|---|---|
| | | |

**ಸೂಚನೆ; ಈ ನಮೂನೆಯ ಜೊತೆಗೆ ಕಡ್ಡಾಯವಾಗಿ ತರಗತಿ ವೀಕ್ಷಣಾ ನಮೂನೆ (ಸಾಮಾನ್ಯ/ನಲಿ-ಕಲಿ) ಗಳನ್ನು ಬಳಸಬೇಕು.**

**ಮುಖ್ಯಶಿಕ್ಷಕರ ಸಹಿ ಮತ್ತು**
**ಮತ್ತು ಮೊಹರು**

**ಸಂದರ್ಶಕರ ಸಹಿ**

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ: ಸಿ4(6)/ಸಾ.ಸ್ಥ.ದೂ.ನಿ–36/2008–09 ದಿನಾಂಕ:18.03.2015

**ಸುತ್ತೋಲೆ**

ವಿಷಯ:–ರಾಜ್ಯದ ಶಾಲೆಗಳಲ್ಲಿ ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯಿದೆಯ (COPTA) ಬಗ್ಗೆ ಶಿಕ್ಷಕರು/ವಿದ್ಯಾರ್ಥಿಗಳಲ್ಲಿ ಅರಿವು/ಜಾಗೃತಿ ಮೂಡಿಸುವ ಬಗ್ಗೆ

ಉಲ್ಲೇಖ:ಕ್ಯಾನ್ಸರ್ ತಜ್ಞರು(ತಲೆ ಮತ್ತು ಕುತ್ತಿಗೆ ವಿಭಾಗ), ಹಾಗೂ ಮಾನ್ಯ ಸದಸ್ಯರು, ತಂಬಾಕು ನಿಯಂತ್ರಣದ ಉನ್ನತ ಮಟ್ಟದ ಸಮಿತಿ, ಬೆಂಗಳೂರು ಇವರ ಪತ್ರ ದಿನಾಂಕ.10.02.2015

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕ್ಯಾನ್ಸರ್ ತಜ್ಞರು(ತಲೆ ಮತ್ತು ಕುತ್ತಿಗೆ ವಿಭಾಗ), ಹಾಗೂ ಮಾನ್ಯ ಸದಸ್ಯರು, ತಂಬಾಕು ನಿಯಂತ್ರಣದ ಉನ್ನತ ಮಟ್ಟದ ಸಮಿತಿ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು, ರಾಜ್ಯದ ಶಾಲೆಗಳು ಮತ್ತು ಮಕ್ಕಳು ಸಮಾಜದ ಬಹುಮುಖ್ಯ ಅಂಗವಾಗಿದ್ದು, ಶಾಲೆಗಳಲ್ಲಿ ಶಿಕ್ಷಕರು/ವಿದ್ಯಾರ್ಥಿಗಳ ಮೂಲಕ ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯಿದೆಯ (COPTA)ಬಗ್ಗೆ ಅರಿವು ಮೂಡಿಸಲು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳನ್ನು "ತಂಬಾಕು ಮುಕ್ತ ಶಾಲೆಗಳ ಜಿಲ್ಲೆ" ಎಂದು ಪರಿವರ್ತಿಸುವ ಬಗ್ಗೆ ಕೋರಿರುತ್ತಾರೆ.

ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯಿದೆಯ (COPTA) ಸೆಕ್ಷನ್ (4)ರಂತೆ ಪ್ರತಿ ಶಾಲೆಯ ಪ್ರಮುಖ ಸ್ಥಳಗಳಲ್ಲಿ "ಧೂಮಪಾನ ನಿಷೇದಿತ ಪ್ರದೇಶ" ಹಾಗೂ "ಶಾಲಾ ಆವರಣದಲ್ಲಿ ಧೂಮಪಾನ ಮಾಡುವುದು ಅಪರಾಧ" ಎಂದು ಫಲಕಗಳನ್ನು ಪ್ರದರ್ಶಿಸಿಸಲು ಕೋರಿರುತ್ತಾರೆ. (ಮಾದರಿ ಫಲಕದ ಪ್ರತಿಯನ್ನು ಲಗತ್ತಿಸಿದೆ)

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಮೇಲ್ಕಂಡಂತೆ ಫಲಕಗಳನ್ನು ಹಾಕುವುದರೊಂದಿಗೆ ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯಿದೆ (COPTA) ಬಗ್ಗೆ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಅರಿವು/ಜಾಗೃತಿ ಮೂಡಿಸುವುದು. ಹಾಗೂ ಈ ಬಗ್ಗೆ ನಿಮ್ಮ ಹಂತದಲ್ಲಿ ಸುತ್ತೋಲೆ ನೀಡುವುದು.

COPTA ಕಾಯಿದೆಯಂತೆ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ದಂಡ ವಿಧಿಸುವ ಪ್ರಾಧಿಕಾರವಾಗಿ ವಸೂಲಾದ ದಂಡವನ್ನು ಸಂಬಂಧಿಸಿದ ಖಾತೆಗೆ ಜಮ ಮಾಡುವ ಬಗ್ಗೆ ಕ್ರಮವಹಿಸುವುದು. ಈ ಬಗ್ಗೆ ಜಿಲ್ಲಾ ಉಪನಿರ್ದೇಶಕರು ತಂಬಾಕು ನಿಷೇಧ ಕೋಶದ ವತಿಯಿಂದ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡುವ ಬಗ್ಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಬ್ಯಾಂಕ್ ಖಾತೆಯ ಬಗ್ಗೆ ಮಾಹಿತಿ ಪಡೆದು ನಿಮ್ಮ ಹಂತದಲ್ಲಿಯೇ ಈ ಸಂಬಂಧ ಸುತ್ತೋಲೆ ನೀಡಲು ತಿಳಿಸಿದೆ.

ಸಹಿ/–
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಗುಲ್ಬರ್ಗಾ ಮತ್ತು ಧಾರವಾಡ ವಿಭಾಗ ಇವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2. ಕ್ಯಾನ್ಸರ್ ತಜ್ಞರು(ತಲೆ ಮತ್ತು ಕುತ್ತಿಗೆ ವಿಭಾಗ), ಹಾಗೂ ಮಾನ್ಯ ಸದಸ್ಯರು, ತಂಬಾಕು ನಿಯಂತ್ರಣದ ಉನ್ನತ ಮಟ್ಟದ ಸಮಿತಿ, ನಂ 250, 2ನೇ ಸಿ ಮುಖ್ಯರಸ್ತೆ, ಗಿರಿನಗರ, ಬನಶಂಕರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in
Phone : 080 - 26422372, 26422373, 26422374, Fax - 26422377
ಡಿಎಸ್ಇಆರ್‌ಟಿ
DSERT

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ಕ್ಯು.ಎಂ.ಸಿ/ಶಾಲಾ ಸ್ವಚ್ಛತೆ. 01/2015-16 ದಿನಾಂಕ: 18-05-2015

**ಜ್ಞಾಪನ**

ವಿಷಯ: ಕಛೇರಿ/ಶಾಲೆಗಳಲ್ಲಿನ ಅನುಪಯುಕ್ತ ವಸ್ತುಗಳ ವಿಲೇವಾರಿ ಕುರಿತು.

ಉಲ್ಲೇಖ: 1) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂ: Lok/ps-19/2013-14 ದಿನಾಂಕ 19/11/2013 ಮತ್ತು ಸರ್ಕಾರದ ಪತ್ರ ಸಂ: ಇಡಿ 170 ಮಾಹಿತಿ 2013, ದಿ:06/12/2013.

2) ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 18-09-2014 ರಂದು ನಡೆದ ಡಿ.ಡಿ.ಪಿ.ಐ/ಡಯಟ್ ಪ್ರಾಂಶುಪಾಲರ ಸಭೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವ ಮೂಲಕ ಮಕ್ಕಳ ಕಲಿಕೆಗೆ ಉತ್ತಮವಾದ ಪರಿಸರವನ್ನು ಕಲ್ಪಿಸುವ ನಿಟ್ಟಿನಲ್ಲಿ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡಲು ಸುತ್ತೋಲೆ/ಜ್ಞಾಪನಗಳ ಮೂಲಕ ಕಾಲಕಾಲಕ್ಕೆ ಅನೇಕ ಸೂಚನೆಗಳನ್ನು ನೀಡಲಾಗಿದೆ. ಅದಾಗ್ಯೂ ಭೇಟಿ ನೀಡಿದ ಸಮಯದಲ್ಲಿ ಶಾಲೆಗಳಲ್ಲಿ ಪೂರ್ಣಪ್ರಮಾಣದಲ್ಲಿ ಸ್ವಚ್ಛತೆಯನ್ನು ಕಾಪಾಡದಿರುವುದನ್ನು ಗಮನಿಸಿದೆ. ಉಲ್ಲೇಖ 1 ರಲ್ಲಿನ ಪತ್ರದಲ್ಲಿ ಶಾಲೆಗಳಲ್ಲಿ ಉತ್ತಮ ಕಲಿಕಾ ಪರಿಸರವನ್ನು ಕಲ್ಪಿಸಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ಸೂಚನೆ ನೀಡಿದೆ. ಸ್ವಚ್ಛತೆಯನ್ನು ಕಾಪಾಡುವ ಮೂಲಕ ಉತ್ತಮ ಕಲಿಕಾ ಪರಿಸರ ನಿರ್ಮಾಣ ಮಾಡುವುದು ಇಲಾಖೆಯ ಪ್ರಮುಖ ಮತ್ತು ಆದ್ಯ ಜವಾಬ್ದಾರಿಯಾಗಿದೆ. ಈ ಕುರಿತು ಶಾಲೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿ ಕಲಿಕಾ ಪರಿಸರವನ್ನು ಪರಿಣಾಮಕಾರಿಯಾಗಿ ರೂಪಿಸಲು ತಿಳಿಸಿದ್ದರೂ ಬಹುತೇಕ ಶಾಲೆಗಳಲ್ಲಿನ ಮುಖ್ಯಸ್ಥರುಗಳು ನಿರಂತರ ಸ್ವಚ್ಛತೆಯನ್ನು ನಿರ್ವಹಿಸದಿರುವುದು ಹಾಗು ನೀಡಲಾದ ಸೂಚನೆಗಳನ್ನು ಶಿಕ್ಷಣ ಸಂಸ್ಥೆಗಳಲ್ಲಿ ಅನುಷ್ಠಾನ ಮಾಡಿರುವುದಿರುವುದು ವಿಷಾದನೀಯ ಸಂಗತಿಯಾಗಿದೆ. ಉಲ್ಲೇಖದಲ್ಲಿನ ಸೂಚನೆ ಹಾಗು ಸಭೆಯಲ್ಲಿ ಚರ್ಚಿಸಿದಂತೆ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರುಗಳು ಜಿಲ್ಲಾ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿನ ಅನುಪಯುಕ್ತ ವಸ್ತುಗಳನ್ನು ಪಟ್ಟಿ ಮಾಡಿ ಕ್ರಮಬದ್ಧವಾಗಿ ವಿಲೇವಾರಿ ಮಾಡಿ ಸ್ವಚ್ಛಗೊಳಿಸಿ, ಶಾಲೆಗಳನ್ನು ಸ್ವಚ್ಛತೆಯಲ್ಲಿ ಮಾದರಿಯಾಗಿರುವಂತೆ ರೂಪಿಸಲು ಒಂದು ತುರ್ತು ಕಾರ್ಯಯೋಜನೆ ತಯಾರಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಿದೆ.

ಶಾಲೆಗಳಲ್ಲಿ ಗುರುತಿಸಲಾದ ಅನುಪಯುಕ್ತ ಎಲ್ಲಾ ವಸ್ತುಗಳನ್ನು ನಮೂನೆಯಲ್ಲಿ ಪಟ್ಟಿ ಮಾಡಿ ಅದರ ವಿವರಗಳನ್ನು ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯವರ ಗಮನಕ್ಕೆ ತಂದು ಸಭೆಯಲ್ಲಿ ನಿರ್ಣಯಿಸಿ ಪ್ರಸ್ತುತ ನಿಯಮಗಳ ಅನುಸಾರ ಅನುಪಯುಕ್ತ ಮತ್ತು ಹಾಳಾದ ವಸ್ತುಗಳನ್ನು ಶಾಲೆಗಳಿಂದ ವಿಲೇವಾರಿ ಮಾಡಲು ಕ್ರಮವನ್ನು ಕೈಗೊಳ್ಳುವುದು. ತಾಲ್ಲೂಕು ಹಂತದಲ್ಲಿ ಆಯಾಯಾ ಬಿಇಓಗಳು ಈ ಬಗ್ಗೆ ಕ್ರಮ ಕೈಗೊಂಡು ಸಿದ್ಧತೆ ಮಾಡಲು ಕಾರ್‍ಯಕ್ರಮ ರೂಪಿಸಲು ತಿಳಿಸಿದೆ.

ಈ ಪ್ರಕ್ರಿಯೆಯನ್ನು ನಿರಂತರವಾಗಿ ನಿರ್ವಹಿಸಿ ವರ್ಷ ಪೂರ್ತಿ ಶಾಲೆಗಳಲ್ಲಿ ಸ್ವಚ್ಛತೆಯನ್ನು ವ್ಯವಸ್ಥಿತವಾಗಿ ನಿರ್ವಹಿಸುವುದು. ಸೂಚನೆ ಅನುಸರಿಸದ ಶಾಲಾ ಮುಖ್ಯಸ್ಥರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

**ಈ ಕೆಳಕಂಡ ಅನುಪಯುಕ್ತ ಹಾಗೂ ಹಾಳಾದ ವಸ್ತುಗಳು ಶಾಲೆಗಳಲ್ಲಿರಬಹುದು.**

1. ಮುರಿದಿರುವ ಕುರ್ಚಿ, ಟೇಬಲ್, ಹಲಗೆ, ರ್‍ಯಾಕ್ ಮತ್ತು ಮರದ ಹಳೆ ಪೆಟ್ಟಿಗೆಗಳು
2. ಅನುಪಯುಕ್ತ ಮ್ಯಾಪು, ಚಾರ್ಟ, ಗ್ಲೋಬುಗಳು
3. ಉಪಯೋಗಕ್ಕೆ ಬಾರದೆ ಹಾಳಾದ ಟಿ.ವಿ, ರೇಡಿಯೋ, ಟೇಪ್ ರೆಕಾರ್ಡರ್‌ಗಳು
4. ಉಪಯೋಗಿಸಲು ಬಾರದ ಹಳೆಯ ಕ್ರೀಡಾ ಸಾಮಗ್ರಿಗಳು.
5. ಉಪಯೋಗಕ್ಕೆ ಬಾರದ ಹಳೆಯ ಡಬ್ಬಿಗಳು, ಕಾಗದದ ವಸ್ತುಗಳು, ಪೆಟ್ಟಿಗೆಗಳು.
6. ಹಳೆಯ ಪತ್ರಿಕೆಗಳು (ವಾರ್ತಾ ಪತ್ರಿಕೆಗಳು, ಮ್ಯಾಗಝೀನ್, ಮಕ್ಕಳ ಮನೆಗೆಲಸ ಪುಸ್ತಕಗಳು)
7. ಮಕ್ಕಳ ಕಿರು ಪರೀಕ್ಷೆ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಒಂದು ವರ್ಷದ ಉತ್ತರ ಪತ್ರಿಕೆಗಳನ್ನು ಮಾತ್ರ ಉಳಿಸಿಕೊಂಡು ಉಳಿದ ಎಲ್ಲಾ ವರ್ಷಗಳ ಉತ್ತರ ಪತ್ರಿಕೆಗಳನ್ನು (ನ್ಯಾಯಾಲಯ ಪ್ರಕರಣ ಇಲ್ಲದ ಬಗ್ಗೆ ಖಚಿತ ಪಡಿಸಿಕೊಂಡು) ವಿಲೇವಾರಿ ಮಾಡುವುದು.

8. ಶಾಲಾ ಗೋಡೆಯಲ್ಲಿ ಹಾಕಿರುವ ಹಾಳಾದ ಮತ್ತು ಹರಿದಿರುವ ಮಕ್ಕಳು ಬರೆದಿರುವ ಅಥವಾ ಶಾಲೆಗಳಿಗೆ ಶಿಕ್ಷಕರು ಖರೀದಿಸಿರುವ, ದಾನ ಪಡೆದಿರುವ ಹಾಳಾದ ಚಿತ್ರಪಟಗಳು,

9. ಉಪಯೋಗಕ್ಕೆ ಬಾರದ ಅಡುಗೆ ಪಾತ್ರೆ ಪರಿಕರಗಳು (ಹಳೆಯ ಬಕೇಟು, ಲೋಟ, ಬಾಂಡ್ಲಿ, ತುಕ್ಕು ಹಿಡಿದು ಹಾಳಾಗಿರುವ ಹಳೆ ಬೀಗಗಳು ಹಾಗು ಬೀಗದ ಕೈಗಳು)

10. ಕನ್ನಡ ಮತ್ತು ಆಂಗ್ಲ ಭಾಷೆಯ ಹಳೆಯ ಶಾಲಾ ಸೀಲುಗಳು, ಹಳೆಯ ಇಂಕ್ ಪ್ಯಾಡುಗಳು,

11. ಉಪಯೋಗಕ್ಕೆ ಬಾರದ ಹಿಂದಿನ ಸಾಲಿನಲ್ಲಿ ತಯಾರಿಸಿದ್ದ ಬೋಧನೋಪಕರಣಗಳು, ನಲಿಕಲಿ ವಿಷಯಕ್ಕೆ ಸಂಬಂಧಿಸಿದ ಹಳೆಯದಾದ ಪುಸ್ತಕಗಳು, ಕಾರ್ಡುಗಳು, ಸಾಮಗ್ರಿಗಳು,

12. ಯೋಜನಾ ಕೆಲಸದ ಪುಸ್ತಕಗಳು ಮಕ್ಕಳ ರಜಾ ರರ್ಜಿಗಳು, ಅಂಕಿ–ಅಂಶ ಸಂಗ್ರಹಣೆ ಮಾಡಿದ ಮೇಲೆ ಉಳಿದ ಹಳೆಯ ಹಾಳೆಗಳು.

13. ಒಡೆದು ಹಾಳಾಗಿರುವ ಟೇಬಲ್ ಗ್ಲಾಸುಗಳು, ಫ್ಲಾಸ್ಕ್ ಗಳು ಇತ್ಯಾದಿ

14. ಅನುಪಯುಕ್ತ ಕಪ್ಪು ಹಲಗೆ, ಸ್ಟ್ಯಾಂಡ್‌ಗಳು, ಫ್ಯಾನ್‌ಗಳು, ವಿದ್ಯುತ್ ಉಪಕರಣಗಳು,

15. ಬಹಳ ವರ್ಷಗಳಿಂದ ಶಾಲೆಯಲ್ಲಿರುವ ಹಳೆಯ ಕ್ಯಾಲೆಂಡರ್, ಹಳೆಯ ಪ್ರಗತಿ ಪತ್ರಿಕೆಗಳು, ಶಾಲಾ ವೇಳಾಪಟ್ಟಿ, ಶಾಲಾ ಫಲಕಗಳು,ಕಸಪೊರಕೆ, ಬಿಂದಿಗೆ,ಟ್ಯೂಬ್‌ಲೈಟ್,ಬಲ್ಬುಗಳು ಗೋಣಿಚೀಲಗಳು, ಸಿಮೆಂಟ್ ಚೀಲಗಳು, ಕಟ್ಟಡ ಕಟ್ಟಿದ ಮೇಲೆ ಉಳಿದಿರುವ ಸಾಮಗ್ರಿಗಳು, ತಂತಿ ಬೇಲಿ ಉಳಿಕೆ ತಂತಿಗಳು ವಿಜ್ಞಾನ ಉಪಕರಣಗಳು ಮತ್ತು ಹಳೆಯ ತುಕ್ಕುಹಿಡಿದ ಪೆಟ್ಟಿಗೆಗಳು, ಪ್ಯಾಕಿಂಗ್ ಸಾಮಗ್ರಿಗಳು, ರಟ್ಟಿನ ಪೆಟ್ಟಿಗೆಗಳು,

16. ಶಾಲಾ ಗ್ರಂಥಾಲಯದಲ್ಲಿರುವ ಹಳೆಯ ಹಾಗೂ ಅನುಪಯುಕ್ತ ಪುಸ್ತಕಗಳು, ತುಂಬಾ ಹಳೆದಾದ ಹಿಂದಿನ ಪಠ್ಯ ಪುಸ್ತಕಗಳು, ಪತ್ರಿಕೆಗಳು, ಚಿತ್ರಪಟಗಳು,

17. ಶಾಲಾ ಪ್ರಯೋಗ ಶಾಲಾ ಗಾಜಿನ ಉಪಕರಣಗಳು, ಬೀಕರುಗಳು, ಅವಧಿ ಮೀರಿದ ರಾಸಾಯನಿಕ ವಸ್ತುಗಳು, ಹಾಳಾದ ಟೆಸ್ಟ್ ಟ್ಯೂಬ್‌ಗಳು,

18. ಹಾಳಾದ ಹಳೆಯ ಸೈನ್ಸ್‌ಕಿಟ್ ಮತ್ತು ಮ್ಯಾತ್ಸ್ ಕಿಟ್‌ಗಳು, ಒಬಿಬಿ ಯಲ್ಲಿ ನೀಡಿದ ಹಾಳಾದ ಉಪಯೋಗಕ್ಕೆ ಬಾರದ ಬೋಧನೋಪಕರಣಗಳು, ಇವುಗಳಲ್ಲದೆ ಯಾವುದಾದರೂ ಅನಗತ್ಯವೆಂದು ಕಂಡು ಬಂದಲ್ಲಿ ತೆಗೆಯುವುದು.

ಶಾಲಾ ತಪಾಸಣೆ;– ಶಾಲಾ ತಪಾಸಣೆಗಳನ್ನು 5 ರಿಂದ 10 ವರ್ಷಗಳಾದರೂ ಮಾಡದೇ ಇರುವುದು, ನಿವೃತ್ತಿ ಮತ್ತು ವರ್ಗಾವಣೆ ಸಂದರ್ಭಗಳಲ್ಲಿ ಮಾತ್ರ ಅವರ ಕೋರಿಕೆಗಳ ಮೇರೆಗೆ ಶಾಲೆಗಳ ತಪಾಸಣೆಯಾಗುತ್ತಿದ್ದು ಇದರಿಂದ ನಿವೃತ್ತ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಸಕಾಲದಲ್ಲಿ ಇತ್ಯರ್ಥಗೊಳಿಸಲು ಸಾಧ್ಯವಾಗದೇ ಇರುವುದು ಕಂಡು ಬಂದಿದೆ. ಇನ್ನು ಮುಂದೆ ತಾಲ್ಲೂಕು/ಬ್ಲಾಕ್ ವ್ಯಾಪ್ತಿಯಲ್ಲಿನ ಶಾಲೆಗಳನ್ನು ಕನಿಷ್ಠ ಎರಡು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಶಾಲಾ ವಾರ್ಷಿಕ ತಪಾಸಣೆಯನ್ನು ನಡೆಸಿ ತಪಾಸಣಾ ವರದಿ ನೀಡುವುದು ಬಿ.ಇ.ಒಗಳ ಜವಾಬ್ದಾರಿಯಾಗಿದೆ. ತಪ್ಪಿದಲ್ಲಿ ಇಲಾಖಾ ಶಿಕ್ಷಕರಿಗೆ ಆಗುವ ತೊಂದರೆಗಳಿಗೆ ಹಾಗು ಅದರ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಬಿ.ಇ.ಒ ಗಳನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು ಎಂದು ಕಟ್ಟು ನಿಟ್ಟಾಗಿ ತಿಳಿಸಿದೆ.

ಸಹಿ/–
(ಮೊಹಮ್ಮದ್ ಮೊಹಸಿನ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ,

1) ಉಪನಿರ್ದೇಶಕರು/ಡಯಟ್ ಪ್ರಾಂಶುಪಾಲರು,
2) ಬಿ.ಇ.ಓ, ಬಿ.ಆರ್.ಸಿಗಳು.

ಪ್ರತಿಯನ್ನು ಮಾಹಿತಿಗಾಗಿ:

1) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು
2) ನಿರ್ದೇಶಕರು, ಪ್ರೌಢಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು
3) ನಿರ್ದೇಶಕರು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಪರೀಕ್ಷೆಗಳು)
4) ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಇತರೆ ಪರೀಕ್ಷೆಗಳು)
5) ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
6) ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7) ನಿರ್ದೇಶಕರು, ಸಿಸ್ಲೆಪ್, ಧಾರವಾಡ
8) ನಿರ್ದೇಶಕರು, ಭಾಷಾ ಅಲ್ಪಸಂಖ್ಯಾತರು, ಆಯುಕ್ತರ ಕಛೇರಿ, ಬೆಂಗಳೂರು.

ಮೌಲ್ಯಮಾಪನ ಕಾರ್ಯ ಕಡ್ಡಾಯಗೊಳಿಸಿರುವ ಬಗ್ಗೆ

**GOVERNMENT OF KARNATAKA**

**KARNATAKA SECONDARY EDUCATION EXAMINATION BOARD**

MALLESWARAM, BENGALURU - 560003

**NOTIFICATION**

**No A7** ಪ.ಮೌ.ಮಾ.ಕ/36/2012-13 **Dated: 22-11-2012**

In exercise of the powers conferred by section 26 of the Karnataka Secondary Education Examination Board Act. 1966 (Karnataka Act 16 of 1966) with the approval of Government of Karnataka vide letter No. **ED 376 SLB 2012, Dated : 17-11-2012** as required under section 27 of the said Act, the Karnataka Secondary Education Examination Board hereby makes the follwing regulations, further to amend the Karnataka Secondary Education Examination Board First Regulations, 1966 namely:-

- **Title and commencement :** (1) These regulations may be called the Karnataka Secondary Education Examination Board (Amendment) Reglations 2012.

  (2) They shall come into force from the date of their publication in the Offical Gazette.

- **Amendment of regulation 16 :** In the Karnataka Secondary Eduction Examination Board First Regulations, 1966, in CHAPTER V. in regulation 16, after sub- regulation (7) the following shall be inserted, namely:

8. Valuation of answer script is a part of academic activity and it is the duty of every head master or assistant master of a Government or aided or unaided high school to attend the valuation work whenever he is appointed by the Board to evaluate the answer booklets of (SSLC and other) examinations conducted by the Board.

9. An Assistant master or Headmaster so appointed as a valuator for evaluating the answer booklets of SSLC and other examinations conducted by the Board under sub-regulation (7) shall attend the valuation work without absenting himself, except in cases of serious illness of the valuator or his familly member where the personal attendance of the Assistant master or Headmaster is necessary. Such Valuator shall take prior permission from the concerned Deputy Director of Public Instruction or concerned Block

Education Officer who in turn obtain sanction from the Director, Karnataka Secondary Education Examination Board, Bengaluru. In case of absence from duty due to medical reasons the valuators shall produce before the Competent authority a medical certificate issued by the Medical Board before the competent authority.

10. Any valuator who abstain from attending the valuation continuously with out obtaining exemption under sub-regulation (9) or continuously claim for exemption under sub- regulation (9). such absence shall be treated as dereliction of duty and disciplinary action shall be taken including keeping under suspension from duty by the concerned Deputy Director of Public Instruction against such Assistant master or Head master. In case of Government School teacher, disciplinary action shall be under the Karnataka Civil Services (Classification Control and Appeal) Rules, 1957, in case of aided school teachers under the Karnataka Education Act, 1983 or rules made there under. The concerned Deputy Director of Public instruction or the concerned Block Education officer shall impose penalty at the rates fixed by the Board in case of teachers of an unaided high schools.

11. If the menagement of Head master of an unaided high school do not relieve the Head master or Assistant master to attend the valuation work without valid reasons the Concerned Deputy Director of Public Instruction shall have powers to take disciplinary action against such management under Karnataka Education Act, 1983 including withdrawal of recognition.

12. If any Deputy Director of Public Instruction concerned or the Block Education officer without valid reasons continue to issuse permission to the teachers to exempt from valutions duty or fails to ensure that all teachers deputed to valuation work attended the valuation, the Board shall recommend to Government to initiate discipliary action porceeding against such officer under the Karnataka Civil Services (Classification, Control and Appeal) Rules, 1957."

Sd/-

**(D. Venkateshaiah)**

Director Exams

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 100 ಡಿಟಿಬಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ:26-10-2015

**: ಸು ತ್ತೋ ಲೆ :**

*ವಿಷಯ:* ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿ ಹೆಸರು / ಪೋಷಕರ ಹೆಸರು, ಜನ್ಮದಿನಾಂಕ, ಜಾತಿ ಇತ್ಯಾದಿ ತಿದ್ದುಪಡಿ ಸಂಬಂಧ ನೀಡಿದ ನ್ಯಾಯಾಲಯಗಳ ಡಿಕ್ರಿ ಆದೇಶದ ಅನುಷ್ಠಾನದ ಬಗ್ಗೆ.

*ಉಲ್ಲೇಖ:*
1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು ಇವರ ಸುತ್ತೋಲೆ ದಿನಾಂಕ:02/05/2000. .
2. ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಬೆಂಗಳೂರು, ಇವರ ಸುತ್ತೋಲೆ ದಿನಾಂಕ:25/03/2004.
3. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 32 ಡಿಟಿಬಿ 2008 ದಿನಾಂಕ:20.08.2009.

*****

ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿ ಹೆಸರು/ಪೋಷಕರ ಹೆಸರು, ಜಾತಿ, ಜನ್ಮ ದಿನಾಂಕ ಇತ್ಯಾದಿ ತಿದ್ದುಪಡಿ ಮಾಡುವ ಸಂಬಂಧ, ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನವನ್ನು ನೀಡಿ ಅಧಿಕಾರವನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಜಿಲ್ಲಾ ಉಪನಿರ್ದೇಶಕರಿಗೆ ಪ್ರತ್ಯಾಯೋಜಿಸಿ ಅದರಂತೆ ಕ್ರಮವಹಿಸಲಾಗುತ್ತಿದೆ. ಈ ಪ್ರಕ್ರಿಯೆಯು ವಿಳಂಬವಾಗುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ಆಕ್ಷೇಪಣೆಗಳು ಬಂದಿರುತ್ತವೆ, ಅಲ್ಲದೇ ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಧಾನ ಸಭೆ ಅರ್ಜಿ ಸಮಿತಿಯಲ್ಲಿ ಅರ್ಜಿ ದಾಖಲಾಗಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:26/02/2015ರಂದು ನಡೆದ ಸಮಿತಿಯ ಸಭೆಯಲ್ಲಿ ತಿದ್ದುಪಡಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸುವಂತೆ ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಅಸ್ತಿತ್ವದಲ್ಲಿರುವ ಸುತ್ತೋಲೆಗಳನ್ನು ರದ್ದುಪಡಿಸಿ ಈ ಕೆಳಕಂಡಂತೆ ಪರಿಷ್ಕೃತ ಸುತ್ತೋಲೆ ಹೊರಡಿಸಿದೆ.

01. ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳ ಜನ್ಮ ದಿನಾಂಕಗಳಲ್ಲಿ ಕ್ಯಾಲೆಂಡರ್ ತಿಂಗಳಲ್ಲಿ ಇಲ್ಲದ ದಿನಾಂಕಗಳು ಉದಾಹರಣೆಗೆ ಫೆಬ್ರವರಿ 30, ಏಪ್ರಿಲ್ 31, ಜೂನ್ 31 ಇತ್ಯಾದಿಗಳ ಬಗ್ಗೆ ತಿದ್ದುಪಡಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಹಂತದಲ್ಲಿಯೇ ಪರಿಶೀಲಿಸಿ, ತಕ್ಷಣವೇ ಸಂಬಂಧಪಟ್ಟ ಬಿ.ಇ.ಓ ರವರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದು ನಂತರ ಸಂಬಂಧಪಟ್ಟ ಶಾಲಾ ಮುಖ್ಯಶಿಕ್ಷಕರು ತಿದ್ದುಪಡಿ ಮಾಡಲು ಕ್ರಮವಹಿಸುವುದು.

02. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಹೆಸರು, ಪೋಷಕರ ಹೆಸರು, ಮತ್ತು ಜನ್ಮ ದಿನಾಂಕ ಮೊದಲಾದವುಗಳನ್ನು ಓ.ಎಂ.ಆರ್ ಶೀಟ್‌ನಲ್ಲಿ (ಶಾಲಾ ದಾಖಲಾತಿ ವಹಿಯಲ್ಲಿರುವಂತೆ) ಭರ್ತಿ ಮಾಡುವಾಗ ಎಚ್ಚರಿಕೆಯಿಂದ ದೋಷಗಳಿಗೆ **ಅವಕಾಶ ನೀಡದಂತೆ ಭರ್ತಿ ಮಾಡಲು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಗೆ ಸೂಚನೆ ನೀಡಲಾಗಿದೆ.** ತಪ್ಪಾದಲ್ಲಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

03. ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ವಿದ್ಯಾರ್ಥಿಯ/ಪೋಷಕರ ಹೆಸರಿನಲ್ಲಿ spelling, Initial, ಹುಟ್ಟಿದ ದಿನಾಂಕ ತಿದ್ದುಪಡಿ, ಇದ್ದಲ್ಲಿ ಸಂಬಂಧಿಸಿದ ಶಾಲೆಯ ಮೂಲ ದಾಖಲಾತಿ ವಹಿ ಪರಿಶೀಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೇರವಾಗಿ ಪ್ರಸ್ತಾವನೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಳುಹಿಸಿ ಕ್ರಮವಹಿಸುವುದು.

04. ಶಾಲಾ ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ಜಾತಿಯ ಬಗ್ಗೆ ನೇರವಾಗಿ ತಿದ್ದುಪಡಿ ಮಾಡಲು ಅವಕಾಶವಿಲ್ಲ. ಜಾತಿ ತಿದ್ದುಪಡಿ ಬಗ್ಗೆ ವಿಚಾರಣೆ ನಡೆಸಿ ತೀರ್ಮ ನೀಡಲು ಸಿವಿಲ್ ಕೋರ್ಟ್‌ಗೆ ಅವಕಾಶವಿರುವುದಿಲ್ಲವೆಂದು ಕಾನೂನು ಇಲಾಖೆಯು (ಅಭಿಪ್ರಾಯ ಸಂಖ್ಯೆ:ಲಾ 677 ಅಭಿ 2014, ದಿನಾಂಕ:07-01-2015) ಅಭಿಪ್ರಾಯನೀಡಿರುತ್ತದೆ. ಜಾತಿ ಘೋಷಣೆಗೆ ಸಂಬಂಧಿಸಿದ ಪ್ರಕರಣವು ಅಧೀನ ನ್ಯಾಯಾಲಯದಲ್ಲಿ ಡಿಕ್ರಿಯಾಗಿದ್ದರೆ, The Hon'ble Supreme Court in the case of the State of Tamilnadu V/s A. Guruswamy has held that by necessary implication stands prohibited. Further the Hon'ble Suprem Court while allowing the appeal has held that the declaration issued by the Courts below is unconstitutional and without any jurisdiction. ಎಂದು ಅಪರ ಕಾನೂನು ಕಾರ್ಯದರ್ಶಿಗಳು-1, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ರವರು ಅಭಿಪ್ರಾಯಿಸಿರುವುದರಿಂದ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿ ಜಾತಿ, ತಿದ್ದುಪಡಿ ಮಾಡುವ ಪ್ರಸ್ತಾವನೆಯ ಬಗ್ಗೆ ಜಿಲ್ಲಾ ಮಟ್ಟದ ಜಾತಿ ಪರಿಶೀಲನಾ ಸಮಿತಿಯು ನೀಡುವ ಆದೇಶದಂತೆ ಶಾಲ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ಪರಿಶೀಲಿಸಿ ಕಮ್ರವಹಿಸುವುದು.

05. ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳ ದಾಖಲೆಗಳಲ್ಲಿ ಹೆಸರಿನಲ್ಲಿರುವ ಅಕ್ಷರಗಳು ತಪ್ಪಾದಲ್ಲಿ, ಹೆಸರಿನ ಜೊತೆ ತಂದೆಯ ಹೆಸರು, ಕುಟುಂಬದ ಹೆಸರು, ಅಡ್ಡ ಹೆಸರು ಮೊದಲಾದವುಗಳನ್ನು ಸೇರಿಸಲು, ಹೆಸರನ್ನು ಬದಲಾವಣೆ ಮಾಡಲು ಜನ್ಮ ದಿನಾಂಕಕ್ಕೆ ದಾಖಲೆಗಳು ಲಭ್ಯವಿದ್ದಾಗ್ಯೂ ಶಾಲಾ ದಾಖಲೆಗಳಲ್ಲಿ ನಮೂದಿಸುವಾಗ ಆಗಿರುವ ತಪ್ಪುಗಳನ್ನು ತಿದ್ದುಪಡಿ ಮಾಡುವಾಗ ಪಡಿತರ ಚೀಟಿ, ಆಧಾರ್ ಕಾರ್ಡುಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಪೋಷಕರಿಂದ ಸೆಲ್ಫ್ ಅಫಿಡವಿಟ್ ಪಡೆಯಬೇಕು. ಈ ಸೆಲ್ಫ್ ಅಫಿಡವಿಟ್‌ನಲ್ಲಿ ನೀಡಿರುವ ಮಾಹಿತಿಗಳು ಸುಳ್ಳೆಂದು ಕಂಡು ಬಂದಲ್ಲಿ ಅಂತಹ ಕ್ರಮ ಶಿಕ್ಷಾರ್ಹವಾಗುವುದರಿಂದ ಭಾರತೀಯ ದಂಡ ಸಂಹಿತೆ ಪ್ರಕಾರ ಶಿಕ್ಷೆಗೆ ಒಳಪಡಿಸಬಹುದೆಂದು ಸದರಿ ಅಫಿಡವಿಟ್‌ನಲ್ಲಿ ನಮೂದಿಸಿರಬೇಕು. ಇದರ ಆಧಾರದ ಮೇಲೆ ಶಾಲಾ ದಾಖಲಾತಿ ನಿಯಮಗಳ ಉಲ್ಲಂಘನೆಯಾಗದಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ತಿದ್ದುಪಡಿ ಮಾಡಲು ಅಯಾ ವರ್ಷದ ಜೂನ್ 01ರಂದು ಕ್ರಮ ವಹಿಸುವುದು ಈ ರೀತಿ ಕ್ರಮವಹಿಸುವಾಗ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮ 11(1)ರಲ್ಲಿ 05 ವರ್ಷ ತುಂಬಿದ ಯಾವುದೇ ಮಗುವಿಗೆ ಶಾಲೆಗೆ ದಾಖಲು ಮಾಡಿಕೊಳ್ಳಲು ಕನಿಷ್ಟ 05 ವರ್ಷವಾಗಿರಬೇಕಾಗಿರುತ್ತದೆ. ಆದುದರಿಂದ ವಿದ್ಯಾರ್ಥಿಗಳ ಜನ್ಮ ದಿನಾಂಕದಲ್ಲಿ ತಿದ್ದುಪಡಿ ಮಾಡುವಾಗ ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು ಪಕ್ಷ ಇದಕ್ಕಿಂತ ಕಡಿಮೆ ಜನ್ಮ ದಿನಾಂಕವನ್ನು ನಮೂದಿಸಿದ್ದಲ್ಲಿ ತಿದ್ದುಪಡಿ ಮಾಡಲು ಸಂಬಂಧಪಟ್ಟ ನ್ಯಾಯಲಯದ ಡಿಕ್ರಿ ತರುವುದು ಅವಶ್ಯಕ.

06. ಎಸ್.ಎಸ್.ಎಲ್.ಸಿ ಆದ ನಂತರದ ಅಭ್ಯರ್ಥಿಗಳ ಶಾಲಾ ದಾಖಲಾತಿ/ಅಂಕಪಟ್ಟಿಯಲ್ಲಿ ಹೆಸರು, ಅಡ್ಡ ಹೆಸರು, ಪೋಷಕರ ಹೆಸರು ಹಾಗೂ ಜನ್ಮ ದಿನಾಂಕ ಇತ್ಯಾದಿಗಳು ತಿದ್ದುಪಡಿಯಾಗಬೇಕಾಗಿದ್ದಲ್ಲಿ ನ್ಯಾಯಾಲಯದಿಂದ ಡಿಕ್ರಿ ಪಡೆದು ಬಂದ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಶಾಲಾದಾಖಲಾತಿ ನಿಯಮಗಳನ್ವಯ ಪರಿಶೀಲಿಸಿ ಜಿಲ್ಲಾ ಉಪನಿರ್ದೇಶಕರು ಪ್ರಸ್ತಾವನೆ ಸ್ವೀಕರಿಸಿದ 15 ದಿನದೊಳಗೆ ಸೂಕ್ತ ತಿದ್ದುಪಡಿ ಮಾಡಿ ಆದೇಶ ಹೊರಡಿಸುವುದು.

ಶಾಲಾ ದಾಖಲೆಗಳಲ್ಲಿ ವಿದ್ಯಾರ್ಥಿಯ ಹೆಸರು / ಪೋಷಕರ ಹೆಸರು, ವಿದ್ಯಾರ್ಥಿಯ / ಜನ್ಮ ದಿನಾಂಕ ಇತ್ಯಾದಿ ತಿದ್ದುಪಡಿ ಸಂಬಂಧ ದಾಖಲಾಗುವ ಓ.ಎಸ್. ಪ್ರಕರಣಗಳಲ್ಲಿ ಮೊದಲನೆ ಪ್ರತಿವಾದಿಯಾಗಿ ಪ್ರತಿನಿಧಿಸಬೇಕೆಂದು ಸಾಕಷ್ಟು ಪ್ರಕರಣಗಳಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ / ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ / ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳನ್ನು 1ನೇ ಅಥವಾ 2ನೇ ಪ್ರತಿವಾದಿಯನ್ನಾಗಿ ಮಾಡಲಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಜಿಲ್ಲಾ ಮಟ್ಟದ ನ್ಯಾಯಾಲಯಗಳಿಗೆ ಸರ್ಕಾರದಿಂದ ಅಥವಾ ಆಯುಕ್ತರಿಂದ ನ್ಯಾಯಾಲಯಕ್ಕೆ ಆಕ್ಷೇಪಣಾ ಹೇಳಿಕೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಂಬಂದಪಟ ಜಿಲ್ಲಾ

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳು ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಆಕ್ಷೇಪಣಾ ಹೇಳಿಕೆ ಸಲ್ಲಿಸುವ ಮೂಲಕ ಏಕಪಕ್ಷೀಯ ತೀರ್ಪಿಗೆ ಅವಕಾಶವಾಗದಂತೆ ನೋಡಿಕೊಳ್ಳುವುದು ಹಾಗೂ ಪ್ರಕರಣದ ಇತ್ಯರ್ಥಕ್ಕೆ ಅಗತ್ಯ ಕ್ರಮ ವಹಿಸುವುದು.

07. ಮಕ್ಕಳ ತಾಯಂದಿರೂ ಸಹ ನೈಜ ಪೋಷಕರಾಗಿರುವುದರಿಂದ ಶಾಲೆಯ ಎಲ್ಲಾ ಹಂತಗಳಲ್ಲಿ ಮಕ್ಕಳ ದಾಖಲಾತಿ ಮಾಡಿಕೊಳ್ಳುವಾಗ ಹಾಗೂ 7ನೇ ತರಗತಿ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಾಗ ತಂದೆಯ ಹೆಸರಿನ ಜೊತೆ ತಾಯಿಯ ಹೆಸರನ್ನು ನಮೂದಿಸಲು ಕ್ರಮ ತೆಗೆದುಕೊಳ್ಳುವುದು.

08. ದತ್ತು ಪ್ರಕರಣಗಳಲ್ಲಿ ನ್ಯಾಯಾಲಯದ ಡಿಕ್ರಿ ಪಡೆದು ನೋಂದಣಿ ದಾಖಲಾತಿಗಳನ್ನು ಒದಗಿಸಿದಾಗ ಮಾತ್ರ ದತ್ತು ತಂದೆ/ತಾಯಿ ಹೆಸರನ್ನು ಶಾಲಾ ದಾಖಲಾತಿಗಳಲ್ಲಿ/ಎಸ್.ಎಸ್.ಎಲ್.ಸಿ ಅಂಕಪಟ್ಟಿಗಳಲ್ಲಿ ನಮೂದಿಸಲು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ಪರಿಶೀಲಿಸಿ ತಿದ್ದುಪಡಿಗೆ ಕ್ರಮ ತೆಗೆದುಕೊಳ್ಳತಕ್ಕದ್ದು.

09. ಶಾಲಾ ದಾಖಲಾತಿಗಳಲ್ಲಿ ಹೆಸರು ಬದಲಾವಣೆ / ಜನ್ಮ ದಿನಾಂಕ ಬದಲಾವಣೆಗೆ ಸಂಬಂಧಿಸಿದಂತೆ ಡಿಕ್ರಿ ಹಾಜರುಪಡಿಸಿದ ಸಂದರ್ಭದಲ್ಲಿ ಅಂತಹ ಡಿಕ್ರಿಯನ್ನು ಅನುಷ್ಠಾನಗೊಳಿಸುವುದರಿಂದ ವಿವಾದವುಂಟಾಗಬಹುದಾದ ವಿಶೇಷ ಪ್ರಕರಣಗಳು ಕಂಡು ಬಂದಲ್ಲಿ ಮಾತ್ರ ಅಂತಹ ಪ್ರಕರಣಗಳ ಬಗ್ಗೆ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆದು ಅಂತಹ ಡಿಕ್ರಿಯನ್ನು ಅನುಷ್ಠಾನಗೊಳಿಸಬಹುದಾಗಿದೆ. ನಿಗದಿತ ಅವಧಿಯಲ್ಲಿ ನ್ಯಾಯಾಲಯದ ಡಿಕ್ರಿ ಆದೇಶವನ್ನು ಅನುಷ್ಠಾನಗೊಳಿಸದೆ, ನ್ಯಾಯಾಲಯದಿಂದ ಮೇಲಾಧಿಕಾರಿಗಳ ವೈಯಕ್ತಿಕ ಹಾಜರಾತಿಗೆ ಆದೇಶ, ನಿಂದನಾ ದಾವೆ ದಾಖಲು ಇತ್ಯಾದಿ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರನ್ನೇ ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

(ಅಜಯ್ ಸೇಠ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು – 560 001**

ಸಂಖ್ಯೆ: ಸಿ4[6] ಜಾತಿ/ಹೆಸರು/ಜನ್ಮ ದಿನಾಂಕ ತಿದ್ದುಪಡಿ 05/2014-15 ದಿನಾಂಕ: 29.10.2015

ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿ ಹೆಸರು/ಪೋಷಕರ ಹೆಸರು, ಜನ್ಮದಿನಾಂಕ, ಜಾತಿ ಇತ್ಯಾದಿ ತಿದ್ದುಪಡಿ ಸಂಬಂಧ ನೀಡಿದ ನ್ಯಾಯಾಲಯದ ಡಿಕ್ರಿ ಆದೇಶದ ಅನುಷ್ಠಾನದ ಬಗ್ಗೆ ಸರ್ಕಾರ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಇಡಿ 100 ಡಿಟಿಬಿ 2014 ದಿನಾಂಕ: 26.10.2015ರ ಯಥಾ ಪ್ರತಿಯನ್ನು ಈ ಪತ್ರಕ್ಕೆ ಅನುಬಂಧಿಸಿ ಕಳುಹಿಸುತ್ತಾ, ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನದಂತೆ ಕ್ರಮ ವಹಿಸಲು ತಿಳಿಸಿದೆ.

ನಿರ್ದೇಶಕರು[ಪ್ರಾ.ಶಿಕ್ಷಣ]

**ಇವರಿಗೆ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ವಿಭಾಗ, ಕಲಬುರ್ಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಿಭಾಗ, ಧಾರವಾಡ
3. ಕಾರ್ಯದರ್ಶಿ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
4. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

ಓದಲಾಗಿದೆ:- (1)ಪತ್ರ ಸಂ:ಸಕಇ/ಇಡಿ-7./ಸಿಆರ್-2/2008-09 ದಿನಾಂಕ: 06-04-2009.
(2)ಅರೆ ಸರ್ಕಾರಿ ಪತ್ರ ಸಂ:ಇಡಿ-96 ಯೋಯೋಕ 2009 ದಿನಾಂಕ:07-05-2009
(3)ಪತ್ರ ಸಂ:ಪವಕಇ/ಇಡಿ-1/ಸಿಆರ್-6/2000-10 ದಿನಾಂಕ: 13-05-2009
(4)ಸರ್ಕಾರಿ ಆದೇಶ ಸಂ:ಸಕಇ 46 ಎಸ್‌ಎಲ್‌ಪಿ 2009 ದಿನಾಂಕ:21-05-2009

ಪ್ರಸ್ತಾವನೆ:-

2008-09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಕೆಳಗಿನಂತೆ ನಮೂದಿಸಲಾಗಿದೆ.

"ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು 10ನೇ ತರಗತಿಯಲ್ಲಿ ಶೇಕಡ 75 ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣು ಮಕ್ಕಳಿಗೆ ರೂ.10,000-00 ಮತ್ತು ಶೇಕಡ 60 ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣು ಮಕ್ಕಳಿಗೆ ರೂ.5,000-00 ದಂತೆ ಪ್ರೋತ್ಸಾಹ ಧನವನ್ನು ನೀಡಲಾಗುವುದು".

ಸದರಿ ಯೋಜನೆಯನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಗಂಡು ಮಕ್ಕಳಿಗೆ ಸಹ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ.

ಈ ಕುರಿತಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಹಾಗೂ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರು ತಿಳಿಸಿರುವ ಪ್ರಕಾರ 2009ನೇ ಸಾಲಿನ ಮಾರ್ಚ್ ತಿಂಗಳಿನಲ್ಲಿ ಪ್ರಕಟವಾದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಪ್ರಕಾರ ಶೇಕಡ 75 ಹಾಗೂ ಅದಕ್ಕಿಂತ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 3,551 ಹೆಣ್ಣು ಮಕ್ಕಳು ಹಾಗೂ 3636 ಗಂಡು ಮಕ್ಕಳಿದ್ದು ಶೇಕಡ 60 ರಿಂದ ಶೇಕಡ 74.99 ರವರೆಗೆ ಅಂಕಗಳನ್ನು ಪಡೆದ 12,765 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳು ಹಾಗೂ 14118 ಗಂಡು ಮಕ್ಕಳು ಇರುತ್ತಾರೆ.

ಈ ಮಧ್ಯೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಹಾಗೂ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲೆ (1) ಮತ್ತು (3) ರಲ್ಲಿ ಓದಲಾದ ಪತ್ರಗಳನ್ನು ಬರೆಯುತ್ತಾ ಉಲ್ಲೇಖಿತ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಈ ಮೇರೆಗೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 147 ಪಕವಿ 2009, ಬೆಂಗಳೂರು ದಿನಾಂಕ:27-05-2009**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಇವರು ನಡೆಸುವ 10ನೇ ತರಗತಿ ಪರೀಕ್ಷೆಗಳಲ್ಲಿ ಶೇಕಡ 75 ಕ್ಕಿಂತಲೂ ಹೆಚ್ಚು ಅಂಕಗಳು ಹಾಗೂ ಶೇಕಡ 60 ರಿಂದ 74.99 ರವರೆಗೆ ಅಂಕಗಳನ್ನು ಗಳಿಸಿದ ಪ್ರತಿ ವಿದ್ಯಾರ್ಥಿಗೆ ಅನುಕ್ರಮವಾಗಿ ರೂ.10,000-00 (ಹತ್ತು ಸಾವಿರ ರೂಪಾಯಿಗಳು ಮಾತ್ರ) ಮತ್ತು ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ) ಪ್ರೋತ್ಸಾಹ ಧನವನ್ನು 2009-10ನೇ ಸಾಲಿನಿಂದ ಜಾರಿಗೆ ಬರುವಂತೆ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಪರಿಶಿಷ್ಟ ಜಾತಿ ಉಪಯೋಜನೆ/ಗಿರಿಜನ ಉಪಯೋಜನೆ ಕ್ರೋಢೀಕೃತ ನಿಧಿಗೆ (SCSP/TSP pooled fund)) ಕ್ರಮವಾಗಿ ಲೆಕ್ಕ ಶೀರ್ಷಿಕೆ 2225-01-102-0-08 ಮತ್ತು 2225-02-283-0-02 ರಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಯೋಜನೆಯನ್ನು ಶಿಕ್ಷಣ ಇಲಾಖೆ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಹಾಗೂ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರು ಸಂಬಂಧಪಟ್ಟ ಮೊತ್ತಗಳನ್ನು ಬೇಡಿಕೆ ಅನುಸಾರ ಉಲ್ಲೇಖಿತ ನಿಧಿಯಿಂದ ಡ್ರಾ ಮಾಡಿ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ಇವರ ಖಾತೆಗೆ ಜಮ ಮಾಡತಕ್ಕದ್ದು.

ಇದಕ್ಕೆ ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆ ಇವುಗಳ ಸಹಮತಿಯನ್ನು ಕ್ರಮವಾಗಿ ಟಿಪ್ಪಣಿ ಸಂಖ್ಯೆ:ಪಿಡಿ 20 ಸಾವಂಪಾ 2009 ದಿನಾಂಕ:19-05-2009 ಹಾಗೂ ಆಇ 376 ವೆಚ್ಚ-3/2009 ದಿನಾಂಕ:21-05-2009ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಪಿ.ಚಿದಾನಂದಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
5. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
7. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ
   (ಪ್ರಕರಣ ಸಂಖ್ಯೆ:ಸಿ 212/2009)
8. ಶಾಖಾ ರಕ್ಷಾ ಕಡತ
9. ಹೆಚ್ಚುವರಿ ಪ್ರತಿ.

<u>ಪ್ರತಿ ಇವರಿಗೆ:</u>

- ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
- ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.

Apurva Chandra, IAS
Joint Secretary (SE-II)
Tel No. # 23384245
Fax No. # 23073736
Email: apurvachandra.edu@nic.in

सत्यमेव जयते

**Most Immediate**

भारत सरकार
मानव संसाधन विकास मंत्रालय
स्कूल शिक्षा और साक्षरता विभाग
शास्त्री भवन
नई दिल्ली – 110 115
GOVERNMENT OF INDIA
MINISTRY OF HUMAN RESOURCE DEVELOPMENT
DEPARTMENT OF SCHOOL EDUCATION & LITERACY
SHASTRI BHAVAN
NEW DELHI-110 115

F.No. 7-9/2008-SS

December 11, 2012

To

Education Secretaries of States/ UTs
(In-charge of Secondary Education)
As per list attached

**Subject:** Implementation of the National Scheme of Incentive to Girls for Secondary Education (NSIGSE).

Sir,

It has come to the notice of the Government that the Bank account details of the beneficiaries in the Scheme for National Scheme of Incentive to Girls for Secondary Education (NSIGSE) are not being made available by the State Governments/UTs at the time of sending proposals to the Department of School Education & Literacy, Govt. of India for approval. Under the scheme, Rs.3,000/- is deposited in a fixed deposit of an eligible girl child who has passed standard 8th. The amount is released in favour of the beneficiary girl child after the State Government/UT certifies that the girls child has passed class X and attained 18 years of age. The transfer is to be done directly to the account of the beneficiaries and Canara Bank has been mandated by the Department of School Education & Literacy for the task.

2. In the absence of beneficiary account details, Canara Bank has released the funds in favour of the beneficiaries in one of the States by issuing Demand

सर्व शिक्षा अभियान
सब पढ़ें सब बढ़ें

contd......page 2/-

Drafts in favour of the beneficiaries. Making payment to the beneficiaries through Demand Draft is a sub-optimal means of transferring funds as DDs may be lost in transit, may not reach the beneficiaries within time and require revalidation apart from the difficulty in physically tracking beneficiaries to hand over the Demand Draft. Canara Bank operates a dedicated portal for NSIGSE where the details of beneficiaries can be uploaded. The nodal officers of the States/UTs have been imparted training on the portal in regional trainings organized in August - September, 2012.

3. It has accordingly been decided that:-

(i) The State/UT Governments shall facilitate in opening 'No Frills Accounts/Basic Banking Account' by all beneficiaries who have been approved since 2008-09. The accounts shall be opened by 31st January, 2013. The IFSC Code of the branch and the account number of the beneficiary can be directly uploaded on the Canara Bank NSIGSE portal. Wherever available the Aadhaar number of the beneficiary shall also be uploaded

(ii) The Department of School Education & Literacy shall not sanction any new proposal received from a State Government/UT unless the list of beneficiaries is accompanied with the account numbers and the IFSC Code of the bank branch in future. The State Governments/UTs shall also intimate the Aadhaar number of the beneficiary in case the Aadhar number is available.

(iii) Canara Bank shall not make payments to any beneficiary by Demand Draft. The bank shall reconcile of payments made by DDs till now and shall not revalidate Demand Drafts in case the DDs have not been encashed within the validity period. The accrued amount in respect of such beneficiaries shall be transferred only in their bank accounts.

contd......page-3/-

(iv) No funds shall be released by Canara Bank to the beneficiary without receipt of Eligibility Certificate from the concerned State Govt./UT. If the State /UT Government fails to provide the Eligibility Certificate within six months of the girl child becoming eligible, sanction is liable to be cancelled.

(v) In case the State Governments are unable to provide the bank account details of the beneficiaries within the prescribed period, the funds sanctioned under the scheme are liable to be cancelled.

This issues with the approval of the competent authority.

Yours faithfully,

(Apurva Chandra)
Joint Secretary to the Govt. of India

**Copy to:** Deputy General Manager (Govt. Business Branch), Canara Bank and Scheme Coordinator, National Archives Building, 11, Janpath, New Delhi-110001

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿನ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೂ ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವ ಬಗ್ಗೆ.

ಓದಲಾಗಿದೆ:
1) 2013-14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಸ್ತುತಪಡಿಸಿರುವ ಹೊಸ ಯೋಜನೆ.
2) ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಇವರ ಪತ್ರ ಸಂಖ್ಯೆ: ಅಸಂನಿ/ಅಘೋಯೋಅ/ಸಿಆರ್-/2013-14, ದಿನಾಂಕ: 13.08.2013.

*****

**ಪ್ರಸ್ತಾವನೆ:**

ರಾಜ್ಯದಲ್ಲಿನ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೂ ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದಿಂದ ಈಗಾಗಲೇ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಪ್ರತಿ ವರ್ಷವೂ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಪ್ರಮಾಣವಾಗಿ ಏರುತ್ತಿರುವುದರಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನವನ್ನು ನೀಡಲು ಕೇಂದ್ರ ಸರ್ಕಾರವು ಒದಗಿಸುವ ಆಯವ್ಯಯದಲ್ಲಿ ಅವಕಾಶವಾಗುತ್ತಿಲ್ಲ.

ಆದುದರಿಂದ, ಕೇಂದ್ರ ಸರ್ಕಾರದಿಂದ ನೀಡುವ ವಿದ್ಯಾರ್ಥಿ ವೇತನ ಪಡೆಯಲಾಗದ ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ರಾಜ್ಯದ ವತಿಯಿಂದ ವಿದ್ಯಾರ್ಥಿ ವೇತನವನ್ನು ನೀಡಲು ರಾಜ್ಯ ಸರ್ಕಾರವು 2013-14ನೇ ಸಾಲಿನ ಆಯವ್ಯಯದಲ್ಲಿ ಹೊಸ ಯೋಜನೆಯೊಂದನ್ನು ಜಾರಿಗೆ ತರಲು ಸೂಚಿಸಿದೆ. ಅದರಂತೆ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ರಾಜ್ಯದ ವತಿಯಿಂದ ನೀಡಲು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: MWD 44 MDC 2013, ಬೆಂಗಳೂರು ದಿನಾಂಕ: 31.08.2013**

ರಾಜ್ಯದಲ್ಲಿನ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ ಕೇಂದ್ರ ಸರ್ಕಾರವು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಗೂ ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳಿಗಾಗಿ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನ ಪಡೆಯಲಾಗದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ವತಿಯಿಂದ 0:100 ಅನುಪಾತದಲ್ಲಿ ಸಂಪೂರ್ಣವಾಗಿ ರಾಜ್ಯ ಸರ್ಕಾರದ ಅನುದಾನದಲ್ಲಿ ಕೇಂದ್ರ ಸರ್ಕಾರವು ನೀಡುತ್ತಿರುವ ಮಾದರಿಯಲ್ಲಿ ಹಾಗೂ ಮಾರ್ಗಸೂಚಿಗಳಂತೆ, ವಿದ್ಯಾರ್ಥಿ ವೇತನವನ್ನು 2013-14ನೇ ಸಾಲಿನಿಂದ ನೀಡಲು ಆದೇಶಿಸಿದೆ.

ಇದಕ್ಕೆ ತಗಲುವ ವೆಚ್ಚವನ್ನು ಕ್ರಮವಾಗಿ ಲೆಕ್ಕಶೀರ್ಷಿಕೆ 2225-03-277-2-66, 2225-03-277-2-68 ಮತ್ತು 2225-03-277-2-69ರಡಿಯಲ್ಲಿ 2013-14ನೇ ಸಾಲಿನಲ್ಲಿ ಮಂಜೂರಾಗಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

| Director | JD | AB | Manager | CW |
|---|---|---|---|---|
| [signature] | | [signature] | | |

.....2

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 48 ಐಎಂಎಂ 2013, ದಿನಾಂಕ: 31.08.2013 ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 614/ವೆಚ್ಚ-3/13, ದಿನಾಂಕ: 31.08.2013 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ದಿನಾಂಕ: 31.08.2013 ರಂದು ಅಪರ ಮುಖ್ಯಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಏಕಗವಾಕ್ಷಿ ಸಭೆಯಲ್ಲಿ ಮೇಲಿನ ಯೋಜನೆಗೆ ಸಹಮತಿ ನೀಡಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ. ನಾಗರತ್ನ 31/8/13
(ಎಂ.ನಾಗರತ್ನ)
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
3) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಯೋಜನಾ ಇಲಾಖೆ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರ್ಥಿಕ ಇಲಾಖೆ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿ.
7) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ } ನಿರ್ದೇಶಕರ ಕಛೇರಿಯಿಂದ
8) ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ }
9) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವರ ಆಪ್ತ ಕಾರ್ಯದರ್ಶಿ.
10) ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು.
11) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
12) ನಿರ್ದೇಶಕರು, ಅಲ್ಪಸಂಖ್ಯಾತರ ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತರ ನಿರ್ದೇಶನಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
13) ಸರ್ಕಾರದ ಅಧೀನ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು
14) ಆಂತರಿಕ ಆರ್ಥಿಕ ಸಲಹೆಗಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
15) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: RMSA/ಉ.ಪ್ರೌ.ಶಾ./01/2016–17 ದಿನಾಂಕ: 09–03–2016

## ಸುತ್ತೋಲೆ

ವಿಷಯ: 2016–17ನೇ ಸಾಲಿಗೆ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಮಾಡಬೇಕಾದ ಪೂರ್ವ ಸಿದ್ಧತೆಗಳು.

ಉಲ್ಲೇಖ: 1. 2016–17ನೇ ಸಾಲಿನ ಜಿಲ್ಲೆಯ ವಾರ್ಷಿಕ ಯೋಜನೆ

2. ದಿನಾಂಕ:04–02–2016 ರಂದು ನಡೆದ PAB ಸಭೆ ನಡಾವಳಿ

3. ದಿನಾಂಕ:05–04–2015 ರಂದು ನಿರ್ದೇಶಕರು (ಆರ್.ಎಂ.ಎಸ್.ಎ.) ರವರು ನಡೆಸಿದ ಸಭೆ

**************

2016–17ನೇ ಸಾಲಿನ ಜಿಲ್ಲಾ ವಾರ್ಷಿಕ ಯೋಜನೆಗಳಲ್ಲಿ 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರ್.ಎಂ.ಎಸ್.ಎ. ನಿಯಮಾನುಸಾರ ಪ್ರೌಢಶಾಲೆಯಾಗಿ ಉನ್ನತೀಕರಿಸಲು ಅರ್ಹ ಶಾಲೆಗಳ ಪ್ರಸ್ತಾವನೆಗಳನ್ನು ಉಲ್ಲೇಖ–1 ರಲ್ಲಿ ಸಲ್ಲಿಸಲಾಗಿತ್ತು. ಜಿಲ್ಲಾ ವಾರ್ಷಿಕ ಯೋಜನೆಗಳಲ್ಲಿ ಸಲ್ಲಿಸಿದ್ದ ಆ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಕೇಂದ್ರ ಸರ್ಕಾರ ಆರ್.ಎಂ.ಎಸ್.ಎ. ನಿಯಾಮಾನುಸಾರ ಪರಿಶೀಲಿಸಿ 20 ಶಾಲೆಗಳಿಗೆ ಅನುಮೋದನೆಯನ್ನು ಉಲ್ಲೇಖ–2 ರಲ್ಲಿ ನೀಡಿರುತ್ತದೆ ಪಟ್ಟಿಯನ್ನು ಲಗತ್ತಿಸಿದೆ.

ಉನ್ನತೀಕರಿಸಿದ ಶಾಲೆಗಳನ್ನು 2016–17ನೇ ಸಾಲಿನಲ್ಲಿ ಪ್ರಾರಂಭ ಮಾಡುವುದಕ್ಕೆ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ.

**ಉಪನಿರ್ದೇಶಕರು ತೆಗೆದುಕೊಳ್ಳಬೇಕಾದ ಕ್ರಮಗಳು:**

1. ಆಯ್ಕೆಯಾದ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರು, ಮತ್ತು ಈಶಾಲೆಗೆ ಅತಿ ಹತ್ತಿರದ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಸಭೆ ಕರೆಯುವುದು.
2. ಉನ್ನತೀಕರಿಸಲು ಪ್ರಸ್ತಾಪಿಸಿರುವ ಶಾಲೆಗೆ 5 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಅಥವಾ ಅನುದಾನಿತ ಪ್ರೌಢಶಾಲೆ ಇಲ್ಲದಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು
3. ಈ ಶಾಲೆಯ 5 ಕಿ.ಮೀ. ವ್ಯಾಪ್ತಿಯಲ್ಲಿ ಅನುಮತಿ ಪಡೆದಿರುವ ಅನುದಾನ ರಹಿತ ಪ್ರೌಢಶಾಲೆ ಇದ್ದಲ್ಲಿ ಯಾವುದೇ ಕೋರ್ಟ್ ತಕರಾರುಗಳು ಬರದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
4. 5. ಕಿ.ಮೀ. ವ್ಯಾಪ್ತಿಯಲ್ಲಿ ಸರ್ಕಾರಿ/ಅನುದಾನಿತ ಶಾಲೆಗಳಿದ್ದಲ್ಲಿ ಮತ್ತೊಂದು ಹೊಸ ಶಾಲೆ ಪ್ರಾರಂಭಿಸುವುದುರಿಂದ ಹಳೆಯ ಮತ್ತು ಹೊಸದಾಗಿ ಪ್ರಾರಂಭಿಸುವ 2 ಶಾಲೆಗಳಲ್ಲಿ ದಾಖಲಾತಿ ಕಡಿಮೆ ಆಗುವ ಸಾಧ್ಯತೆ ಇದ್ದು, ಈ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
5. ಈಗಾಲೇ ಸದನ ಸಮಿತಿಯು ಈ ಬಗ್ಗೆ ಆಕ್ಷೇಪಿಸಿದ್ದು, 5. ಕಿ.ಮೀ. ವ್ಯಾಪ್ತಿಯೊಳಗೆ ಮತ್ತೊಂದು ಶಾಲೆ ಬರದಂತೆ ಕ್ರಮವಹಿಸಬೇಕಾಗುತ್ತದೆ. ಒಂದು ವೇಳೆ ಈಗ ಆಯ್ಕೆ ಆಗಿರುವ ಶಾಲೆಗಳ ಪಟ್ಟಿಯಲ್ಲಿ ಅಂತಹ ಶಾಲೆಗಳಿದ್ದರೆ ಸಂಬಂಧಿಸಿದ ಉಪನಿರ್ದೇಶಕರನ್ನೇ ಹೊಣೆಗಾರರನ್ನಾಗಿಸಲಾಗುವುದು.
6. ಉನ್ನತೀಕರಿಸಲು ಆಯ್ಕೆಯಾಗಿರುವ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿಯೇ ಪ್ರೌಢಶಾಲಾ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಲಭ್ಯ ಇರಬೇಕು. ಅಂತಹ ಶಾಲೆಗಳನ್ನೇ ಆಯ್ಕೆ ಮಾಡಬೇಕು

7. ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಿವೇಶನ ಲಭ್ಯತೆ ಇಲ್ಲದಿದ್ದಲ್ಲಿ, ಅಂತಹ ಶಾಲೆಗೆ ನೀಡುವ ಕಟ್ಟಡದಲ್ಲಿ ಮುಖ್ಯಶಿಕ್ಷಕರ ಕೊಠಡಿ, ಶಿಕ್ಷಕರ ಕೊಠಡಿಗಳಿಗೆ ಆರ್.ಎಂ.ಎಸ್.ಎ. ಅಡಿಯಲ್ಲಿ ಅವಕಾಶ ಇರುವುದಿಲ್ಲ ಹಾಗೂ ಪ್ರೌಢಶಾಲೆಯ ಸಂಪನ್ಮೂಲಗಳಿಂದ 8ನೇ ತರಗತಿ ವಿದ್ಯಾರ್ಥಿಗಳು ವಂಚಿತರಾಗುತ್ತಾರೆ (ಶಿಕ್ಷಕರು, ಪ್ರಯೋಗಾಲಯ, ಗ್ರಂಥಾಲಯ), ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಶಾಲಾ ನಿವೇಶನವನ್ನು ಗುರುತಿಸುವುದು.
8. ಮುಖ್ಯ ಶಿಕ್ಷಕರ ಸಭೆಯಲ್ಲಿ ಈ ಮೇಲಿನ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಿ ಆರ್.ಎಂ.ಎಸ್.ಎ. ನಿಯಮಗಳಾದ 5 ಕಿ.ಮೀ. ದೂರ, 70 ವಿದ್ಯಾರ್ಥಿಗಳ ದಾಖಲಾತಿ ಮತ್ತು ನಿವೇಶನ ಲಭ್ಯತೆ ಇವುಗಳನ್ನು ಖಾತ್ರಿ ಪಡಿಸಿಕೊಳ್ಳುವುದು.
9. ಖಾತ್ರಿಪಡಿಸಿಕೊಂಡ ಮೇಲೆ ಈ ಶಾಲೆಗಳನ್ನು 2016-17ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಅಗತ್ಯ ಸಾಧ್ಯತೆಗಳ ಬಗ್ಗೆ ಚರ್ಚಿಸಬೇಕು. ಇದಕ್ಕಾಗಿ ಈ ಕೆಳಗಿನ ಅಂಶಗಳನ್ನು ಪರಿಶೀಲಿಸುವುದು.
    - ಹಿರಿಯ ಪ್ರಾಥಮಿಕ ಶಾಲೆಯನ್ನು 2016-17 ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರೌಢಶಾಲೆಯಾಗಿ ಉನ್ನತೀಕರಿಸಲು ಅಗತ್ಯ 2 ಕೊಠಡಿಗಳು ಹಾಗೂ ಶೌಚಾಲಯ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.
    - ಉನ್ನತೀಕರಿಸಬೇಕಾದ ಶಾಲೆಗೆ ಬರುವ 70 ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲು ಮುಖ್ಯ ಶಿಕ್ಷಕರಿಗೆ ತಿಳಿಸುವುದು.
    - ಈ ರೀತಿ ಉನ್ನತೀಕರಿಸಿದ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಆಗುವುದು ತಡವಾಗುವುದರಿಂದ ನಿಯೋಜನೆ ಮೇಲೆ ಶಿಕ್ಷಕರನ್ನು ನೀಡುವ ಸಾಧ್ಯತೆ ಬಗ್ಗೆ ಚರ್ಚಿಸಿ ಖಾತ್ರಿಪಡಿಸಿಕೊಳ್ಳಬೇಕು.
    - ಅಗತ್ಯ ನಿವೇಶನ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಇವುಗಳ ಆಧಾರದ ಮೇಲೆ 2016-17 ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಶಾಲೆಯನ್ನು ಪ್ರಾರಂಭಿಸಲಾಗುತ್ತದೆ ಎಂಬ ಮಾಹಿತಿಯನ್ನು ರಾಜ್ಯ ಕಛೇರಿಗೆ ನೀಡುವುದು.

**ಮುಖ್ಯ ಶಿಕ್ಷಕರು ವಹಿಸಬೇಕಾದ ಕ್ರಮಗಳು:**

- ಶೈಕ್ಷಣಿಕ ವರ್ಷ 2016-17 ರಿಂದ ಪ್ರಾರಂಭಮಾಡಲು ಅಗತ್ಯ ಕೊಠಡಿಗಳು ಮತ್ತು ಶೌಚಾಲಯ ಇರುವ ಬಗ್ಗೆ ಖಾತ್ರಿಪಡಿಸಬೇಕು.
- ವ್ಯಾಪಕ ಪ್ರಚಾರ ನೀಡಿ 9ನೇ ತರಗತಿಗೆ 70 ವಿದ್ಯಾರ್ಥಿಗಳು ದಾಖಲಾಗುವಂತೆ ಮಾಡಬೇಕು
- SDMC ಸಭೆ ಕರೆದು ಶಾಲೆ ಮಂಜೂರಾದ ಮಾಹಿತಿ ನೀಡಿ ನಿವೇಶನ ಒದಗಿಸಲು, ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲು ಮತ್ತು ಬೇಕಾದ ಸಂಪನ್ಮೂಲಗಳನ್ನು ಒದಗಿಸಲು ಅಗತ್ಯ ಸಹಕಾರ ನೀಡಲು ಕೋರಬೇಕು.

ಮೇಲಿನ ಅಂಶಗಳ ಬಗ್ಗೆ ಚರ್ಚಿಸಿ ಈ ಕೆಳಗಿನ ನಮೂನೆಯಲ್ಲಿ ಮಾಹಿತಿಯನ್ನು ಸಿದ್ಧಪಡಿಸಿಕೊಂಡು ರಾಜ್ಯ ಕಛೇರಿಯಲ್ಲಿ ನಡೆಯುವ ಸಭೆಗೆ ಮಾಹಿತಿ ತರಲು ತಿಳಿಸಿದೆ. ಹಾಗೂ ಒಂದು ಪ್ರತಿಯನ್ನು ಇ-ಮೇಲ್ ಮೂಲಕ ಕಳುಹಿಸಲು ತಿಳಿಸಿದೆ. ಶಾಲೆಗಳ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಆರ್.ಎಂ.ಎಸ್.ಎ. ಬೆಂಗಳೂರು